ವಿಶ್ವವಾಣಿ
ವಿಶ್ವಾಸವೇ ವಿಶ್ವ

ಡೈಮಂಡ್ ಲೀಗ್: ನೀರಜ್ ಚೋಪ್ರಾಗೆ ಬೆಳ್ಳಿ
ವರದಿ ಪುಟ → 12

ತಿಮರೋಡಿ ತೋಟದಿಂದ ಬುರುಡೆ ತಂದೆ, ದುಡ್ಡು ಪಡೆದು ಸುಳ್ಳು ಹೇಳಿದೆ: ಮಾಸ್ಕ್ ಮ್ಯಾನ್ ಬಹಿರಂಗ

ತಿಮರೋಡಿಗೆ ಬುರುಡೆ ಕಾಟ

ಭಟ್ಟಾರಕ ಸ್ವಾಮೀಜಿಗಳ ಆಗಮನದಿಂದ ಕ್ಷೇತ್ರಕ್ಕೆ ಹೊಸ ಕಳೆ ಬಂದಿದೆ. ಎಲ್ಲ ಜೈನ ಸ್ವಾಮಿಗಳು ನಮ್ಮೊಂದಿಗಿದ್ದಾರೆಂಬುದು ನನಗೆ ದೊಡ್ಡ ಧೈರ್ಯ. ಪ್ರಕರಣದ ಕುರಿತು ಎಸ್ಐಟಿ ತನಿಖೆ ನಡೆಯುತ್ತಿದೆ. ಆದ್ದರಿಂದ ಹೆಚ್ಚು ಮಾತನಾಡುವುದಿಲ್ಲ. ಆದರೆ ಭಕ್ತರಲ್ಲಿ ಅಶಾಂತಿ ಮನೆ ಮಾಡಿದೆ. ಮಹಿಳೆಯರು ಕಣ್ಣೀರಿಟ್ಟು ನೋವು ವ್ಯಕ್ತಪಡಿಸುತ್ತಿದ್ದಾರೆ. ಸತ್ಯ ಬಿಟ್ಟು ನಾನು ಎಂದಿಗೂ ಹೋಗಿಲ್ಲ, ಹೋಗುವುದಿಲ್ಲ. ಎಲ್ಲರೂ ಶಾಂತಿ ಹಾಗೂ ತಾಳ್ಮೆ ಕಾಪಾಡಬೇಕು. ಸಂಯಮ ಎಲ್ಲಕ್ಕಿಂತಲೂ ಶ್ರೇಷ್ಠ.
-ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ ಧರ್ಮಾಧಿಕಾರಿ

ಬೆಂಗಳೂರು/ಮಂಗಳೂರು: ರಾಷ್ಟ್ರದಲ್ಲಿಯೇ ಭಾರಿ ಸದ್ದು ಮಾಡಿದ್ದ ಬುರುಡೆ ಪ್ರಕರಣದಲ್ಲಿ 'ಬುರುಡೆ' ಬಂದಿದ್ದು ಎಲ್ಲಿಂದ ಎಂಬ ಹಲವರ ಪ್ರಶ್ನೆಗೆ ಕೊನೆಗೂ ಮಾಸ್ಕ್‌ಮ್ಯಾನ್ ಚಿನ್ನಯ್ಯ ಬಾಯ್ಬಿಟ್ಟಿದ್ದು ಬುರುಡೆಯನ್ನು ಮಹೇಶ್ ಶೆಟ್ಟಿ ತಿಮರೋಡಿ ತೋಟದಿಂದಲೇ ತರಲಾಗಿತ್ತು ಎಂದು ಹೇಳಿ ದ್ದಾನೆ ಎನ್ನಲಾಗಿದೆ. ಈ ಮೂಲಕ ಬುರುಡೆ ಗ್ಯಾಂಗ್‌ನ ಮುಖ್ಯಸ್ಥನಂತೆ ಕಾಣಿಸಿ ಕೊಂಡಿದ್ದ ತಿಮರೋಡಿಗೆ ಸಂಕಷ್ಟ ಎದುರಾಗಿದೆ.

ಬುರುಡೆ ರಹಸ್ಯ

ಚಿನ್ನಯ್ಯನ ವಿಚಾರಣೆ ಮುಂದುವರಿಸಿರುವ ಎಸ್ಐಟಿ ಅಧಿಕಾರಿಗಳ ಮುಂದೆ, ತಲೆ ಬುರುಡೆಯನ್ನು ಮಹೇಶ್ ಶೆಟ್ಟಿ ತಿಮರೋಡಿ ತೋಟದಿಂದ ತರಲಾಗಿದೆ ಎನ್ನುವ ಮಾಹಿತಿಯನ್ನು ಚಿನ್ನಯ್ಯ ನೀಡಿದ್ದಾನೆ ಎನ್ನಲಾಗಿದೆ. ಕೋರ್ಟ್‌ಗೆ ಹಾಜರುಪಡಿಸಿದ ಬುರುಡೆ ಜತೆಯಿದ್ದ ಮಣ್ಣನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದ ಪೊಲೀಸರು, ವರದಿಯಲ್ಲಿ ಬುರುಡೆಗೂ ಧರ್ಮಸ್ಥಳದ ಮಣ್ಣಿಗೂ ಸಂಬಂಧವಿಲ್ಲವೆಂದು ಖಾತ್ರಿಯಾಗುತ್ತಿದ್ದಂತೆ ಚಿನ್ನಯ್ಯನನ್ನು ವಿಚಾರ ಣೆಗೊಳಪಡಿ ಸಿದ್ದಾರೆ. ಆಗ ಸತ್ಯ ಒಪ್ಪಿಕೊಂಡು ಷಡ್ಯಂತ್ರದ ಭಾಗವಾಗಿ ಬುರುಡೆ ತರಲಾಗಿತ್ತು ಎಂದಿದ್ದಾನೆ. ಮತ್ತಷ್ಟು ವಿಚಾರಣೆ ನಡೆಸಿದಾಗ ಚಿನ್ನಯ್ಯ ತಿಮರೋಡಿ ತೋಟದಿಂದ ಬುರುಡೆ ತಂದಿರುವುದಾಗಿ ಹೇಳಿದ್ದಾನೆ.

ಈ ವಿಚಾರ ಬೆಳಕಿಗೆ ಬಂದ ಬೆನ್ನಲ್ಲೇ ತಿಮರೋಡಿ ನಿವಾಸಕ್ಕೆ ಮಹಜರು ಮಾಡಲು ಬಂದಿದ್ದಾಗ ಚಿನ್ನಯ್ಯ, ತಿಮರೋಡಿ ರಬ್ಬರ್ ತೋಟದ ಒಂದು ಜಾಗವನ್ನು ತೋರಿಸಿ ಇಲ್ಲಿಂದ ಬುರುಡೆ ತೆಗೆದಿರುವುದಾಗಿ ತಿಳಿಸಿದ್ದ. ಇದೀಗ ಈತನ ಹೇಳಿಕೆಯಂತೆ ಪೊಲೀಸರು ರಬ್ಬರ್ ತೋಟದಿಂದ ಮಣ್ಣಿನ ಮಾದರಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದಾರೆ. ಲ್ಯಾಬ್ ಪರೀಕ್ಷೆಯಲ್ಲಿ ಬುರುಡೆಯಲ್ಲಿರುವ ಮಣ್ಣಿಗೂ ತಿಮರೋಡಿ ತೋಟದಲ್ಲಿರುವ ಮಣ್ಣಿಗೂ ಸಾಮ್ಯತೆ ಕಂಡು ಬಂದರೆ ಪ್ರಕರಣಕ್ಕೆ ಮತ್ತೊಂದು ತಿರುವು ಸಿಗುವ ಸಾಧ್ಯತೆಯಿದೆ. ಧರ್ಮಸ್ಥಳದ ವಿರುದ್ಧ ನಿರಂತರ ಸುಳ್ಳು ಹೇಳಿ ಕೆಟ್ಟ ಹೆಸರು ತರಲು ಸುಮಾರು ನಾಲ್ಕು ಲಕ್ಷ ರು.ಗಳನ್ನು ಹಣ ನೀಡಿ, ಸುಳ್ಳು ಹೇಳುವಂತೆ ಬೆದರಿಕೆ ಹಾಕಲಾಗಿತ್ತು ಎಂದು ಮುಸುಕುಧಾರಿ ಚಿನ್ನಯ್ಯನ ಎಸ್ಐಟಿ ಅಧಿಕಾರಿಗಳ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾನೆ ಎಂದು ತಿಳಿದುಬಂದಿದೆ.

ಜೈನ ಸ್ವಾಮೀಜಿಗಳಿಂದ ಬೆಂಬಲ: ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸೇರಿದಂತೆ ಹಲವು ಸ್ವಾಮೀಜಿಗಳು, ವಿರಕ್ತರು, ಶ್ರಾವಕರು ಶ್ರಾವಕಿಯರು ಶುಕ್ರವಾರ ಧರ್ಮಸ್ಥಳಕ್ಕೆ ಬೃಹತ್ ಸಂಖ್ಯೆಯಲ್ಲಿ ಆಗಮಿಸಿ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ವ್ಯಕ್ತಪಡಿಸಿದರು.

ಧರ್ಮಸ್ಥಳದ ಮಹಾದ್ವಾರದಲ್ಲಿ ಸೇರಿದ್ದ ಜೈನ ಸಮುದಾಯದ ಮುಖಂಡರು ನಂತರ ದೇಗುಲದ ವರೆಗೆ ಜಾಥಾದಲ್ಲಿ ಸಾಗಿದರು. ಬೆಳಗ್ಗೆ 10 ಗಂಟೆಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಅಸಂಖ್ಯ ಜೈನ ಬಂಧುಗಳು ಭಾಗವಹಿಸಿದರು.
→ 4

ನಿಂದನೆ ವಿಡಿಯೋ ಡಿಲೀಟಿಗೆ ಆದೇಶ

ಬೆಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ , ಡಾ.ಡಿ.ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲಾಗಿದ್ದ ಅವಹೇಳನಕಾರಿ, ಆಧಾರರಹಿತ ವಿಡಿಯೊ ಮತ್ತು ಪೋಸ್ಟ್‌ಗಳಿಗೆ ಸಿಟಿ ಸಿವಿಲ್ ಕೋರ್ಟ್ ತಡೆಯಾಜ್ಞೆ ನೀಡಿದ್ದು, ತಕ್ಷಣವೇ ಅವುಗಳನ್ನು ಡಿಲೀಟ್ ಮಾಡಲು ಆದೇಶಿಸಿದೆ. ಸುಪ್ರೀಂ ಕೋರ್ಟ್ ನಿರ್ದೇಶನಗಳ ಪ್ರಕಾರ ತಾತ್ಕಾಲಿಕ ಪರಿಹಾರ ನೀಡಲು ಬೆಂಗಳೂರು ನಗರ ಮತ್ತು ಸೆಷನ್ಸ್ ಕೋರ್ಟ್ ಅನುಮತಿ ನೀಡಿದೆ.

ತಿಮರೋಡಿ ವಿಚಾರಣೆ

ಬೆಳ್ತಂಗಡಿ: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ಬೆಳ್ತಂಗಡಿ ಠಾಣೆಯಲ್ಲಿ ದಾಖಲಾದ ಎಫ್ ಐಆರ್ ಸಂಬಂಧ ಮಹೇಶ್ ಶೆಟ್ಟಿ ತಿಮರೋಡಿ ಶುಕ್ರವಾರ ವಿಚಾರಣೆ ಎದುರಿಸಿದ್ದಾರೆ.

ಬಿ.ಎಲ್ ಸಂತೋಷ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಪ್ರಕರಣದಲ್ಲಿ ಉಡುಪಿಯ ಬ್ರಹ್ಮಾವರ ಪೊಲೀಸರು ಬಂಧಿಸಲು ಹೋದಾಗ, ಬೆಂಬಲಿಗರು ಬಂಧನಕ್ಕೆ ಅಡ್ಡಿಪಡಿಸಿದ್ದರು. ಈ ಸಂಬಂಧ ಜಯಂತ್, ಗಿರೀಶ್ ಮಟ್ಟಣ್ಣನವರ್ , ಮಹೇಶ್ ಶೆಟ್ಟಿ ತಿಮರೋಡಿ ಸೇರಿದಂತೆ 30 ಜನರ ವಿರುದ್ಧ ಎಫ್ ಐಆರ್ ದಾಖಲಾಗಿತ್ತು. ವಿಚಾರಣೆ ವೇಳೆ ಎಸ್ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರೂ ಕೆಲ ಹಾಜರಿದ್ದರು.

ಜಗದೀಶ್ ಹಾಜರು

ಇನ್ನು ಸಾಮಾಜಿಕ ಜಾಲತಾಣದಲ್ಲಿ ಧರ್ಮಸ್ಥಳ ಹಾಗೂ ಕೆಲ ಶಾಸಕರ ವಿರುದ್ಧ ಹೀನವಾಗಿ ಮಾತನಾಡಿ 'ಹಕ್ಕುಚ್ಯುತಿ'ಯ ಆತಂಕದಲ್ಲಿರುವ ವಕೀಲ ಜಗದೀಶ್ ವಿರುದ್ಧ ಬೆಳ್ತಂಗಡಿ ಠಾಣೆಯಲ್ಲಿಯೂ ದೂರು ದಾಖಲಾಗಿರುವ ಹಿನ್ನಲೆಯಲ್ಲಿ ಶುಕ್ರವಾರ ವಿಚಾರಣೆಗೆ ಹಾಜರಾಗಿ ದ್ದಾರೆ. ಈ ವೇಳೆ ಫೇಸ್‌ಬುಕ್‌ನಲ್ಲಿ ಅವಹೇಳನಕಾರಿ ಹೇಳಿಕೆ ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಹಲವು ಪ್ರಶ್ನೆಗಳನ್ನು ಪೊಲೀಸರು ಕೇಳಿದ್ದಾರೆ. ವಿಚಾರಣೆ ವೇಳೆ ಕೆಲ ದಾಖಲೆಗಳನ್ನು ಜಗದೀಶ್ ಸಲ್ಲಿಸಿದ್ದಾರೆ ಎನ್ನಲಾಗಿದೆ.

ಜಿಡಿಪಿ ಶೇ.7.8ರ ದಾಖಲೆ ಪ್ರಗತಿ, ರುಪಾಯಿ 88.29ರ ಸಾರ್ವಕಾಲಿಕ ಕುಸಿತ

ಏರಿದ ಜಿಡಿಪಿ, ಕುಸಿದ ರುಪಾಯಿ

ದೆಹಲಿ: ಅಮೆರಿಕ ಸುಂಕ ಸಮರದ ನಡುವೆ ಭಾರತದ ಜಿಡಿಪಿ 2025-26ರ ಮೊದಲ ತ್ರೈಮಾಸಿಕದಲ್ಲಿ ಶೇ.7.8 ರಷ್ಟು ಬೆಳವಣಿಗೆ ದರ ದಾಖಲಿಸಿದ್ದು, ನೆರೆಯ ಚೀನಾದ ಜಿಡಿಪಿಯ ಬೆಳವಣಿಗೆಯ ದರವನ್ನು ಮೀರಿಸಿದೆ. ಇದು ಕೇಂದ್ರ ಸರಕಾರಕ್ಕೆ ಖುಷಿಯ ವಿಚಾರವಾದರೆ, ಶುಕ್ರವಾರ ಅಮೆರಿಕ ಡಾಲರ್ ಎದುರು ರುಪಾಯಿ ಮೌಲ್ಯ 88.29ಕ್ಕೆ ಇಳಿದು ಸಾರ್ವಕಾಲಿಕ ಕನಿಷ್ಠ ದರವನ್ನು ದಾಖಲಿಸಿರುವುದು ಚಿಂತೆಗೆ ಕಾರಣವಾಗಿದೆ. ಕಳೆದ ರುಪಾಯಿ 87.95 ದಾಖಲಿಸಿದ್ದು ಈ ಹಿಂದಿನ ಕನಿಷ್ಠ ದರವಾಗಿತ್ತು.

ಅಮೆರಿಕದ ಸುಂಕ ಸಮರ ಮತ್ತು ಇತರ ಆರ್ಥಿಕ ಬಿಕ್ಕಟ್ಟುಗಳ ನಡುವೆಯೂ 2025ರ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಿನಲ್ಲಿ ಭಾರತದ ಜಿಡಿಪಿ ಶೇ.7.8ರಷ್ಟು ಬೆಳವಣಿಗೆ ಸಾಧಿಸಿರುವುದು ಹಣಕಾಸು ವಲಯದಲ್ಲಿ ಹರ್ಷೋಲ್ಲಾಸ ಮೂಡಿಸಿದೆ. ಇದೇ ಅವಧಿಯಲ್ಲಿ ಚೀನಾ ಆರ್ಥಿಕತೆಯು ಶೇ.5.2 ರಷ್ಟು ಬೆಳವಣಿಗೆ ದಾಖಲಿಸಿದೆ. 2024ರ ಮೊದಲ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ.6.5 ರಷ್ಟು ಬೆಳವಣಿಗೆ ದಾಖಲಿಸಿತ್ತು. 2024ರ ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ಭಾರತದ ಶೇ.8.4 ರಷ್ಟು ಬೆಳವಣಿಗೆ ದಾಖಲಿಸಿದ್ದು ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚಿನ ಜಿಡಿಪಿ ಬೆಳವಣಿಗೆ. ಭಾರತದ ಕೃಷಿ ಮತ್ತು ಸೇವಾ ವಲಯದ ಬೆಳವಣಿಗೆಯೇ ಜಿಡಿಪಿ ಪ್ರಗತಿಗೆ ಮುಖ್ಯ ಕಾರಣ. ಸೇವಾ ವಲಯವು ಶೇ.9.3 ರಷ್ಟು ಬೆಳವಣಿಗೆ ದಾಖಲಿಸಿದ್ದರೇ, ಕೃಷಿ ವಲಯ ಶೇ.3.7 ರಷ್ಟು ಬೆಳವಣಿಗೆ ದಾಖಲಿಸಿದೆ. ಇದರೊಂದಿಗೆ ಸರಬರಾಜು ವ್ಯವಸ್ಥೆ, ತಯಾರಿಕಾ ಉದ್ಯಮ ವಲಯ, ನಿರ್ಮಾಣ ಕ್ಷೇತ್ರದಲ್ಲಿನ ಉತ್ತಮ ಕೊಡುಗೆಗಳು ಶೇ.8ರಷ್ಟು ಬೆಳವಣಿಗೆಗೆ ಕಾರಣವಾಗಿವೆ ಎಂದು ವಿಶ್ಲೇಷಿಸಲಾಗಿದೆ.

ಶೀಘ್ರ ವಿಶ್ವದ 3ನೇ ಆರ್ಥಿಕ ಶಕ್ತಿ: ನರೇಂದ್ರ ಮೋದಿ

ಟೋಕಿಯೊ: ಜಪಾನ್‌ಗೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಟೋಕಿಯೊದಲ್ಲಿ ಭಾರತ-ಜಪಾನ್ ಆರ್ಥಿಕ ವೇದಿಕೆಯಲ್ಲಿ ಶುಕ್ರವಾರ ಮಾತನಾಡಿ, ಭಾರತ ದೇಶ ಶೀಘ್ರದಲ್ಲೇ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಭಾರತ ಅತಿ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ದೇಶವಾಗಿದೆ. 'ಜಪಾನ್ ಬಾಹ್ಯ ವ್ಯಾಪಾರ ಸಂಸ್ಥೆ' ಉಲ್ಲೇಖಿಸಿರುವಂತೆ ಶೇ.80ರಷ್ಟು ವಿದೇಶಿ ಕಂಪನಿಗಳು ಭಾರತದಲ್ಲಿ ತಮ್ಮ ನೆಲೆ ವಿಸ್ತರಿಸಿಕೊಳ್ಳಲು ಬಯಸುತ್ತವೆ. ಶೇ.75ರಷ್ಟು ಕಂಪನಿಗಳು ಅದಾಗಲೇ ಲಾಭ ಗಳಿಸುತ್ತಿವೆ. ಕಳೆದ 11 ವರ್ಷಗಳಲ್ಲಿ ಭಾರತದ ಪರಿವರ್ತನೆ ಬಗೆ ಎಲ್ಲರಿಗೆ ತಿಳಿದಿದೆ. 70,000 ಕೋಟಿ ಡಾಲರ್ ಮೊತ್ತದ ವಿದೇಶಿ ವಿನಿಮಯದ ಸಂಗ್ರಹ ಭಾರತದಲ್ಲಿ ಈಗ ಇದೆ ಎಂದು ಮೋದಿ ಹೆಮ್ಮೆಯಿಂದ ಹೇಳಿಕೊಂಡರು.

ರೂಪಾಯಿ ಮೌಲ್ಯ ಕುಸಿತ

ಅಮೆರಿಕದ ದಂಡನಾತ್ಮಕ ಸುಂಕಗಳು ಜಾರಿಗೆ ಬಂದ ಬೆನ್ನಿಗೇ, ಯುಎಸ್ ಡಾಲರ್ ವಿರುದ್ಧ ರೂಪಾಯಿ ಮೌಲ್ಯ 88.29ಕ್ಕೆ ಇಳಿದು, ಫೆಬ್ರವರಿಯ ಹಿಂದಿನ ಕನಿಷ್ಠ 87.95 ರು. ದಾಟಿದೆ. ಆರ್‌ಬಿಐ ಡಾಲರ್ ಮಾರಾಟ ಮಾಡಿದ ನಂತರ ಮಧ್ಯಾಹ್ನ 2:10 ಕ್ಕೆ ಡಾಲರ್ ವಿರುದ್ಧ 88.12ಕ್ಕೆ ಸ್ಥಿರಗೊಳ್ಳುವ ಮೂಲಕ ಕರೆನ್ಸಿ ಭಾಗಶಃ ಚೇತರಿಸಿಕೊಂಡಿದೆ. 2025 ರಲ್ಲಿ ರೂಪಾಯಿ ಮೌಲ್ಯ ಶೇ.3ರಷ್ಟು ಕುಸಿದಿದ್ದು ಏಷ್ಯಾದಲ್ಲಿ ಅತಿ ಹೆಚ್ಚು ಕುಸಿತ ಕಂಡ ಕರೆನ್ಸಿಯಾಗಿದೆ. ಶುಕ್ರವಾರ ಚೀನಾದ ಯುವಾನ್ ವಿರುದ್ಧವೂ ಭಾರತೀಯ ಕರೆನ್ಸಿ ದಾಖಲೆಯ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಅಮೆರಿಕ ಸುಂಕ ಒಂದು ವರ್ಷ ಕಾಲ ಹೀಗೆಯೇ ಮುಂದುವರಿದರೆ ಭಾರತದ ಜಿಡಿಪಿ ಬೆಳವಣಿಗೆ 60-80 ಬೇಸಿಸ್ ಪಾಯಿಂಟ್‌ಗಳನ್ನು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಬಾಲಣ್ಣ ಮಕ್ಕಳಿಂದ ಕರಾರು ಉಲ್ಲಂಘನೆ ಆರೋಪ

ಅಭಿಮಾನ್ ಸ್ಟುಡಿಯೋ ಜಾಗ ಸರಕಾರದ ವಶಕ್ಕೆ?

ಬೆಂಗಳೂರು: ಮಹತ್ವದ ಬೆಳವಣಿಗೆಯೊಂದ ರಲ್ಲಿ ಬೆಂಗಳೂರಿನಲ್ಲಿ ಅಭಿಮಾನ್ ಸ್ಟುಡಿಯೋಗೆಂದು ನೀಡಿದ್ದ ಜಮೀನನ್ನು ಹಿಂಪಡೆಯಲು ಸರಕಾರ ಮುಂದಾಗಿದೆ. ವಿಷ್ಣುವರ್ಧನ್ ಸ್ಮಾರಕ ತೆರವುಗೊಳಿಸಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಅಭಿಮಾನ್ ಸ್ಟುಡಿಯೊದ ಜಾಗವನ್ನು ಸ್ವಾಧೀನಕ್ಕೆ ಪಡೆಯುವಂತೆ ಅರಣ್ಯ ಇಲಾಖೆ ಬೆಂಗಳೂರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದೆ.

ಈ ಸಂಬಂಧ ಬೆಂಗಳೂರು ನಗರ ಜಿಲ್ಲೆ ಅರಣ್ಯ ಇಲಾಖೆ ಬೆಂಗಳೂರು ಜಿಲ್ಲಾಧಿಕಾರಿಗೆ ಪತ್ರ ಬರೆದಿದೆ. 60ರ ದಶಕದಲ್ಲಿ ಬಾಲಕೃಷ್ಣ ಅವರಿಗೆ ಸ್ಟುಡಿಯೋ ನಿರ್ಮಾಣದ ಉದ್ದೇಶದಿಂದ ಸರಕಾರ 20 ಎಕರೆ ಭೂಮಿಯನ್ನು ನೀಡಿತ್ತು. ನಿಯಮಗಳ ಪ್ರಕಾರ, 20 ವರ್ಷಗಳವರೆಗೆ ಆ ಭೂಮಿಯನ್ನು ಯಾರಿಗೂ ಪರಭಾರೆ ಮಾಡುವಂತಿರಲಿಲ್ಲ. ಆದರೆ ಈ ನಿಯಮ ಉಲ್ಲಂಘನೆಯಾಗಿದೆ. ಆದ್ದರಿಂದ ಭೂಮಿಯನ್ನು ಮುಟ್ಟುಗೋಲು ಹಾಕಿಕೊಳ್ಳು ವಂತೆ ಸೂಚನೆ ನೀಡಲಾಗಿದೆ. ಬೆಂಗಳೂರು ದಕ್ಷಿಣ ತಾಲೂಕಿನ, ಕೆಂಗೇರಿ ಹೋಬಳಿಯ ಮೈಲಸಂದ್ರ ಗ್ರಾಮದ ಸರ್ವೆ ನಂ. 26ರಲ್ಲಿರುವ ಈ ಭೂಮಿಯನ್ನು ನೀಡುವಾಗ ವಿಧಿಸಲಾಗಿದ್ದ ಷರತ್ತುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಲಾಗಿದೆ. ಭೂಮಿಯನ್ನು ಅಕ್ರಮವಾಗಿ ಪರಭಾರೆ ಮಾಡಲಾಗಿದೆ ಎಂದು ಅರಣ್ಯ ಇಲಾಖೆ ಗಂಭೀರ ಆರೋಪ ಮಾಡಿದೆ. ಮೈಲಸಂದ್ರ ಗ್ರಾಮದ ಪ್ರದೇಶವನ್ನು ತುರಹಳ್ಳಿ ಕಾಯಿದ್ದಿಟ್ಟ ಅರಣ್ಯ ಪ್ರದೇಶ ಎಂದು 1935ರಲ್ಲೇ ಸರಕಾರ ಘೋಷಿಸಿತ್ತು.
→ 4

ಇಸ್ರೇಲ್ ಮತ್ತು ಜೋರ್ಡಾನ್ ಗಡಿಯಲ್ಲಿರುವ ನೈಸರ್ಗಿಕ ಅಚ್ಚರಿಗಳಲ್ಲೊಂದಾದ ಜಗತ್ಪ್ರಸಿದ್ಧ ಡೆಡ್ ಸೀ (ಮೃತ ಸಮುದ್ರ) ಯಲ್ಲಿ ತೇಲುತ್ತಾ ಪ್ರವಾಸಿ ಪ್ರಪಂಚ ಪತ್ರಿಕೆ ಓದುತ್ತಿರುವ ಸಂಪಾದಕ ವಿಶ್ವೇಶ್ವರ ಭಟ್. ಈ ವಾರದ ಪ್ರವಾಸಿ ಪ್ರಪಂಚ ದಲ್ಲಿ ಡೆಡ್ ಸೀ ಕುರಿತ ವಿಶೇಷ ವಿವರಗಳನ್ನು ಓದಬಹುದು.

ಬೆಂಗಳೂರಿನಿಂದ ಜಪಾನಿನ ಒಸಾಕಾಕ್ಕೆ ನೇರ ವಿಮಾನ?

ಬೆಂಗಳೂರು: ರಾಜಧಾನಿ ಬೆಂಗಳೂರಿನ ಕೆಐಎ ವಿಮಾನ ನಿಲ್ದಾಣದಿಂದ ಜಪಾನ್‌ನ ಎರಡು ಪ್ರಮುಖ ನಗರಗಳಿಗೆ ಶೀಘ್ರವೇ ವಿಮಾನ ಸೇವೆಯನ್ನು ಆರಂಭಿಸುವ ನಿರೀಕ್ಷೆಯಿದ್ದು, ಈ ಕುರಿತು ಚರ್ಚೆಗಳು ನಡೆಯುತ್ತಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ತಿಳಿಸಿದ್ದಾರೆ. ಬೆಂಗಳೂರಿನಿಂದ ಜಪಾನ್ ದೇಶದ ಪ್ರಮುಖ ಕೈಗಾರಿಕಾ ನಗರಗಳಾಗಿರುವ ಒಸಾಕಾ ಮತ್ತು ನಗೋಯಾ ನಗರಗಳಿಗೆ ನೇರ ವಿಮಾನಸೇವೆ ಆರಂಭಿಸುವ ಚಿಂತನೆಯಿದ್ದು, ಈ ಕುರಿತು ಬೆಂಗಳೂರಿನಲ್ಲಿ ಇರುವ ಆ ದೇಶದ ಕಾನ್ಸುಲ್ ಜನರಲ್ ನಕಾನೆ ಸುಟೋಮು ಅವರೊಂದಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಚರ್ಚೆ ನಡೆಸಿದ್ದಾರೆ. ಬೆಂಗಳೂರಿನಿಂದ ಸದ್ಯಕ್ಕೆ ಜಪಾನ್‌ನ ರಾಜಧಾನಿ ಟೋಕಿಯೋಗೆ ಮಾತ್ರ ನೇರ ವಿಮಾನ ಸೌಲಭ್ಯವಿದೆ.

ಜಪಾನಿನ ಹಲವು ಕಂಪನಿಗಳು ಡೇಟಾ ಸೆಂಟರ್, ಮ್ಯಾನುಫ್ಯಾಕ್ಚರಿಂಗ್, ಲಾಜಿಸ್ಟಿಕ್ಸ್ ಮುಂತಾದ ವಲಯಗಳಲ್ಲಿ ರಾಜ್ಯದಲ್ಲಿ 7,500 ಕೋಟಿ ರು. ಬಂಡವಾಳ ಹೂಡಿಕೆಗೆ ಒಡಂಬಡಿಕೆ ಮಾಡಿಕೊಂಡಿವೆ. ಹೀಗಾಗಿ ಅಲ್ಲಿನ ಕೈಗಾರಿಕಾ ನಗರಗಳಾದ ಒಸಾಕಾ ಮತ್ತು ನಗೋಯಾಗೆ ನಮ್ಮಲ್ಲಿಂದ ನೇರ ವಿಮಾನ ಸೇವೆ ಆರಂಭಿಸಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಆನ್‌ಲೈನ್ ಬೆಟ್ಟಿಂಗ್ ನಿರ್ಬಂಧ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ

ಬೆಂಗಳೂರು: ಹಣ ಪಣಕ್ಕಿಟ್ಟು ಆಡುವಂತಹ ಆನ್‌ಲೈನ್ ಗೇಮ್‌ಗಳಿಗೆ ನಿಷೇಧ ಹೇರುವುದಕ್ಕೆ ಅವಕಾಶ ಕಲ್ಪಿಸುವ ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಕಾಯಿದೆ-2025ನ್ನು ಜಾರಿಗೆ ತಂದಿರುವ ಕೇಂದ್ರ ಸರಕಾರದ ಕ್ರಮ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದ್ದು, ಶನಿವಾರ ಅರ್ಜಿ ವಿಚಾರಣೆ ನಡೆಯಲಿದೆ.



ಎ23 ರಮ್ಮಿ ಎಂಬ ಆನ್‌ಲೈನ್ ಗೇಮಿಂಗ್ ಅನ್ನು ನಡೆಸುತ್ತಿರುವ ಹೆಡ್ ಡಿಜಿಟಲ್ ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಅರ್ಜಿಯನ್ನು ಸಲ್ಲಿಸಿದ್ದು, ತುರ್ತು ವಿಚಾರಣೆಗಾಗಿ ಪರಿಗಣಿಸಬೇಕು ಎಂದು ಅರ್ಜಿದಾರರ ಪರ ವಕೀಲರು ನ್ಯಾಯಮೂರ್ತಿ ಬಿ.ಎಂ. ಶ್ಯಾಮಪ್ರಸಾದ್ ಅವರ ಪೀಠದ ಮುಂದೆ ಮನವಿ ಮಾಡಿದರು. ಮನವಿಯನ್ನು ಪರಿಗಣಿಸಿದ ಪೀಠ, ಅರ್ಜಿಯ ವಿಚಾರಣೆಯನ್ನು ಆಗಸ್ಟ್ 30ರಂದು ನಡೆಸುವುದಾಗಿ ತಿಳಿಸಿತು. ಕೇಂದ್ರ ಸರಕಾರ ಹೊಸದಾಗಿ ಜಾರಿ ಮಾಡಿರುವ ಈ ಕಾಯಿದೆ ಭಾರತದ ಗಡಿಯೊಳಗೆ ಮಾತ್ರವಲ್ಲದೇ, ಹೊರ ದೇಶಗಳಿಂದಲೂ ಭಾರತದಲ್ಲಿ ಆನ್‌ಲೈನ್ ಗೇಮಿಂಗ್‌ಗಳನ್ನು ನಿರ್ವಹಣೆ ಮಾಡುವ ಕಂಪೆನಿಗಳನ್ನು ನಿಯಂತ್ರಿಸುವುದಕ್ಕೂ ಅವಕಾಶ ಕಲ್ಪಿಸಲಾಗಿದೆ. ಈ ಕಾಯಿದೆ, ನಿರ್ದಿಷ್ಟ ನಿಯಮಗಳು ಮತ್ತು ಮಾನದಂಡಗಳನ್ನು ಆಧರಿಸಿ, ಕೌಶಲ್ಯ ಆಧಾರಿತ ಕ್ರೀಡೆಗಳನ್ನು ವರ್ಚುವಲ್ ವೇದಿಕೆಯಲ್ಲಿ ಆಡುವ ಆಟಗಳನ್ನು ಗುರುತಿಸಿರುವುದಾಗಿದೆ.

ಸ್ಲ್ಯಾಬ್ ಕಡಿತದಿಂದ ನಷ್ಟ: ಬಿಜೆಪಿಯೇತರ ರಾಜ್ಯಗಳ ವಿರೋಧ

ಜಿಎಸ್‌ಟಿ ಸರಳೀಕರಣಕ್ಕೆ ರಾಜ್ಯ ಆಕ್ಷೇಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಸರಕಾರ ಪ್ರಸ್ತಾಪಿಸಿರುವ ಜಿಎಸ್‌ಟಿ ಸರಳೀಕರಣ ವ್ಯವಸ್ಥೆಗೆ ಇದೀಗ ಬಿಜೆಪಿಯೇತರ ಸರಕಾರಗಳು 'ಅಪಸ್ವರ' ಎತ್ತಿವೆ. ಜಿಎಸ್‌ಟಿ ಸರಳೀಕರಣವನ್ನು ಸ್ವಾಗತಿಸಿದ್ದರೂ, ಇದರಿಂದಾಗುವ ನಷ್ಟದಿಂದ ರಾಜ್ಯ ಸರಕಾರಗಳಿಗೆ ಭಾರಿ ಹೊಡೆತ ಬೀಳಲಿದೆ ಎನ್ನುವ ವಾದವನ್ನು ಎಂಟಕ್ಕೂ ಹೆಚ್ಚು ರಾಜ್ಯಗಳ ಅಪಸ್ವರಕ್ಕೆ ಕಾರಣವಾಗಿದೆ.

ದೆಹಲಿಯ ಕರ್ನಾಟಕ ಭವನದಲ್ಲಿ ಕೇಂದ್ರ ಸರಕಾರದ ಪ್ರಸ್ತಾವಿತ ಜಿಎಸ್‌ಟಿ ಸರಳೀಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸಮಾನಮನಸ್ಕ ರಾಜ್ಯಗಳ ಪ್ರತಿನಿಧಿಗಳು ಸಭೆ ನಡೆಸಿದ್ದಾರೆ. ತಮಿಳುನಾಡು, ಹಿಮಾಚಲ ಪ್ರದೇಶ, ಪಂಜಾಬ್, ಜಾರ್ಖಂಡ್, ತೆಲಂಗಾಣ, ಕೇರಳದ ಹಣಕಾಸು ಸಚಿವರು ಮತ್ತು ಪಶ್ಚಿಮಬಂಗಾಳದ ವಲಯ ಅಧಿಕಾರಿ ಸಭೆಯಲ್ಲಿ ಭಾಗಿಯಾಗಿದ್ದರು. ಜಿಎಸ್‌ಟಿ ಸರಳೀಕರಣದಿಂದ ನಾಗರಿಕರಿಗೆ ಆಗುವ ಲಾಭಕ್ಕೆ ವಿರೋಧಿಸುವುದಿಲ್ಲ. ಆದರೆ ಇದರಿಂದ ರಾಜ್ಯದ ಬೊಕ್ಕಸಗಳಿಗೆ ಉಂಟಾಗುವ ನಷ್ಟವನ್ನು ಕೇಂದ್ರ ಸರಕಾರವೇ ಸರಿದೂಗಿಸಬೇಕು ಎನ್ನುವ ಆಗ್ರಹವನ್ನು ಜಿಎಸ್‌ಟಿ ಮಂಡಳಿಯಲ್ಲಿ ಮಂಡಿಸಲು ತೀರ್ಮಾನಿಸಿವೆ.

ಬಿಜೆಪಿಯೇತರ ರಾಜ್ಯಗಳ ಸಚಿವರ ಸಭೆ

ಸಮಾನಮನಸ್ಕ ರಾಜ್ಯಗಳೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಕಂದಾಯ ಸಚಿವ ಹಾಗೂ ಕರ್ನಾಟಕದ ಜಿಎಸ್‌ಟಿ ಮಂಡಳಿ ಪ್ರತಿನಿಧಿ ಕೃಷ್ಣ ಬೇರ್ಯೆಗೌಡ ಅವರು, ಕೇಂದ್ರ ಸರಕಾರ ಪ್ರಸ್ತಾಪಿಸಿರುವ ಜಿಎಸ್‌ಟಿ ಸರಳೀಕರಣ ವ್ಯವಸ್ಥೆಯಿಂದ ರಾಜ್ಯಗಳ ಆದಾಯದ ಮೇಲೆ 85,000 ಕೋಟಿಯಿಂದ 2.5 ಲಕ್ಷ ಕೋಟಿವರೆಗೆ ನಷ್ಟ ಉಂಟಾಗಲಿದೆ. ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ಈ ನಷ್ಟವನ್ನು ಜಿಎಸ್‌ಟಿ ಕೌನ್ಸಿಲ್ ನಷ್ಟ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಜಿಎಸ್‌ಟಿ ಕೌನ್ಸಿಲ್ ನಮ್ಮ ಮುಂದಿಟ್ಟಿರುವ ತೆರಿಗೆ ಸರಳೀಕರಣ ವ್ಯವಸ್ಥೆಯನ್ನು ನಾವು ಸ್ವಾಗತಿಸುತ್ತೇವೆ.
→ 4

ನಾವು ತೆರಿಗೆ ಸರಳೀಕರಣದ ಪರ ಇದ್ದೇವೆ. ಆದರೆ, ರಾಜ್ಯದ ಆದಾಯವನ್ನೂ ಕಾಪಾಡಬೇಕು. ಹೆಚ್ಚಿನ ಪ್ರಮಾಣದ ಅಭಿವೃದ್ಧಿ ಕೆಲಸಗಳನ್ನು ರಾಜ್ಯಗಳೇ ಮಾಡಬೇಕು ಆದರೆ, ಆದಾಯ ಮಾತ್ರ ಕೇಂದ್ರದ ಪಾಲಾದರೆ ರಾಜ್ಯದ ಅಭಿವೃದ್ಧಿ ಹೇಗೆ ಸಾಧ್ಯ? ಸಾರ್ವಜನಿಕರೂ ಸಹ ಅವರ ಯೋಗಕ್ಷೇಮದ ಬೇಡಿಕೆ ಹಾಗೂ ಅಭಿವೃದ್ಧಿ ಅಗತ್ಯಗಳಿಗೆ ರಾಜ್ಯ ಸರಕಾರವನ್ನು ಹೆಚ್ಚು ಅವಲಂಬಿಸಿದ್ದಾರೆ.
-ಕೃಷ್ಣಬೈರೇಗೌಡ, ಕಂದಾಯ ಸಚಿವ

ಸೊಂಪಾದ ಪುಟಗಳು

ನಗರ ನಕ್ಸಲರ ಬುಡಕ್ಕೆ ಬಿತ್ತು ಬೆಂಕಿ!
ವೀಕೆಂಡ್ ವಿತ್ ಮೋಹನ್ – ಮೋಹನ್ ವಿಶ್ವ
6

ಹಬ್ಬದ ನಂತರದ ಸಮತೋಲನಕ್ಕಾಗಿ ಅಜ್ಜಿಯ ಸೂತ್ರಗಳು
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ – ಡಾ.ಸಾಧನಶ್ರೀ
7

ದಾರಿದೀಪೋಕ್ತಿ

ಈಗಿನ ಕಾಲದಲ್ಲಿ ಎಲ್ಲರೂ ಭಾರವನ್ನು ಕಮ್ಮಿ (ವೇಟ್ ಲಾಸ್) ಮಾಡಿಕೊಳ್ಳಲು ಜಿಮ್‌ಗೆ ಹೋಗಿ ಇನ್ನಿಲ್ಲದ ಕಸರತ್ತು ಮಾಡುತ್ತಾರೆ. ಆದರೆ ನಾವೆಲ್ಲರೂ ಕಮ್ಮಿ ಮಾಡಿಕೊಳ್ಳಬೇಕಾದ ಬಹುದೊಡ್ಡ ಭಾರ ಅಂದ್ರೆ, ನಮ್ಮ ತಲೆಯಲ್ಲಿ ಭಾರವಾಗಿರುವ ಬೇರೆ ವ್ಯಕ್ತಿಗಳ ಅನಿಸಿಕೆ ಮತ್ತು ಟೀಕೆ.

ವಕ್ರತುಂಡೋಕ್ತಿ

ನಮಗೆ ಯಾವುದನ್ನು ಹೊಂದುವುದು ಸಾಧ್ಯವಿಲ್ಲವೋ, ಅದನ್ನು ಹೊಂದಬಾರದು. ಆದರೆ ಈ ಮಾತು ಮಕ್ಕಳನ್ನು ಹೊಂದುವುದಕ್ಕೆ ಅನ್ವಯವಾಗುವುದಿಲ್ಲ.

ಹುಬ್ಬಳ್ಳಿ ಮೈದಾನ ಇನ್ನು ರಾಣಿ ಚೆನ್ನಮ್ಮ ಮೈದಾನ

ಹುಬ್ಬಳ್ಳಿ: ಪ್ರತಿ ವರ್ಷ ಗಣೇಶೋತ್ಸವದ ಸಂದರ್ಭದಲ್ಲಿ ವಿವಾದಕ್ಕೆ ಕಾರಣವಾಗುತ್ತಿದ್ದ ಹುಬ್ಬಳ್ಳಿಯ ಈದ್ಗಾ ಮೈದಾನವನ್ನು 'ರಾಣಿ ಚೆನ್ನಮ್ಮ ಮೈದಾನ' ಎಂದು ಹುಬ್ಬಳ್ಳಿ ಮಹಾನಗರ ಪಾಲಿಕೆಯು ಮರುನಾಮಕರಣ ಮಾಡಿದೆ. ಈ ಬಗ್ಗೆ ಉಪ ಮೇಯರ್ ಸಂತೋಷ್ ಚೌಹ್ವಾಣ್ ಅಧಿಕೃತ ಘೋಷಣೆ ಹೊರಡಿಸಿದ್ದಾರೆ.

ಡಿಸೆಂಬರ್‌ನಲ್ಲಿ ಪುಟಿನ್ ಭಾರತಕ್ಕೆ

ಮಾಸ್ಕೊ: ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಡಿಸೆಂಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಕ್ರೆಮ್ಲಿನ್ ಶುಕ್ರವಾರ ತಿಳಿಸಿದೆ. ಭಾರತ, ರಷ್ಯಾದಿಂದ ತೈಲ ಖರೀದಿಸುತ್ತಿರುವುದಕ್ಕೆ ಅಮೆರಿಕ ಹೆಚ್ಚಿನ ಸುಂಕ ವಿಧಿಸುತ್ತಿರುವುದರ ನಡುವೆ ರಷ್ಯಾ ಮತ್ತು ಭಾರತದ ನಡುವಿನ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಪುಟಿನ್ ದೆಹಲಿಗೆ ಭೇಟಿ ನೀಡಲಿದ್ದಾರೆ. ಚೀನಾದಲ್ಲಿ ನಡೆಯಲಿರುವ ಪ್ರಾದೇಶಿಕ ಶೃಂಗ ಸಭೆಯಲ್ಲಿ ಪುಟಿನ್ ಪ್ರಧಾನಿ ಮೋದಿಯವರನ್ನು ಭೇಟಿ ಮಾಡಲಿದ್ದಾರೆ.

ಜಪಾನ್-ಭಾರತ ಜಂಟಿ ಚಂದ್ರಯಾನ

ಟೋಕಿಯೊ: ಭಾರತ ಮತ್ತು ಜಪಾನ್ ಶನಿವಾರ ಜಂಟಿಯಾಗಿ ಚಂದ್ರಯಾನ-5 ಮಿಷನ್ ಅನುಷ್ಠಾನ ಒಪ್ಪಂದಕ್ಕೆ ಸಹಿ ಹಾಕಿವೆ. ಇದು ಉಭಯ ದೇಶಗಳ ಬಾಹ್ಯಾಕಾಶ ಸಂಸ್ಥೆಗಳು ಚಂದ್ರನ ಧ್ರುವ ಪ್ರದೇಶದ ಜಂಟಿ ಸಂಶೋಧನೆಯಾಗಿದೆ. ಮುಂಬರುವ ಚಂದ್ರಯಾನ-5 ಕಾರ್ಯಾಚರಣೆಗಾಗಿ ಇಸ್ರೋ ಮತ್ತು ಜಪಾನ್ ಏರೋಸ್ಪೇಸ್ ಪರಿಶೋಧನಾ ಸಂಸ್ಥೆ ಜಂಟಿ ಅನುಷ್ಠಾನ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಫನ್‌ತರಂಗ

- ರಘುಪತಿ ಶೃಂಗೇರಿ -

ವಿಧಾನಸೌಧದಲ್ಲಿವೆ 53 ನಾಯಿಗಳು ಸುದ್ದಿ



ಸಮಾಚಾರ ಸಣ್ಣದಲ್ಲ

ಅಶ್ಲೀಲ ಕಮೆಂಟ್: ಎಫ್ಐಆರ್ ದಾಖಲು

ಬೆಂಗಳೂರು: ನಟ ದರ್ಶನ್ ಪತ್ನಿ ವಿಜಯಲಕ್ಷ್ಮಿ ವಿರುದ್ಧ ಅಸಭ್ಯವಾಗಿ ಕಾಮೆಂಟ್ ಮಾಡಿದ್ದ ಐದು ಯೂಟ್ಯೂಬ್ ಚಾನೆಲ್ ವಿರುದ್ಧ ಎಫ್ಐಆರ್ ದಾಖಲಾಗಿದೆ. ವಿಜಯಲಕ್ಷ್ಮಿ ಬಗ್ಗೆ ಯೂಟ್ಯೂಬ್ ಚಾನೆಲ್‌ವೊಂದು ಕಾರ್ಯಕ್ರಮ ಮಾಡಿತ್ತು. ಈ ಕಾರ್ಯಕ್ರಮದ ವಿಡಿಯೊಗೆ ಕೆಲವರು ವಿಜಯಲಕ್ಷ್ಮಿ ಬಗ್ಗೆ ಅಶ್ಲೀಲವಾಗಿ ಕಾಮೆಂಟ್ ಮಾಡಿದ್ದರು. ಈ ಸಂಬಂಧ ವ್ಯಕ್ತಿಯೊಬ್ಬರು ಮಹಿಳಾ ಆಯೋಗಕ್ಕೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಮಹಿಳಾ ಆಯೋಗವು ಪೊಲೀಸ್ ಆಯುಕ್ತರಿಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿತ್ತು. ದೂರು ಪರಿಶೀಲನೆ ನಡೆಸಿದ ಸಿಕೆ ಅಚ್ಚುಕಟ್ಟು ಪೊಲೀಸರು ಬಿಎನ್‌ಎಸ್ ಸೆಕ್ಷನ್ 75, 79 ಹಾಗೂ ಐಟಿ ಆ್ಯಕ್ಟ್ 67, 66 ಅಡಿ ಸುಮೋಟೊ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಐದು ಯೂಟ್ಯೂಬ್ ಚಾನೆಲ್‌ಗಳ ವಿರುದ್ಧ ಎಫ್ಐಆರ್ ದಾಖಲಾಗಿದೆ.

ಗುರುದ್ವಾರಕ್ಕೆ ಬಾಂಬ್ ಬೆದರಿಕೆ

ಬೆಂಗಳೂರು: ಹಲಸೂರು ಕೆರೆ ಸಮೀಪ ಇರುವ ಗುರುಸಿಂಗ್ ಸಭಾ ಸಿಖ್ ಗುರುದ್ವಾರಕ್ಕೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿದ್ದು ಆತಂಕಕ್ಕೆ ಕಾರಣವಾಗಿದೆ. ನಾಲ್ಕು ದಿನಗಳ ಹಿಂದೆ ಗುರುದ್ವಾರಕ್ಕೆ ಬೆದರಿಕೆ ಇ-ಮೇಲ್ ಬಂದಿದ್ದು, ಹಲಸೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಾಲ್ಕು ಆರ್‌ಡಿಎಕ್ಸ್ ಸ್ಫೋಟಿಸುವುದಾಗಿ ರಾಜಗಿರಿ ಎಂಬಾತನ ಹೆಸರಿನಲ್ಲಿ ಕಳುಹಿಸಲಾದ ಬೆದರಿಕೆ ಸಂದೇಶದಲ್ಲಿ ಉಲ್ಲೇಖಿಸಲಾಗಿತ್ತು. ಸಿಖ್ ಗುರುದ್ವಾರದ ಶೌಚಾಲಯದಲ್ಲಿ ಬಾಂಬ್ ಇಟ್ಟಿದ್ದಾಗಿ ಸಂದೇಶದಲ್ಲಿ ತಿಳಿಸಲಾಗಿತ್ತು. ಖುಷಿಪಾಲ್ ಸಿಂಗ್ ಎಂಬವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿದ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ರಜತ ಹಬ್ಬ: 31ಕ್ಕೆ ಪ್ರಶಸ್ತಿ ಪ್ರದಾನ

ಬೆಂಗಳೂರು: ಶ್ರೀ ಲಲಿತಾ ಕಲಾನಿಕೇತನ ಸಂಸ್ಥೆಯ 25ನೇ ವಸಂತದ ಸಂಭ್ರಮದ ಹಿನ್ನೆಲೆ ಆ.31ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ರಜತ ಮಹೋತ್ಸವ ಸಮಾರಂಭವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಗುರು ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಗುರು ಡಾ.ರಾಧಾ ಶ್ರೀಧರ್, ಭಾರತೀಯ ಕನ್ಸರ್ವೇಟರಿ ಆಫ್ ಪ್ಯಾರಿಸ್ ಕರ್ನಾಟಕ ಗಾಯಕ ಸಂಸ್ಥಾಪಕ ಅಧ್ಯಕ್ಷೆ ವಿದುಷಿ ಭಾವನ ಪ್ರದ್ಯುಮ್ನ ಉದ್ಘಾಟಿಸಲಿದ್ದಾರೆ. ನೃತ್ಯ ಮತ್ತು ಕಲಾ ಕ್ಷೇತ್ರದಲ್ಲಿ ತಮ್ಮದೇ ಆದ ಅಮೂಲ್ಯ ಸಾಧನೆ ಮಾಡಿರುವ 25 ಕಲಾವಿದರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ನೃತ್ಯ ಮತ್ತು ಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಹಿರಿಯ ನೃತ್ಯ ಗುರುಗಳಾದ ಗುರು ಉಷಾ ದಾತಾರ್, ಖ್ಯಾತ ಮೋಹಿನಿಯಾಟ್ಟಂ ಗುರುಗಳಾದ ಗುರು ಗೋಪಿಕಾ ವರ್ಮರಿಗೆ ಲಲಿತಾಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಗುರು ಡಾ.ಸತ್ಯನಾರಾಯಣ ರಾಜು ಅವರಿಗೆ ಕಲಾತಪಸ್ವಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನೃತ್ಯ ಮತ್ತು ಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದ 14 ಕಲಾವಿದರುಗಳಿಗೆ ನೃತ್ಯಶ್ರೀಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಒಂದು ವಾರದಲ್ಲಿ ಕಾಯಂ ಐಜಿ-ಡಿಜಿಪಿ ನೇಮಕ | ಹೈಕೋರ್ಟ್‌ಗೆ ಸರಕಾರದ ವಾಗ್ದಾನ

ಯುಪಿಎಸ್‌ಸಿ ವರದಿ ಬಳಿಕ ಕಾಯಂ ಐಜಿ-ಡಿಜಿಪಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಲೋಕಸೇವಾ ಆಯೋಗದ ಉನ್ನತಮಟ್ಟದ ಸಮಿತಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರನ್ನು ನೇಮಕ ಮಾಡುವ ಸಂಬಂಧ ನಿರ್ದಿಷ್ಟ ಹೆಸರುಗಳನ್ನು ಶಿಫಾರಸು ಮಾಡಲಾಗಿದ್ದು, ಅಲ್ಲಿಂದ ವರದಿ ಬಂದ ಒಂದು ವಾರದಲ್ಲಿ ಕಾಯಂ ಐಜಿ-ಡಿಜಿಪಿ ನೇಮಿಸಲಾ ಗುವುದು ಎಂದು ರಾಜ್ಯ ಸರಕಾರವು ಹೈಕೋರ್ಟ್‌ಗೆ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಪ್ರಭಾರ ಪೊಲೀಸ್ ಮಹಾ ನಿರ್ದೇಶಕರಾಗಿ (ಡಿಜಿ-ಐಜಿಪಿ) ಹಿರಿಯ ಐಪಿಎಸ್ ಅಧಿಕಾರಿ ಡಾ.ಎಂ.ಎ.ಸಲೀಂ ಅವರನ್ನು ನೇಮಕ ಮಾಡಿ ಸರಕಾರ ಹೊರಡಿಸಿರುವ ಆದೇಶ ರದ್ದುಪಡಿಸಬೇಕು ಎಂದು ಕೋರಿ ವಕೀಲೆ ಸುಧಾ ಕಾಟ್ವಾ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರ ವಿಭಾಗೀಯ ಪೀಠವು ವಜಾಗೊಳಿಸಿತು.

ರಾಜ್ಯ ಸರಕಾರದ ಪರವಾಗಿ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಯುಪಿಎಸ್ಸಿಯ ಉನ್ನತ ಮಟ್ಟದ ಸಮಿತಿಗೆ ನಿರ್ದಿಷ್ಟ ಅಧಿಕಾರಿಗಳ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ. ಈ ಸಂಬಂಧ ಆಗಸ್ಟ್ 26ರಂದು ಯುಪಿಎಸ್‌ಸಿ ಸಮಿತಿಯು ಸಭೆ ನಡೆಸಿದೆ. ಅಲ್ಲಿಂದ ವರದಿ ಬಂದ ಬಳಿಕ ಒಬ್ಬರನ್ನು ಪೊಲೀಸ್ ಮಹಾ ನಿರ್ದೇಶಕರನ್ನಾಗಿ ಒಂದು ವಾರದಲ್ಲಿ ನೇಮಕ ಮಾಡಿ ಆದೇಶಿಸಲಾಗುವುದು ಎಂದು ತಿಳಿಸಿದರು.

ಈ ಮಧ್ಯೆ, ಅರ್ಜಿದಾರರ ಪರ ವಕೀಲ ಎಸ್. ಉಮಾಪತಿ ಅವರು ಸರಕಾರವು ಅಂತಿಮ ಅಧಿಸೂಚನೆ ಹೊರಡಿಸುವವರೆಗೆ ಅರ್ಜಿ ಬಾಕಿ ಉಳಿಸಬೇಕು ಎಂದು ಕೋರಿದರು. ಇದಕ್ಕೆ ಒಪ್ಪದ ಪೀಠವು ಅಡ್ವೊಕೇಟ್ ಜನರಲ್ ಹೇಳಿಕೆ ದಾಖಲಿಸಿಕೊಂಡು ಅರ್ಜಿ ಇತ್ಯರ್ಥಪಡಿಸಿತು.

ಅಲ್ಲದೇ, ಡಿಜಿಪಿ ನೇಮಕಾತಿಗೆ ಯುಪಿಎಸ್‌ಸಿ ಉನ್ನತ ಮಟ್ಟದ ಸಮಿತಿ ರಚಿಸಬೇಕು. ಆ ಸಮಿತಿ ರಾಜ್ಯದಲ್ಲಿನ ಸೇವಾ ಹಿರಿತನ ಹೊಂದಿರುವ ಮೂವರು ಹಿರಿಯ ಐಪಿಎಸ್ ಅಧಿಕಾರಿಗಳ ಸೇವೆ ಹಾಗೂ ನಡಾವಳಿ ಪರಿಶೀಲಿಸಿ ರಾಜ್ಯ ಸರಕಾರಕ್ಕೆ ಶಿಫಾರಸು ಮಾಡಬೇಕು. ಶಿಫಾರಸುಗೊಂಡವರಲ್ಲಿ ಒಬ್ಬರನ್ನು ಮುಖ್ಯಮಂತ್ರಿಗಳು ಡಿಜಿಪಿಯಾಗಿ ನೇಮಿಸಬೇಕು. ಆದರೆ, ಯುಪಿಎಸ್‌ಸಿಯಿಂದ ಆರ್‌ಟಿಐ ಮೂಲಕ ಪಡೆದ ಉತ್ತರದಿಂದ ಮೇ 21ರಿಂದ ಖಾಲಿಯಾಗಲಿರುವ ಡಿಜಿಪಿ ನೇಮಕಕ್ಕೆ ಉನ್ನತ ಸಮಿತಿ ರಚನೆ ಮಾಡಲು ಸರಕಾರ ಪ್ರಸ್ತಾವನೆ ಕಳುಹಿಸಿದೆ. ಆ ಪ್ರಕ್ರಿಯೆಯಲ್ಲಿ ಕೆಲ ಲೋಪವಾಗಿದೆ. ಆ ಕುರಿತು ಸರಕಾರದಿಂದ ಸ್ಪಷ್ಟೀಕರಣಕ್ಕಾಗಿ ಕಾಯುತ್ತಿರುವುದಾಗಿ ಯುಪಿಎಸ್‌ಸಿ ತಿಳಿಸಿದೆ. ಇದರಿಂದ ಉನ್ನತ ಸಮಿತಿ ರಚನೆಯೇ ಆಗಿಲ್ಲ ಎಂಬುದನ್ನು ದೃಢಪಡಿಸುತ್ತದೆ ಎಂದು ಅರ್ಜಿದಾರರು ಆರೋಪಿಸಿದ್ದರು.

ಸಲೀಂ ನೇಮಕಕ್ಕೆ ಆಕ್ಷೇಪ

ಪ್ರಕಾಶ್ ಸಿಂಗ್ ಪ್ರಕರಣದಲ್ಲಿ ಕಾಯಂ ಡಿಜಿಪಿಯನ್ನು ನೇಮಕ ಮಾಡುವಾಗ ಅನುಸರಿಸಬೇಕಾದ ಪ್ರಕ್ರಿಯೆ ಕಡ್ಡಾಯವಾಗಿ ಪಾಲಿಸಬೇಕು ಎಂದು ಸುಪ್ರೀಂಕೋರ್ಟ್ ಆದೇಶಿಸಿದೆ. ಯಾವುದೇ ಕಾರಣಕ್ಕೂ ಕಾರ್ಯಕಾರಿ ಅಥವಾ ಪ್ರಭಾರ ಡಿಜಿಪಿ ನೇಮಿಸಬಾರದು. ಪ್ರಭಾರ ಡಿಜಿಪಿ ಎಂಬ ಪರಿಕಲ್ಪನೆಯೇ ಇಲ್ಲ ಎಂದು ಸುಪ್ರೀಂಕೋರ್ಟ್ ಆದೇಶಿಸಿದೆ. ಈ ಆದೇಶ ಉಲ್ಲಂಘಿಸಿ ಡಾ.ಎಂ.ಎ. ಸಲೀಂ ಅವರನ್ನು ಪ್ರಭಾರ ಡಿಜಿ-ಐಜಿಪಿಯಾಗಿ ನೇಮಿಸಿ 2025ರ ಮೇ 21ರಂದು ಸರಕಾರ ಆದೇಶ ಮಾಡಿದೆ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

ಶ್ವೇತಗೌಡ ವಂಚನೆ ಪ್ರಕರಣ ಸಿಸಿಬಿಗೆ ವಹಿಸಲು ಮನವಿ

ಬೆಂಗಳೂರು: ಮಾಜಿ ಸಚಿವ ವರ್ತೂರು ಪ್ರಕಾಶ್ ಹೆಸರು ಹೇಳಿಕೊಂಡು ಚಿನ್ನಾಭರಣ ಮಳಿಗೆ ಮಾಲೀಕರಿಗೆ ಶ್ವೇತಗೌಡ ವಂಚಿಸಿದ ಪ್ರಕರಣ ಹೆಚ್ಚಿನ ತನಿಖೆಗಾಗಿ ಸಿಸಿಬಿಗೆ ವರ್ಗಾಯಿಸಬೇಕು ಎಂದು ಕೋರಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ, ರಾಜ್ಯ ಹರಳು ಮತ್ತು ಆಭರಣ ದೇಶೀಯ ಪರಿಷತ್ತು ದೂರು ಕೊಟ್ಟಿದೆ.

ಈ ಪ್ರಕರಣದಲ್ಲಿ ಸತ್ಯಾಂಶವಿದ್ದರೂ ಸ್ಥಳೀಯ ಪೊಲೀಸರು, ರಾಜಕೀಯ ಪ್ರಭಾವಕ್ಕೆ ಒಳಗಾಗಿ ಸಮರ್ಪಕವಾಗಿ ತನಿಖೆ ನಡೆಸಿಲ್ಲ. ಆರೋಪಿ ಶ್ವೇತಗೌಡ ಹೊರ ರಾಜ್ಯದ ಚಿನ್ನದ ಮಾಲೀಕರಿಗೂ ವಂಚಿಸಿರುವ ಸಾಧ್ಯತೆಗಳಿವೆ. ರಾಜಸ್ಥಾನದ ಜೈಪುರದಲ್ಲಿ ಆಭರಣ ವ್ಯಾಪಾರಿ ಸೋಗಿನಲ್ಲಿ ತೆರಳಿದ್ದ ಶ್ವೇತಗೌಡ, ಅಲ್ಲಿನ ಹಲವು ಮಳಿಗೆಗಳ ಮಾಲೀಕರಿಗೂ ವಂಚಿಸಿರುವ ಬಗ್ಗೆ ದೂರುಗಳಿವೆ. ಹಾಗಾಗಿ. ಗಂಭೀರತೆ ಆಧಾರಿಸಿ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಹೆಚ್ಚಿನ ತನಿಖೆಗಾಗಿ ಸಿಸಿಬಿಗೆ ವರ್ಗಾಯಿಸಿ ನಮಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಪರಿಷತ್ ಅಧ್ಯಕ್ಷ ಡಾ. ಬಿ.ರಾಮಾಚಾರಿ ನೇತೃತ್ವದ ನಿಯೋಗ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಿದೆ.

ಇನ್ನಷ್ಟು ಆಭರಣ ಜಪ್ತಿ ಬಾಕಿ: ಪರಿಷತ್ ಸದಸ್ಯ ಆರ್.ಬಾಲರಾಜ್ ಶೇಠ್, ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಸುಭಾಷ್‌ನಗರದಲ್ಲಿ ಪ್ರಗತಿ ಜುವೆಲ್ಲರಿ ಮಳಿಗೆ ಮಾಲೀಕರು. ಇವರು ಸಹ ಶ್ವೇತಗೌಡ ಅವರಿಂದ ವಂಚನೆಗೆ ಒಳಗಾಗಿದ್ದರು. ಈ ಸಂಬಂಧ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಂತರ, ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಪ್ರಕರಣವನ್ನು ವರ್ಗಾಯಿಸಲಾಗಿತ್ತು. ಪ್ರಕರಣ ಸಂಬಂಧ ಆರೋಪಿತೆ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾಳೆ. ಪೊಲೀಸ್ ಕಸ್ಟಡಿಯಲ್ಲಿದ್ದ ಸಂದರ್ಭದಲ್ಲಿ ಬಾಲರಾಜ್ ಶೇಠ್‌ಗೆ ಸೇರಿದ್ದ ಕೆಲ ಆಭರಣಗಳು ಶ್ವೇತಗೌಡ ಮನೆಯಲ್ಲಿ ಜಪ್ತಿ ಮಾಡಲಾಗಿತ್ತು. ಇನ್ನಷ್ಟು ಬೆಲೆ ಬಾಳುವ ಆಭರಣಗಳನ್ನು ಆಕೆಯಿಂದ ವಶಪಡಿಸಿಕೊಳ್ಳಬೇಕಿದೆ. ಆಕೆಯಿಂದ ಅಂತಾ ರಾಜ್ಯ ಆಭರಣ ವ್ಯಾಪಾರಿಗಳು, ದೂರುದಾರರು ಉಲ್ಲೇಖಿಸಿದ್ದಾರೆ.

ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5 ರಷ್ಟು ರಿಯಾಯಿತಿ

ಓಣಂಗೆ ಕೆಎಸ್‌ಆರ್‌ಟಿಸಿ ಹೆಚ್ಚುವರಿ ಬಸ್

ಬೆಂಗಳೂರು: ಕರ್ನಾಟಕದಿಂದ ತಿರು ಓಣಂ ಹಬ್ಬಕ್ಕೆ ಊರಿಗೆ ಹೊರಟವರಿಗೆ ಕೆಎಸ್‌ಆರ್‌ಟಿಸಿಯಿಂದ ವಿಶೇಷ ಸಾರಿಗೆ ಬಸ್ ವ್ಯವಸ್ಥೆಯನ್ನು ಮಾಡಲಾಗಿದೆ.

ಸೆ.5ರಂದು ತಿರು ಓಣಂ ಹಬ್ಬದ ಪ್ರಯುಕ್ತ ನಿಗಮವು, ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸೆ.2 ರಿಂದ 4 ರವರೆಗೆ ಬೆಂಗಳೂರಿನಿಂದ ಕೇರಳ ರಾಜ್ಯಕ್ಕೆ ಕಾರ್ಯಾಚರಿಸುತ್ತಿರುವ ಸಾರಿಗೆಗಳ ಜತೆಗೆ 90 ಹೆಚ್ಚುವರಿ ಬಸ್ಸುಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಿದೆ. ಕೇರಳ ರಾಜ್ಯದ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಸೆ.7ರಂದು ವಿಶೇಷ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುವುದು ಎಂದು ನ ಹೇಳಿದೆ. ಬೆಂಗಳೂರಿನ ಮೈಸೂರು ರಸ್ತೆ ಬಸ್ ನಿಲ್ದಾಣ ಹಾಗೂ ಶಾಂತಿನಗರ ಬಸ್ ನಿಲ್ದಾಣದಿಂದ ಕೇರಳದ ಕಣ್ಣೂರು, ಕೋಜಿಕೋಡ್, ಎರ್ನಾಕುಲಂ, ಪಾಲಕ್ಕಾಡ್, ತ್ರಿಶೂರ್, ಕೊಟ್ಟಾಯಂ, ತಿರುವನಂತಪುರಂ ಮುಂತಾದ ಸ್ಥಳಗಳಿಗೆ ವಿಶೇಷ ವಾಹನಗಳನ್ನು ಶಾಂತಿನಗರದಲ್ಲಿನ ಬಿಎಂಟಿಸಿ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ನಡೆಸಲಾಗುವುದು. ಸಾರ್ವಜನಿಕರು ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಇ-ಟಿಕೆಟ್ ಬುಕಿಂಗ್‌ನ್ನು www.ksrtc.karnataka.gov.in ವೆಬ್ ಸೈಟ್ ಮುಖಾಂತರ ಮಾಡಬಹುದು. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5 ರಷ್ಟು ರಿಯಾಯಿತಿ ನೀಡಲಾಗುವುದು ಹಾಗೂ ಹೋಗುವ ಬರುವ ಪ್ರಯಾಣದ ಟಿಕೆಟ್‌ನ್ನು ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ ಶೇ.10 ರಷ್ಟು ರಿಯಾಯಿತಿ ನೀಡಲಾಗುವುದು.

ಮಟ್ಟಣ್ಣನವರ್ ವಿರುದ್ಧ ಮಹಿಳಾ ಆಯೋಗಕ್ಕೆ ದೂರು

ಬೆಂಗಳೂರು: ಧರ್ಮಸ್ಥಳದಲ್ಲಿ ನಡೆಯುವ ಸಾಮೂಹಿಕ ವಿವಾಹಗಳ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಸಾಮಾಜಿಕ ಕಾರ್ಯಕರ್ತ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಸಾಮಾಜಿಕ ಕಾರ್ಯಕರ್ತೆ ಕಾವೇರಿ ಕೇದಾರನಾಥ್ ಮತ್ತು ಇತರ ಮಹಿಳೆಯರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ.

ದೂರುದಾರರು, ಹತ್ತಕ್ಕೂ ಹೆಚ್ಚು ಮಹಿಳೆಯರ ಜತೆ ಆಗಮಿಸಿ ದೂರು ಸಲ್ಲಿಸಿದ ಕಾವೇರಿ ಕೇದಾರನಾಥ್, ಧರ್ಮಸ್ಥಳದಲ್ಲಿ ಸಾಮೂಹಿಕ ಮದುವೆಯಾಗುವ ಹೆಣ್ಣು ಮಕ್ಕಳ ಬಗ್ಗೆ ಗಿರೀಶ್ ಮಟ್ಟಣ್ಣನವರ್ ಹೀನವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿದರು. ಧರ್ಮಸ್ಥಳದಲ್ಲಿ ಲಕ್ಷಾಂತರ ಜೋಡಿಗಳು ವಿವಾಹವಾಗಿ ಸುಖಕರ ಜೀವನ ನಡೆಸುತ್ತಿದ್ದಾರೆ. ಬಡವರು ಮಾತ್ರವಲ್ಲ, ಅನೇಕ ಭಕ್ತರು ಹರಕೆ ಹೊತ್ತು ಇಲ್ಲಿ ಮದುವೆಯಾಗುತ್ತಾರೆ. ಆದರೆ, ಮಟ್ಟಣ್ಣನವರ್ ಈ ಮದುವೆಗಳ ಬಗ್ಗೆ ಮತ್ತು ಅಲ್ಲಿ ಮದುವೆಯಾದ ಮಹಿಳೆಯರ ಬಗ್ಗೆ ಹೀನವಾಗಿ ಮತ್ತು ಅವರ ಘನತೆಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಧರ್ಮಸ್ಥಳದಂತಹ ಪವಿತ್ರ ಸ್ಥಳ ಮತ್ತು ಇಲ್ಲಿ ಮದುವೆಯಾದ ಮಹಿಳೆಯರ ಬಗ್ಗೆ ಅಸಹ್ಯಕರವಾಗಿ ಮಾತನಾಡಿದ್ದು, ಇಡೀ ಭಕ್ತ ಸಮೂಹಕ್ಕೆ ನೋವುಂಟು ಮಾಡಿದೆ ಎಂದು ತಿಳಿಸಿದರು.

ವಿವಿಗೆ ಹೆಗಡೆ ಹೆಸರಿಡಿ: ಸಿಂಧ್ಯಾ ಆಗ್ರಹ

ಬೆಂಗಳೂರು: ರಾಜ್ಯ, ದೇಶ ಕಂಡ ಅಪರೂಪದ ರಾಜಕಾರಣಿಗಳ ಸಾಲಿನಲ್ಲಿ ನಿಲ್ಲುವ ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಯಾವುದಾದರೂ ವಿಶ್ವವಿದ್ಯಾಲಯಕ್ಕೆ ಇಡಬೇಕು. ಅವರ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಅಧ್ಯಯನ ನಡೆಯಬೇಕು ಎಂದು ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ ಆಗ್ರಹಿಸಿದರು.

ರಾಮಕೃಷ್ಣ ಹೆಗಡೆ ಅವರ 99ನೇ ಜನ್ಮದಿನಾಚರಣೆ ಪ್ರಯುಕ್ತ ನಡೆದ ಚಿಂತನ-ಮಂಥನ ಸಭೆಯಲ್ಲಿ ಮಾತನಾಡಿದ ಅವರು, ಮನಮೋಹನ ಸಿಂಗ್, ಅಕ್ಕಮಹಾದೇವಿ, ರಾಣಿ ಚೆನ್ನಮ್ಮ ಸಹಿತ ಅನೇಕರ ಹೆಸರುಗಳನ್ನು ವಿಶ್ವವಿದ್ಯಾಲಯಗಳಿಗೆ ಇಡಲಾಗಿದೆ. ಅದಕ್ಕೆ ನನ್ನ ವಿರೋಧವಿಲ್ಲ, ಹಲವು ಪ್ರಥಮಗಳಿಗೆ ಕಾರಣರಾದ ಹೆಗಡೆಯವರ ಹೆಸರಲ್ಲಿಯೂ ವಿಶ್ವವಿದ್ಯಾಲಯ ಇರಬೇಕು ಎಂದರು.

ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರು ರಾಮಕೃಷ್ಣ ಹೆಗಡೆ ಮತ್ತು ವೀರೇಂದ್ರ ಪಾಟೀಲರನ್ನು ಲವ-ಕುಶ ಎಂದು ಕರೆಯುತ್ತಿದ್ದರು. ಇಬ್ಬರನ್ನೂ ಬೆಳೆಸಿದರು. ಆ ನಂತರ ನಿಜಲಿಂಗಪ್ಪ ಅವರನ್ನು ಬಿಟ್ಟು ಬಂದರೆ ಮುಖ್ಯಮಂತ್ರಿ ಮಾಡುವುದಾಗಿ ಇಂದಿರಾಗಾಂಧಿ ಅವರು ಹೆಗಡೆಯವರನ್ನು ಆಹ್ವಾನಿಸಿದ್ದರು. ಆದರೆ, ಹೆಗಡೆ ಹೋಗಲಿಲ್ಲ. ನಿಜಲಿಂಗಪ್ಪ ಅವರ ಜತೆಗೆ ಕೊನೆಯವರೆಗೂ ಉಳಿದವರು ಹೆಗಡೆ ಒಬ್ಬರೇ. ಈಗ ಬೆಳೆಸುವವರೂ ಇಲ್ಲ. ಈ ರೀತಿ ನಿಷ್ಠೆ ತೋರುವವರೂ ಇಲ್ಲ ಎಂದು ಹೇಳಿದರು.

ಹೈಕೋರ್ಟ್‌ಗೆ ಸರಕಾರದಿಂದ ಮೌಖಿಕ ವಿವರಣೆ | ಯಾವುದೇ ವಿಲೀನ ನಡೆಸುವುದಿಲ್ಲ

ಆಯುಷ್ ಇಲಾಖೆ ಮುಚ್ಚುವ ಪ್ರಸ್ತಾವನೆಯಿಲ್ಲ

ಬೆಂಗಳೂರು: ಆಯುಷ್ ಇಲಾಖೆ ಮುಚ್ಚುವ ಪ್ರಸ್ತಾವನೆ ರಾಜ್ಯ ಸರಕಾರದ ಮುಂದೆ ಇಲ್ಲ. ಆಡಳಿತ ವ್ಯವಸ್ಥೆ ಸುಧಾರಿಸಲು ಆಂತರಿಕವಾಗಿ ಮಾರ್ಪಾಡು ಮಾಡಲಾಗುವುದು ಎಂದು ರಾಜ್ಯ ಸರಕಾರ ಹೈಕೋರ್ಟ್‌ಗೆ ಮೌಖಿಕವಾಗಿ ತಿಳಿಸಿದೆ.

ಔಷಧಿಗಳ ಅಮಲುಜಾರಿ ವಿಭಾಗ ಮತ್ತು ಪರೀಕ್ಷಾ ಪ್ರಯೋಗಾಲಯವನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಜೊತೆ ವಿಲೀನಗೊಳಿಸುವುದಕ್ಕೆ ಆಕ್ಷೇಪಿಸಿ ರಾಜ್ಯ ಔಷಧ ಉತ್ಪಾದಕರ ಸಂಘ ಸಲ್ಲಿಸಿರುವ ಅರ್ಜಿ ವಿಚಾರಣೆ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಹಾಲಿ ಇರುವ ಆಯುಷ್ ಆಸ್ಪತ್ರೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿಲೀನ ನಡೆಸುವುದಿಲ್ಲ ಎಂದು ಸರಕಾರ ಹೇಳಿದೆ. ರಾಜ್ಯ ಔಷಧ ಉತ್ಪಾದಕರ ಸಂಘದ ಸದಸ್ಯರ ಸ್ಥಳಗಳ ಪರಿಶೀಲನೆಗೆ ಅರ್ಹ ಇನ್‌ಸ್ಪೆಕ್ಟರ್ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರವು ಅಫಿಡವಿಟ್ ಸಲ್ಲಿಸಲು ಸ್ವತಂತ್ರವಾಗಿದೆ ಎಂದು ನ್ಯಾಯಾಲಯ ಆದೇಶಿಸಿದ್ದು, ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ನೋಟಿಸ್ ಜಾರಿ ಮಾಡಿದೆ.

ಅರ್ಜಿದಾರರ ಪರ ವಕೀಲ ಪಿ.ಪ್ರಸನ್ನಕುಮಾರ್ ಅವರು, ಆಯುಷ್ ಇಲಾಖೆಯನ್ನು ಅಲೋಪತಿ ಔಷಧಿಗಳ ಇಲಾಖೆಯ ಜತೆ ವಿಲೀನಗೊಳಿಸುವುದಕ್ಕೆ ಸಂಬಂಧಿಸಿದಂತೆ ಸರಕಾರ ಆದೇಶ ಮಾಡಿದೆ. ಇದು ಔಷಧ ಮತ್ತು ಕಾಂತಿವರ್ಧಕ ಕಾಯಿದೆಗೆ ವಿರುದ್ಧವಾಗಿದೆ. ಇದರಿಂದ ಅರ್ಜಿದಾರರ ಸ್ಥಳಗಳನ್ನು ಪ್ರಸ್ತಾವಿತ ಔಷಧ ಮತ್ತು ಕಾಂತಿವರ್ಧಕ ನಿಯಮಗಳಡಿ ಅನರ್ಹ ಇನ್‌ಸ್ಪೆಕ್ಟರ್‌ಗಳು ಪರಿಶೀಲನೆ ಮಾಡಲು ಅವಕಾಶ ಮಾಡಿಕೊಡಲಿದೆ ಎಂದರು.

ವಿಲೀನ ಮಾಡುವುದು ಕಾಯಿದೆಗೆ ವಿರುದ್ಧ: ಕೇಂದ್ರ ಸರಕಾರ ಪ್ರತಿನಿಧಿಸಿದ್ದ ಉಪ ಸಾಲಿಸಿಟರ್ ಜನರಲ್ ಎಚ್.ಶಾಂತಿ ಭೂಷಣ್ ಅವರು, ಔಷಧ ಪರವಾನಗಿ ಪ್ರಾಧಿಕಾರವನ್ನು ಔಷಧ ನಿಯಂತ್ರಕರ ಕಚೇರಿಯೊಂದಿಗೆ ವಿಲೀನಗೊಳಿಸುವುದು ಔಷಧ ಮತ್ತು ಕಾಂತಿವರ್ಧಕ ನಿಯಮಗಳು ಮತ್ತು ಕಾಯಿದೆಗೆ ವಿರುದ್ಧ ಎಂದರು.

ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ರೂಬೆನ್ ಜಾಕಬ್ ಅವರು 29.07.2025ರಂದು ಹೊರಡಿಸಿರುವ ಆಕ್ಷೇಪಿತ ಆದೇಶವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿ ಬರುವ ಆಯುಷ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಆಹಾರ ಮತ್ತು ಸುರಕ್ಷತೆ ಮತ್ತು ಔಷಧ ನಿಯಂತ್ರಕರ ಆಯುಕ್ತಾಲಯಗಳಿಗೆ ಸಂಬಂಧಿಸಿದ ಆಂತರಿಕ ವ್ಯವಸ್ಥೆಯಾಗಿದೆ. 13.12.2024ರಂದು ಔಷಧ ನಿಯಂತ್ರಕರ ಕಚೇರಿಯನ್ನು ಆಹಾರ ಮತ್ತು ಸುರಕ್ಷತಾ ಆಯುಕ್ತಾಲಯದ ಜತೆ ವಿಲೀನಗೊಳಿಸಲಾಗಿದ್ದು, ಇದು ಆಡಳಿತಾತ್ಮಕ ವ್ಯವಸ್ಥೆಯಾಗಿದೆ. ಆಯುಷ್ ಆಯುಕ್ತಾಲಯವು ಔಷಧ ಜಾರಿ ಮತ್ತು ವಿಶ್ಲೇಷಣೆ ಮತ್ತು ಆಯುಷ್ ಆಸ್ಪತ್ರೆಗಳ ಉಸ್ತುವಾರಿ ಮಾಡಲಿದೆ ಎಂದರು.

ತಾತ್ಕಾಲಿಕ ಸೀಟು ಹಂಚಿಕೆ ಸಂಬಂಧ ಆಕ್ಷೇಪಣೆ ಸಲ್ಲಿಸಲು ಇಂದೇ ಕೊನೆ

ಸಿಇಟಿ ತಾತ್ಕಾಲಿಕ ಫಲಿತಾಂಶ ಪ್ರಕಟ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಸಂಬಂಧ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಕೃಷಿ ವಿಜ್ಞಾನ, ವೆಟರನರಿ, ಬಿ.ಎಸ್‌ಸಿ(ನರ್ಸಿಂಗ್), ಬಿ-ಫಾರ್ಮ, ಫಾರ್ಮ-ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಮತ್ತು ಆಯುಷ್ ಕೋರ್ಸುಗಳ 2ನೇ ಸುತ್ತಿನ ತಾತ್ಕಾಲಿಕ ಫಲಿತಾಂಶದ ಜತೆಗೆ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸುಗಳ 2ನೇ ಸುತ್ತಿನ ತಾತ್ಕಾಲಿಕ ಫಲಿತಾಂಶವನ್ನು ಇದು ಒಳಗೊಂಡಿದೆ.

ಈ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆಗೆ ಆ. 26ರ ಮಧ್ಯಾಹ್ನ 1 ರವರೆಗೆ ನಮೂದಿಸಿದ್ದ ಆಪ್ಷನ್‌ಗಳನ್ನು ಪರಿಗಣಿಸ ಲಾಗಿದೆ. ಇದು ತಾತ್ಕಾಲಿಕ ಹಂಚಿಕೆ ಯಾಗಿರುವುದರಿಂದ ಅಭ್ಯರ್ಥಿಗಳು ಕಾಲೇಜಿನಲ್ಲಿ ಪ್ರವೇಶ ಪಡೆಯುವಂತಿಲ್ಲ ಎಂದು ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸ್ಪಷ್ಟಪಡಿಸಿದ್ದಾರೆ. ಈ ತಾತ್ಕಾಲಿಕ ಸೀಟು ಹಂಚಿಕೆ ಸಂಬಂಧ ನಿರ್ದಿಷ್ಟ ಆಕ್ಷೇಪಣೆಗಳಿದ್ದಲ್ಲಿ ಆ. 30ರ ಮಧ್ಯಾಹ್ನ 1ರೊಳಗೆ keauthor ity&kanic.inಗೆ ಎಲ್ಲಾ ವಿವರಗಳೊಂದಿಗೆ ಮೇಲ್ ಮಾಡಬೇಕು. ವೈದ್ಯಕೀಯ, ವೈದ್ಯಕೀಯ ಕೋರ್ಸುಗಳಿಗೆ 2ನೇ ಸುತ್ತಿನಲ್ಲಿ ತಾತ್ಕಾಲಿಕವಾಗಿ ಸೀಟು ಹಂಚಿಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಸದ್ಯ ಯಾವುದೇ ಕ್ರಮ ವಹಿಸಬಾರದು. ಎಂಸಿಸಿ ವೇಳಾಪಟ್ಟಿ ಆಧರಿಸಿ ಮುಂದಿನ ಕ್ರಮಗಳ ಬಗ್ಗೆ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಪರಿಷ್ಕೃತ ಮಾಹಿತಿಗಾಗಿ ನಿಯಮಿತವಾಗಿ ವೆಬ್ ಸೈಟ್ ಗಮನಿಸುತ್ತಿರಬೇಕು ಎಂದು ಮಾಹಿತಿ ನೀಡಿದ್ದಾರೆ.

![Shree Akshaya Lakshmi Souharda Credit Co-operative Ltd. logo]

ಶ್ರೀ ಅಕ್ಷಯ ಲಕ್ಷ್ಮಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ. 2091/ಸಿ, ನೆಲಮಹಡಿ, 1ನೇ ಮುಖ್ಯರಸ್ತೆ, ಬೆಳಕು ಕಣ್ಣು ಆಸ್ಪತ್ರೆ ಎದುರು, ಔಟರ್ ರಿಂಗ್‌ರಸ್ತೆ (ಹೊರ ವರ್ತುಲ ರಸ್ತೆ), ಕೆಂಗೇರಿ ಉಪನಗರ, ಬೆಂಗಳೂರು-560060.

9ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,
ನಮ್ಮ ಸಹಕಾರಿ 2024-2025 ನೇ ಸಾಲಿನ 9ನೇ ವಾರ್ಷಿಕ ಸದಸ್ಯರ ಸಭೆಯು ನಮ್ಮ ಸಹಕಾರಿ ಕಛೇರಿಯ ಆವರಣದಲ್ಲಿ ದಿನಾಂಕ 14-09-2025ನೇ ಭಾನುವಾರ ಮಧ್ಯಹ್ನ 1:00 ಗಂಟೆಗೆ ನಮ್ಮ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಜಿ.ಶಾಂತಯ್ಯ ಇವರ ಅಧ್ಯಕ್ಷತೆಯಲ್ಲಿ ನೆಡೆಯಲು ತೀರ್ಮಾನಿಸಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಸ್ಥಳ: ಬೆಂಗಳೂರು
ದಿನಾಂಕ : 27-08-2025
ಸಹಿ/-
ಚೈತ್ರ .ವಿ
ಕಾರ್ಯದರ್ಶಿ

ಶ್ರೀ ಅಕ್ಷಯ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ನಂ. 2091/ಬಿ, ನೆಲಮಹಡಿ, 1ನೇ ಮುಖ್ಯರಸ್ತೆ, ಬೆಳಕು ಕಣ್ಣು ಆಸ್ಪತ್ರೆ ಎದುರು, ಔಟರ್ ರಿಂಗ್‌ರಸ್ತೆ (ಹೊರ ವರ್ತುಲ ರಸ್ತೆ), ಕೆಂಗೇರಿ ಉಪನಗರ, ಬೆಂಗಳೂರು-560060.

10ನೇ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,
ನಮ್ಮ ಸಹಕಾರಿ 2024-2025ನೇ ಸಾಲಿನ 10ನೇ ವಾರ್ಷಿಕ ಸದಸ್ಯರ ಸಭೆಯು ನಮ್ಮ ಸಂಘದ ಆವರಣದಲ್ಲಿ ದಿನಾಂಕ 14-09-2025ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಕೆ.ಜಿ. ಶಾಂತಯ್ಯ ಇವರ ಅಧ್ಯಕ್ಷತೆಯಲ್ಲಿ ನೆಡೆಯಲು ತೀರ್ಮಾನಿಸಲಾಗಿದೆ.
ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ,

ಸ್ಥಳ: ಬೆಂಗಳೂರು
ದಿನಾಂಕ : 27-08-2025
ಸಹಿ/-
ಮೋಹನಕುಮಾರಿ .ಎನ್
ಕಾರ್ಯದರ್ಶಿ

ಚಂದ್ರಗುಪ್ತ ಮೌರ್ಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,
ನಂ. 2712, 7ನೇ ಎ ಮುಖ್ಯರಸ್ತೆ, ಹಂಪಿನಗರ, ವಿಜಯನಗರ
ಬೆಂಗಳೂರು - 560 104. ಮೊ: 9740840926

15ನೇ ಸರ್ವಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,
ನಮ್ಮ ಸಹಕಾರಿಯ 15ನೇ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ಅಧ್ಯಕ್ಷರಾದ ಶ್ರೀ ಪುಟ್ಟರಾಜುರವರ ಅಧ್ಯಕ್ಷತೆಯಲ್ಲಿ ದಿನಾಂಕ : 14-09-2025ನೇ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ **ನಿಸರ್ಗ ಪಾರ್ಟಿ ಹಾಲ್, ಕ್ಲಬ್ ರೋಡ್ ವಿಜಯನಗರ, ಬೆಂಗಳೂರು 560040** ಇಲ್ಲಿ ನಡೆಸಲು ನಿರ್ಧರಿಸಲಾಗಿದೆ, ಸೂಚನಾ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ, ಸೂಚನಾ ಪತ್ರ ತಲುಪದಿರುವ ಸದಸ್ಯರು ಇದನ್ನೇ ಸೂಚನಾಪತ್ರವೆಂದು ತಿಳಿದು ಸಭೆಗೆ ಆಗಮಿಸಬೇಕಾಗಿ ವಿನಂತಿ.

ದಿ: 10.08.2025
ಸ್ಥಳ : ಬೆಂಗಳೂರು
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- (ಅಶೋಕ ಕೃಷ್ಣ)
ಮುಖ್ಯಕಾರ್ಯನಿರ್ವಹಣಾಧಿಕಾರಿ

ಸೆ.3ರಿಂದ ವಸ್ತ್ರಾಭರಣ ಪ್ರದರ್ಶನ 33ನೇ ಆವೃತ್ತಿ

ಬೆಂಗಳೂರು: ಕ್ರಾಫ್ಟ್ ಕೌನ್ಸಿಲ್ ಆಫ್ ಕರ್ನಾಟಕವು ಸೆ.3ರಿಂದ 7ರವರೆಗೆ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ವಸ್ತ್ರಾಭರಣದ 33ನೇ ಆವೃತ್ತಿಯನ್ನು ಆಯೋಜಿಸಿದೆ. ಪ್ರದರ್ಶನವನ್ನು ಸೆ.3ರಂದು ಬೆಳಗ್ಗೆ 11 ಗಂಟೆಗೆ ಮೀನಾಕ್ಷಿ ಕೃಷ್ಣಭೈರೇಗೌಡ ಉದ್ಘಾಟಿಸಲಿ ದ್ದಾರೆ. ಈ ವರ್ಷದ ಆವೃತ್ತಿಯು ಭ್ರಮೆ ಮತ್ತು ಫ್ಯಾಂಟಸಿ ಎಂಬ ಥೀಮ್‌ನಿಂದ ಪ್ರೇರಿತ ವಾಗಿದೆ ಎಂದು ಪ್ರಕಟಣೆ ಹೇಳಿದೆ.

PUBLIC NOTICE

I, **H. R. BAGHYALAKSHMAMMA** have lost original Sale Deeds Document bearing No.14730/1992-93, in respect of Property bearing Katha No.1553/1641, Situated at Kamakshipalya Village, Yeshwanthpura Hobli, Bangalore North Taluk. & One Stamp Paper In this regard I have also lodged E-Lost report in Online, if the said Original Sale Deeds is found it is hereby requested to be delivered to me at below stated
Contact details : P H-9448905921.
H. R. Baghyalakshmamma,
No.14, 6th Main, Maruthinagra,
Kamakshipalya, Bangalore -91.

IN THE COURT OF THE HON'BLE SMALL CAUSES COURT AT BANGALORE (SCCH-07)
SC. NO. 173/2025
BETWEEN : THE STATE BANK OF INDIA SUDHAMNAGAR Branch, No.110/5, Lalbhag Road, Sudhamnagar, Bengaluru: 560027. Represented by its Manger MR. Pragathi R ...PLAINTIFF
AND : Mrs. GEETHA, ...DEFENDANT
SUMMONS TO DEFENDANT BY WAY OF PAPER PUBLICATION
Mrs. GEETHA, W/o. Ramnu Aged about : 46 years NO-505 K.S.GARDEN, SUDHAM NAGAR, BANGALORE - 560027. Ph : 7338149865
Whereas, the Plaintiff has filed a suit Recovery of money instituted the present suit, for sum of Rs.1,47,755/- (Rupees One Lakh Fourty Seven Thousand Seven Hundred Fifty Five Only) and future interest at 14% p.a. contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader on **13/10/25 at 11 A.M.** to answer the same failing which suit will be disposed off ex-parte.
Given under my hand and the seal of the court this 28th day of August 2025.
By Order of the Court
Sd/- Assistant Registrar
Court of Small Causes, Bangalore
Advocate for Plaintiff
J. SATHISH KUMAR Advocate
EWS, 16/2, 1st Cross, 2nd Main, 2nd Stage, KHB (AD Halli), Basaveshwaranagar, Bengaluru -79. Mob : 9448448238
Email : gsnadvocates@yahoo.com

ಡೇಟಿಂಗ್ ಆ್ಯಪ್ ಮೂಲಕ ಮೋಸದ ಬಲೆ

ಬೆಂಗಳೂರು: ಕಾಲೇಜು ಹುಡುಗಿಯರನ್ನು ಬಳಸಿಕೊಂಡು ಕೆಲವು ರೆಸ್ಟೋರೆಂಟ್‌ಗಳು ಮತ್ತು ಬಾರ್‌ಗಳು, ಪುರುಷರನ್ನು ಬಲೆಗೆ ಬೀಳಿಸಿ, ದೊಡ್ಡ ಮೊತ್ತದ ಬಿಲ್‌ಗಳನ್ನು ಮಾಡಿ ವಂಚಿಸುತ್ತಿವೆ ಎಂಬ ಆರೋಪ ಕೇಳಿ ಬಂದಿದೆ.

ಈ ಮೋಸದ ಜಾಲದಲ್ಲಿ, ಯುವತಿಯರು ಡೇಟಿಂಗ್ ಆ್ಯಪ್‌ಗಳಲ್ಲಿ ಆಕರ್ಷಕ ಪ್ರೊಫೈಲ್‌ಗಳನ್ನು ರಚಿಸಿ, ಪುರುಷರನ್ನು ಸಂಪರ್ಕಿಸುತ್ತಾರೆ. ಈ ಹುಡುಗಿಯರು ಡೇಟಿಂಗ್‌ಗೆ ಆಮಿಷವೊಡ್ಡಿ, ನಂತರ ಆ ವ್ಯಕ್ತಿಯನ್ನು ತಾವೇ ಆಯ್ಕೆ ಮಾಡಿದ ರೆಸ್ಟೋರೆಂಟ್ ಅಥವಾ ಬಾರ್‌ಗೆ ಕರೆದೊಯ್ಯುತ್ತಾರೆ. ರೆಸ್ಟೋರೆಂಟ್‌ಗೆ ಬಂದರೆ, ಸಾಮಾನ್ಯವಾಗಿ ಯುವತಿಯರು ದುಬಾರಿ ಆರ್ಡರ್‌ಗಳನ್ನು ಮಾಡುತ್ತಾರೆ, ಇದರಿಂದ ಬಿಲ್‌ನ ಮೊತ್ತ ಕನಿಷ್ಠ 50 ಸಾವಿರ ರು. ಗಿಂತ ಹೆಚ್ಚಿರುತ್ತದೆ.



ರೆಸ್ಟೋರೆಂಟ್‌ಗಳು ಯುವತಿಯರನ್ನು ಗುರಿಯಾಗಿಸಿಕೊಂಡು ದೊಡ್ಡ ಆದಾಯದ ಆಮಿಷ ಒಡ್ಡುತ್ತವೆ. ಯುವತಿಯರಿಗೆ ಯಾವು ದೇ ದೊಡ್ಡ ಕೆಲಸ ಮಾಡುವ ಅಗತ್ಯವಿಲ್ಲ, ಕೇವಲ ಡೇಟಿಂಗ್ ಆ್ಯಪ್‌ಗಳ ಮೂಲಕ ಶ್ರೀಮಂತ ಹುಡುಗರನ್ನು ಆಯ್ಕೆ ಮಾಡಿ, ರೆಸ್ಟೋರೆಂಟ್‌ಗೆ ಕರೆತರುವುದು ಅವರ ಕೆಲಸ. ಈ ರೀತಿಯ ಮೋಸದಿಂದಾಗಿ, ಗ್ರಾಹಕರು ದೊಡ್ಡ ಮೊತ್ತದ ಬಿಲ್‌ಗಳನ್ನು ಭರಿಸಬೇಕಾ ಗುತ್ತದೆ. ಆದರೆ ಯಾವುದೇ ಕಾನೂನು ಕ್ರಮಕ್ಕೆ ಮುಂದಾಗದಿರುವುದು ಈ ಜಾಲಕ್ಕೆ ಇನ್ನಷ್ಟು ಬಲ ತಂದಿದೆ.

ಕಮಿಷನ್ ಆಸೆಗಾಗಿ ಯುವಕರಿಗೆ ಬಲೆ

ಈ ಯುವತಿಯರಿಗೆ ಬಿಲ್‌ನ ಶೇ.20ರಷ್ಟು ಕಮಿಷನ್ ರೂಪದಲ್ಲಿ ಪಾವತಿಯಾಗುತ್ತದೆ. 50 ಸಾವಿರ ರು. ಬಿಲ್ ಮಾಡಿದರೆ, ಯುವತಿಗೆ 20 ಸಾವಿರ ರು. ಸಿಗುತ್ತದೆ. ಈ ರೀತಿಯ ಆಕರ್ಷಕ ಆದಾಯದ ಆಮಿಷಕ್ಕೆ ಒಳಗಾಗಿ, ಕೆಲವು ಕಾಲೇಜು ಯುವತಿಯರು ಈ ಕೆಲಸಕ್ಕೆ ಸೇರುತ್ತಿದ್ದಾರೆ. ಈ ವಂಚನೆಯಲ್ಲಿ ಬಲಿಯಾಗುವವರಲ್ಲಿ ವಿವಾಹಿತ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ವಿವಾಹಿತ ಪುರುಷರು ಮೋಸ ಹೋದ ಬಳಿಕ ಮರ್ಯಾದೆ ಅಂಜಿ ದೂರು ದಾಖಲಿಸಲು ಹಿಂದೇಟು ಹಾಕುತ್ತಾರೆ.

ಬಿಎಂಟಿಸಿ ಬಸ್‌ಗಳಿಂದಾಗುವ ಅಪಘಾತ ತಗ್ಗಿಸಲು ಕ್ರಮ | ಹೆಚ್ಚಿನ ಒತ್ತಡದಿಂದ ಅಪಘಾತ

3000 ಬಸ್ ಮಾರ್ಗಗಳ ವೇಳಾಪಟ್ಟಿ ಪರಿಷ್ಕರಣೆ

ಬೆಂಗಳೂರು: ದಿನದಿಂದ ದಿನಕ್ಕೆ ಬಿಎಂಟಿಸಿ ಬಸ್‌ಗಳ ಅಪಘಾತ ಪ್ರಮಾಣ ತೀವ್ರಗತಿಯಲ್ಲಿ ಏರಿಕೆಯಾಗಿರುವುದರಿಂದ, ಅಪಘಾತ ನಿಯಂತ್ರಣಕ್ಕೆ ಮುಂದಾಗಿರುವ ಬಿಎಂಟಿಸಿ ಹಲವು ಕ್ರಮ ಕೈಗೊಂಡಿದೆ. ಇದೀಗ ಇದರ ಭಾಗವಾಗಿ ಸುಮಾರು ಮೂರು ಸಾವಿರ ಬಸ್ ರೂಟ್‌ಗಳ ವೇಳಾಪಟ್ಟಿಯನ್ನು ಪರಿಷ್ಕರಿಸಿದೆ.

ನಗರದಲ್ಲಿ ಬಿಎಂಟಿಸಿಯಿಂದ ನಡೆಯುತ್ತಿರುವ ಅಪಘಾತಗಳಿಗೆ ಒತ್ತಡವೂ ಒಂದು ಪ್ರಮುಖ ಕಾರಣವೆಂದು ಹೇಳಲಾಗುತ್ತಿದ್ದು, ಕೆಲಸದ ಸಮಯದಲ್ಲಿ ಬದಲಾವಣೆ ಇಲ್ಲದಿರುವುದರಿಂದ ಹಾಗೂ ಕರ್ತವ್ಯದ ಸಮಯ ಮೀರಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಚಾಲಕರಿಗೆ ಒತ್ತಡ ಹೆಚ್ಚಾಗುತ್ತಿದೆ ಎಂದು ಹೇಳಲಾಗುತ್ತಿದೆ. ಈ ಹಿನ್ನೆಲೆ ಚಾಲಕರ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಬಸ್ ನಿಗಮವು ಸುಮಾರು 3,000 ಬಿಎಂಟಿಸಿ ಬಸ್ ಮಾರ್ಗಗಳ ವೇಳಾಪಟ್ಟಿಯನ್ನು ಪರಿಷ್ಕರಣೆ ಮಾಡಿದೆ.

ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮತ್ತು ಕಾರ್ಮಿಕರ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ವಿಜಯ ಭಾಸ್ಕರ್ ಮಾತನಾಡಿ, ಸಾರಿಗೆ ಕಾರ್ಮಿಕರನ್ನು ನಿಯಂತ್ರಿಸುವ 1961 ರ ಮೋಟಾರ್ ಸಾರಿಗೆ ಕಾರ್ಮಿಕರ ಕಾಯಿದೆ ಪ್ರಕಾರ ಚಾಲಕನಿಗೆ ಕೇವಲ ಎಂಟು ಗಂಟೆಗಳ ಕೆಲಸ ಮಾತ್ರ ನೀಡಬೇಕು. ಆದರೂ ಚಾಲಕರು ಅವರಿಗೆ ನಿಗದಿಪಡಿಸಿದ ಟ್ರಿಪ್‌ಗಳನ್ನು ಪೂರ್ಣಗೊಳಿಸಲು ಸುಮಾರು 12 ಗಂಟೆಗಳ ಕಾಲ ಕೆಲಸ ಮಾಡಬೇಕಾಗಿ ಬರುತ್ತಿದೆ. ಮಾರ್ಗಗಳ ಚಾಲನೆಯ ಸಮಯ ಹೆಚ್ಚಳವಾಗುತ್ತಿದ್ದು, ಇದರಿಂದ ಕರ್ತವ್ಯದ ಸಮಯ ಕೂಡ ಹೆಚ್ಚಾಗುತ್ತಿದೆ. ಹೀಗಾಗಿ ಕೆಲಸದ ಸಮಯ ಎಂಟು ಗಂಟೆಗಳನ್ನು ಮೀರಿದರೆ ಹೆಚ್ಚುವರಿ ಗಂಟೆಗಳಿಗೆ ಚಾಲಕನಿಗೆ ಪರಿಹಾರ ನೀಡಬೇಕು. ಆದರೆ, ನಿಗಮವು ಸಮಯವನ್ನು ಲೆಕ್ಕಿಸದೆ ಟ್ರಿಪ್‌ಗಳಿಗೆ ಅನುಸಾರ ವೇತನ ನೀಡುತ್ತದೆ. ಚಾಲಕರು ಕನಿಷ್ಟ 2 ಗಂಟೆಗಳ ಕಾಲ ಹೆಚ್ಚುವರಿ ಕೆಲಸ ಮಾಡುತ್ತಾರೆ. ಆದರೆ, ಅವರಿಗೆ ಇದಕ್ಕೆ ಯಾವುದೇ ಹಣ ನೀಡುವುದಿಲ್ಲ ಎಂದರು.

ಇದೇ ವೇಳೆ ಸಂಚಾರ, ರಸ್ತೆ ಕಾಮಗಾರಿಗಳು, ಮೆಟ್ರೋ ಕಾಮಗಾರಿಗಳು, ಗುಂಡಿಗಳು, ವೇಗ ತಡೆಗಳ ಸಂಖ್ಯೆ, ಬಸ್ ನಿಲ್ದಾಣಗಳ ಸಂಖ್ಯೆ ಮತ್ತು ಬಸ್‌ಗಳ ಲೋಡ್ ಸೇರಿದಂತೆ ಮುಂತಾದ ಎಲ್ಲಾ ಅಂಶಗಳನ್ನು ಪರಿಗಣಿಸಿ, ಫಾರ್ಮ್ 4 ರ ನಿಯತಕಾಲಿಕ ವೈಜ್ಞಾನಿಕ ಪರಿಷ್ಕರಣೆ ಮತ್ತು ಚಾಲಕರು ಎಂಟು ಗಂಟೆಗಳಲ್ಲಿ ತಮ್ಮ ಕರ್ತವ್ಯ ಪೂರ್ಣಗೊಳಿಸುವ ರೀತಿಯಲ್ಲಿ ಟ್ರಿಪ್‌ಗಳ ಸಂಖ್ಯೆಯನ್ನು ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ನಗರದಲ್ಲಿ ಹೆಚ್ಚುತ್ತಿರುವ ವಾಹನಗಳ ಸಂಖ್ಯೆ, ರಸ್ತೆ ಮತ್ತು ಮೆಟ್ರೋ ಕಾಮಗಾರಿಗಳು, ರಸ್ತೆ ತಿರುವುಗಳು ಪ್ರಯಾಣದ ಸಮಯವನ್ನು ಹೆಚ್ಚಿಸಿವೆ. ಅದಕ್ಕೆ ಅನುಗುಣವಾಗಿ, ಸುಮಾರು 3,000 ಬಸ್ ಗಳ ವೇಳಾಪಟ್ಟಿಗಳನ್ನು ಪರಿಷ್ಕರಿಸಲಾಗಿದೆ. ಬಸ್‌ಗಳಲ್ಲಿ ಅಳವಡಿಸಲಾದ ಸ್ವಯಂಚಾಲಿತ ವಾಹನ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಆಧರಿಸಿ ಸಮಯವನ್ನು ಪರಿಷ್ಕರಿಸಲಾಗಿದೆ.

-ಪ್ರಭಾಕರ್ ರೆಡ್ಡಿ, ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಕಾರ್ಯಾಚರಣೆ)

ಚಾಲಕರಿಗೆ ಹೆಚ್ಚಿನ ಟ್ರಿಪ್‌ಗಳ ಒತ್ತಡ

ಬೆಳಗ್ಗೆ 6 ಗಂಟೆಗೆ ಕರ್ತವ್ಯ ಪ್ರಾರಂಭಿಸುವ ಚಾಲಕನನ್ನು ಮಧ್ಯಾಹ್ನ 3 ಗಂಟೆಗೆ ಕರ್ತವ್ಯದಿಂದ ಬಿಡುಗಡೆ ಮಾಡಬೇಕು, ಆದರೆ, ನಿಯೋಜಿಸಲಾದ ಒಟ್ಟು ಟ್ರಿಪ್‌ಗಳನ್ನು ಪೂರ್ಣಗೊಳಿಸಲು ಆತ ಇನ್ನು ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡಬೇಕಾಗಿ ಬರುತ್ತಿದೆ. ಹೀಗಾಗಿ ಚಾಲಕರು ಟ್ರಿಪ್‌ಗಳನ್ನು ಬೇಗನೆ ಮುಗಿಸುವ ಒತ್ತಡದಲ್ಲಿರುತ್ತಾರೆ. ಇದು ಅಪಘಾತಗಳಿಗೆ ಕಾರಣವಾಗುತ್ತದೆ. ನಿಗಮವು ಚಾಲಕ ಒತ್ತಡ ನಿವಾರಿಸಲು ಕ್ರಮ ಕೈಗೊಳ್ಳುವುದಾಗಿ ಹೇಳುತ್ತಿದೆ. ಯಾವ ಆಧಾರದ ಮೇಲೆ ಈ ರೀತಿ ಹೇಳುತ್ತಿದೆ ಎಂದು ವಿಜಯ ಭಾಸ್ಕರ್ ಪ್ರಶ್ನಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪವರ್‌ಮ್ಯಾನ್ ಹುದ್ದೆ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಕೆಪಿಟಿಸಿಎಲ್ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್ ಮ್ಯಾನ್ ಹುದ್ದೆ ಹಾಗೂ ವಿವಿಧ ಹುದ್ದೆಗಳ ನೇಮಕಾತಿಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದೆ. ಇಂಧನ ಸಚಿವ ಕೆ.ಜೆ. ಜಾರ್ಜ್‌ರ ನಿರ್ದೇಶನದಂತೆ ವಿವಿಧ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಲಾಗಿದ್ದು, 2024 ರ ಅಕ್ಟೋಬರ್ ನಲ್ಲಿ 433 ಕಿರಿಯ ಸ್ಟೇಷನ್ ಪರಿಚಾರಕ ಹುದ್ದೆ ಮತ್ತು 90 ಕಿರಿಯ ಪವರ್‌ಮ್ಯಾನ್ ಹುದ್ದೆ ಸೇರಿದಂತೆ ಒಟ್ಟು 523 ನಿರ್ವಹಣಾ ಪದವೃಂದದ ಹುದ್ದೆಗಳ ನೇಮಕಾತಿಗೆ ಕೆಪಿಟಿಸಿಎಲ್ ಅಧಿಸೂಚನೆ ಹೊರಡಿಸಿತ್ತು. ಮೇ 2025ರಲ್ಲಿ ರಾಜ್ಯದ ವಿವಿದೆಡೆ ಸಹನ ಶಕ್ತಿ ಪರೀಕ್ಷೆ ನಡೆಸಲಾಗಿತ್ತು. ಕೆಪಿಟಿಸಿಎಲ್ ಅಂತಿಮವಾಗಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್ ಮ್ಯಾನ್ ಹುದ್ದೆಗಳಿಗೆ ಆಯ್ಕೆಗೊಂಡ 491 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಕಟ್ ಆಫ್ ಅಂಕಗಳೊಂದಿಗೆ ಪ್ರಕಟಿಸಿತ್ತು. ಅಭ್ಯರ್ಥಿಗಳಿಂದ ನಿಗದಿತ ಸಮಯದಲ್ಲಿ ಬಂದ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಆಗಸ್ಟ್ 2025 ರಲ್ಲಿ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, hhtps://kptcl.karnataka.gov.in/recruitment ಲಭ್ಯವಿದೆ. ರಾಜ್ಯಾದ್ಯಂತ ಕೆಪಿಟಿಸಿಎಲ್ ಉದ್ಯೋಗದ ಭರವಸೆಯಲ್ಲಿದ್ದ 2600 ಕ್ಕೂ ಹೆಚ್ಚು ಅಭ್ಯರ್ಥಿಗಳು ಮೇ ತಿಂಗಳಿನಲ್ಲಿ ನಡೆದಿದ್ದ ಸಹನ ಶಕ್ತಿ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಇದಾದ ಎರಡು ತಿಂಗಳಲ್ಲೇ ನಿಗಮ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ಉದ್ಯೋಗದ ನಿರೀಕ್ಷೆಯಲ್ಲಿದ್ದವರಿಗೆ ಇಂಧನ ಇಲಾಖೆಯು ಉದ್ಯೋಗದ ಗ್ಯಾರಂಟಿ ನೀಡಿದೆ. ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕೈಗೊಳ್ಳಲಾಗಿರುವ ಕಿರಿಯ ಪವರ್ ಮ್ಯಾನ್ ಹುದ್ದೆಯ ನೇಮಕಾತಿಗೆ ಆಯ್ಕೆ ಪಟ್ಟಿಗಳನ್ನು ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು.

ನಾಳೆ ಸಂಸ್ಕಾರೋತ್ಸವ ಕಾರ್ಯಕ್ರಮ

ಬೆಂಗಳೂರು: ಸನಾತನ ಸಂಸ್ಕಾರಗಳನ್ನು ಉಳಿಸಿ ಬೆಳೆಸುವ, ಜನಮಾನಸದಲ್ಲಿ ಜಾಗೃತಗೊಳಿಸುವ ಸಲುವಾಗಿ ಆಚಾರ ವಿಚಾರ, ಆಹಾರ ವಿಹಾರ, ಸಂಸ್ಕೃತಿ ಸಂಸ್ಕಾರಗಳ ಕುರಿತಾಗಿ ವೈವಿಧ್ಯಮಯ 'ಸಂಸ್ಕಾರೋತ್ಸವ'ವನ್ನು ಬೆಂಗಳೂರಿನ ಮಲ್ಲೇಶ್ವರ ದಲ್ಲಿರುವ ಹವ್ಯಕ ಭವನದಲ್ಲಿ ಭಾನುವಾರ ಅಖಿಲ ಹವ್ಯಕ ಮಹಾಸಭಾದಿಂದ ಆಯೋಜಿಸಲಾಗಿದೆ. ಬೆಳಗ್ಗೆ 10 ಗಂಟೆಗೆ ಉದ್ಘಾಟನಾ ಸಭಾ ಕಾರ್ಯಕ್ರಮ ನಡೆಯಲಿದ್ದು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಪಂಡಿತ್ ವಿನಾಯಕ ತೊರವಿ, ಹರಿಪ್ರಸಾದ್ ಪೆರಿಯಪ್ಪ ಅಭ್ಯಾಗತರಾಗಿ ಭಾಗವಹಿಸಲಿದ್ದು, ಡಾ.ಗಿರಿಧರ ಕಜೆ ಅಧ್ಯಕ್ಷತೆ ವಹಿಸಲಿದ್ದಾರೆ. ಈ ವೇಳೆ ಕಳೆದ ಡಿಸೆಂಬರ್‌ನಲ್ಲಿ ನಡೆದ ಐತಿಹಾಸಿಕ ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಸ್ಮರಣಸಂಚಿಕೆ ಸಹಸ್ರಚಂದ್ರ ಲೋಕಾರ್ಪಿತವಾಗಲಿದೆ. ಸಂಸ್ಕಾರ ದರ್ಶನ ಕಾರ್ಯಕ್ರಮದಲ್ಲಿ ಶ್ರೀ ನಿರ್ಭಯಾನಾಂದ ಸ್ವಾಮಿಜಿ, ಶತಾವಧಾನಿ ಡಾ.ಆರ್ ಗಣೇಶ್, ಚಕ್ರವರ್ತಿ ಸೂಲಿಬೆಲೆ, ದೇವೇಂದ್ರ ಬೆಳೆಯೂರು, ವಿದ್ವಾನ್ ರಾಮಕೃಷ್ಣ ಭಟ್ಟ ಕೂಟೇಲು, ವಿದ್ವಾನ್ ಜಗದೀಶ ಶರ್ಮಾ ಸಂಪ, ಡಾ. ಭರತ್ ಚಂದ್ರ, ಕೂರ್ಗಿ ಶಂಕರನಾರಾಯಣ ಉಪಾಧ್ಯಾಯ ಸೇರಿದಂತೆ ಅನೇಕರು ವಿವಿಧ ಸಂಸ್ಕಾರಗಳ ಕುರಿತಾಗಿ ಉಪನ್ಯಾಸ ನೀಡಲಿದ್ದಾರೆ. ಕಲಾ ಸಂಸ್ಕಾರದ ಭಾಗವಾಗಿ ಯಕ್ಷ ಸಂಸ್ಕಾರ ಪ್ರದರ್ಶನ ಹಾಗೂ ವಿಶಿಷ್ಟವಾದ ಸಂಸ್ಕಾರ ಸ್ವರ ಚಿತ್ತಾರ ಕಾರ್ಯಕ್ರಮಗಳು ನಡೆಯಲಿವೆ. ಇದಕ್ಕೂ ಪೂರ್ವದಲ್ಲಿ 108 ಮಾತೆಯರಿಂದ ಕುಂಕುಮಾರ್ಚನೆ, 108 ವೈದಿಕರಿಂದ ರುದ್ರಾಭಿಷೇಕ, ಶಂಕರ ಪಲ್ಲಕ್ಕಿ ಉತ್ಸವ, ಸಿದ್ದಿವಿನಾಯಕ ದೇವರಿಗೆ ರಂಗಪೂಜೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳೂ ನಡೆಯಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕರಿಗೆ ಉಚಿತ ಯೋಗಾಸನ

ಬೆಂಗಳೂರು: ಜಯಚಾಮರಾಜೇಂದ್ರ ಸರಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಹಾಗೂ ಸರಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಯೋಗ ವಿಭಾಗದಲ್ಲಿ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಉಚಿತ ಯೋಗಾಸನ, ಪ್ರಾಣಾಯಾಮ, ಧ್ಯಾನ ತರಗತಿಗಳನ್ನು, ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗಿದೆ. ಉಪನ್ಯಾಸಗಳನ್ನು ಸೆ.1 ರಿಂದ 30 ರವರೆಗೆ ಬೆಳಗ್ಗೆ 7.30ರಿಂದ 8.30ರವರೆಗೆ ಆಸ್ಪತ್ರೆಯ ಯೋಗಾ ವಿಭಾಗದಲ್ಲಿ ನಡೆಸಲಾಗುತ್ತದೆ. ನೊಂದಾವಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ಕಾರ್ತಿಕ್ ದೂರವಾಣಿ ಸಂಖ್ಯೆ 9845986119 ಅನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಅವಧಿ ವಿಸ್ತರಣೆ

ಬೆಂಗಳೂರು: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕರ್ನಾಟಕ ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳು, ಇತರೆ ಜಾತಿಗಳು ಅನುಸೂಚಿತ ಜಾತಿ ಮತ್ತು ಪಂಗಡಗಳು ಸೇರಿದಂತೆ ಎಲ್ಲ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನುಸರಕಾರದ ಆದೇಶಾನುಸಾರ ಕೈಗೊಂಡಿದೆ. ಈ ಹಿನ್ನೆಲೆ, ಹಿಂದುಳಿದ ವರ್ಗಗಳು ಮತ್ತು ಇತರೆ ಜಾತಿ/ಉಪಜಾತಿಗಳ ಬಗ್ಗೆ ಸಾರ್ವಜನಿಕರ ಮಾಹಿತಿಗಾಗಿ ಆ.22ರಂದು ಯಾವುದೇ ಜಾತಿ/ಉಪಜಾತಿಗಳು ಬಿಟ್ಟು ಹೋಗಿದ್ದಲ್ಲಿ, ಅಂತಹ ಅಂಶಗಳ ಬಗ್ಗೆ ಸಲಹೆ, ಸೂಚನೆಗಳು ಇದ್ದಲ್ಲಿ, 07 ದಿನಗಳ ಒಳಗೆ ನೀಡಲು ಕೋರಲಾಗಿತ್ತು. ಸಾರ್ವಜನಿಕರು ಹಾಗೂ ವಿವಿಧ ಸಂಘ ಸಂಸ್ಥೆಗಳು ಈ ಅವಧಿಯನ್ನು ವಿಸ್ತರಿಸಲು ಕೋರಿದ ಹಿನ್ನೆಲೆ ಈ ಬಗ್ಗೆ ಸಲಹೆ/ಸೂಚನೆ ಮನವಿಗಳನ್ನು ನೀಡುವ ಅವಧಿಯನ್ನು ಸೆ.1ರ ಸಂಜೆ 5.00 ಗಂಟೆಯವರೆಗೆ ವಿಸ್ತರಿಸಿದೆ. ಸಂಗ್ರಹಿಸಲಾದ ಜಾತಿ/ಉಪಜಾತಿಗಳ ಪಟ್ಟಿಯನ್ನು ಸೆಪ್ಟೆಂಬರ್ ತಿಂಗಳಲ್ಲಿ ಪ್ರಾರಂಭವಾಗಲಿರುವ ಸಮೀಕ್ಷೆಗಾಗಿ ಮಾತ್ರ ಉಪಯೋಗಿಸಲಾಗುವುದು. ಸಾರ್ವಜನಿಕರು ತಮ್ಮ ಸಲಹೆ/ಸೂಚನೆ/ಮನವಿಗಳನ್ನು kscbcbgmail.com ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು. ಹೆಚ್ಚಿನ ಮಾಹಿತಿಗೆ 080-29506668 ಸಂಪರ್ಕಿಸಿ.

2026ಕ್ಕೆ ಉಪನಗರ ರೈಲ್ವೆಯ ಮೊದಲ ಮಾರ್ಗ ಪೂರ್ಣ ಕಷ್ಟ

ಭೂ ಸ್ವಾಧೀನ ಸಮಸ್ಯೆ, ಸಬ್ ಅರ್ಬನ್ ಯೋಜನೆ ಎರಡು ಮಾರ್ಗಗಳ ಕಾಮಗಾರಿ ವಿಳಂಬ: ಕೇಂದ್ರ ಸಚಿವ ಸೋಮಣ್ಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

2026ರಲ್ಲಿ ಬೆಂಗಳೂರು ಸಬ್ ಅರ್ಬನ್ ಯೋಜನೆಯ ಮೊದಲ ಮಾರ್ಗ ಪೂರ್ಣಗೊಳ್ಳುವುದು ಕಷ್ಟ ಸಾಧ್ಯ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ತಿಳಿಸಿದರು.

ಕುಮಾರಕೃಪಾ ಅತಿಥಿ ಗೃಹದಲ್ಲಿ ಬೆಂಗಳೂರಿನ ಹೊರವಲಯದ ಆರ್‌ಯುಬಿ, ಆರ್‌ಒಬಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, ಗುರಿಯಂತೆ 2026ರಲ್ಲಿ ಸಬ್ ಅರ್ಬನ್ ಯೋಜನೆಯ ಮೊದಲ ಮಾರ್ಗ ಪೂರ್ಣಗೊಳ್ಳುವುದು ಕಷ್ಟ ಸಾಧ್ಯ. ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಯೋಜನೆಯ ನಾಲ್ಕು ಮಾರ್ಗಗಳ ಕಾಮಗಾರಿ ಪ್ರಗತಿಯಲ್ಲಿದೆ. ನಾಲ್ಕು ಮಾರ್ಗಗಳ ಸಬ್ ಅರ್ಬನ್ ಯೋಜನೆಯಲ್ಲಿ ಎರಡು ಮಾರ್ಗಗಳ ಕಾಮಗಾರಿ ಕುಟುಂತ್ತಾ ಸಾಗಿದೆ. ಭೂ ಸ್ವಾಧೀನ ಸಮಸ್ಯೆಯಿಂದ ವಿಳಂಬವಾಗುತ್ತಿದೆ. ಎಲ್‌ಟಿ ಸಂಸ್ಥೆ ಗುತ್ತಿಗೆಯಿಂದ ಹಿಂದೆ ಸರಿದಿದೆ. ಈ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ ಎಂದರು.

ಬೆಂಗಳೂರು ಸಬ್ ಅರ್ಬನ್ ರೈಲ್ವೆ ಯೋಜನೆ ಕಾಮಗಾರಿ ವಿಳಂಬವಾಗುತ್ತಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಸಮಸ್ಯೆ ಎದುರಾಗಿದೆ. ಹೀಗಾಗಿ ಸಬ್ ಅರ್ಬನ್ ರೈಲ್ವೆ ಯೋಜನೆ ಅನುಷ್ಠಾನ ಜವಾಬ್ದಾರಿಯನ್ನು ಕೆ-ರೈಡ್‌ನಿಂದ ರೈಲ್ವೆ ಇಲಾಖೆ ಸುಪರ್ದಿಗೆ ಕೊಡುವಂತೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆ. ಸಿಎಸ್ ಅಧಿಕಾರಿಗಳ ಜತೆ ಸಭೆ ಮಾಡಿದ್ದು, ಈ ಬಗ್ಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಜತೆ ಸಭೆ ಮಾಡಲಿದ್ದೇನೆ. 15 - 20 ದಿನದೊಳಗೆ ಸಚಿವರ ಜತೆ ಸಭೆ ನಡೆಸಿ, ಈ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಮೂರು ವರ್ಷದಲ್ಲಿ 175 ಆರ್‌ಯುಬಿ, ಆರ್‌ಒಬಿ ಪೂರ್ಣ: ರಾಜ್ಯದಲ್ಲಿನ 175ಆರ್‌ಯುಬಿ, ಆರ್‌ಒಬಿ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ಸಚಿವ ವಿ. ಸೋಮಣ್ಣ ತಿಳಿಸಿದ್ದು, 2014-2025 ವೇಳೆಗೆ ಬೆಂಗಳೂರು ಹೊರವಲಯದಲ್ಲಿ 75 ಲೆವೆಲ್ ಕ್ರಾಸಿಂಗ್ ನಲ್ಲಿ ಆರ್‌ಯುಬಿ ಕಾಮಗಾರಿ ಪ್ರಗತಿಯಲ್ಲಿದೆ. ಈ ಪೈಕಿ 2026 ಮಾರ್ಚ್ ಒಳಗೆ 12 ಆರ್‌ಒಬಿ ಯನ್ನು ಪೂರ್ಣಗೊಳಿಸಲಾಗುವುದು. ಸುಮಾರು ವರ್ಷದಿಂದ ಸಮನ್ವಯತೆ ಕೊರತೆ ಇತ್ತು. ಈ ಸಂಬಂಧ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ಒಂದು ಸಮನ್ವಯ ಸಮಿತಿ ರಚಿಸಲಾಗಿದ್ದು, ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ ಪ್ರಗತಿ ಪರಿಶೀಲನೆ ನಡೆಸಲಿದೆ. ಈಗಾಗಲೇ 24 ಆರ್ ಯುಬಿ, ಆರ್‌ಒಬಿ ಕಾಮಗಾರಿ ಸಂಬಂಧ ಟೆಂಡರ್ ಕರೆಯಲಾಗಿದೆ. ಸಮನ್ವಯತೆ ಸಮಿತಿಯಲ್ಲಿ ರೈಲ್ವೆ ಇಲಾಖೆ ಅಧಿಕಾರಿಗಳು, ಡಿಸಿಗಳು, ಟ್ರಾಫಿಕ್ ಜಂಟಿ ಆಯುಕ್ತರು ಇರುತ್ತಾರೆ ಎಂದು ವಿವರಿಸಿದರು.

> **ಬೆಂಗಳೂರಿನ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ 100 ಲೆವೆಲ್ ಕ್ರಾಸಿಂಗ್‌ಗಳಿವೆ. ಸಮನ್ವಯತೆ ಇಲ್ಲದ ಆರ್‌ಯುಬಿ ಮತ್ತು ಆರ್‌ಒಬಿ ಯೋಜನೆ 28 ಕಡೆ ಇದೆ. ಅಲ್ಲಿ ವಿವಿಧ ಇಲಾಖೆಗಳ ಮಧ್ಯೆ ಸಮನ್ವಯತೆ ಇಲ್ಲ. ಈ ಸಂಬಂಧ ಸಮನ್ವಯತೆ ಸಾಧಿಸಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು. ಎರಡು ವರ್ಷದಲ್ಲಿ ಈ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ.**
> -ವಿ.ಸೋಮಣ್ಣ ಕೇಂದ್ರ ಸಚಿವ

ಕುಮಾರಕೃಪಾ ಅತಿಥಿ ಗೃಹದಲ್ಲಿ ಕೇಂದ್ರ ಸಚಿವ ವಿ.ಸೋಮಣ್ಣ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸಂಸದ ಸಿ.ಎನ್. ಮಂಜುನಾಥ್ ಇದ್ದರು.

ಮೆಗಾ ಕೋಚಿಂಗ್ ಟರ್ಮಿನಲ್

ದೇವನಹಳ್ಳಿ ಬಳಿ ರೈಲ್ವೆ ಮೆಗಾ ಕೋಚಿಂಗ್ ಟರ್ಮಿನಲ್ ನಿರ್ಮಾಣವಾಗಲಿದೆ. ಇದು ಬೆಂಗಳೂರಿನ ಪ್ರಮುಖ ರೈಲು ನಿಲ್ದಾಣಗಳಲ್ಲಿನ ದಟ್ಟಣೆಯನ್ನು ಕಡಿಮೆ ಮಾಡಲು, ಹೊಸ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಮತ್ತು ವಿಮಾನ ನಿಲ್ದಾಣಕ್ಕೆ ಉತ್ತಮ ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗಿದೆ. ಮೆಗಾ ಕೋಚಿಂಗ್ ಟರ್ಮಿನಲ್ ನಿರ್ಮಾಣಕ್ಕೆ ಅಂತಿಮ ಸ್ಥಳ ಗುರುತಿಸುವ ಕೆಲಸ ಅಂತಿಮ ಹಂತದಲ್ಲಿದೆ ಎಂದರು. 1,370 ಕೋಟಿ ರು. ವೆಚ್ಚದಲ್ಲಿ ಮೆಜೆಸ್ಟಿಕ್ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣವನ್ನು ನವೀಕರಣ ಮಾಡಲಾಗುವುದು. ಈಗಾಗಲೇ 222 ಕೋಟಿ ಹೆಚ್ಚುವರಿ ಫ್ಲಾಟ್ ಫಾರ್ಮ್ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ. 2025ರಲ್ಲಿ ಕಾಮಗಾರಿ ಮುಗಿಸಲಾಗುತ್ತದೆ. ಯಶವಂತಪುರದ ರೈಲ್ವೆ ನಿಲ್ದಾಣದಲ್ಲಿ 450 ಕೋಟಿ ವೆಚ್ಚದಲ್ಲಿ ಆಧುನೀಕರಣ ಕಾರ್ಯ ನಡೆಯುತ್ತಿದೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ವಿವರಿಸಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಪದವಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಶೈಕ್ಷಣಿಕ ಅರ್ಹತೆಯನ್ನು ಸುಧಾರಿಸಲು ಒತ್ತಾಯಿಸಿದರು. ಫೋಟೋ : ಸುಧಾಕರ್ ದೇವರಾಜ್

ಬೀದಿ ನಾಯಿಗೆ ಆಹಾರ: ಜಾಗ ಗುರುತಿಸಲು ಸಜ್ಜು

ಬೆಂಗಳೂರು: ನಗರದಲ್ಲಿ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲಾಗದೇ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದ ಬಿಬಿಎಂಪಿಯು ಇದೀಗ ನಾಯಿಗಳಿಗೆ ಆಹಾರ ನೀಡಲು ಜಾಗ ಗುರುತಿಸುವುದಕ್ಕೆ ಮುಂದಾಗಿದೆ.

ಇತ್ತೀಚೆಗೆ ಸುಪ್ರೀಂಕೋರ್ಟ್ ಬೀದಿ ನಾಯಿಗಳಿಗೆ ಕಂಡ ಕಂಡ ಕಡೆಗಳಲ್ಲಿ ಆಹಾರ ನೀಡಬಾರದು ಎಂದು ಆದೇಶ ಹೊರಡಿಸಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ನೀಡುವುದರ ಬದಲಾಗಿ ಬೀದಿ ನಾಯಿಗಳಿಗೆ ಆಹಾರ ಹಾಕಲು ಪ್ರತ್ಯೇಕ ಸ್ಥಳಗಳನ್ನು ಗುರುತಿಸುವಂತೆ ಎಲ್ಲಾ ರಾಜ್ಯಗಳಿಗೂ ಸೂಚನೆ ನೀಡಿತ್ತು. ಈ ಆದೇಶದ ಬೆನ್ನಲ್ಲೇ ಬಿಬಿಎಂಪಿಯು ಬೀದಿ ನಾಯಿಗಳಿಗೆ ಆಹಾರ ನೀಡಲು ಜಾಗ ಗುರುತಿಸುವ ಕಾರ್ಯವನ್ನು ತನ್ನ ಸಿಬ್ಬಂದಿಗೆ ನೀಡಿದ್ದು, ಇನ್ನು 15 ರಿಂದ 20 ದಿನದೊಳಗೆ ಜಾಗ ಗುರುತಿಸಲು ಸೂಚಿಸಿದೆ.

ಎಲ್ಲೆಂದರಲ್ಲಿ ಜನರು ಆಹಾರ ಹಾಕುತ್ತಿರುವುದರಿಂದಲೇ ನಗರದಲ್ಲಿ ಬೀದಿನಾಯಿಗಳ ಸಂಖ್ಯೆ ಕೂಡ ಏರಿಕೆಯಾಗುತ್ತಿದ್ದು, ಬೆಂಗಳೂರಿನ ಗಲ್ಲಿ ಗಲ್ಲಿಯಲ್ಲೂ ಬೀದಿನಾಯಿಗಳ ಕಾಟ ಮಿತಿಮೀರುತ್ತಿದೆ. ಸುಪ್ರೀಂಕೋರ್ಟ್ ಆದೇಶವನ್ನು ಪಾಲಿಕೆ ಕಟ್ಟುನಿಟ್ಟಾಗಿ ಜಾರಿಗೆ ತರಲಿ ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

ಕೆಲ ತಿಂಗಳ ಹಿಂದಷ್ಟೇ ನಾಯಿಗಳಿಗೆ ಊಟ ನೀಡುವ ಯೋಜನೆ ಆರಂಭಿಸಿದ್ದ ಪಾಲಿಕೆ, ಆಯಾ ವಾರ್ಡ್ ಗಳಲ್ಲಿ ರೆಸ್ಟೋರೆಂಟ್, ಹೋಟೆಲ್‌ಗಳಲ್ಲಿ ಉಳಿದ ಆಹಾರವನ್ನು ಬೀದಿನಾಯಿಗಳಿಗೆ ಹಾಕುವ ಕೆಲಸಕ್ಕೆ ಮುಂದಾಗಿತ್ತು. ಆದರೆ ಇದೀಗ ಬೀದಿನಾಯಿಗಳಿಗೆ ಆಯಾ ಏರಿಯಾದಲ್ಲಿ ಊಟ ಹಾಕಲು ಪ್ರತ್ಯೇಕ ಜಾಗ ಗುರುತಿಸುವುದು ಪಾಲಿಕೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ನಗರದಲ್ಲಿ ಬೀದಿ ನಾಯಿಗಳ ಸಂಖ್ಯೆ ಸುಮಾರು 2.7 ಲಕ್ಷದಿಂದ 2.8 ಲಕ್ಷ ದವರೆಗಿದ್ದು, ಪ್ರತಿ ಏರಿಯಾದಲ್ಲಿಯೂ ಆಹಾರ ನೀಡಲು ಜಾಗ ಗುರುತಿಸುವುದು ದೊಡ್ಡ ಸವಾಲಾಗಿದೆ.

ವಲಯವಾರು ಸಂಖ್ಯೆ

ಬೊಮ್ಮನಹಳ್ಳಿ	39,183
ಆರ್ ಆರ್ ನಗರ	41,266
ಮಹದೇವಪುರ	58,371
ಯಲಹಂಕ	36,343
ಬಿಬಿಎಂಪಿ ಪೂರ್ವ	37,685
ಬಿಬಿಎಂಪಿ ಪಶ್ಚಿಮ	22,025

1. ಶುಕ್ರವಾರ ಬೆಂಗಳೂರಿನ ಓರಿಯನ್ ಮಾಲ್‌ನಲ್ಲಿ UNIQLO ಅಂಗಡಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ ಮಾಜಿ ಭಾರತೀಯ ಕ್ರಿಕೆಟಿಗ ರಾಹುಲ್ ದ್ರಾವಿಡ್.
2. ಉದ್ಘಾಟನೆ ವೇಳೆ ಅಭಿಮಾನಿಗಳಿಗೆ ಆಟೋಗ್ರಾಫ್‌ನೀಡಿದ ಕ್ರಿಕೆಟಿಗ ರಾಹುಲ್ ದ್ರಾವಿಡ್

ಫೋಟೋ : ಸುಧಾಕರ್ ದೇವರಾಜ್

ರಾಷ್ಟ್ರಪತಿಯವರ ಪೊಲೀಸ್ ಪದಕ ಪ್ರದಾನ ಇಂದು

ಬೆಂಗಳೂರು: ಪೊಲೀಸ್ ಇಲಾಖೆ ವತಿಯಿಂದ ಗೌರವಾನ್ವಿತ ರಾಷ್ಟ್ರಪತಿಯವರ ಪೊಲೀಸ್ ಪದಕ ಪ್ರದಾನ ಸಮಾರಂಭವನ್ನು ರಾಜಭವನದ ಗಾಜಿನ ಮನೆಯಲ್ಲಿ ಆ.30 ರಂದು ಬೆಳಗ್ಗೆ 10.45ಕ್ಕೆ ಆಯೋಜಿಸಲಾಗಿದೆ.

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು 78 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಗೌರವಾನ್ವಿತ ರಾಷ್ಟ್ರಪತಿಗಳ ಪದಕ ಮತ್ತು 28 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ ಕೇಂದ್ರ ಗೃಹ ಸಚಿವರ ಪದಕಗಳನ್ನು ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಹಿಸಲಿದ್ದು, ಗೃಹ ಸಚಿವ ಡಾ.ಜಿ. ಪರಮೇಶ್ವರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಜಲಮೂಲ ನಿರ್ವಹಣೆಗೆ ಉಪಗ್ರಹ, ಎಐ ತಂತ್ರಜ್ಞಾನ

ಬೆಂಗಳೂರು: ಜಲಮೂಲಗಳ ಸಮಗ್ರ ನಿರ್ವಹಣೆಗೆ ಉಪಗ್ರಹ ಹಾಗೂ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧರಿತ ಡಿಜಿಟಲ್ ವಾಟರ್ ಸ್ಟಾಕ್ ಯೋಜನೆಯನ್ನು ದೇಶದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು.

ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿತಗೊಂಡಿದ್ದು, ವಿವಿಧ ಇಲಾಖೆಗಳಲ್ಲಿ ಹಂಚಿಹೋಗಿರುವ ಜಲಮೂಲಗಳನ್ನು ಒಂದೇ ವೇದಿಕೆಯಡಿ ನಿರ್ವಹಿಸಿ, ನೀರಿನ ನಿರ್ವಹಣೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಈ ಯೋಜನೆಯನ್ನು ನಿರ್ವಹಣೆ ಮಾಡಲಿದೆ. ಕೆರೆಗಳು ಮತ್ತು ಇನ್ನಿತರ ಜಲಮೂಲಗಳ ಸರ್ವೆ ಸೇರಿದಂತೆ ಮೇಲ್ವಿಚಾರಣೆ ಹಾಗೂ ಸಮರ್ಪಕವಾಗಿ ನಿರ್ವಹಣೆಯನ್ನು ಡಿಜಿಟಲ್ ವಾಟರ್ ಸ್ಟಾಕ್ ಖಚಿತಪಡಿಸಲಿದೆ. ಉಪಗ್ರಹ ಸೆನ್ಸರ್, ಇಮೇಜಿಂಗ್ ಮತ್ತು ಎಐ ತಂತ್ರಜ್ಞಾನಗಳ ಮೂಲಕ ಕೆರೆಗಳು ಮತ್ತು ಭೂಗರ್ಭದ ಜಲಧಾರೆಗಳ ಸಮಗ್ರ ನಿರ್ವಹಣೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು. ಮೊದಲ ಹಂತದಲ್ಲಿ ಅಂತರ್ಜಲವನ್ನು ಅತಿಯಾಗಿ ಬಳಕೆ ಮಾಡುತ್ತಿರುವ 41 ತಾಲೂಕುಗಳಲ್ಲಿ ಡಿಡಬ್ಲ್ಯುಎಸ್ ಯೋಜನೆಯನ್ನು ಜಾರಿಗೆ ತರಲಾಗುವುದು. ಜಲಮೂಲಗಳನ್ನು ನೈಸರ್ಗಿಕ ಉಳಿತಾಯ ಖಾತೆಗಳಂತೆ ಪರಿವರ್ತಿಸಿ, ಅವುಗಳ ಸಮರ್ಪಕ ನಿರ್ವಹಣೆಗೆ ಸರ್ಕಾರ ಬದ್ಧವಾಗಿದೆ. ಇದಕ್ಕೆ ಡಿಡಬ್ಲ್ಯುಎಸ್ ಯೋಜನೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

73 ಸಾವಿರ ಗಣೇಶ ಮೂರ್ತಿ ವಿಸರ್ಜನೆ

ಬೆಂಗಳೂರು: ಪರಿಸರ ಸ್ನೇಹಿ ಗೌರಿ ಗಣೇಶ ಹಬ್ಬ ಆಚರಣೆಯನ್ನು ಖಚಿತ ಪಡಿಸಿಕೊಳ್ಳಲು ಬಿಬಿಎಂಪಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದು, ನಗರ ವ್ಯಾಪ್ತಿಯಲ್ಲಿ ಪಿಒಪಿ ವಿಗ್ರಹಗಳ ತಯಾರಿಕೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿದೆ ಮತ್ತು ವಿಗ್ರಹ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಸಹ ಮಾಡಿದೆ.



ಪೂರ್ವ ವಲಯ	9,306
ಪಶ್ಚಿಮ ವಲಯ	10,568
ದಕ್ಷಿಣ ವಲಯ	44521
ಬೊಮ್ಮನಹಳ್ಳಿ ವಲಯಡಿ	2,347
ದಾಸರಹಳ್ಳಿ ವಲಯ	168
ಮಹದೇವಪುರ ವಲಯ	2,737
ಆರ್‌ಆರ್ ನಗರ ವಲಯ	2,113
ಯಲಹಂಕ ವಲಯ	2,199
ಒಟ್ಟು ವಿಸರ್ಜನೆ	73,959

ಬಿಡಿಎನಿಂದ ಒತ್ತುವರಿ ತೆರವು

ಕೆಂಗೇರಿ ಉಪನಗರದಲ್ಲಿ ಒತ್ತುವರಿ ಕಟ್ಟಡಗಳನ್ನು ಬಿಡಿಎ ತೆರವು ಮಾಡಿತು.

ಬೆಂಗಳೂರು: ಬಿಡಿಎಯು ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಮುಂದುವರೆಸಿದ್ದು, ಶುಕ್ರವಾರ ನಡೆದ ಕಾರ್ಯಾಚರಣೆಯಲ್ಲಿ ಕೆಂಗೇರಿ ಉಪನಗರದಲ್ಲಿ 50 ಕೋಟಿ ರು. ಆಸ್ತಿಯನ್ನು ವಶಪಡಿಸಿಕೊಂಡಿದೆ.

ಕೆಂಗೇರಿ ಉಪನಗರ ಬಡಾವಣೆಯ ನಿವೇಶನ ಸಂಖ್ಯೆ 2040, 2041, 2043, 2049, 2096, 2098, 2099, 2100, 2101, 2152, 2142, 2143, 2135, 2103/23 ಮತ್ತು 2167ರಲ್ಲಿ ಅನಧಿಕೃವಾಗಿ ನಿರ್ಮಾಣವಾಗಿದ್ದ ಶೆಡ್ ಮತ್ತು ಕಾಂಪೌಂಡ್ ಗೋಡೆಗಳನ್ನು ತೆರವುಗೊಳಿಸಿ, 37000 ಚದರ ಅಡಿ ವಿಸ್ತೀರ್ಣದ ಸುಮಾರು 50 ಕೋಟಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು. ಈ ಕಾರ್ಯಾಚರಣೆಯನ್ನು ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ನಾಡಪ್ರಭು ಕೆಂಪೇಗೌಡ ಬಡಾವಣೆಯ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಇವರುಗಳನ್ನು ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

ಪ್ರಮುಖ ಸ್ಥಳಕ್ಕೆ ರಾಮಕೃಷ್ಣ ಹೆಗಡೆ ಹೆಸರು

ದಿ. ರಾಮಕೃಷ್ಣ ಹೆಗಡೆ ಅವರ 99ನೇ ಜನ್ಮದಿನ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆಶಿ ಭರವಸೆ

ಬೆಂಗಳೂರು: ರಾಮಕೃಷ್ಣ ಹೆಗಡೆ ಅವರ ಹೆಸರು ಶಾಶ್ವತವಾಗಿ ಉಳಿದುಕೊಳ್ಳಬೇಕು. ಆದ್ದರಿಂದ ಬೆಂಗಳೂರಿನ ಪ್ರಮುಖ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಹೆಸರನ್ನು ಇಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಚಿತ್ರಕಲಾ ಪರಿಷತ್ತಿನಲ್ಲಿ ಶುಕ್ರವಾರ ನಡೆದ ಮಾಜಿ ಸಿಎಂ ದಿ.ರಾಮಕೃಷ್ಣ ಹೆಗಡೆ ಅವರ 99ನೇ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ತಮಗೆ ಬಹುಮತ ಇದ್ದರೂ ಇಡೀ ದೇಶದಲ್ಲಿ ಮಧ್ಯದಲ್ಲೇ ಜನಾದೇಶ ಬಯಸಿ ಚುನಾವಣೆಗೆ ಹೋಗಿದ್ದರೆ ಅದು ರಾಮಕೃಷ್ಣ ಹೆಗಡೆ ಅವರು ಮಾತ್ರ. ಅವರಲ್ಲಿ ಕ್ಷಮಿಸುವ ಗುಣ, ಹೃದಯ ಶ್ರೀಮಂತಿಕೆ ಇತ್ತು. ಅವರಲ್ಲಿ ನಾವು ಎಂದಿಗೂ ದ್ವೇಷ ರಾಜಕಾರಣ ನೋಡಲಿಲ್ಲ. ಇದು ನಮ್ಮೆಲ್ಲರಿಗೂ ದೊಡ್ಡ ಆದರ್ಶ. ಅವರದ್ದು ಪರಿಶುದ್ಧ ಆಡಳಿತ ಹಾಗೂ ರಾಜಕಾರಣ ಎಂದರು.

ರಾಮಕೃಷ್ಣ ಹೆಗಡೆ ಅವರು ಕನಕಪುರದಿಂದ ಸ್ಪರ್ಧೆ ಮಾಡಿದ್ದರು. ಅವರನ್ನು ಸೋಲಿಸಲು ನಾನು ವಿದ್ಯಾರ್ಥಿ ನಾಯಕನಾಗಿ ಹೋರಾಟ ಮಾಡಿದೆ. ನನ್ನ ಹೋರಾಟ ಗಮನಿಸಿ 1985 ರಲ್ಲಿ ಪಕ್ಷ ನನಗೆ ಟಿಕೆಟ್ ನೀಡಿತು. ಅವರು ಮುಖ್ಯಮಂತ್ರಿ ಆಗಿದ್ದಾಗ ನಡೆದ ಲೋಕಸಭೆ ಚುನಾವಣೆಯಲ್ಲಿ ಅವರ ಪಕ್ಷಕ್ಕೆ ಹಿನ್ನಡೆಯಾದಾಗ, ನನ್ನ ನಾಯಕತ್ವಕ್ಕೆ ಬೆಂಬಲ ಸಿಗಲಿಲ್ಲ ಎಂದು ಮತ್ತೆ ಚುನಾವಣೆಗೆ ಹೋದರು ಎಂದರು.

ಬಳಸಿಕೊಂಡು ಬಿಸಾಡಿದರು: ರಾಮಕೃಷ್ಣ ಹೆಗಡೆ ಅವರು ತಮ್ಮ ಬದುಕಿನಲ್ಲಿ ಬಿಟ್ಟುಹೋದ ಆದರ್ಶ, ಸಾಕ್ಷಿಗುಡ್ಡೆಗಳು ಇನ್ನೂ ಜೀವಂತವಾಗಿವೆ. ಅವರೊಬ್ಬ ದೂರದೃಷ್ಟಿ ನಾಯಕ. ತಮ್ಮ ಜಾತಿಯವರು, ಮನೆಯವರನ್ನು ಬೆಳೆಸಬೇಕು ಎಂಬ ಹಂಬಲ ಇರಲಿಲ್ಲ. ನೂರಾರು ನಾಯಕರನ್ನು ಅವರು ಬೆಳೆಸಿದ್ದಾರೆ. ಕೆಲವರು ಅವರ ಪ್ರಾಮಾಣಿಕತೆಗೆ ನಿಯತ್ತು ತೋರಿದರು. ಮತ್ತೆ ಕೆಲವರು ಹತ್ತಿದ ಏಣಿಯನ್ನು ಒದೆಯುವಂತೆ ಬಿಸಾಕಿದರು ಎಂದು ನೆನಪಿಸಿಕೊಂಡರು.

> **ನಾನು ವಿಧಾನಸಭೆಯಲ್ಲಿ ರಾಮಕೃಷ್ಣ ಹೆಗಡೆ ಅವರನ್ನು ನೋಡಿದ್ದೇನೆ. ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ನಡೆದ ಚರ್ಚೆಯಲ್ಲಿ ಹೆಗಡೆ ಅವರು ಮಾಡಿದ ಭಾಷಣ ನಾನು ಕಂಡ ಅತ್ಯುತ್ತಮ ಭಾಷಣಗಳಲ್ಲಿ ಒಂದು. ವೀರೇಂದ್ರ ಪಾಟೀಲರ ಜತೆ ಉತ್ತಮ ಸ್ನೇಹ ಹೊಂದಿದ್ದರೂ ಅವರು ತಮ್ಮ ಪಕ್ಷದ ಸಿದ್ಧಾಂತದ ಗೆರೆ ದಾಟಲಿಲ್ಲ.**
> – ಡಿಕೆ ಶಿವಕುಮಾರ್ ಡಿಸಿಎಂ



ಡಿಸಿಎಂ ಡಿಕೆ ಶಿವಕುಮಾರ್ ಅವರು ದಿ.ರಾಮಕೃಷ್ಣ ಹೆಗಡೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

200ಕ್ಕೂ ಹೆಚ್ಚು ಕುರಿಗಳು ಕೃಷ್ಣಾ ನದಿ ಪಾಲು



ನಾರಾಯಣಪುರ ಡ್ಯಾಮ್‌ನಿಂದ ಭಾರೀ ಪ್ರಮಾಣದಲ್ಲಿ ನೀರು ಬಿಟ್ಟಿರುವುದು.

ಬೆಂಗಳೂರು: ರಾಜ್ಯದಲ್ಲಿ ಮಳೆಯಾರ್ಭಟ ಮುಂದುವರಿದ್ದಿದ್ದು, ಯಾದಗಿರಿ, ಬೀದರ್ ಜಿಲ್ಲೆಗಳಲ್ಲಿ ಮಳೆಗೆ ಜನ ತತ್ತರಿಸಿದ್ದಾರೆ.

ಯಾದಗಿರಿ ಜಿಲ್ಲೆಯಾದ್ಯಂತ ಭಾರಿ ಮಳೆಯಾಗುತ್ತಿದ್ದು, ಹಲವೆಡೆ ಜನ ಜೀವನ ಅಸ್ತವ್ಯಸ್ತವಾಗಿದೆ. ಕೃಷ್ಣಾ ನದಿ ಪ್ರವಾಹದಲ್ಲಿ 200ಕ್ಕೂ ಅಧಿಕ ಕುರಿಗಳು ಕೊಚ್ಚಿ ಹೋದ ಘಟನೆ ಜಿಲ್ಲೆಯ ಹುಣಸಗಿ ತಾಲೂಕಿನ ಮೇಲಿನಗಡ್ಡಿ ಬಳಿ ನಡೆದಿದೆ. ಕುರಿ ಮೇಯಿಸಲು ನದಿಯ ನಡುಗಡ್ಡೆಗೆ ಕುರಿಗಾಹಿಗಳು ಹೋಗಿದ್ದರು. ಈ ವೇಳೆ ನಾರಾಯಣಪುರ, ಬಸವಸಾಗರ ಡ್ಯಾಂನಿಂದ ನೀರು ಬಿಟ್ಟ ಪರಿಣಾಮ ನಡುಗಡ್ಡೆಯಲ್ಲಿದ್ದ ಕುರಿಗಳು ಕೊಚ್ಚಿ ಹೋಗಿವೆ ಎನ್ನಲಾಗಿದೆ.

ಮೇಲಿನಗಡ್ಡಿ ಹಾಗೂ ಜಂಗಿನಗಡ್ಡಿ ಗ್ರಾಮದ ಆರು ಕುರಿಗಾಹಿಗಳು ಕುರಿಗಳನ್ನು ಮೇಯಿಸಲು ಬಂದಿದ್ದರು. ಇದರಲ್ಲಿ ನಾಗಪ್ಪ, ಮಾಳಪ್ಪ, ಶಾವಮ್ಮ, ಚಂದನಗೌಡ, ಗದ್ದೆಪ್ಪ ಹಾಗೂ ಶಿವಯ್ಯ ಎಂಬುವವರ ಕುರಿಗಳು ಕೊಚ್ಚಿ ಹೋಗಿವೆ. ಸ್ಥಳಕ್ಕೆ ಕಂದಾಯ ಹಾಗೂ ಪಶು ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಕುರಿಗಳನ್ನು ಕಳೆದುಕೊಂಡು ಕುರಿಗಾಹಿಗಳು ಕಂಗಾಲಾಗಿದ್ದಾರೆ. ಈ ಮಧ್ಯೆ ಸತತ ಮಳೆಯಿಂದ ಬೆಳೆಗಳಿಗೆ ಹಾನಿಯಾಗಿದ್ದು, ರೈತರು ಸಂಕಷ್ಟ ಅನುಭವಿಸುವಂತಾಗಿದೆ. ಯಾದಗಿರಿ ತಾಲೂಕಿನ ಯರಗೋಳ ಗ್ರಾಮದಲ್ಲಿ ಕೆರೆತುಂಬಿ ಸೇತುವೆ ಜಲಾವೃತವಾಗಿ ಜನ, ಜಾನುವಾರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಪ್ರತಿವರ್ಷ ಯರಗೋಳ ಗ್ರಾಮದ ದೊಡ್ಡ ಕೆರೆಯ ಕೆಳಭಾಗದಲ್ಲಿ ಮಳೆ ಬಂದರೆ ಸಾಕು ಸೇತುವೆ ಜಲಾವೃತವಾಗಿ ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಉಂಟಾಗಿದೆ.

30ಕ್ಕೂ ಅಧಿಕ ಸೇತುವೆ ಮುಳಗಡೆ: ಬೀದರ್ ಜಿಲ್ಲಾದ್ಯಂತ ಮಳೆ ಮುಂದುವರಿದಿದೆ. ಬೀದರ್ ನಗರ ಸೇರಿ ಬಸವಕಲ್ಯಾಣ, ಹುಮನಾಬಾದ್, ಭಾಲ್ಕಿ, ಔರಾದ್, ಕಮಲನಗರ ವಿವಿಧೆಡೆ ಮಳೆಯಾಗಿದೆ. ಔರಾದ್, ಕಮಲನಗರ ತಾಲೂಕಿನಲ್ಲಿ ಅಧಿಕ ಮಳೆಯಗಿ ಹಾನಿಯಾಗಿದೆ. ಜಿಲ್ಲೆಯಲ್ಲಿ 30 ಅಧಿಕ ಸೇತುವೆ ಮುಳಗಡೆಯಾಗಿವೆ. ನಿರಂತರ ಮಳೆಯಿಂದ ಹಳ್ಳ - ಕೊಳ್ಳಗಳು ಭರ್ತಿಯಾಗಿದ್ದು, ಕಾರಂಜಾ ಜಲಾಶಯ ಭರ್ತಿಯಾಗಿದೆ.

ಇತ್ತೀಚೆಗೆ ಜಿಲ್ಲೆ ಮತ್ತು ಜಲಾನಯನ ಪ್ರದೇಶದಲ್ಲಿ ಸತತ ಮಳೆಯಿಂದ ಜಲಾಶಯಕ್ಕೆ ಹೆಚ್ಚಿನ ನೀರು ಹರಿದುಬರುತ್ತಿದೆ. 7.69 ಟಿಎಂಸಿ ಸಾಮರ್ಥ್ಯದ ಕಾರಂಜಾದಲ್ಲಿ ಪೂರ್ಣ ನೀರು ಸಂಗ್ರಹವಾಗಿದೆ. ಕಳೆದೊಂದು ವಾರದಲ್ಲೇ ಒಂದು ಟಿಎಂಸಿಗೂ ಅಧಿಕ ನೀರು ಹರಿದು ಬಂದಿದೆ. ಮೇಲ್ಭಾಗದ ತೆಲಂಗಾಣದ ಕೋಹಿರ್ ವ್ಯಾಪ್ತಿಯಲ್ಲಿ ಮಳೆ ಬರುತ್ತಿದ್ದರಿಂದ ಒಳಹರಿವು ಜಾಸ್ತಿ ಇದೆ. ಹುಲಸೂರ ತಾಲೂಕಿನಿಂದ ಹಾದು ಹೋಗುವ ಮಾಂಜ್ರಾ ನದಿಯ ನೀರಿನ ಪ್ರವಾಹ ಹೆಚ್ಚಳವಾಗಿದ್ದು, ರೈತರ ಹೊಲಗಳಿಗ್ಗೆ ನೀರು ನುಗ್ಗುತ್ತಿದ್ದು. ಹುಲಸೂರ ಕೋಂಗಳಿ ರಸ್ತೆ ಬಂದ ಆಗುವ ಸಂಭವ ಇರುವುದರಿಂದ ನದಿ ದಡದಲ್ಲಿರುವ ಗ್ರಾಮಸ್ಥರು, ರೈತರು ಎಚ್ಚರಿಕೆಯಿಂದ ಇರಲು ಸೂಚನೆ ನೀಡಲಾಗಿದೆ.

ಉಡುಪಿಯಲ್ಲೂ ಧಾರಾಕಾರ ಮಳೆ ಸುರಿಯುತ್ತಿದ್ದು ಅಂಗನವಾಡಿ, ಶಾಲಾ-ಕಾಲೇಜುಗಳಿಗೆ ಶುಕ್ರವಾರ ರಜೆ ಘೋಷಿಸಲಾಗಿತ್ತು. ಇತ್ತ ಹೊನ್ನಾವರದ ಗೇರುಸೊಪ್ಪ ಹಾಗೂ ಲಿಂಗನಮಕ್ಕಿ ಆಣೆಕಟ್ಟಿನಿಂದ ನೀರು ಬಿಡುಗಡೆ ಮಾಡಲಾಗಿದೆ. ಗೇರುಸೊಪ್ಪ ಆಣೆಕಟ್ಟಿನಿಂದ 13,192 ಕ್ಯುಸೆಕ್, ಲಿಂಗನಮಕ್ಕಿ ಜಲಾಶಯದಿಂದ 50,000 ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿದೆ.

ಸೆ.3ರ ವರೆಗೆ ರಾಜ್ಯದಲ್ಲಿ ಭಾರೀ ಮಳೆ

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಸೆಪ್ಟೆಂಬರ್ 3ರವರೆಗೂ ಮಳೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಉತ್ತರ ಕನ್ನಡ, ಬೆಳಗಾವಿ, ಬೀದರ್, ಕಲಬುರಗಿ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಹಾಸನ, ವಿಜಯಪುರ, ಯಾದಗಿರಿ, ಹಾವೇರಿ, ಗದಗ, ಧಾರವಾಡ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಇನ್ನುಳಿದಂತೆ ಕೊಪ್ಪಳ, ರಾಯಚೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ವಿಜಯನಗರದಲ್ಲಿ ಕೂಡ ಮಳೆಯಾಗಲಿದೆ.

ಮೈದುಂಬಿದ ಕಬಿನಿ ಡ್ಯಾಮ್

ಮೈಸೂರು ಜಿಲ್ಲೆಯ ಕಬಿನಿ ಜಲಾಶಯ ಮೈದುಂಬಿರುವ ಹಿನ್ನೆಲೆಯಲ್ಲಿ ನದಿ ಪಾತ್ರದ ಜನರಿಗೆ ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ. ಕೇರಳದ ವಯನಾಡು ಪ್ರದೇಶದಲ್ಲಿ ಅತಿ ಹೆಚ್ಚು ಮಳೆಯಾಗುತ್ತಿರುವುದರಿಂದ, ಹೆಚ್.ಡಿ.ಕೋಟೆ ತಾಲೂಕಿನಲ್ಲಿರುವ ಕಬಿನಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದುಬರುತ್ತಿದ್ದು, ಹೊರ ಹರಿವು ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ, ನದಿ ಪಾತ್ರದ ಜನರಿಗೆ ಎಚ್ಚರಿಕೆ ನೀಡಲಾಗಿದೆ. ಕಬಿನಿ ಜಲಾಶಯದಿಂದ 10,000ರಿಂದ 15,000 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಕರ್ನಾಟಕ ಸರಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)

ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ: GIMS/KLB/Tender/BB/CR/18/2025-26 /1410 ದಿನಾಂಕ:-26/08/2025

:: ಟೆಂಡರ ಪ್ರಕಟಣೆ ::

ಜಿಮ್ಸ್ ಆಸ್ಪತ್ರೆ, ಕಲಬುರಗಿಯ ರಕ್ತನಿಧಿ ವಿಭಾಗದಲ್ಲಿ ಉಪಯೋಗಿಸಲು ಬೇಕಾಗಿರುವ Chemical & Reagents ಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ. 01) ಟೆಂಡರ್ ಪ್ರಕಟಣೆ ದಿನಾಂಕ : No. GIMS/KLB/Tender/BB/CR/18/2025-26, Date:26.08.2025. IND. No: DME/2025-26/IND1652, 02) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು E-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : 10-09-2025 ಸಾಯಂಕಾಲ 4:30ಕ್ಕೆ 03) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ : 01-09-2025 ಸಾಯಂಕಾಲ 5.00 ಗಂಟೆಯ ವರೆಗೆ, 04) ಟೆಂಡರ ಪೂರ್ವಭಾವಿ ಸಭೆ : ದಿನಾಂಕ:04-09-2025 ಮಧ್ಯಾಹ್ನ 12:30ಕ್ಕೆ, 05) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 11-09-2025 ಸಾಯಂಕಾಲ 5:00ಕ್ಕೆ, 06) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : 12-09-2025 11:30ಕ್ಕೆ, 07) ಟೆಂಡರನ ಮೊತ್ತ : ರೂ.61,73,173/-, 08) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : ರೂ.1,54,500/-, 09) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) : ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252, Office Email: directorgimsgulbarga@gmail.com, Cell:+91 9482093568 Tender Section Email: gimstenderklb22@gmail.com, Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/444/ಕೆ.ಎಸ್.ಎಂ.ಸಿ.&ಎ/2025-26

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ

ಮೈಸೂರು ಜಿಲ್ಲೆ - 571107, ದೂ: 08223-273036

ಇ-ಮೇಲ್: itstaff_ulb_periyapatna@yahoo.com

ಸಂಖ್ಯೆ: ಪಿಪುಸ/ತಾಂತ್ರಿಕಶಾಖೆ/ಜೆಇ/ಟೆಂಡರ್-12/2025-26 **ದಿನಾಂಕ:** 29.08.2025

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ ರಾಜ್ಯ ವಿಪತ್ತು ಉಪಶಮನ ನಿಧಿ ಅನುದಾನದಲ್ಲಿ ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯ ಬೆಟ್ಟದಪುರ ರಸ್ತೆಯಿಂದ ಅರಸಿನಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ-3) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಸದರಿ ವೆಬ್‌ಸೈಟ್ ಮುಖಾಂತರ ಸಲ್ಲಿಸಬಹುದು. **ಟೆಂಡರ್ ಸಲ್ಲಿಸುವ ವಿವರ :** 1) ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ: 15.09.2025ರ ಸಂಜೆ 04.00 ಗಂಟೆ.** 2) ಟೆಂಡರ್ (ತಾಂತ್ರಿಕ ಬಿಡ್) ತೆರೆಯುವ **ದಿನಾಂಕ: 17.09.2025ರ ಸಂಜೆ 04.00 ಗಂಟೆ.**

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಗಳಲ್ಲಿ)	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	26/OW/WORK_INDENT42194/CALL-2	1,00,00,000.00	84,67,355.72	1,69,347.00

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/- (ಪ್ರಕಾಶ್ ಸಿಂಗ್) ಅಧ್ಯಕ್ಷರು ಪುರಸಭೆ, ಪಿರಿಯಾಪಟ್ಟಣ
ಸಹಿ/- (ಸುವರ್ಣ) ಉಪಾಧ್ಯಕ್ಷರು, ಪುರಸಭೆ ಪಿರಿಯಾಪಟ್ಟಣ
ಸಹಿ/- (ಅಬ್ದುಲ್ ಅರ್ಷದ್) ಸ್ಥಾಯಿ ಸಮಿತಿ ಅಧ್ಯಕ್ಷರು ಪುರಸಭೆ, ಪಿರಿಯಾಪಟ್ಟಣ
ಸಹಿ/- (ಕೆ. ಮುತ್ತಪ್ಪ) ಮುಖ್ಯಾಧಿಕಾರಿ ಪುರಸಭೆ, ಪಿರಿಯಾಪಟ್ಟಣ

DIPR/MYS/875/SA/2025-26

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ (ಪಿ.ಎಂ.ಜಿ.ಎಸ್.ವೈ), ಚಿಕ್ಕಬಳ್ಳಾಪುರ

#441, 3 ನೇ ಮಹಡಿ, ಐ.ಡಿ.ಎಸ್.ಎಂ.ಟಿ ಬಡಾವಣೆ, ಎ.ಪಿ.ಎಂ.ಸಿ ಹಿಂದಿನ ಬಾಗಿಲು, ಚಿಕ್ಕಬಳ್ಳಾಪುರ-562101, ಇ-ಮೇಲ್: **pmgsycbp@gmail.com**, ದೂರವಾಣಿ ಸಂಖ್ಯೆ: 08156-274638

ಸಂಖ್ಯೆ: ಕಾಪಾಅ/ಯೋವಿ/ಚಿಪುರ/ ಟೆಂಡರ್/171/2025-26 ದಿನಾಂಕ:22.08.2025

ಮರು ಟೆಂಡರ್ ಪ್ರಕಟಣೆ-03

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಪಿ.ಎಂ.ಜಿ.ಎಸ್.ವೈ ಚಿಕ್ಕಬಳ್ಳಾಪುರ ಕಛೇರಿಯಿಂದ 1 ರಸ್ತೆ ಅಭಿವೃದ್ಧಿ ಕಾಮಗಾರಿಗಳ ಐಟಂ ರೇಟ್ ದರಗಳಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದ್ವಿ-ಲಕೋಟೆಯಲ್ಲಿ ಕೆಳಕಂಡ ಕಾಮಗಾರಿಗಳ ಮರು ಟೆಂಡರ್‌ಗಳನ್ನು ಕರೆದಿದ್ದು, ಈ ಯೋಜನೆಯು ಸಂಪೂರ್ಣವಾಗಿ ರಾಜ್ಯ ಸರ್ಕಾದ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಒಟ್ಟು ಕಾಮಗಾರಿಗಳ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ಟೆಂಡರ್ ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ (ರೂ.ಲಕ್ಷಗಳಲ್ಲಿ)	ಕಾಮಗಾರಿ ಪೂರ್ಣಗೊಳಿಸುವ ಅವಧಿ (ಮಳೆ ಗಾಲ ಸೇರಿ)
01	5054	1	71.49	0.72	6 ತಿಂಗಳು

ಟೆಂಡರ್ ಪಕಿಯೆಯ ವಿವರಗಳು ಕೆಳಕಂಡಂತಿವೆ: (1) ಆನ್ ಲೈನ್ ಮುಖಾಂತರ ಬಿಡ್ ಸಲ್ಲಿಸಲು ಪ್ರಾರಂಭ **ದಿನಾಂಕ: 22.08.2025, 11.00 ಘಂಟೆಗೆ.** (2) ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸುವ ಕೊನೆಯ **ದಿನಾಂಕ: 30.08.2025, 16.30 ಘಂಟೆಗೆ.** (3) ತಾಂತಿಕ ಬಿಡ್‌ನ್ನು ತೆರೆಯುವ **ದಿನಾಂಕ: 01.09.2025, 16.35 ಘಂಟೆಗೆ.** (4) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 02.09.2025 10.30 ಘಂಟೆಗೆ** ಅಥವಾ ಈ ಟೆಂಡರ್‌ನ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ. (1) ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿಕೊಂಡ ಒಂದನೇ ದರ್ಜೆಯಿಂದ 3ನೇ ದರ್ಜೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. (2) ಕೆಆರ್‌ಆರ್‌ಡಿಎ ವತಿಯಿಂದ ಕೈಗೊಂಡ ಕಾಮಗಾರಿ ಪೂರ್ಣಗೊಳಿಸದೇ ಗುತ್ತಿಗೆ ರದ್ದುಪಡಿಸಲಾದ (terminate) ಅಥವಾ ರಸ್ತೆ ನಿರ್ವಹಣೆ ಗುತ್ತಿಗೆ ಕಾಮಗಾರಿಗಳನ್ನು ನಿರ್ವಹಣೆ ಮಾಡದಿರುವುದರಿಂದ ಗುತ್ತಿಗೆ ರದ್ದಾದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ. (3) ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಇವರನ್ನು ಸಂಪರ್ಕಿಸಬಹುದು. (4) ಕೆಳಗೆ ಸಹಿ ಮಾಡಿರುವವರಿಗೆ ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವ/ಮುಂದೂಡುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತಾರೆ. (5) ಈ ಕಾಮಗಾರಿಗಳ ಟೆಂಡರ್‌ನ ಸಂಪೂರ್ಣ ಮಾಹಿತಿಯನ್ನು **https://kppp.karnataka.gov.in** ರಿಂದ ಪಡೆಯಬಹುದಾಗಿರುತ್ತದೆ.

ಸಹಿ/-
ಟೆಂಡರಿಂಗ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಯೋಜನೆ ವಿಭಾಗ
(ಪಿ.ಎಂ.ಜಿ.ಎಸ್.ವೈ)
ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:175/ಕೆಎಸ್‌ಎಂಸಿಎ/2025-26

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018

ಸಂಖ್ಯೆ: ಕಸಂವಿ/ಸಾ.ಪ.ಕ.06/2023-24 ದಿನಾಂಕ: 29-08-2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಸಂಸ್ಥೆಗಳು ಮಾತ್ರ ಮಾನ್ಯತೆ ಪಡೆದ ಕೋರ್ಸ್‌ಗಳಿಗೆ, ಸಭೆಗಳಲ್ಲಿ, ಸೆಮಿನಾರ್‌ಗಳಲ್ಲಿ, ಆಹ್ವಾನ ಪತ್ರಿಕೆಗಳಲ್ಲಿ, ಪ್ರಮಾಣ ಪತ್ರಗಳಲ್ಲಿ ವಿಶ್ವವಿದ್ಯಾಲಯದ ಹೆಸರು ಮತ್ತು ಲಾಂಛನವನ್ನು ಬಳಸಲು ಅವಕಾಶವಿರುತ್ತದೆ. ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆಯದ ಸಂಸ್ಥೆಗಳು **ವಿಶ್ವವಿದ್ಯಾಲಯದ ಹೆಸರನ್ನಾಗಲೀ, ಲಾಂಛನವನ್ನಾಗಲೀ ಬಳಸಲು ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು.** ಇದನ್ನು ಮೀರಿದರೆ, ಅಂತಹ ಸಂಸ್ಥೆಗಳ ವಿರುದ್ಧ ಯಾವುದೇ ಮುನ್ಸೂಚನೆ ನೀಡದೆ ನಿಯಮಾನುಸಾರ ಪೊಲೀಸ್ ದೂರನ್ನು ದಾಖಲಿಸಲಾಗುವುದು ಹಾಗೂ ಅಂತಹ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು.

ಸಹಿ/-
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಬೆಂಗಳೂರು - 560018.

ವಾಸಾಸಂಇ/ವಾ.ಪ್ರ/2523/ಅಡ್ವಟೋರ್/2025-26

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ

#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ ಬೆಂಗಳೂರು 560079

ದೂರವಾಣಿ ಸಂಖ್ಯೆ: +91-80-29619801 ಮಿಂಚ್ ಅಂಚೆ: md.ksmscl@gmail.com

No: KSMSCL/EQPT/HFW/NHM-NFDS /15th FC/RDK-HB/TND/24/2025-26 Dt: 29.08.2025

ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: KSMSCL/EQPT/HFW/NHM- NFDS /15th FC/ RDK-HB/TND/24/2025-26 Date: 29.08.2025

e-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ-ಟೆಂಡರ್ ಕರೆಯಲಾಗಿದೆ.

"NFDS-NHM-15th FC ಕಾರ್ಯಕ್ರಮದಡಿಯಲ್ಲಿ RDK KIT (Hb Strips) ಗಳನ್ನು ಖರೀದಿಸಿ ಪೂರೈಸಲು ಟೆಂಡರ್ ಕರೆಯುವ ಬಗ್ಗೆ- IND 0284"

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ **ದಿನಾಂಕ: 29.08.2025** ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾಸಾಸಂಇ/ವಾ.ಪ್ರ/2538/ಶಿರಡಿ ಸಾಯಿ/2025-26

ಸಮಗ್ರ ಶಿಕ್ಷಣ ಕರ್ನಾಟಕ

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ ಜಿಲ್ಲೆ, ಹಾಸನ

ದೂರವಾಣಿ ಸಂಖ್ಯೆ: 08172 295020 ಇಮೇಲ್ ವಿಳಾಸ: **ssahassan2003@gmail.com**

ಸಂಖ್ಯೆ:ಸ.ಶಿ.ಕ/ಲೆ.ಪ.2/SRP centre17/2025-26

ದಿನಾಂಕ:26.08.2025

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

2025-26ನೇ ಸಾಲಿಗೆ ಸಮಗ್ರ ಶಿಕ್ಷಣ-ಕರ್ನಾಟಕ, ಹಾಸನ ಜಿಲ್ಲೆಯ 6 ಎಸ್.ಆರ್.ಸಿ. ಕೇಂದ್ರಗಳ ಬಲವರ್ಧನೆಗೆ ಸಾಧನ ಸಲಕರಣೆಗಳನ್ನು ಖರೀದಿಸಲು ಅರ್ಹ ಏಜೆನ್ಸಿ/ಸಂಸ್ಥೆಗಳ ಮೂಲಕ ಖರೀದಿಸಲು ಅಲ್ಪಾವಧಿ ಟೆಂಡರನ್ನು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಅಂತರ್ಜಾಲ https://kppp.karnataka.gov.in ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಸಂಸ್ಥೆ/ಏಜೆನ್ಸಿಯವರು ಅರ್ಜಿ ಸಲ್ಲಿಸಲು ಕೋರಿದೆ. ಟೆಂಡರ್ ಅಂದಾಜು ಮೊತ್ತ: ರೂ. 12.00 ಲಕ್ಷಗಳು ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 26-08-2025 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09-09-2025, 5-30 P.M ತಾಂತ್ರಿಕ ಅರ್ಜಿಗಳನ್ನು ತೆರೆಯುವ ದಿನಾಂಕ: 11-09-2025, 11.00 A.M ಆರ್ಥಿಕ ಬಿಡ್ ತೆರೆಯುವ ದಿನಾಂಕ: 15-09-2025, 11.00 A.M ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172 295020 ಸಂಪರ್ಕಿಸಬಹುದು.

ಸಹಿ/-ಉಪನಿರ್ದೇಶಕರು, ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ.

ವಾಸಾಸಂಇ/ಹಿಸನಿ/ಹಾಸನ/498/ಕೆಎಸ್‌ಎಂಸಿಎ/2025-26

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಜಿಕೆವಿಕೆ, ಬೆಂಗಳೂರು-560 065.

ಸಂಖ್ಯೆ.ಆಅ/ಟಿ.ಎನ್/10/2025-26 ದಿನಾಂಕ: 21.08.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಕಾಮಗಾರಿ ಕೆಲಸಗಳನ್ನು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4ರಂತೆ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ/ಪಿಡಬ್ಲ್ಯೂಡಿ/ಗುತ್ತಿಗೆದಾರರುಗಳಿಂದ ಕ್ರಮ ಸಂಖ್ಯೆ.1ರ ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕಾಮಗಾರಿಯ ವಿವರಗಳು ವೆಬ್‌ಸೈಟ್ **https://www.kppp.karnataka.gov.in.**ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಕೆಪಿಪಿಪಿ ಮಾದರಿಯಂತೆ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಮೇಲಿನ ಕಾಮಗಾರಿಯು ದ್ವಿಲಕೋಟೆ ಪದ್ದತಿಯಲ್ಲಿರುತ್ತದೆ. ದ್ವಿಲಕೋಟೆ ಪದ್ದತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ರಂತೆ ಅಪ್‌ಲೋಡ್ ಮಾಡಲಾಗಿದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. ಪ್ರಿ-ಬಿಡ್ ಮೀಟಿಂಗ್ ಅನ್ನು ದಿನಾಂಕ: **01.09.2025 ಬೆಳಿಗ್ಗೆ 10:30ಕ್ಕೆ ನಡೆಸಲಾಗುವುದು.** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **03.09.2025ರ ಸಂಜೆ 4:00 ಗಂಟೆಗೆಯವರೆಗೆ ಆಗಿರುತ್ತದೆ.** ತಾಂತ್ರಿಕ ಬಿಡ್ಡನ್ನು ದಿನಾಂಕ: **06.09.2025ರ ಬೆಳಿಗ್ಗೆ 10:30 ಗಂಟೆಗೆ ತೆರೆಯಲಾಗುವುದು.** ಹಣಕಾಸಿನ ಬಿಡ್ಡನ್ನು ದಿನಾಂಕ: **09.09.2025ರ ಬೆಳಿಗ್ಗೆ 10:30 ಗಂಟೆಗೆ ತೆರೆಯಲಾಗುವುದು.**

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ. **080-23332765**ರಲ್ಲಿ ಸಂಪರ್ಕಿಸುವುದು. ಇ-ಪೋರ್ಟಲ್‌ನ ಸಹಾಯವಾಣಿ: **support@eprochelpdesk.com** ಅಥವಾ **8046010000** ಮತ್ತು **8068948777.**

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/RO2531/AAPL/2025-26

ಅಭಿಮಾನ್ ಸ್ಟುಡಿಯೋ ಸ್ಥಳ ಸ್ವಾಧೀನ ನಿರ್ಧಾರಕ್ಕೆ ವೀರಕಪುತ್ರ ಸ್ವಾಗತ

144 ಕೋಟಿಗೆ ಸ್ಟುಡಿಯೋ ಜಾಗ ಮಾರಾಟ ಒಪ್ಪಂದ

ಬೆಂಗಳೂರು: ಅಭಿಮಾನ್ ಸ್ಟುಡಿಯೋಗೆಂದು ನೀಡಿದ್ದ ಜಮೀನನ್ನು ಹಿಂಪಡೆಯಲು ಮುಂದಾಗಿರುವ ಸರಕಾರದ ಕ್ರಮವನ್ನು ವೀರಕಪುತ್ರ ಶ್ರೀನಿವಾಸ್ ಅವರು ಸ್ವಾಗತಿಸಿದ್ದಾರೆ. ಬಾಲಕೃಷ್ಣ ಅವರ ಮೊಮ್ಮಗ ಕಾರ್ತಿಕ ಅವರು ಅಭಿಮಾನ್ ಸ್ಟುಡಿಯೋದ ಒಂದು ಎಕರೆಯನ್ನು ತಲಾ 14 ಕೋಟಿ 37 ಲಕ್ಷಕ್ಕೆ ಮಾರಾಟ ಮಾಡಲು ಅಗ್ರಿಮೆಂಟ್ ಮಾಡಿಕೊಂಡಿದ್ದರು. ಅಂದರೆ ಹತ್ತು ಎಕರೆಗೆ 144 ಕೋಟಿ ರು. ಗಳಿಕೆಗೆ ಮುಂದಾಗಿ ದ್ದರು. ಸರಕಾರ ಎಚ್ಚೆತ್ತುಕೊಂಡು ಡಾ.ವಿಷ್ಣುವರ್ಧನ್ ಅವರ ಸಮಾಧಿಯನ್ನು ನೆಲಸಮಗೊಳಿಸಿದ್ದ ಅಭಿಮಾನ್ ಸ್ಟುಡಿಯೋದ ಮಾಲೀಕರಿಗೆ ಸರಕಾರ ಕಾನೂನಿನ ಮಹತ್ವವನ್ನು ತಿಳಿಸಿದೆ ಎಂದು ವೀರಕ ಪುತ್ರ ಶ್ರೀನಿವಾಸ್ ಹೇಳಿದ್ದಾರೆ.

ನಾನು ಮೊದಲಿನಿಂದಲೂ ಆ ಜಾಗದ ವಿರುದ್ಧ, ಅಲ್ಲಿನ ಹಣಕಾಸಿನ ಅವ್ಯವಹಾರದ ವಿರುದ್ಧ ದೊಡ್ಡಮಟ್ಟದಲ್ಲಿ ಧ್ವನಿ ಎತ್ತುತ್ತಲೇ ಇದ್ದೆ. ಆದರೆ ಕೆಲವರು ಅಷ್ಟು ದೊಡ್ಡ ಹಗರಣವನ್ನು ಬಿಟ್ಟು, ಅಭಿಮಾನಿಗಳ ಪುಣ್ಯಭೂಮಿಯಂತಹ ಒಂದು ಸಣ್ಣ ಆಸೆಯ ವಿರುದ್ಧ ನಿಂತುಬಿಟ್ಟರು. ಈಗಲಾದರೂ ನಮ್ಮ ಕೂಗಿಗೆ ನ್ಯಾಯ ಸಿಕ್ಕಿದೆ. ಇದು ನಿಜಕ್ಕೂ ಅಭಿನಂದನೀಯ ಕೆಲಸ. ಅಸಂಖ್ಯಾತ ಅಭಿಮಾನಿಗಳ ಹದಿನೈದು ವರ್ಷಗಳ ನೋವು, ಕಣ್ಣೀರು ಮತ್ತು ಅಸಹಾಯಕತೆಗೆ ನ್ಯಾಯ ಸಿಕ್ಕಿದೆ. ಆದರೆ ಈ ಪ್ರದೇಶದಲ್ಲಿ ಅಭಿಮಾನ್ ಸ್ಟುಡಿಯೋದ ಜಾಗವನ್ನು ಅರಣ್ಯಭೂಮಿ ಎಂದು ಘೋಷಣೆ ಮಾಡಿರುವುದು ಗೊಂದಲವನ್ನು ಸೃಷ್ಟಿಸಿದೆ. ಅರಣ್ಯಭೂಮಿಯ ನೆಪ ಹೇಳಿ ಅಲ್ಲಿ ವಿಷ್ಣುವರ್ಧನ್ ಹಾಗೂ ಬಾಲಣ್ಣನ ಸಮಾಧಿ ಆಗದಂತೆ ತಡೆಯಬಾರದು. ಅದು ಆಗದಿರಲೆಂದು ಒತ್ತಾಯಿಸೋಣ ಎಂದಿದ್ದಾರೆ.

ಮತ್ತೊಂದು ಮಾರಾಟ ಒಪ್ಪಂದ: 2021ರ ಆಗಸ್ಟ್ 16ರಂದು ರಾಘವೇಂದ್ರ ಬಿ.ಕೆ. ಎಂಬುವವರೊಂದಿಗೆ ಪ್ರತಿ ಚದರ ಅಡಿಗೆ 3,500 ರಂತೆ 10 ಎಕರೆ ಭೂಮಿಯನ್ನು ಮಾರಾಟ ಮಾಡಲು ನೋಂದಾಯಿತ ಮಾರಾಟ ಒಪ್ಪಂದ ಮಾಡಿಕೊಂಡಿದ್ದಾರೆ. ಇದು ಭೂಮಿಯ ಮೇಲೆ ಮೂರನೇ ವ್ಯಕ್ತಿಯ ಹಕ್ಕನ್ನು ಸೃಷ್ಟಿಸುವ ಪ್ರಯತ್ನವಾಗಿದ್ದು, ಇದು ಕೂಡ ಮೂಲ ಷರತ್ತಿನ ಗಂಭೀರ ಉಲ್ಲಂಘನೆಯಾಗಿದೆ. ಈ ಪ್ರದೇಶವು ಕಾನೂನಾತ್ಮಕವಾಗಿ ಇಂದಿಗೂ ಅರಣ್ಯ ಸ್ಥಾನಮಾನವನ್ನೇ ಹೊಂದಿದೆ. ಆದ್ದರಿಂದ ಬಾಲಣ್ಣ ಅವರ ಮಕ್ಕಳು ಉಲ್ಲಂಘಿಸಿರುವ ಷರತ್ತು ಹಾಗೂ ಸುಪ್ರೀಂ ಕೋರ್ಟ್‌ನ ನಿರ್ದೇಶನಗಳ ಹಿನ್ನೆಲೆಯಲ್ಲಿ, ನೀಡಲಾಗಿದ್ದ ಭೂಮಿ ಮಂಜೂರಾತಿ ಆದೇಶವನ್ನು ತಕ್ಷಣವೇ ರದ್ದುಪಡಿಸಬೇಕು. ಅಲ್ಲದೆ, ಭೂಮಿಯನ್ನು ಅರಣ್ಯ ಇಲಾಖೆಯ ಹೆಸರಿಗೆ ಇಂಡೀಕರಣ (ಖಾತೆ ಬದಲಾವಣೆ) ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಸಂಪೂರ್ಣ ಪ್ರದೇಶವನ್ನು ಅರಣ್ಯ ಇಲಾಖೆಗೆ ಹಿಂದಿರುಗಿಸಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್. ರವೀಂದ್ರ ಕುಮಾರ್ ಅವರು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಅಭಿಮಾನ್ ಸ್ಟುಡಿಯೋ ಸರಕಾರದ ವಶಕ್ಕೆ ?

← ಮೊದಲಪುಟದಿಂದ

ನಂತರ, 1969ರ ಏಪ್ರಿಲ್ 9ರ ಸರಕಾರಿ ಆದೇಶದ ಅನ್ವಯ, ಸರ್ವೆ ನಂ. 26ರಲ್ಲಿನ 20 ಎಕರೆ ಪ್ರದೇಶವನ್ನು ಅಭಿಮಾನ್ ಸ್ಟುಡಿಯೋ ಸ್ಥಾಪಿಸಲು ಟಿ.ಎನ್.ಬಾಲಕೃಷ್ಣ ಅವರಿಗೆ 20 ವರ್ಷಗಳ ಅವಧಿಗೆ ಗೇಣಿ ಆಧಾರದ ಮೇಲೆ ನೀಡಲಾಗಿತ್ತು. 1970ರ ಮಾರ್ಚ್ 21ರ ಆದೇಶದಲ್ಲಿ, ಈ ಭೂಮಿಯನ್ನು ಸ್ಟುಡಿಯೋ ಅಭಿವೃದ್ಧಿ ಹೊರತುಪಡಿಸಿ ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಾರದು ಮತ್ತು ಸರಕಾರದ ಪೂರ್ವಾನುಮತಿ ಇಲ್ಲದೆ ಮಾರಾಟ ಅಥವಾ ಪರಭಾರೆ ಮಾಡಬಾರದು ಎಂಬ ಕಠಿಣ ಷರತ್ತು ವಿಧಿಸಲಾಗಿತ್ತು. ಒಂದು ವೇಳೆ ಷರತ್ತು ಉಲ್ಲಂಘನೆ ಯಾದಲ್ಲಿ, ಯಾವುದೇ ಪರಿಹಾರ ನೀಡದೆ ಮಂಜೂರಾ ತಿಯನ್ನು ರದ್ದುಪಡಿಸಿ ಭೂಮಿಯನ್ನು ಸರಕಾರಕ್ಕೆ ಹಿಂಪಡೆಯಲಾಗುವುದು ಎಂದು ಸ್ಪಷ್ಟವಾಗಿ ನಮೂದಿಸಲಾಗಿತ್ತು.

ಸಂಕಷ್ಟಕ್ಕೆ ಷರತ್ತುಗಳ ಉಲ್ಲಂಘನೆ ಕಾರಣ

ಆದರೆ ಈ ಸ್ಪಷ್ಟ ಸೂಚನೆಗಳ ಹೊರತಾಗಿಯೂ ಬಾಲಣ್ಣ ಅವರ ಮಕ್ಕಳು ಮಂಜೂರಾದ 20 ಎಕರೆ ಪೈಕಿ 10 ಎಕರೆ ಜಮೀನನ್ನು ಮಾರಾಟ ಮಾಡಿದ್ದರು. ಇದು 1970ರ ಮೂಲ ಸರಕಾರಿ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ. ಇನ್ನು ಮಾರಾಟ ಮಾಡುವ ಮೊದಲು ಅನುಮತಿ ಪಡೆದಿದ್ದ ಬಾಲಣ್ಣ ಮಕ್ಕಳು, ಮಾರಾಟದಿಂದ ಬರುವ ಹಣದಲ್ಲಿ ಸ್ಟುಡಿಯೊ ಅಭಿವೃದ್ದಿಪಡಿಸುವ ಕಾಮಗಾರಿ ಕೈಗೊಳ್ಳುವುದಾಗಿ ಹೇಳಿದ್ದರು. ಆದರೀಗ ಸ್ಟುಡಿಯೋ ಅಭಿವೃದ್ಧಿಯ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ. ಜಮೀನು ಯಥಾಸ್ಥಿತಿಯಲ್ಲೇ ಇದೆ. ಅನುಮತಿ ಪಡೆದಿದ್ದ 10 ಎಕರೆ ಬದಲು 12 ಎಕರೆ ಪ್ರದೇಶವನ್ನು ಮಾರಾಟ ಮಾಡಲಾಗಿದೆ ಎಂದು ಅರಣ್ಯ ಇಲಾಖೆಯು ಆರೋಪಿಸಿದೆ.

ತಿಮರೋಡಿಗೆ ಬುರುಡೆ ಕಾಟ

← ಮೊದಲಪುಟದಿಂದ

ಸುಜಾತಗೆ ಭದ್ರತೆ ನೀಡಲು ಆದೇಶ: ಅನನ್ಯಾ ಭಟ್ ಹೆಸರಲ್ಲಿ ದೂರು ದಾಖಲಿಸಿ, ಸಂಕಷ್ಟಕ್ಕೆ ಸಿಲುಕಿರುವ ಸುಜಾತ ಭಟ್ ಅವರಿಗೆ ಸೂಕ್ತ ರಕ್ಷಣೆ ಒದಗಿಸುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ವಿಶೇಷ ತನಿಖಾ ತಂಡಕ್ಕೆ ಸೂಚಿಸಿದ್ದಾರೆ. ಸುಜಾತಾ ಭಟ್ ಅವರನ್ನು ಕಳೆದ ಎರಡು ವಾರಗಳಿಂದ ಕೆಲ ಮಾಧ್ಯಮದವರು ನಿರಂತರ ಹಿಂಬಾಲಿಸಿ, ಹೇಳಿಕೆ ನೀಡುವಂತೆ ಒತ್ತಾಯಿಸಿವೆ. ಇದರಿಂದ ಸುಜಾತಾ ಭಟ್ ಅವರು ಮಾನಸಿಕವಾಗಿ ಕುಗ್ಗಿದ್ದಾರೆ. ಆದ್ದರಿಂದ ರಕ್ಷಣೆ ನೀಡುವಂತೆ ಸೂಚನೆ ನೀಡಿದ್ದಾರೆ.

ಮಟ್ಟಣ್ಣನವರ್ ವಿರುದ್ಧ ಆಯೋಗಕ್ಕೆ ದೂರು: ತಿಮರೋಡಿ ಗ್ಯಾಂಗ್ ಜತೆ ಗುರುತಿಸಿಕೊಂಡಿರುವ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ದಾಖಲಾಗಿದೆ. ಧರ್ಮಸ್ಥಳದಲ್ಲಿ ನಡೆಯುವ ಸಾಮೂಹಿಕ ವಿವಾಹಗಳ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಸಾಮಾಜಿಕ ಕಾರ್ಯಕರ್ತ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಸಾಮಾಜಿಕ ಕಾರ್ಯಕರ್ತೆ ಕಾವೇರಿ ಕೇದಾರನಾಥ್ ಮತ್ತು ಇತರ ಮಹಿಳೆಯರು ರಾಜ್ಯ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ. ಧರ್ಮಸ್ಥಳದಲ್ಲಿ ದಶಕಗಳಿಂದ ಸಾವಿರಾರು ಜೋಡಿಗಳು ಸಾಮೂಹಿಕ ವಿವಾಹವಾಗಿ ಸುಖಕರ ಜೀವನ ನಡೆಸುತ್ತಿದ್ದಾರೆ. ಬಡವರು ಮಾತ್ರವಲ್ಲ, ಅನೇಕ ಭಕ್ತರು ಹರಕೆ ಹೊತ್ತು ಇಲ್ಲಿ ಮದುವೆಯಾಗುತ್ತಾರೆ. ಆದರೆ, ಮಟ್ಟಣ್ಣನವರ್ ಈ ಮದುವೆಗಳ ಬಗ್ಗೆ ಮತ್ತು ಅಲ್ಲಿ ಮದುವೆಯಾದ ಮಹಿಳೆಯರ ಬಗ್ಗೆ ಹೀನವಾಗಿ ಮತ್ತು ಅವರ ಘನತೆಗೆ ಧಕ್ಕೆ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಆದ್ದರಿಂದ ಕ್ರಮವಹಿಸುವಂತೆ ಕಾವೇರಿ ಕೇದಾರನಾಥ್ ಆಗ್ರಹಿಸಿದ್ದಾರೆ.

ಜಿಎಸ್‌ಟಿ ಸರಳೀಕರಣಕ್ಕೆ ರಾಜ್ಯ ಆಕ್ಷೇಪ

← ಮೊದಲಪುಟದಿಂದ

ಆದರೆ, ಈ ವ್ಯವಸ್ಥೆ ರಾಜ್ಯಗಳ ತೆರಿಗೆ ಆದಾಯವನ್ನು ರಕ್ಷಿಸುವಂತಿರಬೇಕು ಹಾಗೂ ಇದರ ಸಂಪೂರ್ಣ ಲಾಭ ದೇಶದ ಜನಸಾಮಾನ್ಯರಿಗೆ ಸಿಗುವಂತಿರಬೇಕೆ ಹೊರತು ಕೆಲವು ಕಂಪನಿಗಳಿಗೆ ಸೀಮಿತವಾಗಿರಬಾರದು. ಪ್ರಸ್ತಾವಿತ ಜಿಎಸ್‌ಟಿ ಸರಳೀಕರಣದಿಂದ ರಾಜ್ಯ ಸರಕಾರಗಳಿಗೆ ಯಾವ ಪ್ರಮಾಣದಲ್ಲಿ ಆದಾಯ ನಷ್ಟವಾಗಲಿದೆ ಎಂಬ ಅಂದಾಜಿನ ಕುರಿತು ಕೇಂದ್ರ ಸರಕಾರ ಈವರೆಗೆ ಯಾವುದೇ ಮಾಹಿತಿ ನೀಡಿಲ್ಲ. ಕೆಲವು ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ರಾಜ್ಯಗಳಿಗೆ ಭಾಗಶಃ 85ಸಾವಿರ ಕೋಟಿಯಿಂದ 2.5 ಲಕ್ಷ ಕೋಟಿ ವರೆಗೆ ನಷ್ಟ ಉಂಟಾಗುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದೆ. ರಾಜ್ಯ ಸರಕಾರಗಳಿಗೆ ಆದಾಯ ನಷ್ಟ ಉಂಟಾದರೆ ಕೇಂದ್ರ ಸರಕಾರಕ್ಕೂ ನಷ್ಟವಾಗಲಿದೆ. ಹೀಗಾಗಿ ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ಕೇಂದ್ರ ಸರಕಾರ ತನ್ನ ಖಜಾನೆಯಿಂದ ನೀಡುವ ಬದಲು, ಕೌನ್ಸಿಲ್ ಪರಿಧಿಯಲ್ಲೇ ಪ್ರತಿ ರಾಜ್ಯಗಳಿಗೂ ಪರಿಹಾರ ನೀಡಲಿ ಎಂದು ಒತ್ತಾಯಿಸಿದರು.

ರಾಜ್ಯಗಳ ಅಭಿವೃದ್ಧಿಗೆ ಜಿಎಸ್‌ಟಿ ಮೂಲ: ಕೇಂದ್ರದ ಆದಾಯದಲ್ಲಿ ಜಿಎಸ್‌ಟಿ ಪಾಲು ಕೇವಲ ಶೇ. 28ರಷ್ಟು ಮಾತ್ರ. ಉಳಿದ ಶೇ.72ರಷ್ಟು ಆದಾಯವನ್ನು ಕೇಂದ್ರ ವಿವಿಧ ಮೂಲಗಳಿಂದ ಗಳಿಸುತ್ತದೆ. ನೇರ ತೆರಿಗೆ , ಆದಾಯ ತೆರಿಗೆ, ಕಸ್ಟಮ್ಸ್, ಡಿವಿಡೆಂಟ್ ಹಾಗೂ ವಿವಿಧ ಸೆಸ್‌ಗಳು ಕೇಂದ್ರದ ಆದಾಯ ಮೂಲಗಳಾಗಿವೆ. ಕೇವಲ ಸೆಸ್‌ವೊಂದರ ಮೂಲಕವೇ ಕೇಂದ್ರ ಶೇ.17ರಿಂದ 20ರಷ್ಟು ಆದಾಯ ಗಳಿಸುತ್ತದೆ. ಸೆಸ್ ಆದಾಯದಲ್ಲಿ ಒಂದು ರು.ಯನ್ನೂ ರಾಜ್ಯಗಳೊಂದಿಗೆ ಹಂಚಿಕೊಳ್ಳುವುದಿಲ್ಲ. ಆದರೆ ರಾಜ್ಯಗಳ ಆದಾಯದಲ್ಲಿ ಜಿಎಸ್‌ಟಿ ಪಾಲು ಶೇ.50ರಷ್ಟು. ಹೀಗಾಗಿ ಅಭಿವೃದ್ಧಿಗಾಗಿ ಹಾಗೂ ಆದಾಯ ಸಂಗ್ರಹಣೆಗೆ ರಾಜ್ಯಗಳು ಜಿಎಸ್‌ಟಿಯನ್ನು ನೆಚ್ಚಿಕೊಂಡಿವೆ. ಈ ಸಮಯದಲ್ಲಿ ಶೇ.20ರಷ್ಟು ಆದಾಯ ನಷ್ಟವಾದರೆ ರಾಜ್ಯಗಳ ಆರ್ಥಿಕ ಸ್ವಾಯತ್ತೆ ಮೇಲೆ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಆದಾಯ ದುಪ್ಪಟ್ಟಾಗಿಲ್ಲ

ಜಿಎಸ್‌ಟಿ ಪರಿಚಯಿಸುವ ಸಮಯದಲ್ಲಿ ನೂತನ ತೆರಿಗೆ ವ್ಯವಸ್ಥೆ ಆರ್ಥಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ ಎನ್ನಲಾಗಿತ್ತು. ಇದು ನಿಜವಾಗಿದ್ದರೆ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಆದಾಯ ದುಪ್ಪಟ್ಟಾಗಬೇಕಿತ್ತು. ಆದರೆ, ಕಳೆದ 7-8 ವರ್ಷಗಳ ಅನುಭವದಲ್ಲಿ ಈ ಹೇಳಿಕೆ ಸುಳ್ಳು ಎಂದು ಸಾಬೀತಾಗಿದೆ. ಪ್ರತಿವರ್ಷವೂ ಎಲ್ಲಾ ರಾಜ್ಯಗಳ ನಿವ್ವಳ ಆದಾಯ ಗಣನೀಯವಾಗಿ ಇಳಿಯುತ್ತಲೇ ಇದೆ. ಜಿಎಸ್‌ಟಿಗೆ ಮುನ್ನ ವ್ಯಾಟ್‌ನಲ್ಲಿ ತೆರಿಗೆ ಸಂಗ್ರಹಿಸುತ್ತಿದ್ದ ಕಾಲದಲ್ಲಿ ದೇಶದ ಜಿಡಿಪಿಗೆ ವ್ಯಾಟ್ ಕೊಡುಗೆ ಶೇ 6.1 ರಷ್ಟು ಇತ್ತು. ಆದರೆ, ಈಗ ಜಿಎಸ್‌ಟಿ ಜಾರಿಯಾದ ಬಳಿಕ ಈ ಪ್ರಮಾಣ ಈವರೆಗೆ ಶೇ. 6.1 ಕ್ಕೆ ತಲುಪಲಾಗಿಲ್ಲ. ಜಿಎಸ್‌ಟಿಯಿಂದಾಗಿ ರಾಜ್ಯ ಹಾಗೂ ಕೇಂದ್ರಕ್ಕೆ ಆದಾಯ ನಷ್ಟವಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಜಿಎಸ್‌ಟಿ ತೆರಿಗೆ ವ್ಯವಸ್ಥೆಯನ್ನು 2017ರಲ್ಲಿ ಪರಿಚಯಿಸುವಾಗ ಕೇಂದ್ರ ಸರಕಾರ ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ರಾಜ್ಯಗಳಿಗೆ ತೆರಿಗೆ ನಷ್ಟ ಪರಿಹಾರ ನೀಡಬೇಕು ಎಂದು ಹೇಳಿತ್ತು. ಆದರೆ, ಪರಿಹಾರ ವ್ಯವಸ್ಥೆಯನ್ನು 2022ಕ್ಕೆ ತೆಗೆದುಹಾಕಲಾಗಿತ್ತು. ಪರಿಣಾಮ ಬಹುಪಾಲು ರಾಜ್ಯಗಳು ಶೇ.25 ರಷ್ಟು ಆದಾಯ ನಷ್ಟ ಎದುರಿಸಿದ್ದವು. ರಾಜ್ಯಗಳ ಆದಾಯ ಶೇ.25 ರಷ್ಟು ಕುಸಿಯುತ್ತಿದ್ದ ಸಂದರ್ಭದಲ್ಲಿ ಜಿಎಸ್‌ಟಿ ಸ್ಥಿರಗೊಂಡಿದೆ ಎಂದು ಹೇಗೆ ಹೇಳುತ್ತಾರೆ? ಎಂದು ಪ್ರಶ್ನಿಸಿದರು.

ಸಮಾಚಾರ ಸಣ್ಣದಲ್ಲ

ರಸ್ತೆಗೆ ಮರ ಕೆಡವಿದ ಆನೆ: ಸಂಚಾರಕ್ಕೆ ಅಡ್ಡಿ

ಹಾಸನ: ಒಂಟಿ ಸಲಗವೊಂದು ರಸ್ತೆಗೆ ಅಡ್ಡಲಾಗಿ ಮರ ಬೀಳಿಸಿ ವಾಹನ ಸವಾರರು ಪರದಾಡುವಂತೆ ಮಾಡಿದ ಘಟನೆ ಸಕಲೇಶಪುರದ ಹಳ್ಳಿಬೈಲು ಗ್ರಾಮದ ಬಳಿ ನಡೆದಿದೆ. ಗುರುವಾರ ರಾತ್ರಿ, ಗ್ರಾಮದ ಬಳಿ ದೈತ್ಯಾಕಾರದ ಒಂಟಿಸಲಗ ಬೈನೆ ಮರವನ್ನು ನೆಲಕ್ಕುರುಳಿಸಿ ಆರಾಮಾಗಿ ತಿನ್ನುತ್ತಾ ನಿಂತಿತ್ತು. ಇದರಿಂದ ಕೆಲಕಾಲ ಹಲವಾರು ವಾಹನಗಳು ರಸ್ತೆಯಲ್ಲೇ ಸಾಲುಗಟ್ಟಿ ನಿಂತಿದ್ದವು. ಕೆಲಕಾಲ ವಾಹನ ಸವಾರರು ಇದರಿಂದ ಪರದಾಡಿದ್ದಾರೆ. ಬಳಿಕ ವಿಡಿಯೋ ಮಾಡಿ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಬರುವಂತೆ ಚಾಲಕರು ಒತ್ತಾಯಿಸಿದ್ದರು. ಸ್ಥಳಕ್ಕೆ ಇಟಿಎಫ್ ಸಿಬ್ಬಂದಿ ಬಂದು ಪಟಾಕಿ ಸಿಡಿಸಿ ಸಲಗವನ್ನು ಕಾಡಿಗೆ ಓಡಿಸಿದ್ದಾರೆ. ಬಳಿಕ ಸುರಿಯುತ್ತಿರುವ ಮಳೆಯಲ್ಲಿಯೇ ಮರವನ್ನು ಅರಣ್ಯ ಇಲಾಖೆ ಸಿಬ್ಬಂದಿ ತೆರವು ಮಾಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಲೋಕಾ ಬಲೆಗೆ ಬಿದ್ದ ಎಫ್‌ಡಿಎ

ಪುತ್ತೂರು: ತಾಲೂಕು ಆಡಳಿತ ಸೌಧದಲ್ಲಿ 12 ಸಾವಿರ ರು. ಲಂಚ ಸ್ವೀಕರಿಸುತ್ತಿದ್ದಾಗ ತಹಸೀಲ್ದಾರ್ ಕಚೇರಿಯ ಎಫ್‌ಡಿಎ ಸುನಿಲ್ ಲೋಕಾಯುಕ್ತ ಬಲೆಗೆ ಬಿದ್ದಿದ್ದು, ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಆರೋಪಿ -2 ತಹಸೀಲ್ದಾರ್ ಕುಡಲಗಿ ಪರಾರಿಯಾಗಿದ್ದು ಆತನಿಗಾಗಿ ಬಲೆ ಬೀಸಲಾಗಿದೆ. ದೂರುದಾರರ ಚಿಕ್ಕಪ್ಪ ಪುತ್ತೂರು ತಾಲೂಕು ನೆಟ್ಟಣಿಗೆ ಮುಡೂರು ಗ್ರಾಮದಲ್ಲಿ 65 ಸೆಂಟ್ಸ್ ಜಮೀನು ಅಕ್ರಮ ಸಕ್ರಮದನ್ವಯ ದರ್ಖಾಸು ಮಂಜೂರಾಗಿದ್ದು, ಅವರಿಗೆ ಅನಾರೋಗ್ಯ ಇದ್ದುದರಿಂದ ಅವರು ಸ್ವ-ಇಚ್ಛೆಯಿಂದ ಉಪ ನೋಂದಣಾಧಿಕಾರಿ ಕಚೇರಿಗೆ ವಿಲುನಾಮೆ ಬರೆಸಿ ಕೊಟ್ಟಿದ್ದರು. ಇದರ ಪ್ರಕಾರ ಅವರ ಚಿಕ್ಕಪ್ಪನ ಮರಣ ನಂತರ ಜಮೀನಿನ ಸಂಪೂರ್ಣ ಹಕ್ಕು ದೂರುದಾರ ಸೇರಬೇಕಿತ್ತು. ಜಮೀನು ದೂರುದಾರರ ಚಿಕ್ಕಪ್ಪನವರಾಗಿ ಮಂಜೂರಾಗಿ 27 ವರ್ಷ ಆಗಿತ್ತು. ಪರಭಾರೆ ಮಾಡಲು ತಹಸೀಲ್ದಾರ್‌ರಿಂದ ನಿರಾಕ್ಷೇಪಣಾ ಪತ್ರದ ಅವಶ್ಯಕತೆ ಇದ್ದುದರಿಂದ ಅರ್ಜಿ ಸಲ್ಲಿಸಿದ್ದರು. ಅರ್ಜಿ ನೀಡಲು ಲಂಚ ಕೇಳಿದ ಹಿನ್ನೆಲೆಯಲ್ಲಿ ಲೋಕಾಯುಕ್ತ ರೆಡ್ ನಡೆಸಿದೆ.

ಪ್ರತಿಷ್ಠಾಪಿಸಲಾಗಿದ್ದ ಗಣಪತಿ ಕಳವು

ದಾವಣಗೆರೆ: ಚತುರ್ಥಿ ಹಿನ್ನೆಲೆಯಲ್ಲಿ ಅದ್ದೂರಿಯಾಗಿ ಪ್ರತಿಷ್ಠಾಪಿಸಲಾಗಿದ್ದ ಗಣೇಶ ಮೂರ್ತಿಯನ್ನೇ ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿದ್ದಾರೆ. ಇಂತಹದ್ದೊಂದು ಘಟನೆ ಜಿಲ್ಲೆಯ ಜಗಳೂರು ತಾಲೂಕಿನ ಯರಗಕಟ್ಟೆ ಗ್ರಾಮದಲ್ಲಿ ನಡೆದಿದೆ. ಎಲ್ಲೆಡೆ ಗಣೇಶ ಮೂರ್ತಿಗಳನ್ನು ತಂದು ಪ್ರತಿಷ್ಠಾಪಿಸಿ, ಅದ್ದೂರಿಯಾಗಿ ಹಬ್ಬ ಆಚರಣೆ ಮಾಡಲಾಗುತ್ತಿದೆ. ಆದರೆ, ಯರಗಕಟ್ಟೆ ಗ್ರಾಮದಲ್ಲಿ ರಾತ್ರೋರಾತ್ರಿ, ಗಣಪತಿ ಮೂರ್ತಿಯನ್ನೇ ಕಳವು ಮಾಡಿರುವ ಬಗ್ಗೆ ಗ್ರಾಮಸ್ಥರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಗ್ರಾಮಸ್ಥರೆಲ್ಲ ಸೇರಿ ಕಳೆದ ದಿನ ಸಂಭ್ರಮದಿಂದ ಗಣೇಶ ಮೂರ್ತಿಪ್ರತಿಷ್ಠಾಪನೆ ಮಾಡಿದ್ದರು. ರಾತ್ರಿ ಪೂಜೆ ಸಲ್ಲಿಸಿದ ನಂತರ ಎಲ್ಲರೂ ತಮ್ಮ ತಮ್ಮ ಮನೆಗೆ ಹೋಗಿದ್ದರು. ಯಾರೂ ಇಲ್ಲದ ವೇಳೆ ಗಣಪತಿ ಮೂರ್ತಿಯನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದಾರೆ. ಮರುದಿನ ಬೆಳಗ್ಗೆ ಗಣೇಶನಿಗೆ ಪೂಜೆ ಸಲ್ಲಿಸಲು ಟೆಂಟ್ ಬಳಿ ಬಂದಾಗ ಮೂರ್ತಿ ಕಳವು ಆಗಿರುವುದು ಬೆಳಕಿಗೆ ಬಂದಿದೆ.

ಸತ್ಯ ಬಿಟ್ಟು ನಾನು ಎಂದಿಗೂ ಹೋಗಿಲ್ಲ, ಹೋಗುವುದು ಇಲ್ಲ | ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅಭಿಮತ

ಜೈನ ಮಠಾಧೀಶರಿಂದ ಧರ್ಮಸ್ಥಳದಲ್ಲಿ ಸಮ್ಮೇಳನ

ಧರ್ಮಸ್ಥಳ: ಧರ್ಮಸ್ಥಳದಲ್ಲಿ ಜೈನ ಮಠಾಧೀಶರು, ಶ್ರಾವಕರು ಶ್ರಾವಕಿಯರು ಬೃಹತ್ ಸಂಖ್ಯೆಯಲ್ಲಿ ಆಗಮಿಸಿ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ವ್ಯಕ್ತಪಡಿಸಿದರು

ಧರ್ಮಸ್ಥಳದಲ್ಲಿ ಶುಕ್ರವಾರ ಬೆಳಗ್ಗೆ ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸೇರಿದಂತೆ ಹಲವು ಸ್ವಾಮೀಜಿಗಳು ಧರ್ಮಸ್ಥಳಕ್ಕೆ ಆಗಮಿಸಿ ಹೆಗ್ಗಡೆ ಅವರೊಂದಿಗೆ ಒಗ್ಗಟ್ಟು ಪ್ರದರ್ಶಿಸಿದರು. ಧರ್ಮಸ್ಥಳದ ಮಹಾದ್ವಾರದಲ್ಲಿ ಸೇರಿದ್ದ ಜೈನ ಸಮುದಾಯದ ನಾಯಕರು ನಂತರ ಜಾಥಾವಾಗಿ ಮುಂದೆ ಸಾಗಿದರು. ಬೆಳಗ್ಗೆ 10 ಗಂಟೆಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಅಸಂಖ್ಯ ಜೈನ ಬಂಧುಗಳು ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ.ವೀರೇಂದ್ರ ಹೆಗ್ಗಡೆ ಅವರು, ಭಟ್ಟಾರಕ ಸ್ವಾಮೀಜಿಗಳ ಆಗಮನ ಮಹತ್ವದ ಬೆಳವಣಿಗೆ. ಇಂದು ಕ್ಷೇತ್ರಕ್ಕೆ ಹೊಸ ಕಳೆ ಬಂದಿದೆ. ಎಲ್ಲ ಜೈನ ಸ್ವಾಮಿಗಳು ನಮ್ಮೊಂದಿಗಿದ್ದಾರೆಂಬುದು ನನಗೆ ದೊಡ್ಡ ಧೈರ್ಯ ಎಂದರು.

ಪ್ರಕರಣದ ಕುರಿತು ಎಸ್‌ಐಟಿ ತನಿಖೆ ನಡೆಯುತ್ತಿದೆ. ಆದ್ದರಿಂದ ಹೆಚ್ಚು ಮಾತನಾಡ ಬಾರದು ಎಂಬ ಸೂಚನೆ ಇದೆ. ಸತ್ಯ ಬಿಟ್ಟು ನಾನು ಎಂದಿಗೂ ಹೋಗಿಲ್ಲ, ಹೋಗುವುದಿಲ್ಲ. ಶಾಂತತೆ ಹಾಗೂ ತಾಳ್ಮೆ ಎಲ್ಲರೂ ಕಾಪಾಡಬೇಕು. ಸಂಯಮವೇ ಅತ್ಯಂತ ಶ್ರೇಷ್ಠ ಎಂದು ಹೇಳಿದರು.

ವಿವೇಕಾನಂದರು ದಶ ಲಕ್ಷಣಗಳ ಎಲ್ಲಾ ಗುಣಗಳನ್ನು ಪಾಲಿಸಿದರು, ಆದರೆ ಅವರು ಜೈನ ಧರ್ಮದ ಬಗ್ಗೆ ಹೇಳಿಲ್ಲ. ಸತ್ಯ ಒಂದೇ. ಎಲ್ಲರೂ ದಶ ಧರ್ಮಗಳನ್ನು ಪಾಲಿಸಲೇಬೇಕು. ತಮಿಳುನಾಡು ಸೇರಿದಂತೆ ವಿವಿಧೆಡೆಯಿಂದ ಬಂದಿರುವ ಸ್ವಾಮೀಜಿಗಳ ಸಾನ್ನಿಧ್ಯ, ಧರ್ಮಸ್ಥಳದ ಭಕ್ತರಿಗೆ ಮತ್ತಷ್ಟು

ಧರ್ಮಸ್ಥಳದಲ್ಲಿ ನಡೆದ ಜೈನ ಮಠಾಧೀಶರ ಸಮ್ಮೇಳದಲ್ಲಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಜೈನ ಮಠಾಧೀಶರು ಸತ್ಕರಿಸಿದರು.

ಭರವಸೆ ತುಂಬಿದೆ. ತಮಿಳುನಾಡಿನಿಂದ ಸ್ವಾಮೀಜಿಗಳು ಒಂದು ಸನ್ನೆ ಕೊಟ್ಟರೆ ಸಾಕು ಸಾವಿರಾರು ಜನ ಸೇರುತ್ತಾರೆ. ಆದರೆ ಸಂಯಮ ಅತ್ಯಂತ ಶ್ರೇಷ್ಠವಾದದ್ದು ಎಂದು ಅಭಿಪ್ರಾಯ ಪಟ್ಟರು.

ಶ್ರವಣಬೆಳಗೊಳದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಆಕ್ರಮಣಗಳು ನಡೆಯುತ್ತವೆ ಎಂದರೆ ಅಲ್ಲಿ ಏನೋ ಶ್ರೇಷ್ಠತೆ, ಒಳ್ಳೆಯದೇ ಇದೆ ಎಂಬ ಅರ್ಥ. ಧರ್ಮಸ್ಥಳದ ಮೇಲಿನ ಟೀಕೆಗಳೂ ಆ ಪರಂಪರೆಯ ಶ್ರೇಷ್ಠತೆಯ ಪ್ರತೀಕವೇ. ಹೆಗ್ಗಡೆ ಮನೆತನವು ದೈವಗಳಿಗೆ ಅರ್ಪಿತವಾದ ಮನೆತನ. ತಮ್ಮ ಮನೆಯನ್ನೇ ದೇವತೆಗಳಿಗೆ ಅರ್ಪಿಸಿರುವುದು ಇವರ ಕುಟುಂಬದ ಬೃಹತ್ ತ್ಯಾಗ. ಈ ತ್ಯಾಗದ ಪರಂಪರೆಯನ್ನು ಯಾವ ಶಕ್ತಿಯೂ ಮುರಿಯಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಶ್ರಾವಕ, ಶ್ರಾವಕಿಯರ ಅಭಿಪ್ರಾಯ: 'ನಮಗೆ ನೆಮ್ಮದಿ ಇಲ್ಲ, ಮಹಿಳೆಯರು ನೋವು ಅನುಭವಿಸುತ್ತಿದ್ದಾರೆ. ಆದರೂ ನಾವು ಸತ್ಯದ ಹಾದಿಯಲ್ಲೇ ನಡೆಯುತ್ತೇವೆ,' ಎಂಬ ಭಾವನೆ ವ್ಯಕ್ತವಾಯಿತು. ಧರ್ಮಸ್ಥಳದಲ್ಲಿ ನಡೆದ ಈ ಜೈನ ಸಮುದಾಯದ ಬೆಂಬಲ ಪ್ರಸ್ತುತ ನಡೆಯುತ್ತಿರುವ ವಿವಾದದ ನಡುವೆ ಮಹತ್ವ ಪಡೆದಿದೆ. ಜೈನ ಮಠಗಳ ಒಗ್ಗಟ್ಟಿನಿಂದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ನೀಡಲಾದ ಬೆಂಬಲ, ಧರ್ಮಸ್ಥಳದ ಧಾರ್ಮಿಕ ಹಾಗೂ ಸಾಮಾಜಿಕ ಶಕ್ತಿಯನ್ನು ಮತ್ತಷ್ಟು ಬಲಪಡಿಸಿದೆ.

> **ಧರ್ಮಸ್ಥಳ ಭಕ್ತರಲ್ಲಿ ಅಶಾಂತಿ ಮನೆ ಮಾಡಿದೆ. ಮಹಿಳೆಯರು ಕಣ್ಣೀರಿಟ್ಟು ನೋವು ವ್ಯಕ್ತಪಡಿಸುತ್ತಿದ್ದಾರೆ. ಪ್ರತಿಭಟನೆಗೆ ಸಿದ್ಧರಾಗಿದ್ದಾರೆ. ಆದರೂ ನಾನು ಎಲ್ಲರನ್ನು ಸಂಯಮದಿಂದ ಇರಲು ವಿನಂತಿಸುತ್ತೇನೆ.**
> **-ಡಾ.ವೀರೇಂದ್ರ ಹೆಗ್ಗಡೆ,** ಧರ್ಮಸ್ಥಳ ಧರ್ಮಾಧಿಕಾರಿ

> **ವೀರೇಂದ್ರ ಹೆಗ್ಗಡೆ ಅವರ ಮನಸ್ಸು ಶುದ್ಧವಾಗಿದೆ. ಅವರು ಜೈನರು ಎಂಬ ಕಾರಣಕ್ಕೇ ಷಡ್ಯಂತ್ರ ನಡೆದಿದೆ. ದೇವಾ ಲಯದ ಅಧಿಕಾರ ಕಸಿಯಲು ಹೋರಾಟ ನಡೆಯು ತ್ತಿದೆ. ಹೆಗ್ಗಡೆ ಅವರು ಹಿಂದೂ ಮತ್ತು ಜೈನ ಸಮುದಾಯದ ಸೇತುವೆ. ಹಿಂದೂ ಮತ್ತು ಜೈನರನ್ನು ಬೇರ್ಪಡಿಸಲು ಸಾಧ್ಯವಿಲ್ಲ.**
> **-ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ,** ಶ್ರವಣಬೆಳಗೊಳ

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಳವಳ

ಧರ್ಮಸ್ಥಳ ವಿವಾದಿತ ಕೇಂದ್ರವಾಗಿಸಲು ಯತ್ನ

ಮೈಸೂರು: ಧರ್ಮಸ್ಥಳವನ್ನು ವಿವಾದಿತ ಕೇಂದ್ರವನ್ನಾಗಿಸಲು ಕೆಲವರ ಯತ್ನಿಸಲಾಗುತ್ತಿದೆ ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ನಂಬಿಕೆ ಎಂಬುದು ಬಹು ಸೂಕ್ಷ್ಮವಾದ ಸಂಗತಿ. ಅದು ಕನ್ನಡಿಯಿದ್ದಂತೆ. ಒಮ್ಮೆ ಅದು ಒಡೆದು ಹೋದರೆ ಮತ್ತೆ ಸರಿಪಡಿಸಲಾಗುವುದಿಲ್ಲ. ಒಡೆದ ಕನ್ನಡಿಯ ಪ್ರತಿ ಚೂರಿನಲ್ಲೂ ಪ್ರತ್ಯೇಕ ಪ್ರತ್ಯೇಕ ಬಿಂಬಗಳು ಕಾಣುತ್ತಿರುತ್ತವೆ. ಹೀಗೆ ಕಂಡ ಕಂಡ ಬಿಂಬಗಳನ್ನೆಲ್ಲ ನಂಬಿ ವಿಭಿನ್ನವಾಗಿ ಅರ್ಥೈಸುತ್ತಾ ಹೋಗುವುದು ಸೂಕ್ತವಲ್ಲ. ಒಂದು ಧಾರ್ಮಿಕ ಕ್ಷೇತ್ರದ ಮೇಲೆ ನಿರಂತರವಾಗಿ ಒಂದಲ್ಲ ಒಂದು ವಿವಾದವನ್ನು ಮುನ್ನೆಲೆಗೆ ತರುತ್ತಿರುವ ಪ್ರಯತ್ನಗಳು ಸೂಕ್ತವಾದುವಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಮೂಲಕ ಗ್ರಾಮೀಣ ಜನರ ಬದುಕನ್ನು ಸಮೃದ್ಧಗೊಳಿಸಿದ್ದಾರೆ. ಇಂತಹ ಪವಿತ್ರ ಕ್ಷೇತ್ರದ ಪರಿಸರದಲ್ಲಿ ನಡೆದ ಕೆಲವು ಅಸಹಜ ಸಾವಿನ ಪ್ರಕರಣಗಳು ಗಂಭೀರವಾದುವೇ ಆಗಿರಬಹುದು. ಆದರೆ, ಇಂತಹ ಪ್ರಕರಣಗಳನ್ನು ಶ್ರೀಕ್ಷೇತ್ರದೊಂದಿಗೆ ತಳಕು ಹಾಕಲು ಪ್ರಯತ್ನಿಸುವುದು ದುಡುಕಿನ ನಿರ್ಧಾರವಾಗುತ್ತದೆ. ಕ್ಷೇತ್ರದ ಬಗ್ಗೆ ಭಕ್ತಿ ಮತ್ತು ಶ್ರದ್ಧೆ ಹೊಂದಿರುವ ಸದ್ಭಕ್ತರು ಶಾಂತಿ ಮತ್ತು ಸಂಯಮದಿಂದ ಇರಬೇಕಾದುದು ಅಗತ್ಯ ಎಂದು ತಿಳಿಸಿದ್ದಾರೆ.

ಹಂದಿ ಮಾದರಿಗಳ ಪರೀಕ್ಷೆ | 57 ಹಂದಿಗಳ ಹತ್ಯೆಗೆ ಪಶು ಇಲಾಖೆ ನಿರ್ಧಾರ

ಚಿಕ್ಕಬಳ್ಳಾಪುರ: ಆಫ್ರಿಕನ್ ಹಂದಿ ಜ್ವರ

ಚಿಕ್ಕಬಳ್ಳಾಪುರ: ಜಿಲ್ಲೆಯ ಚಿಂತಾಮಣಿ ತಾಲೂಕಿನ ಹೆಬ್ಬರಿ ಗ್ರಾಮದಲ್ಲಿ ಆಫ್ರಿಕನ್ ಹಂದಿ ಜ್ವರ ಪ್ರಕರಣ ಪತ್ತೆಯಾಗಿದೆ.

ಹೆಬ್ಬರಿ ಗ್ರಾಮದ ವೆಂಕಟರೆಡ್ಡಿ ಎಂಬುವವರ ಹಂದಿ ಫಾರಂನಲ್ಲಿ ಈ ಮಾರಕ ವೈರಸ್ ಪತ್ತೆಯಾಗಿದೆ. ಕಳೆದೊಂದು ವಾರದಿಂದ ಫಾರಂನಲ್ಲಿನ ಹಲವು ಹಂದಿಗಳು ಧಿಡೀರ್ ಅಂತ ಸಾವನ್ನಪ್ಪುತ್ತಿದ್ದು. ಇದರಿಂದ ಆತಂಕಗೊಂಡ ಮಾಲೀಕ ಪಶುಪಾಲನಾ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಬಳಿಕ ಪಶುಪಾಲನಾ ಇಲಾಖೆ ಅಧಿಕಾರಿಗಳು ಸತ್ತ ಹಂದಿಗಳ ಮಾದರಿಗಳನ್ನ ಲ್ಯಾಬ್‌ನಲ್ಲಿ ಪರೀಕ್ಷಿಸಿದ್ದರು. ಪರೀಕ್ಷೆ ವೇಳೆ ಹಂದಿ ಜ್ವರ ಇರೋದು ದೃಢವಾಗಿದೆ. ಹೀಗಾಗಿ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಹಾಗೂ ಪಶುಪಾಲನಾ ಇಲಾಖೆ ಹೈಅಲರ್ಟ್ ಆಗಿದ್ದು ಹಂದಿ ಜ್ವರ ಕಡಿವಾಣಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳೋಕೆ ಮುಂದಾಗಿದೆ. ಫಾರಂನಲ್ಲಿ ಉಳಿದ ಹಂದಿಗಳನ್ನು ಕೊಲ್ಲೋಕೆ ತೀರ್ಮಾನಿಸಲಾಗಿದೆ.

ಏನಿದು ಹಂದಿ ಜ್ವರ?

ಆಫ್ರಿಕನ್ ಹಂದಿ ಜ್ವರ ಎಂಬುದು ವೈರಸ್‌ನಿಂದ ಹಂದಿಗಳಲ್ಲಿ ಉಂಟಾಗುವ ಸಾಂಕ್ರಾಮಿಕ ಮತ್ತು ಮಾರಣಾಂತಿಕ ಕಾಯಿಲೆಯಾಗಿದೆ. 100% ವರೆಗೆ ಮರಣ ಪ್ರಮಾಣ ಹೊಂದಿದೆ ಎಂದು ತಜ್ಞರು ಹೇಳುತ್ತಾರೆ. ಆದ್ರೆ ಇದು ಮಾನವರಿಗೆ ಹರಡುವುದಿಲ್ಲ. ಈ ರೋಗವು ಹಂದಿ ಉದ್ಯಮದ ಮೇಲೆ ತೀವ್ರ ಪರಿಣಾಮ ಬೀರಲಿದ್ದು, ಆರ್ಥಿಕ ನಷ್ಟಕ್ಕೂ ಕಾರಣವಾಗುತ್ತದೆ.

ಬಿಹಾರದಲ್ಲಿ ನಡೆಯುತ್ತಿರುವ 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಭಾಗವಹಿಸಿ ಬೆಂಬಲಿಸಿದರು. ಸಚಿವರಾದ ಕೆಜೆ ಜಾರ್ಜ್, ಜಿ ಪರಮೇಶ್ವರ, ಜಮೀರ್ ಅಹ್ಮದ್, ಸತೀಶ್ ಜಾರಕಿಹೊಳಿ, ಎಂ.ಸಿ.ಸುಧಾಕರ್, ರಾಜಕೀಯ ಕಾರ್ಯದರ್ಶಿ ನಾಸೀರ್ ಅಹ್ಮದ್, ಕಾನೂನು ಸಲಹೆಗಾರ ಪೊನ್ನಣ್ಣ, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹ್ಮದ್, ಹಿರಿಯ ನಾಯಕ ಬಿ.ಕೆ. ಹರಿಪ್ರಸಾದ್ ಹಾಗೂ ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಭಾಗವಹಿಸಿದ್ದರು.

ಸೆಪ್ಟಂಬರ್‌ನಿಂದ ಪ್ರತಿವಾರ ವಿಶೇಷ ರೈಲು ಸಂಚಾರ

ಹುಬ್ಬಳ್ಳಿ-ಜೋಧ್‌ಪುರ ನೂತನ ರೈಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ದೆಹಲಿ

ಕೇಂದ್ರ ಸಚಿವ ಸಂಪುಟದಲ್ಲಿ ಹುಬ್ಬಳ್ಳಿ-ಜೋಧ್‌ಪುರ ನಡುವೆ ವಿಶೇಷ ರೈಲಿಗೆ ಅನುಮೋದನೆ ನೀಡಿದ ಬೆನ್ನಲ್ಲೇ, ಇದೀಗ ಬುಕ್ಕಿಂಗ್ ಆರಂಭವಾಗಿದೆ. ಸದ್ಯ ವಾರಕ್ಕೊಮ್ಮೆ ಸಂಚರಿಸಲಿರುವ ಈ ರೈಲನ್ನು ಮುಂದಿನ ದಿನದಲ್ಲಿ ನಿತ್ಯ ಸಂಚರಿಸುವಂತೆ ಮಾಡಲು ಕ್ರಮವಹಿಸುವುದಾಗಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭರವಸೆ ನೀಡಿದ್ದಾರೆ.

ಹುಬ್ಬಳ್ಳಿ-ಜೋಧ್‌ಪುರ ವಿಶೇಷ ರೈಲು ಸೆಪ್ಟೆಂಬರ್‌ನಿಂದಲೇ ಸಂಚಾರ ಆರಂಭಿಸಲಿದ್ದು, ಪ್ರಸ್ತುತ ವಿಶೇಷ ರೈಲಾಗಿರುವ ಇದನ್ನು ಮುಂದಿನ ದಿನಗಳಲ್ಲಿ ನಿಯತಕಾಲಿಕವಾಗಿ ಪರಿವರ್ತನೆಗೊಳಿಸುವ ಬಗ್ಗೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭರವಸೆ ನೀಡಿದ್ದಾರೆ. ಹುಬ್ಬಳ್ಳಿ-ಜೋಧ್‌ಪುರ ನೂತನ ರೈಲು (ಸಂಖ್ಯೆ: 07359) ಹುಬ್ಬಳ್ಳಿಯಿಂದ 7:30ಕ್ಕೆ ತೆರಳಿ ಭಗತ ಕಿ ಕೋಟಿಗೆ ಬೆಳಗ್ಗೆ 5:30ಕ್ಕೆ ತಲುಪಲಿದೆ. ಸದ್ಯ ಪ್ರತಿ ಭಾನುವಾರ ಈ ರೈಲು ಸಂಚಾರವಿರಲಿದೆ. ಸೆಪ್ಟೆಂಬರ್ 28ರಿಂದ ಸಂಚಾರ ಆರಂಭಿಸಲಿದೆ ಎಂದು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಟಿಕೆಟ್ ಬುಕಿಂಗ್ ಶುರು: ನೂತನವಾಗಿ ಸಂಚಾರ ಆರಂಭವಾಗುವ ಹುಬ್ಬಳ್ಳಿ-ಜೋಧ್‌ಪುರ ರೈಲ್ವೆ ಸಂಚಾರಕ್ಕೆ ಪ್ರಯಾಣಿಕರಿಂದ ಆಗಲೇ ಟಿಕೆಟ್ ಬುಕಿಂಗ್ ಸಹ ಶುರುವಾಗಿದೆ. ರೈಲ್ವೆ ಇಲಾಖೆ ಸೆ.28, ಅ.05, ಅ.12, ಅ.19ಕ್ಕೆ ಪ್ರಯಾಣಕ್ಕೆ ಮುಂಗಡ ಟಿಕೆಟ್ ಬುಕಿಂಗ್ ಆರಂಭಿಸಿದೆ. ಹುಬ್ಬಳ್ಳಿ-ಜೋಧ್‌ಪುರ ನೇರ ರೈಲು ಸಂಚಾರಕ್ಕೆ ವಾಣಿಜ್ಯ ನಗರಿ ಹುಬ್ಬಳ್ಳಿ ಮತ್ತು ಉತ್ತರ ಕರ್ನಾಟಕ ಭಾಗದವರಿಂದ ಅನೇಕ ದಿನಗಳಿಂದಲೂ ಬಹು ಬೇಡಿಕೆಯಿತ್ತು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಸತತ ಪ್ರಯತ್ನದ ಫಲವಾಗಿ ಇದೀಗ ಸಾಕಾರಗೊಂಡಿದೆ.

> **ತಮ್ಮ ಮನವಿ, ಒತ್ತಾಸೆಗೆ ಸ್ಪಂದಿಸಿ ಉತ್ತರ ಕರ್ನಾಟಕ ಭಾಗದ ಅದರಲ್ಲೂ ವಾಣಿಜ್ಯ ನಗರಿ ಹುಬ್ಬಳ್ಳಿ ರೈಲ್ವೆ ಯೋಜನೆ-ಸೌಲಭ್ಯಗಳಿಗೆ ವಿಶೇಷ ಆಸಕ್ತಿ ತೋರಿ ಅನುಮೋದಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಧನ್ಯವಾದ.**
> **- ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಅನ್ಯ ಜಾತಿಯ ಯುವಕನೊಂದಿಗೆ ಪ್ರೀತಿ | ಕೊಲೆಗೈದು ಯುವತಿ ದೇಹ ಸುಟ್ಟುಹಾಕಿದ ಕುಟುಂಬಸ್ಥರು?

ಕಲಬುರಗಿ: ಮರ್ಯಾದಾ ಹತ್ಯೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

- ಸ್ವಯಂ ಪ್ರೇರಿತ ದೂರು ದಾಖಲಿಸಿ ಪೊಲೀಸರು ತನಿಖೆ

ಅನ್ಯ ಜಾತಿಯ ಯುವಕನೊಂದಿಗೆ ಮಗಳು ಪ್ರೀತಿಸುತ್ತಿದ್ದಾಳೆ ಎಂಬ ಕಾರಣಕ್ಕೆ ಮನೆಯವರೇ ಯುವತಿಯನ್ನು ಹತ್ಯೆ ಮಾಡಿ ದೇಹವನ್ನು ಸುಟ್ಟಿರುವ ಘಟನೆ ಕಲಬುರಗಿ ತಾಲೂಕಿನ ಮೇಳಕುಂದಾ (ಬಿ) ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ಕವಿತಾ ಕೊಳ್ಳೂರ (18) ಮೃತಪಟ್ಟ ಯುವತಿಯಾಗಿದ್ದು, ಯುವತಿಯ ತಂದೆ ಶಂಕರ ಕೊಳ್ಳೂರ ಹಾಗೂ ಸಂಬಂಧಿಗಳಾದ ಶರಣು, ದತ್ತು ಚೋಳಾ ಭರ್ಧಿ ವಿರುದ್ಧ ಫರಹತಾಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಪೊಲೀಸರ ಪ್ರಾಥಮಿಕ ಮಾಹಿತಿಯಂತೆ ಲಿಂಗಾಯತ ಸಮಾಜದ ಕವಿತಾ, ಅದೇ ಗ್ರಾಮದ ಕುರುಬ ಸಮಾಜದ ಮಾಳಪ್ಪ ಪೂಜಾರಿ ಎಂಬ ಯುವಕನನ್ನು ಪ್ರೀತಿಸುತ್ತಿದ್ದಳು. ಪಿಯುಸಿ ಓದಲು ಕಲಬುರಗಿಗೆ ಬಂದಿದ್ದ ವೇಳೆ ಇವರಿಬ್ಬರ ನಡುವೆ ಪರಿಚಯ ಬೆಳೆದಿತ್ತು.

ಪ್ರೀತಿ ವಿಚಾರ ಮನೆಯವರಿಗೆ ತಿಳಿದಾಗ ಕಾಲೇಜು ಬಿಡಿಸಿ ಮನೆಗೆ ಕರೆಸಿದ್ದರು. ಆದರೆ ಕವಿತಾ ಮದುವೆ ಮಾಡಲು ಪಟ್ಟು ಹಿಡಿದಿದ್ದಾಳೆಂದು ಪೊಲೀಸರು ತಿಳಿಸಿದ್ದಾರೆ. ಮಧ್ಯರಾತ್ರಿ ಮನೆಯವರು ಸೇರಿ ಕವಿತಾಳ ಕತ್ತು ಹಿಸುಕಿ ಕೊಲೆ ಮಾಡಿ, ನಂತರ ಕೀಟನಾಶಕ ಸುರಿದು ಆತ್ಮಹತ್ಯೆ ಮಾಡಿಕೊಂಡಂತೆ ಬಿಂಬಿಸಲು ಯತ್ನಿಸಿದ್ದು, ಬೆಳಗ್ಗೆ ಗ್ರಾಮ ಹೊರವಲಯದ ಜಮೀನಿಗೆ ದೇಹವನ್ನು ಕೊಂಡೊಯ್ದು ಸುಟ್ಟಿದ್ದಾರೆಂದು ತನಿಖೆಯಿಂದ ಬೆಳಕಿಗೆ ಬಂದಿದೆ.

ಘಟನಾ ಸ್ಥಳಕ್ಕೆ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಪಿಐ ಮಂಜುನಾಥ ಇಕ್ಕಳಕಿ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮದಲ್ಲಿ ಪೊಲೀಸ್ ನಿಗಾ: ಮೇಳಕುಂದಾ (ಬಿ) ಗ್ರಾಮದಲ್ಲಿ ಇತಿಹಾಸದಲ್ಲೇ ಸಮಾಜಗಳ ನಡುವೆ ಒಮ್ಮೊಮ್ಮೆ ಉದ್ವಿಗ್ನತೆ ನಿರ್ಮಾಣವಾಗಿರುವುದರಿಂದ, ಈ ಘಟನೆಯ ನಂತರ ಮುನ್ನೆಚ್ಚರಿಕೆ ಕ್ರಮವಾಗಿ ಹೆಚ್ಚುವರಿ ಪೊಲೀಸ್ ಪಡೆ ನಿಯೋಜಿಸಲಾಗಿದೆ. ಗ್ರಾಮದ ಪರಿಸ್ಥಿತಿಯ ಮೇಲೆ ನಿಗಾ ಇಡಲಾಗಿದೆ.

ಆತ್ಮಹತ್ಯೆಯ ನಾಟಕ

ಕುಟುಂಬಸ್ಥರು ಯುವತಿಯ ದೇಹದ ಮೇಲೆ ಕ್ರಿಮಿನಾಶಕ ಸುರಿದು, ಅವಳು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂಬಂತೆ ಊರಿನವರಿಗೆ ನಂಬಿಸಲು ಪ್ರಯತ್ನ ಮಾಡಿದ್ದಾರೆ. ಬೆಳಗ್ಗೆ ಸುಟ್ಟು ಹಾಕಿದ ದೇಹವನ್ನು ಪೊಲೀಸರು ಪತ್ತೆಹಚ್ಚಿ ಮೂಳೆ ಸೇರಿ ಅವಶೇಷಗಳನ್ನು ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿದೆ.

> **ಜಾತಿಯ ಅಸಹನೆ ಕಾರಣಕ್ಕೆ ತಂದೆಯೇ ಮಗಳ ಮೇಲೆ ಕೈ ಎತ್ತಿ ಕೊಲೆ ಮಾಡಿದ್ದಾರೆ. ಆತ್ಮಹತ್ಯೆಯಂತೆ ತೋರಿಸಲು ಯತ್ನಿಸಿದ್ದು ಸ್ಪಷ್ಟವಾಗಿದೆ. ಒಬ್ಬ ಆರೋಪಿಯನ್ನು ಬಂಧಿಸಿದ್ದು, ಇನ್ನು ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಯುತ್ತಿದೆ.**
> **-ಡಾ. ಶರಣಪ್ಪ ಎಸ್.ಡಿ.,** ನಗರ ಪೊಲೀಸ್ ಆಯುಕ್ತ

ಹಳೆ ಹೇಳಿಕೆ ಬಗ್ಗೆ ಬಾನು ಸ್ಪಷ್ಟನೆ ಕೊಡಲಿ: ಸಂಸದ ಯದುವೀರ್

ಇಲ್ಲದಿದ್ದರೆ ದಸರಾ ಉದ್ಘಾಟಿಸುವುದಕ್ಕೆ ನಮ್ಮ ವಿರೋಧ

ಮೈಸೂರು: ಬಾನು ಮುಷ್ತಾಕ್ ಅವರು ಕನ್ನಡಾಂಬೆಯ ಕುರಿತು 2023ರಲ್ಲಿ ನೀಡಿದ ಹೇಳಿಕೆಗಳ ಬಗ್ಗೆ ಸ್ಪಷ್ಟನೆ ಕೊಟ್ಟು ವೇದಿಕೆಗೆ ಬರಬೇಕು. ಇಲ್ಲದಿದ್ದರೆ ಅವರು ದಸರಾ ಉದ್ಘಾಟಿಸುವುದಕ್ಕೆ ನಮ್ಮ ವಿರೋಧವಿದೆ ಎಂದು ಸಂಸದ ಹಾಗೂ ರಾಜವಂಶಸ್ಥ ಯದುವೀರ್ ಒಡೆಯರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ದಸರಾ ಉದ್ಘಾಟಕರಾಗಿ ಆಯ್ಕೆಯಾಗಿರುವ ಬಾನು ಮುಷ್ತಾಕ್ 2023ರಲ್ಲಿ ಭುವನೇಶ್ವರಿ ವೇದಿಕೆಯಲ್ಲಿ ಆಡಿದ ಮಾತಿಗೆ ಸ್ಪಷ್ಟನೆ ಕೊಡಬೇಕು. ಇಲ್ಲಿಯವರೆಗೆ ಅವರು ಸ್ಪಷ್ಟನೆ ನೀಡಿಲ್ಲ. ಅದಕ್ಕಾಗಿ ನಾವು ಆಗ್ರಹಿಸಿದ್ದೆವು. ನಮಗಿನ್ನೂ ಸ್ಪಷ್ಟನೆ ಸಿಕ್ಕಿಲ್ಲ ಎಂದರು.

ಅವರು ಇಲ್ಲಿನ ಭಾವನೆ ಹಾಗೂ ಧಾರ್ಮಿಕತೆ ವಿಚಾರದ ಬಗ್ಗೆ ಸ್ಪಷ್ಟನೆ ನೀಡಿದರೆ ಉದ್ಘಾಟನೆಗೆ ನಮ್ಮ ಅಭ್ಯಂತರವಿಲ್ಲ. ಮುಖ್ಯವಾಗಿ, ನಮ್ಮ ಧಾರ್ಮಿಕ ಭಾವನೆಯ ಬಗ್ಗೆ ಮತ್ತು ಆಚರಣೆಗಳ ಬಗ್ಗೆ ಸ್ಪಷ್ಟನೆ ಕೊಟ್ಟು ಬರಬೇಕು ಎಂದು ತಿಳಿಸಿದರು.

ನೀವು ಅವರ ಆಯ್ಕೆಯನ್ನು ಸ್ವಾಗತ ಮಾಡಿದ್ದೀರಿ ಎಂದು ಸುದ್ದಿಗಾರರು ಕೇಳಿದ್ದಕ್ಕೆ, ಸರಕಾರ ಆಯ್ಕೆ ಮಾಡಿದ ನಂತರ ನಾವು, ಆಯ್ಕೆ ಮಾಡುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಹೇಳಿದ್ದೆವು. ಆದರೆ 2023ರಲ್ಲಿ ಭುವನೇಶ್ವರಿ ವೇದಿಕೆಯಲ್ಲಿ ಅವರು ಆಡಿರುವ ಮಾತು ಬಹಿರಂಗವಾದ್ದರಿಂದ ಸ್ಪಷ್ಟನೆ ಕೇಳಿದ್ದೇವೆ. ಅಲ್ಲದೇ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಯಲ್ಲಿ ಯಾವುದೇ ಹಿಂದೂಗಳ ಭಾವನೆಗೆ ಧಕ್ಕೆಯಾಗದಂತೆ ಅವರ ನಡೆ ಇರಲಿದೆಯೇ ಎಂದು ನಾವು ಪ್ರಶ್ನೆ ಮಾಡಿದ್ದೇವೆ ಎಂದರು.

> **ಭಾರತದ ಶಕ್ತಿಪೀಠಗಳಲ್ಲಿ ತಾಯಿ ಚಾಮುಂಡೇಶ್ವರಿ ಕ್ಷೇತ್ರವೂ ಒಂದು. ಚಾಮುಂಡಿ ಬೆಟ್ಟ ಹಿಂದೂಗಳ ಧಾರ್ಮಿಕ ಕ್ಷೇತ್ರವಾಗಿದೆ. ಇಂತಹ ಬೇಜವಾಬ್ದಾರಿಯುತ ಹೇಳಿಕೆಯನ್ನು ಏಕೆ ನೀಡಿದ್ದಾರೆ ಎಂದು ಅವರೇ ಸ್ಪಷ್ಟನೆ ನೀಡಬೇಕು.**
> **-ಯದುವೀರ್,** ಸಂಸದ

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ

ದಸರಾ ಉದ್ಘಾಟನೆ: ಸರಕಾರಕ್ಕೆ ಬಿಜೆಪಿಯ ಪಂಚ ಪ್ರಶ್ನೆ

ಬೆಂಗಳೂರು: ನಾಡಹಬ್ಬ ದಸರಾ ಸಂಭ್ರಮಕ್ಕೆ ವಿವಾದದ ಮಸಿ ಬಳಿದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ಬಿಜೆಪಿ ಐದು ಪ್ರಶ್ನೆಗಳನ್ನು ಹಾಕಿ ಉತ್ತರಿಸುವಂತೆ ಆಗ್ರಹಿಸಿದೆ.

ಈ ಸಂಬಂಧ ಪ್ರತಿಪಕ್ಷ ನಾಯಕ ಆರ್. ಅಶೋಕ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ ಸರಕಾರಕ್ಕೆ ಈ ಕೆಳಕಂಡ ಪ್ರಶ್ನೆಗಳನ್ನು ಕೇಳಿದೆ. ಬಾನು ಮುಷ್ತಾಕ್ ಅವರ ಕೈಯಲ್ಲಿ ನಾಡಹಬ್ಬ ದಸರಾ ಉದ್ಘಾಟನೆ ಮಾಡಿಸಬೇಕು ಎನ್ನುವ ಉಪಾಯ (ಐಡಿಯಾ) ಯಾರದ್ದು? ಇದು ಮುಖ್ಯಮಂತ್ರಿಗಳ ಐಡಿಯಾನೊ, ಅಥವಾ ಅವರ ಸಂಪುಟ ಸಹೋದ್ಯೋಗಿಗಳ ಐಡಿಯಾನೋ? ಅಥವಾ ಇದು ಕೂಡ ಧರ್ಮಸ್ಥಳದ ಹೆಸರಿಗೆ ಮಸಿ ಬಳಿಯಲು ಕುಮ್ಮಕ್ಕು ಕೊಟ್ಟಿದ್ದ ಸೋ ಕಾಲ್ಡ್ ಬುದ್ಧಿಜೀವಿ, ಎಡಪಂಥೀಯ ನಗರ ನಕ್ಸಲರ ಐಡಿಯಾನೊ ಎಂದು ಪ್ರಶ್ನಿಸಿದ್ದಾರೆ.

ವಿವಾದಕ್ಕೆ ಎಡೆಮಾಡಿಕೊಡುವ ವ್ಯಕ್ತಿ ಆಯ್ಕೆ ಯಾಕೆ?

ನಮ್ಮ ನೆಲ, ಜಲ, ಸಂಸ್ಕೃತಿಯ ಬಗ್ಗೆ ಗೌರವ, ಸಂವೇದನೆಯೇ ಇಲ್ಲದ ಒಬ್ಬ ವ್ಯಕ್ತಿಯಿಂದ ನಾಡಹಬ್ಬ ಉದ್ಘಾಟನೆ ಮಾಡಿಸುವುದು ಎಷ್ಟು ಸರಿ? ಇದು ತಾಯಿ ಚಾಮುಂಡೇಶ್ವರಿಯ ಅಸಂಖ್ಯಾತ ಆಸ್ತಿಕ ಭಕ್ತರಿಗೆ, ಚಾಮುಂಡಿ ಬೆಟ್ಟವನ್ನು ಪವಿತ್ರ ಶಕ್ತಿಪೀಠ ಎಂದು ನಂಬಿರುವ ಹಿಂದುಗಳಿಗೆ ಮಾಡುವ ಅಪಮಾನ ಅಲ್ಲವೇ? ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡಿದರೆ ಅದು ಸಹಜವಾಗಿ ವಿವಾದವಾಗುತ್ತದೆ. ಅದಕ್ಕೆ ವಿರೋಧ ವ್ಯಕ್ತವಾಗುತ್ತದೆ ಎಂಬ ವಿಷಯ ಸರಕಾರಕ್ಕೆ ತಿಳಿಯದೆ ಏನೂ ಇಲ್ಲ. ಆದರೂ ಹಠಕ್ಕೆ ಬಿದ್ದವರಂತೆ, ಉದ್ದೇಶ ಪೂರ್ವಕವಾಗಿ ವಿವಾದಕ್ಕೆ ಎಡೆಮಾಡಿ ಕೊಡುವ ವ್ಯಕ್ತಿಯನ್ನೇ ಆಯ್ಕೆ ಮಾಡಿದ್ದು ಯಾಕೆ? ಇದರಿಂದ ಸರಕಾರ ಮತ್ತು ಕಾಂಗ್ರೆಸ್ ಪಕ್ಷ ನಾಡಿನ ಜನತೆಗೆ, ಅದರಲ್ಲೂ ವಿಶೇಷವಾಗಿ ಹಿಂದೂಗಳಿಗೆ ಏನು ಸಂದೇಶ ಕೊಡಲು ಹೊರಟಿದೆ? ಧರ್ಮಸ್ಥಳ, ಚಾಮುಂಡಿ ಬೆಟ್ಟ ಇವೆಲ್ಲವೂ ಒಂದಲ್ಲ ಒಂದು ದಿನ ಕಾಂಗ್ರೆಸ್ ಪಕ್ಷದ ತುಷ್ಟೀಕರಣ ರಾಜಕಾರಣದ ಮುಂದೆ ತಲೆ ಬಾಗಲೇಬೇಕು ಬೇಕು ಎನ್ನುವ ಎಚ್ಚರಿಕೆಯೋ? ಅಥವಾ ನಾವು ಎಷ್ಟೇ ಬಹಿರಂಗವಾಗಿ, ಹಿಂದೂಗಳನ್ನು ಅಣಕಿಸುವಂತೆ ತುಷ್ಟೀಕರಣ ರಾಜಕಾರಣ ಮಾಡಿದರೂ, ವೋಟ್ ಬ್ಯಾಂಕ್ ರಾಜಕಾರಣದಿಂದ ಗೆದ್ದು ಬರುತ್ತೇವೆ ಎನ್ನುವ ಅಹಂಕಾರದ ಧೋರಣೆಯೋ ಎಂದು ಕುಟುಕಿದ್ದಾರೆ.

ಅಲ್ಲದೆ, ಬಾನು ಮುಷ್ತಾಕ್ ಅವರನ್ನು ಮುಂದಿನ ವರ್ಷದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಿದ್ದರೆ ಅದಕ್ಕೊಂದು ಅರ್ಥ ಇರುತ್ತಿತ್ತು. ಅದು ಅವರಿಗೂ ಗೌರವ ತರುತ್ತಿತ್ತು. ಆದರೆ ಬಾನು ಮುಷ್ತಾಕ್ ಅವರಿಗೂ ಹಿಂದೂಗಳ ಆರಾಧ್ಯ ದೇವತೆ ತಾಯಿ ದುರ್ಗೆಯ ನವರೂಪಗಳನ್ನು ಪೂಜಿಸಿ ಆರಾಧಿಸುವ ದಸರಾ, ನವರಾತ್ರಿಗೂ ಏನು ಸಂಬಂಧ?, ನಮ್ಮ ತಾಯ್ನೆಲಕ್ಕೆ, ನಮ್ಮ ಜೀವನಾಡಿಯಾಗಿರುವ ನದಿಗಳಿಗೆ ಹೆಣ್ಣಿನ ಹೆಸರಿಟ್ಟು ತಾಯಿ ಸ್ಥಾನದಲ್ಲಿ ಕೂರಿಸುವುದು ನಮ್ಮ ಭಾರತೀಯ ಸಂಸ್ಕೃತಿ. ಅದಕ್ಕಾಗಿಯೇ ರಾಷ್ಟ್ರಕವಿ ಕುವೆಂಪು ಅವರು ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ಎಂದು ನಮ್ಮ ನಾಡಗೀತೆಯಲ್ಲಿ ಹೇಳಿರುವುದು. ಅದಕ್ಕಾಗಿಯೇ ನಾವು ಕನ್ನಡ ನಾಡಿನ ಜೀವ ನದಿ ಈ ಕಾವೇರಿ ಎಂದು ಹಾಡುವುದು. ಆದರೆ, ಕನ್ನಡಾಂಬೆಯನ್ನು ಭುವನೇಶ್ವರಿಯ ಸ್ಥಾನದಲ್ಲಿ ಕೂರಿಸಿ ಕನ್ನಡಮ್ಮನನ್ನು ದೌರ್ಜನ್ಯ ಮಾಡುತ್ತಿದ್ದೀರಿ ಎನ್ನುವ ಅಭಿಪ್ರಾಯ, ಮನಸ್ಥಿತಿ ಇರುವ ವ್ಯಕ್ತಿಯೊಬ್ಬರಿಂದ ದಸರಾ ಉದ್ಘಾಟನೆ ಮಾಡಿಸಿದರೆ, ಅವರು ನಾಳೆ ತಾಯಿ ಚಾಮುಂಡೇಶ್ವರಿಯನ್ನು ಆನೆಯ ಅಂಬಾರಿ ಮೇಲೆ ಕೂರಿಸುವುದಕ್ಕೂ ಆಕ್ಷೇಪ ವ್ಯಕ್ತಪಡಿಸಿ ಕ್ಯಾತೆ ತೆಗೆಯುವುದಿಲ್ಲ ಎನ್ನುವುದಕ್ಕೆ ಏನು ಗ್ಯಾರೆಂಟಿ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ಪ್ರಶ್ನೆ?

- ಬಾನು ಮುಷ್ತಾಕ್ ಕೈಯಲ್ಲಿ ದಸರಾ ಉದ್ಘಾಟನೆ ಯಾರ ಉಪಾಯ?
- ಮುಖ್ಯಮಂತ್ರಿಗಳ ಐಡಿಯಾನೊ, ಅವರ ಸಂಪುಟ ಸಹೋದ್ಯೋಗಿಗಳದ್ದೋ?
- ಸೋ ಕಾಲ್ಡ್ ಬುದ್ಧಿಜೀವಿಗಳದ್ದೋ ಎಡಪಂಥೀಯ ನಗರ ನಕ್ಸಲರದ್ದೋ?
- ಚಾಮುಂಡೇಶ್ವರಿ ಮೆರವಣಿಗೆಗೆ ಆಕ್ಷೇಪ ವ್ಯಕ್ತಪಡಿಸಿ ಕ್ಯಾತೆ ತೆಗೆಯುವುದಿಲ್ಲ ಎನ್ನುವುದಕ್ಕೆ ಏನು ಗ್ಯಾರೆಂಟಿ?

ವಿಶ್ವವಾಣಿ

ಸಂಪಾದಕೀಯ

ಸಂಚುಕೋರರ ದಮನವಾಗಲಿ

ಪಾಕಿಸ್ತಾನ ಮೂಲದ 'ಜೈಶ್-ಎ-ಮೊಹಮ್ಮದ್' (ಜೆಇಎಂ) ಉಗ್ರ ಸಂಘಟನೆಗೆ ಸೇರಿದ ಮೂವರು ಉಗ್ರರು ನೇಪಾಳ ಗಡಿಯ ಮೂಲಕ ಭಾರತದೊಳಗೆ ತೂರಿಕೊಂಡಿದ್ದು, ಬಿಹಾರದಲ್ಲಿ ಸನ್ನಿಹಿತವಾಗಿರುವ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ಅವರು ಸಂಚುಹೂಡಿದ್ದಾರೆ ಎಂಬ ಆತಂಕಕಾರಿ ಸಂಗತಿ ಹೊರ ಬಿದ್ದಿದೆ. ಈ ಮಾಹಿತಿಯ ಹಿನ್ನೆಲೆಯಲ್ಲಿ ಬಿಹಾರ ರಾಜ್ಯದಾದ್ಯಂತ ಭದ್ರತೆಯನ್ನು ಹೆಚ್ಚಿಸಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದು ಲಭ್ಯಮಾಹಿತಿ. ವಿವಿಧ ಜಾತಿ, ಮತ, ಪಂಗಡಗಳಿಗೆ ಹಾಗೂ ರಾಜಕೀಯ ಸಿದ್ಧಾಂತಗಳಿಗೆ ನೆಲೆಯಾಗಿರುವ ಭಾರತದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳು, ಉತ್ಸವಗಳು ಅಥವಾ ಚುನಾವಣೆಗಳು ಇಂಥ ಸಂಚುಕೋರರಿಗೆ ಸುಲಭದ ತುತ್ತಾಗಿರುತ್ತವೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಇಂಥ ಸಂದರ್ಭದಲ್ಲಿ ಜನದಟ್ಟಣೆಯ ಕಾರಣದಿಂದಲೋ ಅಥವಾ ವ್ಯವಸ್ಥೆಯ ಸಣ್ಣಪುಟ್ಟ ಲೋಪದಿಂದಲೋ ಏನಾದರೂ ಅವಘಡಗಳು ಸಂಭವಿಸಿದರೆ, ಸದರಿ ಸಂಚುಕೋರರು ಅದನ್ನು ತಮ್ಮ ಗುಪ್ತ ಹಿತಾಸಕ್ತಿಯ ನೆರವೇರಿಕೆಗೆ ಬಳಸಿಕೊಂಡು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಾರೆ. ಚುನಾವಣೆಗಳ ಸಂದರ್ಭದಲ್ಲಿ ಅನಪೇಕ್ಷಿತ ಗಾಳಿಸುದ್ದಿಗಳು ಹಬ್ಬಿ, ರಾಜಕೀಯ ಬಣಗಳ ನಡುವಿನ ಸಂಘರ್ಷದ ಬೆಂಕಿಯು ಮತ್ತಷ್ಟು ಪ್ರಜ್ವಲವಾಗಿ ಉರಿಯುವುದಕ್ಕೂ ಇಂಥ ಕುತ್ಸಿತ ಶಕ್ತಿಗಳು ಎಣ್ಣೆಯನ್ನು ಸುರಿಯುತ್ತವೆ ಎಂಬುದು ಗೊತ್ತಿರುವಂಥದ್ದೇ. ಅದರಲ್ಲೂ ನಿರ್ದಿಷ್ಟವಾಗಿ, ದೇಶ ವಿಭಜನೆಯಾದಾಗಿನಿಂದಲೂ ಭಾರತದ ಮೇಲೆ ಕಿಡಿಕಾರುತ್ತಲೇ ಬಂದಿರುವ ಮಗ್ಗುಲುಮುಳ್ಳು ದೇಶ ಪಾಕಿಸ್ತಾನವು ಇಂಥ ಸಂದರ್ಭಕ್ಕಾಗಿಯೇ ಕಾಯುತ್ತಿರುತ್ತದೆ. ಅಲ್ಲಿನ ಜೆಇಎಂ ಉಗ್ರ ಸಂಘಟನೆಯ ಮೂವರು ಉಗ್ರರು ತಮ್ಮ ಗುರಿಸಾಧನೆಗೆಂದು ಈಗ ಬಿಹಾರದ ಚುನಾವಣೆಯ ಕಡೆಗೆ ವಕ್ರದೃಷ್ಟಿ ಬೀರಿರುವುದು ಇದಕ್ಕೊಂದು ಸಾಕ್ಷಿ. ಒಟ್ಟಿನಲ್ಲಿ, ಕಾರ್ಗಿಲ್ ಯುದ್ಧದಂಥ ಹಣಾಹಣಿ, 'ಸರ್ಜಿಕಲ್ ಸ್ಟ್ರೈಕ್' ಮತ್ತು 'ಆಪರೇಷನ್ ಸಿಂದೂರ'ದಂಥ ಕಾರ್ಯಾಚರಣೆ ನಡೆದು ಎಷ್ಟೇ ಬರೆ ಹಾಕಿಸಿಕೊಂಡಿದ್ದರೂ ಪಾಕಿಸ್ತಾನ ಬುದ್ಧಿ ಕಲಿಯುವುದಿಲ್ಲ ಎಂಬುದಂತೂ ಖರೆ!

ಸೊಂಪಾದಕೀಯ

ಗಂಡನಿಗಿಲ್ಲ ಪಿಂಚಣಿ

ನಮ್ಮ ಸಮಾಜದಲ್ಲಿ ಆಗಾಗ ಕೇಳಿಬರುವ, ಅದರಲ್ಲೂ ಮಹಿಳೆಯರ ವಿಷಯ ಬಂದಾಗೆಲ್ಲ ತೇಲಿಬರುವ ಪದಪುಂಜ ಅಂದ್ರೆ, 'ಇದು ಪುರುಷ ಪ್ರಧಾನ ಸಮಾಜ' ಅನ್ನೋದು. ಆದರೆ ನಿಜವಾಗಿಯೂ ಸಮಾಜದಲ್ಲಿನ ಕೆಲವು ಕಟ್ಟಳೆ, ಕಾನೂನು ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ನಿಜವಾದ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜತೆಗೆ ಆರ್ಥಿಕ ಸಂಕಷ್ಟ ಕೂಡಾ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಅಲ್ಲೂ ಗಂಡು ಶೋಷಿತನೇ. ಇದೆಲ್ಲಾ ಸಾಲದು ಎಂಬಂತೆ ಸರಕಾರ ಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆ ಯರಿಗೇ ಆದ್ಯತೆ. ನಮ್ಮ ಕಾಂಗ್ರೆಸ್ ಸರಕಾರ ವಂತೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಗೃಹಲಕ್ಷ್ಮೀ ಯೋಜನೆ ಅಡಿಯಲ್ಲಿ ಹಣ ಎನ್ನುತ್ತಾ ಗಂಡಸರನ್ನು ಮರೆತೇಬಿಟ್ಟಿದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು

ಕಡೆಗಣಿಸಲಾಗುತ್ತಿದೆ. ಗಂಡನಿಗೆ ಪಿಂಚಣಿ ಬರುತ್ತಿದ್ದು ಆತ ನಿಧನ ಹೊಂದಿದರೆ ಆ ಹಣ ಹೆಂಡತಿಗೆ ಸೇರುತ್ತದೆ. ಹಾಗೆಯೇ, ಹೆಂಡತಿಗೆ ಪಿಂಚಣಿ ಹಣ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋದರ ಬದಲು ಅದನ್ನು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಅಲ್ಲೂ ಗಂಡು ಮಕ್ಕಳಿಗೆ ಸಿಗುತ್ತೋ ಇಲ್ವೋ ಗೊತ್ತಿಲ್ಲ. ಅಂತೂ ಪಾಪ ಇಲ್ಲೂ ಪಾಪಿ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ. ಇದನ್ನೆಲ್ಲಾ ನೋಡಿದ ಮೇಲೆ 'ಈ ದೇಶ ಗಂಡಸರಿಗಲ್ಲ ಬಿಡಿ' ಅನ್ನೋ 'ಎದ್ದೇಳು ಮಂಜುನಾಥ' ಚಿತ್ರದ ನಾಯಕನ ಶೈಲಿಯಲ್ಲಿ ಗಂಡಸರು ನಿಟ್ಟುಸಿರು ಬಿಡುತ್ತಿದ್ದಾರೆ. ಒಟ್ಟಿನಲ್ಲಿ ದುಡಿದು, ಕಡಿದು ಗುಡ್ಡೆ ಹಾಕಿ ಸಂಸಾರವನ್ನು ಸಾಕೋ ಜವಾಬ್ದಾರಿ ಮಾತ್ರ ಪುರುಷನ ಪಾಲಿಗೆ. ಆದರೆ ಸವಲತ್ತು ಮತ್ತು ಸೌಕರ್ಯಗಳ ವಿಷಯದಲ್ಲಿ ಮಾತ್ರ ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಭೈರಪ್ಪನವರ ಸ್ನೇಹಿತರು

ಶತಾವಧಾನಿ ಡಾ.ಆರ್.ಗಣೇಶ್ ಅವರು ಒಂಬತ್ತು ವ್ಯಕ್ತಿಚಿತ್ರಗಳನ್ನು ಒಳಗೊಂಡ 'ಪಂಕ್ತಿಪಾವನರು' ಎಂಬ ಸೊಗಸಾದ ಪುಸ್ತಕವನ್ನು ಬರೆದಿದ್ದಾರೆ. ಇದು ವ್ಯಕ್ತಿಚಿತ್ರ ಪ್ರಕಾರಕ್ಕೆ ಶ್ರೇಷ್ಠತೆಯನ್ನು ನೀಡಬಹುದಾದ ಕೃತಿ ಎನ್ನುವುದರಲ್ಲಿ ಉತ್ಪ್ರೇಕ್ಷೆ ಇಲ್ಲ. ಒಬ್ಬ ವ್ಯಕ್ತಿಯನ್ನು ಕಟ್ಟಿಕೊಡುವುದು ಎಷ್ಟು ಗಂಭೀರ ಮತ್ತು ಜವಾಬ್ದಾರಿಯುತ ಕೆಲಸ ಎಂಬುದು ಈ ಕೃತಿಯನ್ನು ಓದಿದವರಿಗೆ ಅನಿಸದಿರದು. ಈ ಹೊಣೆಯನ್ನರಿತು ಶತಾವಧಾನಿಗಳು ಈ ಕೃತಿಯನ್ನು ಬರೆದಿರುವುದು ಗಮನಾರ್ಹ. ಕನ್ನಡದ ಪ್ರಸಿದ್ಧ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪನವರ ಬಗ್ಗೆ ಬರೆದಿರುವ ಅಧ್ಯಾಯದಲ್ಲಿ ಶತಾವಧಾನಿಗಳು ಒಂದು ಸಣ್ಣ ಪ್ರಸಂಗವನ್ನು ಪ್ರಸ್ತಾಪಿಸಿದ್ದಾರೆ. ಒಮ್ಮೆ ಭೈರಪ್ಪನವರ ಕಾದಂಬರಿಗಳ ಕುರಿತು ವಿಚಾರಗೋಷ್ಠಿಯನ್ನು ಆಯೋಜಿಸ ಲಾಗಿತ್ತು. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದ ಭೈರಪ್ಪನವರನ್ನು ರೈಲು ನಿಲ್ದಾಣದಲ್ಲಿ ಸ್ವಾಗತಿಸಿ ಕರೆತರುವ ಜವಾಬ್ದಾರಿ ಡಾ.ಗಣೇಶ್ ಅವರದ್ದಾಗಿತ್ತು. ಭೈರಪ್ಪನವರು ಅದನ್ನು ಅಪೇಕ್ಷಿಸಿರಲಿಲ್ಲ. ''ನಾನು ನನ್ನ ಸ್ನೇಹಿತನ ಮನೆಯಲ್ಲಿ ಉಳಿದುಕೊಳ್ತೀನಿ. ಅವರೇ ನನ್ನನ್ನು ನಿಲ್ದಾಣದಿಂದ ತಮ್ಮ ಮನೆಗೆ ಕರೆದುಕೊಂಡು ಹೋಗ್ತಾರೆ. ಕಾರ್ಯಕ್ರಮದ ದಿನ ಅವರು ಕರೆದುಕೊಂಡು ಬರುತ್ತಾರೆ ಮತ್ತು ರೈಲನ್ನು ಹತ್ತಿಸುವ ಹೊಣೆಯನ್ನೂ ಹೊತ್ತಿದ್ದಾರೆ. ನೀವು ಈ ವಿಷಯದಲ್ಲಿ ತಲೆ ಕೆಡಿಸಿಕೊಳ್ಳಬೇಡಿ. ಇದಕ್ಕೆಲ್ಲ ಸಮಯ ಹಾಳು ಮಾಡದೇ ನಿಮ್ಮ ಓದು-ಬರಹ ನೋಡಿಕೊಳ್ಳಿ'' ಎಂದು ಭೈರಪ್ಪನವರು ಶತಾವಧಾನಿಗಳಿಗೆ ಹೇಳಿದರು. ಆದರೆ ಸಂಘಟಕರ ಹೊಣೆಗಾರಿಕೆಯನ್ನು ಅರಿತ ಡಾ. ಗಣೇಶ್, ರೈಲು ನಿಲ್ದಾಣಕ್ಕೆ ಹೋದರು. ಮೈಸೂರಿನ ರೈಲು ಬರಲು ಇನ್ನೂ ಸಮಯವಿತ್ತು. ಆಗ ಅಲ್ಲಿಗೆ ಬಂದ ಭೈರಪ್ಪನವರ ಸ್ನೇಹಿತರು, ಗಣೇಶರನ್ನು ಗುರುತಿಸಿ ಮಾತಾಡಿಸಿದರು. ಹಾಗೆ ಅದೂ- ಇದೂ ಮಾತಾಡುತ್ತಾ ಗಣೇಶ್, ''ನಿಮಗೆ ಭೈರಪ್ಪನವರ ಪರಿಚಯ ಎಷ್ಟು ಕಾಲದಿಂದ? ಅವರ ಎಷ್ಟು ಕಾದಂಬರಿಗಳನ್ನು ಓದಿದ್ದೀರಿ?'' ಎಂದು ಕೇಳಿದರು. ಅದಕ್ಕೆ ಭೈರಪ್ಪನವರ ಸ್ನೇಹಿತರು, ''ಸುಮಾರು ಇಪ್ಪತ್ತೈದು ವರ್ಷಗಳಿಂದ ಅವರು ನನ್ನ ಗೆಳೆಯರು. ಆದರೆ ನಾನು ಅವರ ಒಂದು ಕಾದಂಬರಿಯನ್ನೂ ಓದಿಲ್ಲ'' ಎಂದರು. ಅದನ್ನು ಕೇಳಿ ಗಣೇಶ್ ಅವರಿಗೆ ಅತೀವ ಆಶ್ಚರ್ಯವಾಯಿತು. ಅಷ್ಟರಲ್ಲಿ ರೈಲು ಬಂದಿತು. ಭೈರಪ್ಪನವರೂ ಬಂದರು. ಅವರ ಸ್ನೇಹಿತರು ತಮ್ಮ ವಾಹನ ತರಲೆಂದು ಹೊರಟರು. ಆಗ ಗಣೇಶ್ ಅವರು ಭೈರಪ್ಪನವರ ಜತೆ ಮಾತಾಡುತ್ತ, ''ಎಸ್ಸಾರ್, ನಿಮ್ಮ ಇಷ್ಟು ದೀರ್ಘಕಾಲದ ಸ್ನೇಹಿತರು ನಿಮ್ಮ ಒಂದು ಕಾದಂಬರಿಯನ್ನೂ ಓದಿಲ್ಲವಂತೆ! ಇದು ನನಗೆ ತುಂಬಾ ಆಶ್ಚರ್ಯ ತಂದಿತು. ಹೀಗಿದ್ದರೂ ಅವರೊಂದಿಗೆ ನಿಮ್ಮ ಸ್ನೇಹ ಹೇಗೆ ಸಾಧ್ಯವಾಯಿತು?'' ಎಂದು ಕೇಳಿದರು. ಭೈರಪ್ಪನವರು ಅದು ಅಷ್ಟೇನೂ ಮಹತ್ವದ ವಿಷಯ ಅಲ್ಲವೆಂಬಂತೆ ತಮ್ಮ ನಿರುದ್ವಿಗ್ನ ಶೈಲಿಯಲ್ಲಿ, ''ನನಗೆ ಸಾಹಿತಿಗಳು ಮತ್ತು ಸಾಹಿತ್ಯ ಓದುವವರು ಹೆಚ್ಚಿನ ಸಂಖ್ಯೆಯಲ್ಲಿ ಸ್ನೇಹಿತರಾಗಿಲ್ಲ. ನನ್ನ ಗೆಳೆಯರೆಲ್ಲ ಹೆಚ್ಚಾಗಿ ಸಾಹಿತ್ಯದ ಜಗತ್ತಿನ ಆಚೆ ಇರುವವರೇ. ಇಷ್ಟಕ್ಕೂ ಸಾಹಿತ್ಯ ಓದುವವರೇ ನನಗೇಕೆ ಸ್ನೇಹಿತರಾಗಬೇಕು? ಬದುಕಿನ ಬೇರೆ ಬೇರೆ ಮುಖಗಳಿಂದ ಬಂದವರು ಸ್ನೇಹಿತರಾದಷ್ಟೂ ನನ್ನ ಅನುಭವಕ್ಕೆ ಸಮೃದ್ಧಿ ಸಿಗುತ್ತದೆ. ಇಷ್ಟಕ್ಕೂ ಸಾಹಿತ್ಯ ಅಂದರೆ ಏನು? After all, it is a by-product of life!'' ಎಂದು ಹೇಳಿದರು. ಈ ಮಾತು ಗಳನ್ನು ಕೇಳಿದ ಗಣೇಶ್ ಹೀಗೆ ಬರೆಯುತ್ತಾರೆ- ''ಭಾವ-ಭಾಷೆಗಳ ಸಾಮ್ರಾಟರಾಗಿ ಹದಿನೈದಿಪ್ಪತ್ತು ರಸಘಟ್ಟಿಗಳನ್ನು ಸಾರಸ್ವತಲೋಕಕ್ಕೆ ಸಮರ್ಪಿ ಸಿದ ಈ ಸರಸ್ವತೀಮೂರ್ತಿಯ ಬಾಯಿಂದ ಎಂಥ ಮಾತು?! ಜೀವನವನ್ನು ಕುರಿತು ಇಂಥ ಗಟ್ಟಿಯಾದ ಅರಿವಿರುವುದರಿಂದಲೇ ಭೈರಪ್ಪನವರ ಕಾದಂಬರಿ ಗಳು ಜಗತ್ತಿಗೂ, ಸಾಹಿತ್ಯ ಜಗತ್ತಿಗೂ ಅಲಂಕಾರಗಳಾಗಿವೆ''.

ನಗರ ನಕ್ಸಲರ ಬುಡಕ್ಕೆ ಬಿತ್ತು ಬೆಂಕಿ!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

'ನ್ಯಾಯ ನೀತಿ ಮೂರ್ತಿವೆತ್ತ ಸತ್ಯ ದೈವವೇ, ಮಹಾಮಹಿಮ ಮಂಜುನಾಥ ನಮೋ ಎನ್ನುವೆ' ಎನ್ನುತ್ತದೆ ಒಂದು ಭಕ್ತಿಗೀತೆ. ಧರ್ಮಸ್ಥಳವೆಂದರೆ ನ್ಯಾಯ, ನೀತಿ, ಸತ್ಯದ ಪ್ರತಿಬಿಂಬ. ಮಂಜುನಾಥನ ಮೇಲೆ ಆಣೆ ಮಾಡಲು ಜನರು ಇಂದಿಗೂ ಹೆದರುತ್ತಾರೆ. ದಕ್ಷಿಣ ಭಾರತದ ಹಿಂದೂಗಳ ಪವಿತ್ರ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ನಡೆಸಿದ್ದ ಬುರುಡೆ ಗ್ಯಾಂಗ್ ದಿನದಿಂದ ದಿನಕ್ಕೆ ಬೆತ್ತಲಾಗುತ್ತಿದೆ. ಕಡಲಿಗೆ ಒಂದು ಕೊನೆ ಇದೆ, ಆದರೆ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ನಡೆಸಿದ ಬುರುಡೆ ಗ್ಯಾಂಗಿನ ಸುಳ್ಳುಗಳಿಗೆ ಮಾತ್ರ ಕೊನೆಯಿಲ್ಲದಂತಾಗಿದೆ. ಮೊದಲಿಗೆ, ಸೌಜನ್ಯ ಎಂಬಾಕೆಗೆ ಸಂಬಂಧಿಸಿದ ಹೋರಾಟವನ್ನು ಮುಂದಿಟ್ಟುಕೊಂಡು ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಪ್ರಾರಂಭಿಸಿದರು. ನಂತರ ಮುಸಲ್ಮಾನನೊಬ್ಬನ ಮೂಲಕ ಕೃತಕ ಬುದ್ಧಿಮತ್ತೆಯ (ಎಐ) ವಿಡಿಯೋ ಮಾಡಿಸಿ ಧರ್ಮಸ್ಥಳದ ವಿರುದ್ಧದ ಅಪಪ್ರಚಾರವನ್ನು ದೇಶದಾದ್ಯಂತ ತೆಗೆದುಕೊಂಡು ಹೋದರು. ನಂತರ ಸುಜಾತ ಭಟ್ ಮೂಲಕ ಮತ್ತಷ್ಟು ಸುಳ್ಳುಗಳನ್ನು ಹೇಳಿಸಿ ಹೊಸ ವರಸೆ ಆರಂಭಿಸಿದ್ದರು. ಕೇವಲ ಸಾಮಾಜಿಕ ಜಾಲತಾಣದ ಮೂಲಕ ಸುಳ್ಳುಗಳನ್ನು ಹೇಳಿ ಭಕ್ತರನ್ನು ನಂಬಿಸಿಬಿಡಬಹುದೆಂಬ ಆತ್ಮವಿಶ್ವಾಸದಲ್ಲಿತ್ತು ಬುರುಡೆ ಗ್ಯಾಂಗ್. ಆದರೆ ಬುರುಡೆ ಗ್ಯಾಂಗ್ ಮಾಡಿದ ಷಡ್ಯಂತ್ರಗಳನ್ನು, ಮುಖ್ಯವಾಹಿನಿ ಮಾಧ್ಯಮಗಳು ತನಿಖಾ ಪತ್ರಿಕೋದ್ಯಮದ ಮೂಲಕ ಒಂದೊಂದಾಗಿ ಬಯಲು ಮಾಡಲು ಪ್ರಾರಂಭಿಸಿದ ನಂತರ, ಇಡೀ ಗ್ಯಾಂಗ್ ಪತರಗುಟ್ಟಿದೆ.

ಎಸ್‌ಐಟಿ ತನಿಖಾ ಸಮಯದಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದ ಬುರುಡೆ ಗ್ಯಾಂಗಿನ ಸುಳ್ಳುಗಳಿಗೆ ಮಿತಿ ಇಲ್ಲದಂತಾಗಿತ್ತು. ಬುರುಡೆ ಗ್ಯಾಂಗ್ ಬೆತ್ತಲಾಗುತ್ತಿದ್ದಂತೆ ಅವರ ಹಿಂದಿದ್ದ ನಗರ ನಕ್ಸಲರ ಮುಖವಾಡ ಕಳಚಿತು. ತೆರೆಯ ಹಿಂದಿದ್ದವರು ಒಬ್ಬೊಬ್ಬರಾಗಿ ಮುಂದಕ್ಕೆ ಬಂದರು. ಧರ್ಮಸ್ಥಳದ ವಿರುದ್ಧ 'ಎಐ' ವಿಡಿಯೋ ಮೂಲಕ ಅಪಪ್ರಚಾರ ನಡೆಸಿದ್ದ ಸಮೀರ್‌ನ ಪರವಾಗಿ ವಕಾಲತ್ತು ವಹಿಸಿದ್ದು ಕರ್ನಾಟಕ ಕಾಂಗ್ರೆಸ್ಸಿನ ಸಾಮಾಜಿಕ ನ್ಯಾಯ ವಿಭಾಗದ ಮುಖ್ಯಸ್ಥ ದ್ವಾರಕಾನಾಥ್. ತಮ್ಮ ಜತೆ ಸಮೀರ್ ಇದ್ದನೆಂದು ಸ್ವತಃ ದ್ವಾರಕಾನಾಥ್ ಬಹಿರಂಗವಾಗಿ ಮಾಧ್ಯಮಗಳ ಮುಂದೆ ಹೇಳಿದ್ದರು. ಒಂದೆಡೆ ಕಾಂಗ್ರೆಸ್ಸಿನವರು ಧರ್ಮಸ್ಥಳದ ಪರವಾಗಿ ತಾವು ನಿಂತಿದ್ದೇವೆಂದು ಹೇಳುತ್ತಾರೆ, ಮತ್ತೊಂದೆಡೆ ತಮ್ಮದೇ ಪಕ್ಷದ ಪದಾಧಿಕಾರಿ ಅಪಪ್ರಚಾರ ನಡೆಸಿದ ಸಮೀರ್‌ನ ಪರವಾಗಿ ನಿಲ್ಲುತ್ತಾರೆ. ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರದಲ್ಲಿ ಭಾಗಿಯಾಗಿರುವ ಮತ್ತೊಬ್ಬ ವ್ಯಕ್ತಿ ಬಾಲನ್. ಈ ವ್ಯಕ್ತಿಯ ಮಾತುಗಳನ್ನು ಕೇಳಿದರೆ ನಗಲೂ ಆಗದು, ಅಳಲೂ ಆಗದು. ಒಮ್ಮೆ ಮಾಧ್ಯಮದಲ್ಲಿ ನಡೆಯುತ್ತಿದ್ದ ಚರ್ಚೆಯೊಂದರಲ್ಲಿ 'ಭಾರತ್ ಮಾತಾ ಕಿ ಜೈ' ಹೇಳಿಕೆಯು ಸಂವಿಧಾನ ವಿರೋಧಿ ಎಂದು ಹೇಳಿದ್ದ ನಟೋರಿಯಸ್ ಎಡಚರ ವ್ಯಕ್ತಿ ಈ ಬಾಲನ್. ಬಾಯಿ ಬಿಟ್ಟರೆ ಹಿಂದೂ ಧರ್ಮದ ಆಚರಣೆಗಳ ಬಗ್ಗೆ ಕೆಟ್ಟದಾಗಿ ಮಾತನಾಡುವುದು ಈ ವ್ಯಕ್ತಿಯ ಚಾಳಿ. ತಾವೊಬ್ಬ ನಾಸ್ತಿಕ ಎಂದು ಹೇಳಿಕೊಂಡು ಇವರು ಹಿಂದೂ ಧರ್ಮದ ಮೇಲೆ ಸದಾ ಕೆಂಡ ಕಾರುತ್ತಿರುತ್ತಾರೆ. ಮಾಧ್ಯಮಗಳು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗದೆ ಹಾಸ್ಯನಟನಂತೆ ಮಾತನಾಡುವ ಈ ವ್ಯಕ್ತಿ, ತಾವು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಆಗುತ್ತಿರುವುದು ತಿಳಿದಿದ್ದರೂ ಆಡುವ ಮಾತುಗಳನ್ನು ನಿಲ್ಲಿಸುವುದಿಲ್ಲ. 'ಮೂರೂ ಬಿಟ್ಟವರು ಊರಿಗೆ ದೊಡ್ಡವರು' ಎಂಬಂತಾಗಿದೆ ಇವರ ಜೀವನ. ತಮ್ಮ ಸುಳ್ಳುಗಳು ದಿನನಿತ್ಯ ಬೆತ್ತಲಾದರೂ ಹಿಂದೂ ಧರ್ಮದ ವಿರುದ್ಧ ನಾಲಿಗೆ ಹರಿಬಿಡುವ ಇವರ ಬುದ್ಧಿ ಮಾತ್ರ ಬದಲಾಗುವುದಿಲ್ಲ.

ಧರ್ಮಸ್ಥಳದ ವಿರುದ್ಧದ ಷಡ್ಯಂತ್ರ ಒಂದೊಂದಾಗಿ ಬಯಲಾಗುತ್ತಿದ್ದಂತೆ ಎಡಚರ ಪಟಾಲಂ ಒಂದು ಸಭೆ ನಡೆಸಿ ಮತ್ತೊಂದು ಸುತ್ತಿನ ಸುಳ್ಳಿನ ಕಥೆ ಹೆಣೆಯಲು ಪ್ರಾರಂಭಿಸಿತ್ತು. ಈ ಸಭೆಯಲ್ಲಿ ಬಾಲನ್ ಧರ್ಮಸ್ಥಳದ ಬಗ್ಗೆ ಮಾತನಾಡುತ್ತಾ, 2,00,000/- ಕೋಟಿಯ ಸಾಮ್ರಾಜ್ಯವನ್ನು ವೀರೇಂದ್ರ ಹೆಗ್ಗಡೆ ಕಟ್ಟಿದ್ದಾರೆಂದು ಹೇಳುವ ಮೂಲಕ, ನಗರ ನಕ್ಸಲರ ಮೂಲ ಟಾರ್ಗೆಟ್ ಏನೆಂಬುದನ್ನು ಸ್ಪಷ್ಟವಾಗಿ ಹೇಳಿದ್ದರು. ತಲೆಬುಡವಿಲ್ಲದ ಎಡಚರರ ವಾದ, ಲೆಕ್ಕಾಚಾರಗಳನ್ನು ಕೇಳಿ ಜನ ನಗುತ್ತಾರೆಂಬ ಸಣ್ಣ ಕಲ್ಪನೆ ಇವರಿಗೆ ಇರುವುದಿಲ್ಲ. ತಮ್ಮನ್ನು ತಾವು ಅತಿ ಬುದ್ಧಿವಂತರೆಂದು ತಿಳಿದು, ತಾವುಗಳು ನೀಡುವ ಹೇಳಿಕೆಗಳಿಗೆ ತಮ್ಮವರಿಂದಲೇ ಹೊಗಳಿಸಿಕೊಂಡು ಆಕಾಶದಲ್ಲಿ ತೇಲಾಡುತ್ತಿರುತ್ತಾರೆ. ಧರ್ಮಸ್ಥಳದ ವಿರುದ್ಧದ ಅಪಪ್ರಚಾರದ ಹಿಂದೆ ಕೇಳಿಬರುತ್ತಿರುವ ಮತ್ತೊಂದು ಹೆಸರು ಕಾಂಗ್ರೆಸ್ಸಿನ ಸಂಸದ ಶಶಿಕಾಂತ್ ಸೆಂಥಿಲ್. ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಸೆಂಥಿಲ್ 2019ರಲ್ಲಿ ತಮ್ಮ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದರು.

ಕಾಂಗ್ರೆಸ್ಸಿನ ನೆಹರು ಅವರು ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಮೋದಿ ನೇತೃತ್ವದ ಕೇಂದ್ರ ಸರಕಾರವು ಆಗಸ್ಟ್ 2019ರಲ್ಲಿ ರದ್ದು ಪಡಿಸಿದ ಕೆಲವು ದಿನಗಳ ನಂತರ ಶಶಿಕಾಂತ್ ಸೆಂಥಿಲ್ ತಮ್ಮ ವೃತ್ತಿಗೆ ರಾಜೀನಾಮೆ ನೀಡಿದ್ದರು. ನಂತರ ಕಾಂಗ್ರೆಸ್ ಪಕ್ಷದಿಂದ ತಮಿಳುನಾಡಿನ ತಿರುವಳ್ಳೂರ್ ಕ್ಷೇತ್ರದಿಂದ 2024ರಲ್ಲಿ ಚುನಾವಣೆ ಗೆದ್ದು ಸಂಸದರಾಗಿದ್ದಾರೆ. ಶಶಿಕಾಂತ್ ಸೆಂಥಿಲ್ ಕೆಲವು ಮಾಧ್ಯಮಗಳಿಗೆ ನೀಡಿರುವ ಸಂದರ್ಶನವನ್ನು ಗಮನಿಸಿದರೆ ಅವರ ಹಿಂದೂ ವಿರೋಧಿ ಮನಸ್ಥಿತಿ ಸ್ಪಷ್ಟವಾಗಿ ಅರ್ಥವಾಗುತ್ತದೆ. ಶಶಿಕಾಂತ್ ಸೆಂಥಿಲ್‌ರ ಸಂದರ್ಶನ ನಡೆಸುವ ಮಾಧ್ಯಮದ ನಿರೂಪಕರು ಮರುಪ್ರಶ್ನೆಯನ್ನು ಕೇಳದೆ, ಅವರು ಹೇಳಿದ ನಿರೂಪಣೆಗಳನ್ನು ಸುಮ್ಮನೆ ಅನುಮೋದಿಸುತ್ತಾರೆ. ಬಾಬಾಸಾಹೇಬರ ಸಂವಿಧಾನದ ಬಗ್ಗೆ ತಮ್ಮ ಸಂದರ್ಶನದಲ್ಲಿ ಮಾತನಾಡುವ ಶಶಿಕಾಂತ್ ಸೆಂಥಿಲ್ ,ಬಾಬಾಸಾಹೇಬರು ವಿರೋಧಿಸಿದ್ದ ಸಂವಿಧಾನದ ಪರಿಚ್ಛೇದ 370ನ್ನು ರದ್ದು ಪಡಿಸಿದ ಕೆಲವು ದಿನಗಳಲ್ಲಿ ತಮ್ಮ ವೃತ್ತಿಗೆ ರಾಜೀನಾಮೆ ಘೋಷಿಸಿದ್ದರು. ಸೆಂಥಿಲ್ ತಮ್ಮ ಸಂದರ್ಶನಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಭಾರತೀಯ ಜನತಾ ಪಕ್ಷದ ವಿರುದ್ಧ ಸುಳ್ಳುಗಳನ್ನು ಹೇಳುವುದು ಸ್ಪಷ್ಟವಾಗಿ ಕಾಣುತ್ತದೆ.

ತಮ್ಮ ಜೀವನದಲ್ಲಿ ಒಮ್ಮೆಯೂ ಸಂಘದ ಶಾಖೆಗೆ ಹೋಗದ ಈ ವ್ಯಕ್ತಿ ಬಾಯಿಗೆ ಬಂದಂತೆ ಸುಳ್ಳುಗಳನ್ನು ಪೋಣಿಸುತ್ತಾರೆ, ಪೋಷಕ ನಟನಂತೆ ತಮ್ಮ ನಟನಾ ಶೈಲಿಯ ಮೂಲಕ ಅವನ್ನು ಹೇಳುತ್ತಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಟಾರ್ಗೆಟ್ ಹಿಂದೂಗಳೆಂಬ ಹಸಿ ಸುಳ್ಳನ್ನು ನಟನಾ ಶೈಲಿಯಲ್ಲಿ ಹೇಳುತ್ತಾರೆ. 80:20 ಅನುಪಾತದ ನಿಯಮದಡಿಯಲ್ಲಿ ಹಿಂದೂ ಧರ್ಮವನ್ನು ಸಂಘದ ಮೇಲ್ವರ್ಗದವರು ಹತೋಟಿಗೆ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಹಿಂದೂಗಳ ನಡುವೆ ತಾರತಮ್ಯವಿದೆಯೆಂದು ಪದೇ ಪದೇ ಸುಳ್ಳು ಹೇಳುತ್ತಾರೆ. ಇವರು ತಾವು ಹೇಳುವ ಸುಳ್ಳು ನಿರೂಪಣೆಗಳಿಗೆ ಒಂದೇ ಒಂದು ಸಾಕ್ಷ್ಯ ನೀಡುವುದಿಲ್ಲ, ಅವರ ಮಾತನ್ನು ಕೇಳಿಸಿಕೊಳ್ಳುವ ನಿರೂಪಕರು ಮರುಪ್ರಶ್ನೆಯನ್ನು ಹಾಕುವುದಿಲ್ಲ, ಶಶಿಕಾಂತ್ ಸೆಂಥಿಲ್ ತಮಿಳುನಾಡಿನ ಮುಖ್ಯವಾಹಿನಿ ಮಾಧ್ಯಮಗಳಿಗೆ ಹೆಚ್ಚಿನ ಸಂದರ್ಶನ ನೀಡದೆ ಆನ್‌ಲೈನ್ ವೇದಿಕೆಗಳಲ್ಲಿ ಹೆಚ್ಚಾಗಿ ಮಾತನಾಡಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘವು 100 ವರ್ಷಗಳನ್ನು ಪೂರೈಸುತ್ತಿದೆ; ಸಮಾಜದಲ್ಲಿರುವ ತಾರತಮ್ಯವನ್ನು ಹೋಗಲಾಡಿಸಿ ಹಿಂದೂಗಳನ್ನು ಒಗ್ಗೂಡಿಸುವುದು ಸಂಘದ ಮೂಲ ಉದ್ದೇಶ. ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಜಾತಿಗಳ ಬಗ್ಗೆ ಚರ್ಚೆ ಆಗುವುದೇ ಇಲ್ಲ. ಮಹಾತ್ಮ ಗಾಂಧಿಯವರು ನಾಗಪುರದ ಶಾಖೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿ ಕಂಡಂಥ ಹಿಂದೂ ಸಮಾಜದ ಸಾಮರಸ್ಯದ ಬಗ್ಗೆ ಹೊಗಳಿದ್ದಾರೆ. ಈಶಾನ್ಯ ಭಾರತದ ಕಾಡುಗಳಲ್ಲಿ ವಾಸವಾಗಿದ್ದ ಪರಿಶಿಷ್ಟ ಪಂಗಡದ ಜನರನ್ನು ಮುಖ್ಯವಾಹಿನಿಗೆ ತರಲು ಸಂಘದ ಪ್ರಚಾರಕರು ದಶಕಗಳ ಕಾಲ ಶ್ರಮ ಪಟ್ಟಿದ್ದಾರೆ. ಭಾರತೀಯ ಜನತಾ ಪಕ್ಷವು 'ದಲಿತ ವಿರೋಧಿ' ಎಂಬಂತೆ ಹಸಿಸುಳ್ಳು ಹೇಳುವ ಶಶಿಕಾಂತ್ ಸೆಂಥಿಲ್, ಗುಡ್ಡಗಾಡು ಪ್ರದೇಶದಿಂದ ಬಂದಿರುವ ಬುಡಕಟ್ಟು ಜನಾಂಗದ ಮಹಿಳೆ ದ್ರೌಪದಿ ಮುರ್ಮು ಅವರು ಭಾರತೀಯ ಜನತಾ ಪಕ್ಷದ ಅವಧಿಯಲ್ಲಿ ರಾಷ್ಟ್ರಪತಿಯಾಗಿದ್ದಾರೆಂಬುದನ್ನು ಹೇಳುವುದಿಲ್ಲ. ಸಮಾಜದಲ್ಲಿನ ತೀರಾ ಹಿಂದುಳಿದ ಜಾತಿಗಳನ್ನು ಮುನ್ನೆಲೆಗೆ ತರುವ ಕೆಲಸವನ್ನು, ಸಂಘದಲ್ಲಿ ಎಲೆಮರೆಯ ಕಾಯಿಗಳಂತಿರುವ ಅನೇಕ ಪ್ರಚಾರಕರು ಇಂದಿಗೂ ನಿರಂತರವಾಗಿ ಮಾಡುತ್ತಿದ್ದಾರೆ. ಎಡಚರರ ದೊಡ್ಡ ಸಮಸ್ಯೆ ಎಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಕೆಲಸ ಮಾಡುತ್ತಿರುವವರು ತಮ್ಮ ಜಾತಿಯನ್ನು ಹೇಳಿಕೊಳ್ಳುವುದಿಲ್ಲ, ಹಾಗಾಗಿ ಎಡಚರರು ಎಲ್ಲರನ್ನೂ ಬ್ರಾಹ್ಮಣರೆಂದುಕೊಂಡಿದ್ದಾರೆ.

ಶಶಿಕಾಂತ್ ಸೆಂಥಿಲ್ ನೀಡಿರುವ ಹಲವು ಸಂದರ್ಶನಗಳು ಕೇವಲ ಭಾಷಣವಾಗಿವೆ. ಪರ ವಿರೋಧದ ಚರ್ಚೆಗೆ ಈ ವ್ಯಕ್ತಿ ಬರುವುದಿಲ್ಲ, ಸೆಂಥಿಲ್ ನೀಡುವ ಹೇಳಿಕೆಗಳಿಗೆ ಸಂದರ್ಶಕರು ಮರುಪ್ರಶ್ನೆ ಹಾಕುವುದಿಲ್ಲ, ಧರ್ಮಸ್ಥಳದ ವಿರುದ್ಧ ಬುರುಡೆ ಗ್ಯಾಂಗ್ ಮತ್ತು ನಗರ ನಕ್ಸಲರು ನಡೆಸಿದ ಅಪಪ್ರಚಾರವು ಕೂಡ 'ಒನ್ ವೇ'. ಮುಕ್ತ ಚರ್ಚೆಗೆ ಆಹ್ವಾನಿಸಿದರೆ ಈ ಗ್ಯಾಂಗ್ ಬರುವುದಿಲ್ಲ.

ಶಶಿಕಾಂತ್ ಸೆಂಥಿಲ್ ನೀಡಿರುವ ಸಂದರ್ಶನಗಳನ್ನು

ಗಮನಿಸಿದರೆ ಆ ವ್ಯಕ್ತಿಯ ಹಿಂದೂ ವಿರೋಧಿ ಮನಸ್ಥಿತಿ ಸ್ಪಷ್ಟವಾಗಿ ತಿಳಿಯುತ್ತದೆ. 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ, ಕಾಂಗ್ರೆಸ್ ಪಕ್ಷದ 'ವಾರ್ ರೂಮ್'ನಲ್ಲಿ ಈ ವ್ಯಕ್ತಿ ಕೆಲಸ ಮಾಡುತ್ತಿದ್ದರೆಂಬ ಸತ್ಯ ಎಲ್ಲರಿಗೂ ತಿಳಿದಿದೆ. ಕಾಂಗ್ರೆಸ್ ಪಕ್ಷ 2023ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ವಿರುದ್ಧ ನಡೆಸಿದ 'ಪೇಸಿಎಂ' ಅಭಿಯಾನದ ಮಾಸ್ಟರ್ ಮೈಂಡ್ ಶಶಿಕಾಂತ್ ಸೆಂಥಿಲ್ ಎಂದು ಹೇಳಲಾಗುತ್ತದೆ. ಚುನಾವಣೆ ಮುಗಿದ ನಂತರ ಸ್ವತಃ ಡಿ.ಕೆ.ಶಿವಕುಮಾರ್, 'ಅದು ಕೇವಲ ಮಾರ್ಕೆಟಿಂಗ್ ಪ್ರಚಾರ' ಎಂದು ಹೇಳುವ ಮೂಲಕ, ನಡೆಸಿದ ಅಭಿಯಾನವೇ ಸುಳ್ಳೆಂದು ಗೊತ್ತಾಗಿತ್ತು. 'ಪೇಸಿಎಂ' ಸುಳ್ಳನ್ನು ಪ್ರಚಾರ ಮಾಡುವುದರ ಹಿಂದೆ ಶಶಿಕಾಂತ್ ಸೆಂಥಿಲ್ ಇದ್ದದ್ದು ನಿಜವಾದರೆ, ಧರ್ಮಸ್ಥಳದ ವಿರುದ್ಧ ನಡೆದ ಷಡ್ಯಂತ್ರವನ್ನು ಅದೇ ಮಾದರಿಯಲ್ಲಿ ದೊಡ್ಡಮಟ್ಟದಲ್ಲಿ ಪ್ರಚಾರ ಮಾಡಿರುವುದರ ಹಿಂದೆ ಸೆಂಥಿಲ್ ಇರಬಹುದೆಂಬ ಅನುಮಾನವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಅಪಪ್ರಚಾರಕ್ಕಾಗಿ ಹೆಚ್ಚಾಗಿ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಳ್ಳಲಾಗಿತ್ತು. 'ಪೇಸಿಎಂ' ಎಂಬ ಸುಳ್ಳು ಅಭಿಯಾನವನ್ನು ಕೂಡ ಸಾಮಾಜಿಕ ಜಾಲತಾಣಗಳ ಮೂಲಕ ಮಾಡಲಾಗಿತ್ತು. ಜೈನರು ಹಿಂದೂಗಳ ದೇವಸ್ಥಾನವನ್ನು ನಡೆಸುತ್ತಿದ್ದಾರೆಂಬುದು ಧರ್ಮಸ್ಥಳದ ವಿರುದ್ಧ ನಡೆದ ಅಪಪ್ರಚಾರದಲ್ಲಿ ಎಡಚರರು ಆರಂಭಿಸಿದ ಹೊಸ ನಿರೂಪಣೆ.

ಮುಸ್ಲಿಂ ಯುವಕ ಸಮೀರ್ ಹಿಂದೂ ದೇವಸ್ಥಾನದ ಬಗ್ಗೆ 'ಎಐ' ವಿಡಿಯೋ ಮಾಡಿ ಅಪಪ್ರಚಾರ ನಡೆಸಿದರೆ ನಗರ ನಕ್ಸಲರಿಗೆ ತಕರಾರಿಲ್ಲ, ಆದರೆ ಧರ್ಮಸ್ಥಳದ ಆಡಳಿತದ ಬಗ್ಗೆ ಮಾತ್ರ ಇವರ ತಕರಾರು. ಧರ್ಮಸ್ಥಳದ ಮಂಜುನಾಥನನ್ನು ಪೂಜೆ ಮಾಡುವವರು ಹಿಂದೂಗಳೆಂಬ ಸಾಮಾನ್ಯ ಜ್ಞಾನ ಎಡಚರರಿಗಿಲ್ಲ, ಎಡಚರರು ಧರ್ಮಸ್ಥಳದ ವಿರುದ್ಧ ತಾವು ನಡೆಸಿದ ಅಪಪ್ರಚಾರವನ್ನು ನಿಜವೆಂದು ಬಿಂಬಿಸಲು ಪ್ರತಿನಿತ್ಯ ಹೇಳುತ್ತಿರುವ ಸುಳ್ಳುಗಳನ್ನು ಗಮನಿಸಿದರೆ, 1996ರಲ್ಲಿ ಅನಂತ್‌ನಾಗ್ ಅಭಿನಯದ 'ಸಮಯಕ್ಕೊಂದು ಸುಳ್ಳು' ಸಿನಿಮಾ ನೆನಪಾಗುತ್ತದೆ. ಒಟ್ಟಿನಲ್ಲಿ ಹಿಂದೂಗಳ ಶ್ರದ್ಧಾ ಕೇಂದ್ರ ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಪ್ರತಿಯೊಂದು ಸುಳ್ಳು ನಿರೂಪಣೆಗಳನ್ನು ಹಿಂದೂ ಸಮಾಜ ಸತತವಾಗಿ ಬೆತ್ತಲಾಗಿಸುತ್ತಿರುವುದರಿಂದಾಗಿ ನಗರ ನಕ್ಸಲರ ಬುಡಕ್ಕೆ ಬೆಂಕಿ ಬಿದ್ದಂತಾಗಿದೆ.

ಬೀದಿನಾಯಿ ಹಾವಳಿ: ಬೇಕಿದೆ ತಿಳಿವಳಿಕೆ

ನಾಯಿಕಡಿತಕ್ಕೆ ಸಂಬಂಧಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೀಡಿರುವ ಅಂಕಿ-ಅಂಶಗಳು ಭಯ ಹುಟ್ಟಿಸುವಂತಿವೆ. ರಾಜ್ಯದಲ್ಲಿ ಈ ವರ್ಷದ ಮೊದಲ 8 ತಿಂಗಳಲ್ಲೇ, 3 ಲಕ್ಷಕ್ಕೂ ಅಧಿಕ ಜನರಿಗೆ ನಾಯಿಗಳು ಕಚ್ಚಿವೆ. ಈ ಪೈಕಿ ಶೇ.96ರಷ್ಟು ಪಾಲು ಬೀದಿನಾಯಿಗಳ ಕಡಿತವಾಗಿವೆ ಎಂಬುದು ಗಮನಾರ್ಹ.

ನಾಯಿನೆರಳು

ರಾಘವೇಂದ್ರ ಈ. ಹೊರಬೈಲು
vveditoped@gmail.com

ದಾವಣಗೆರೆಯ ಶಾಸ್ತ್ರಿ ಲೇ ಔಟಿನ, ಪ್ರಪಂಚವನ್ನು ಚೂರೂ ಅರಿಯದ ನಾಲ್ಕು ವರ್ಷದ ಪುಟ್ಟ ಕಂದ ಖಾದಿರಾ ಬಾನು. ಇದೇ ವರ್ಷದ ಏಪ್ರಿಲ್ 27ನೇ ತಾರೀಖು ಮನೆಯ ಹೊರಗೆ ಆಟವಾಡುತ್ತಾ ಕುಳಿತಿದ್ದಳು. ಏಕಾಏಕಿ ನಾಲ್ಕೈದು ನಾಯಿಗಳು ಆಕೆಯ ಮೇಲೆ ದಾಳಿ ಮಾಡಿ ಮುಖ-ಮೈಯನ್ನೆಲ್ಲಾ ಕಚ್ಚಿ ಗಂಭೀರವಾಗಿ ಗಾಯಗೊಳಿಸಿದವು. ಆಸ್ಪತ್ರೆಗೆ ದಾಖಲಿಸಿ ಎಷ್ಟೆಲ್ಲ ಪ್ರಯತ್ನಿಸಿದರೂ ರೇಬಿಸ್ ಹರಡಿ, ಆ ಪುಟ್ಟ ಮಗು ನರಳಿ ನರಳಿ, ಪ್ರಪಂಚವನ್ನು ಸರಿಯಾಗಿ ನೋಡುವುದರೊಳಗೆ ಅಸುನೀಗಿತು. ಈ ಸುದ್ದಿ ಕೇಳಿದರೆ ಎಂಥವರ ಮನಸ್ಸೂ ಕರಗದೇ ಇರಲಾರದು.

ಬೀದಿನಾಯಿ ದಾಳಿಗೆ ಸಿಲುಕಿ ಸಂಕಷ್ಟಕ್ಕೆ ಈಡಾಗುವವರ ಸಂಖ್ಯೆ ದಿನಗಳೆದಂತೆ ಹೆಚ್ಚುತ್ತಿದೆ ಎಂಬುದಕ್ಕೆ ಇಲ್ಲೊಂದಿಷ್ಟು ಉದಾಹರಣೆಗಳಿವೆ. ಇವೆಲ್ಲವೂ ವಿಭಿನ್ನ ಪತ್ರಿಕೆಗಳಲ್ಲಿ ಹಾಗೂ ವಾಹಿನಿಗಳಲ್ಲಿ ಪ್ರಕಟವಾದ/ಬಿತ್ತರವಾದ ಸುದ್ದಿಗಳು ಎಂಬುದು ನಿಮ್ಮ ಗಮನಕ್ಕೆ. ಇದೇ ಆಗಸ್ಟ್ ತಿಂಗಳ 23ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಪಟ್ಟಣದಲ್ಲಿ ಮನೆಯ ಸಮೀಪದ ಅಂಗಡಿಗೆ ನಡೆದುಕೊಂಡು ಹೋಗುತ್ತಿದ್ದ 5 ವರ್ಷದ ಹುಡುಗಿಯ ಮೇಲೆ ಬೀದಿನಾಯಿಗಳು ದಾಳಿ ನಡೆಸಿ, ಕಚ್ಚಿ ಗಾಯಗೊಳಿಸಿದವು. ಆಗಸ್ಟ್ 16ರಂದು, ಕೊಪ್ಪಳ ಜಿಲ್ಲೆಯ ತಳಕಲ್ ಹಾಗೂ ತಳಬಾಳ ಗ್ರಾಮಗಳಲ್ಲಿ ಬೀದಿನಾಯಿ ದಾಳಿಗೆ 30ಕ್ಕೂ ಹೆಚ್ಚು ಜನ ಗಾಯಗೊಂಡರು. ಮನೆಯ ಮುಂದೆ ಆಡಿಕೊಳ್ಳುತ್ತಿದ್ದ 8 ವರ್ಷದ ಮಗುವಿನ ಮೇಲೆ ನಾಯಿ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿತು. ಜುಲೈ 30ರಂದು ಬೆಂಗಳೂರಿನ ಕೊಡಿಗೇಹಳ್ಳಿ ಬಳಿ ವಯೋವೃದ್ಧರೊಬ್ಬರು ಬೀದಿನಾಯಿ ಕಡಿತಕ್ಕೆ ಬಲಿಯಾಗಿ ಅಸುನೀಗಿದರು. ಜುಲೈ 24ರಂದು ಚಿಕ್ಕಮಗಳೂರಿನ ಎಂ.ಜಿ.ರಸ್ತೆ ಮತ್ತು ಮಾರ್ಕೆಟ್ ರಸ್ತೆಯಲ್ಲಿ 20ಕ್ಕೂ ಹೆಚ್ಚು ಜನರ ಮೇಲೆ ಬೀದಿನಾಯಿಗಳು ದಾಳಿ ಮಾಡಿ ಗಾಯ ಗೊಳಿಸಿದವು.

ಇವೆಲ್ಲಾ ಕೆಲವೇ ಉದಾಹರಣೆಗಳಷ್ಟೇ. ಇಂಥ ಗಣನೀಯ ಸಂಖ್ಯೆಯ ಘಟನೆಗಳು ಪ್ರತಿದಿನ ನಡೆಯುತ್ತಿವೆ. ಆದರೆ ಈ ಪೈಕಿ ಶೇ.10-15ರಷ್ಟು ಮಾತ್ರವೇ ಹೀಗೆ ವರದಿಯಾಗುತ್ತವೆ, ಅಷ್ಟೇ. ಬೀದಿನಾಯಿಗಳ ಆಕ್ರಮಣದ ಸಾವಿರಾರು ವಿಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ಲಭ್ಯವಿದ್ದು, ಇವಲ್ಲಿ ಒಂದೊಂದನ್ನು ನೋಡಿದಾಗಲೂ ಎದೆ ಝಲ್ ಎನಿಸದಿರದು. ಮುಂಜಾವಿನಲ್ಲಿ ಮತ್ತು ತಡರಾತ್ರಿಯಲ್ಲಿ ಓಡಾಡಲೇಬೇಕಿರುವ ವಿದ್ಯಾರ್ಥಿಗಳು, ದುಡಿಯುವ ವರ್ಗದವರು, ಕಾರು/ಬೈಕುಗಳಿಲ್ಲದೆ ನಡೆದೇ ಸಾಗುವವರು ಬೀದಿನಾಯಿಗಳ ಕಡಿತಕ್ಕೆ ಒಳಗಾಗುತ್ತಿದ್ದಾರೆ. ಈ ಪೈಕಿ ಮಕ್ಕಳು, ವೃದ್ಧರು ಮತ್ತು ಮಹಿಳೆಯರ ಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿದೆ. ದ್ವಿಚಕ್ರ ವಾಹನ ಸವಾರರಿಗಂತೂ ಬೀದಿನಾಯಿಗಳು ಸಾಕ್ಷಾತ್ ಯಮಸ್ವರೂಪಿಗಳೇ ಆಗಿವೆ (ನಾನೂ ಪ್ರತಿದಿನ ದ್ವಿಚಕ್ರ ವಾಹನದಲ್ಲೇ ಓಡಾಡುವುದರಿಂದ, ಈ ಅನುಭವ ನನಗೆ ಚೆನ್ನಾಗಿ ಆಗಿದೆ!). ಇಂಥ ಎಷ್ಟೋ ಮಂದಿ, ತಮ್ಮನ್ನು ಬೆನ್ನತ್ತುವ ಬೀದಿನಾಯಿಗಳಿಂದ ತಪ್ಪಿಸಿಕೊಳ್ಳಲು ಹೋಗಿ ಕೆಳಗೆ ಬಿದ್ದು ಗಾಯಗೊಂಡಿರುವ ಅಥವಾ ಆ ಧಾವಂತದಲ್ಲಿ ಎದುರಿನಿಂದ ಅಥವಾ ಹಿಂಬಾಗದಿಂದ ಬರುವ ವಾಹನಗಳಿಗೆ ಅಪ್ಪಳಿಸಿ ಪ್ರಾಣ ಕಳೆದುಕೊಂಡಿರುವ ನಿದರ್ಶನಗಳು ಸಾಕಷ್ಟಿವೆ.

ನಾಯಿಕಡಿತಕ್ಕೆ ಸಂಬಂಧಿಸಿದಂತೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನೀಡಿರುವ ಅಂಕಿ-ಅಂಶಗಳು ಭಯ ಹುಟ್ಟಿಸುವಂತಿವೆ. ರಾಜ್ಯದಲ್ಲಿ ಈ ವರ್ಷದ ಮೊದಲ 8 ತಿಂಗಳಲ್ಲೇ, ಮೂರು ಲಕ್ಷಕ್ಕೂ ಅಧಿಕ ಜನರಿಗೆ ನಾಯಿಗಳು ಕಚ್ಚಿವೆ (ಈ ಪೈಕಿ ಶೇ.96ರಷ್ಟು ಪಾಲು ಬೀದಿನಾಯಿಗಳ ಕಡಿತವಾಗಿವೆ ಎಂಬುದು ಗಮನಾರ್ಹ). ಇದು ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುತ್ತದೆ. ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶದಲ್ಲೂ ಸುಮಾರು 10 ಲಕ್ಷದಷ್ಟು ಬೀದಿನಾಯಿಗಳಿವೆ ಎಂದು ಅಂದಾಜಿಸಲಾಗಿದ್ದು, ಅಲ್ಲಿಯೂ ಪ್ರತಿದಿನ ಬೀದಿನಾಯಿಗಳ ನೂರಾರು ಆಕ್ರಮಣಗಳಾಗುತ್ತಿವೆ. ಇದನ್ನು ಗಮನಿಸಿಯೇ, ಬೀದಿನಾಯಿಗಳ ಹಾವಳಿಯ ತಡೆಗೆ ಸುಪ್ರೀಂ ಕೋರ್ಟ್ ಆದೇಶಿಸಿದ್ದು.

ಕಾರಿನಿಂದ ಕಾಲನ್ನು ಕೆಳಗಿಳಿಸದೆಯೇ ರಸ್ತೆಯಲ್ಲಿ ಸಾಗುವಂಥವರ ಪೈಕಿ ಒಂದಷ್ಟು ಮಂದಿ ಸುಪ್ರೀಂ ಕೋರ್ಟ್‌ನ ಈ ಆದೇಶದ ವಿರುದ್ಧ ಹಾಗೂ ಬೀದಿನಾಯಿಗಳ ಪರವಾಗಿ ಮಾತನಾಡುತ್ತಿದ್ದಾರೆ. ಆದರೆ ಪ್ರತಿದಿನ ಕಾಲ್ನಡಿಗೆಯಲ್ಲೋ, ದ್ವಿಚಕ್ರ ವಾಹನಗಳಲ್ಲೋ ಸಂಚರಿಸಬೇಕಾದವರು ಬೀದಿನಾಯಿಗಳ ಪರವಾಗಿ ಖಂಡಿತ ನಿಲ್ಲಲಾರರು, ಏಕೆಂದರೆ ಅವರೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಅವುಗಳ ಉಪಟಳವನ್ನು ಅನುಭವಿಸಿದವರೇ. ಬೀದಿನಾಯಿಗಳ ಪರವಾಗಿ ಮಾತನಾಡುವವರು, ಶ್ವಾನಪ್ರಿಯರು, ಸೆಲೆಬ್ರಿಟಿಗಳು ಒಂದು ಪುಟ್ಟ ಕೆಲಸವನ್ನು ಮಾಡಬಹುದು. ಅದೇಂದರೆ- ತಮಗೆ ಸಾಧ್ಯವಾದಷ್ಟು ಬೀದಿನಾಯಿಗಳನ್ನು ದತ್ತು ತೆಗೆದುಕೊಂಡು, ಬೀದಿಗೆ ಬರದಂತೆ ಅವನ್ನು ತಮ್ಮದೇ ಆಶ್ರಯತಾಣಗಳಲ್ಲಿ ಇಟ್ಟುಕೊಂಡು ಪೋಷಿಸಬಹುದು.

ಇನ್ನು, ಸ್ಥಳೀಯ ಆಡಳಿತ ವ್ಯವಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ, ಈ ಸಮಸ್ಯೆಯಲ್ಲಿ ಅರ್ಧಭಾಗವು ಪರಿಹಾರವಾಗುತ್ತದೆ. ಕಾಲಕಾಲಕ್ಕೆ ಬೀದಿನಾಯಿಗಳ ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡಿದರೆ ಅವುಗಳ ಸಂತತಿ ಕಡಿಮೆಯಾಗುತ್ತದೆ. ಆಹಾರ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಬಿಸಾಡದಂತೆ ನಾಗರಿಕರಲ್ಲಿ ಎಚ್ಚರಿಕೆ ಮೂಡಿಸಿ, ಸರಿಯಾಗಿ ವಿಲೇವಾರಿ ಮಾಡಿದರೂ ಬೀದಿನಾಯಿ ಹಾವಳಿ ತಗ್ಗುತ್ತದೆ.

ಎಲ್ಲಾ ಜೀವಿಗಳಂತೆ ಬೀದಿನಾಯಿಗಳಿಗೂ ಬದುಕುವ ಹಕ್ಕಿದೆ, ಅವನ್ನು ಬದುಕಲು ಬಿಡೋಣ. ಆದರೆ ಅವುಗಳಿಂದ ಮನುಷ್ಯರ ಮೇಲಾಗುವ ದಾಳಿಯನ್ನೂ ತಡೆಯಬೇಕಾದ ಅನಿವಾರ್ಯತೆ ಇದೆ. ಈ ಸೂಕ್ಷ್ಮವನ್ನು ಎಲ್ಲರೂ ಅರಿಯಬೇಕಾದ್ದು ಮುಖ್ಯ. ಶ್ವಾನಪ್ರಿಯನಾದ ನಾನು ಕೂಡ ಒಂದೆರಡು ಬೀದಿನಾಯಿಗಳನ್ನು ಮನೆಗೆ ತಂದು ಸಾಕಿದ್ದೇನೆ. ಆದರೆ ಅವುಗಳ ಸಂಖ್ಯೆ ಅಧಿಕವಾದರೆ ಒದಗಬಹುದಾದ ಉಪಟಳವನ್ನೂ ಕಣ್ಣಾರೆ ಕಂಡಿದ್ದೇನೆ. ಹಾಗಾಗಿ ಬೀದಿನಾಯಿಗಳ ಹಾವಳಿ ತಗ್ಗಿಸಲು ಎಲ್ಲರೂ ಶ್ರಮಿಸೋಣ. ನಾಯಿ ಕಡಿತವು ನಮ್ಮ ರಾಜ್ಯದಲ್ಲಿ ಕಾಣಬರುವ ಎಷ್ಟೋ ಕಾಯಿಲೆಗಳು/ಸಾಂಕ್ರಾಮಿಕ ರೋಗಗಳಿಗಿಂತ ಅಧಿಕ ಪ್ರಮಾಣದಲ್ಲಿ ಜನರನ್ನು ಬಾಧಿಸುತ್ತಿರುವ ದುರವಸ್ಥೆಯು ನಮ್ಮ ಕಂಗಳನ್ನು ತೆರೆಸಬೇಕಿದೆ. ಜತೆಗೆ, ರೇಬಿಸ್ ಕಾಯಿಲೆಯಿಂದಾಗುವ ಮರಣ ಪ್ರಮಾಣವೂ ಹೆಚ್ಚುತ್ತಿದೆ ಎಂಬುದನ್ನೂ ಮರೆಯದಿರೋಣ. ರೇಬಿಸ್ ರೋಗಕ್ಕೆ ತುತ್ತಾಗಿ, ನರಳಾಡಿ ಪ್ರಾಣಬಿಟ್ಟ ರಾಷ್ಟ್ರಮಟ್ಟದ ಕಬಡ್ಡಿ ಆಟಗಾರ ಬ್ರಿಜೇಶ್ ಸೋಲಂಕಿಯ ಉದಾಹರಣೆಯು ನಮ್ಮ ಕಣ್ಣು ತೆರೆಸಬೇಕಿದೆ.

(ಲೇಖಕರು ಶಿಕ್ಷಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಉದ್ಘಾಟನೆಯ ವಿವಾದ

ಮೈಸೂರು ದಸರಾ ಉತ್ಸವವು ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಹಿಂದೂ ಧಾರ್ಮಿಕ ಶ್ರದ್ಧೆಯ ಪ್ರತೀಕ. ನಾಡ ದೇವತೆ ತಾಯಿ ಚಾಮುಂಡೇಶ್ವರಿಯ ಆಶೀರ್ವಾದದೊಂದಿಗೆ ಆರಂಭವಾಗುವ ಈ ಮಹೋತ್ಸವ, ಕೇವಲ ಒಂದು ಸರಕಾರಿ ಕಾರ್ಯಕ್ರಮವಲ್ಲ; ಅದು ಹಿಂದೂ ಸಮುದಾಯದ ನಂಬಿಕೆ, ನೂರಾರು ವರ್ಷಗಳ ಇತಿಹಾಸ ಮತ್ತು ಭಾವನಾತ್ಮಕ ಬಂಧಗಳ ಸಂಕೇತ. ಆದರೆ, ಈ ವರ್ಷ ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ ಸರಕಾರದ ನಿರ್ಧಾರವು ಕನ್ನಡಿಗರ ಹೃದಯಕ್ಕೆ, ಅದರಲ್ಲೂ ವಿಶೇಷವಾಗಿ ಹಿಂದೂಗಳ ಮನಸ್ಸಿಗೆ ಅಪಮಾನ ಹಾಗೂ ನೋವನ್ನು ಉಂಟು ಮಾಡಿದೆ. ಇದು ಕೇವಲ ಒಂದು ಆಹ್ವಾನವಲ್ಲ, ಬದಲಿಗೆ ನಮ್ಮ ಧಾರ್ಮಿಕ ಭಾವನೆಗಳ ಮೇಲೆ ಆದ ವ್ಯವಸ್ಥಿತ ದಾಳಿ.

ಒಬ್ಬ ಸಾಹಿತಿಗೆ ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿ ಸಿಕ್ಕರೆ ಅದನ್ನು ಗೌರವಿಸುವುದರಲ್ಲಿ ತಪ್ಪಿಲ್ಲ. ಆದರೆ, ಆ ಗೌರವವನ್ನು ನೀಡಬೇಕಾದ ಸಂದರ್ಭ ಮತ್ತು ಸ್ಥಳವನ್ನು ಮರೆಯಬಾರದು. ದಸರಾ ಉತ್ಸವ, ಒಂದು ಧಾರ್ಮಿಕ ಆಚರಣೆ. ವಿಜಯ ದಶಮಿಯಂದು ದೇವಿಯ ಆರಾಧನೆ ಮತ್ತು ಪುಷ್ಪಾರ್ಚನೆಯೊಂದಿಗೆ ಇದು ಸಾಗುತ್ತದೆ. ಈ ಹಿಂದೆ, ಕುಂಕುಮ-ಅರಿಶಿಣದ ಬಣ್ಣಗಳನ್ನು ಸಹ ವಿರೋಧಿಸಿ, ಹಿಂದೂ ದೇವರುಗಳ ಆಚರಣೆಗಳನ್ನು ಪ್ರಶ್ನಿಸಿದ್ದ ಸಾಹಿತಿಯೊಬ್ಬರನ್ನು ಇಂಥ ಪವಿತ್ರ ಕಾರ್ಯಕ್ರಮಕ್ಕೆ ಆಹ್ವಾನಿಸುವುದು ಯಾವ ನ್ಯಾಯ? ಇದು ಹಿಂದೂಗಳ ಭಾವನೆಗಳನ್ನು ಹತ್ತಿಕ್ಕುವ ಮತ್ತು ಆರಾಧನೆಯನ್ನು ಅಣಕಿಸುವ ಸ್ಪಷ್ಟ ನಡೆಯಾಗಿದೆ.

ದಸರಾ ಕೇವಲ ಒಂದು ನಾಡಹಬ್ಬವಲ್ಲ, ಅದು 'ನವದುರ್ಗೆಯರ' ಹಬ್ಬ. ಈ ಉತ್ಸವವನ್ನು ಕೇವಲ ಸಾಂಸ್ಕೃತಿಕ ಕಾರ್ಯಕ್ರಮವೆಂದು ಬಿಂಬಿಸುವ ಹುನ್ನಾರದಲ್ಲಿ ನಮ್ಮ ಧಾರ್ಮಿಕ ಪರಂಪರೆಗೆ ಅಗೌರವ ತೋರಿಸಲಾಗುತ್ತಿದೆ. ಇದು ಯಾವ ಜಾತ್ಯತೀತತೆ? ಹಿಂದೂಗಳ ಭಾವನೆಗಳಿಗೆ ಬೆಲೆಯಿಲ್ಲವೇ? ನಮ್ಮ ಆಚರಣೆಗಳು ಮತ್ತು ನಂಬಿಕೆಗಳನ್ನು ರಾಜಕೀಯಕ್ಕೆ ಬಳಸಿಕೊಂಡು, ಧರ್ಮವನ್ನು ಅಪಮಾನಿಸುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ.

ಈ ಘಟನೆಯ ನಂತರ, ಹಲವು ಹಿಂದೂ ಪರ ಸಂಘಟನೆಗಳವರು, ರಾಜಕೀಯ ನಾಯಕರು ಮತ್ತು ಸಾಮಾನ್ಯ ಜನರು ಕೂಡ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಹಿಂದೂ ಸಮುದಾಯದ ನಾಯಕರೆಂದು ಹೇಳಿಕೊಳ್ಳುವವರು ಮತ್ತು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರಂಥವರು ದಸರಾ ಕೇವಲ ಸಾಂಸ್ಕೃತಿಕ ಹಬ್ಬವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ, ಬಾನು ಮುಷ್ತಾಕ್ ಅವರು ತಮ್ಮ ಹಿಂದಿನ ಹೇಳಿಕೆಗಳ ಬಗ್ಗೆ ಕ್ಷಮೆಯಾಚಿಸಲಿ ಅಥವಾ ಸ್ಪಷ್ಟೀಕರಣ ನೀಡಲಿ ಎಂದು ಕೇಳಿದಾಗ, ಸರಕಾರದ ವತಿಯಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿಲ್ಲ. ಇದು, ನಮ್ಮ ಭಾವನೆಗಳನ್ನು ಸರಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ ಎಂಬುದನ್ನು ಸೂಚಿಸುತ್ತದೆ.

ದಸರಾ ಉತ್ಸವ ಹಿಂದಿನಂತೆ ಕೇವಲ ವೈಭವದ ಮೆರವಣಿಗೆಯಾಗಿ ಉಳಿಯದೆ, ಧಾರ್ಮಿಕ ಶ್ರದ್ಧೆಯ ಕೇಂದ್ರವಾಗಿಯೂ ಬೆಳೆಯಬೇಕು. ಈ ಹಿಂದೆ ಕುವೆಂಪು, ಶಿವರಾಮ ಕಾರಂತ, ಡಿವಿಜಿ ಅವರಂಥ ದಾರ್ಶನಿಕರನ್ನು ಆಹ್ವಾನಿಸಿದಾಗ ಯಾವುದೇ ವಿವಾದವಿರಲಿಲ್ಲ, ಏಕೆಂದರೆ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯ ಜತೆಗೆ ನಾಡಿನ ಸಂಸ್ಕೃತಿಗೂ ಗೌರವ ನೀಡಿದ್ದರು. ಇಂಥ ಸೂಕ್ಷ್ಮ ಸಂಗತಿಗಳನ್ನು ಅರ್ಥಮಾಡಿಕೊಳ್ಳದೆ ತೆಗೆದುಕೊಂಡ ಈ ನಿರ್ಧಾರ ಮುಂದಿನ ದಿನಗಳಲ್ಲಿ ದಸರಾದ ಮೂಲ ಆಶಯವನ್ನೇ ಹಾಳುಮಾಡಬಹುದು. ಸರಕಾರವು ಹಿಂದೂಗಳ ಭಾವನೆಗಳನ್ನು ಗೌರವಿಸದೆ, ಕೇವಲ ರಾಜಕೀಯ ಲಾಭಕ್ಕಾಗಿ ಇಂಥ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಖಂಡನೀಯ.

-ಸಂದೀಪ್ ಶರ್ಮಾ ಮೂಟೇರಿ, ಬೆಂಗಳೂರು

ಹೀಗೆ ಮಾಡಬಹುದಲ್ಲ?

ಸಾಹಿತಿ ಬಾನು ಮುಷ್ತಾಕ್ ಅವರು ದಸರಾ ಉತ್ಸವವನ್ನು ಉದ್ಘಾಟನೆ ಮಾಡುವ ವಿಷಯದಲ್ಲಿ ಪರ-ವಿರೋಧದ ಪ್ರತಿಕ್ರಿಯೆಗಳು ಬರುತ್ತಿವೆ. ಈ ನಡುವೆ, ರಾಜವಂಶಸ್ಥರೂ ಸಂಸದರೂ ಆಗಿರುವ ಯದುವೀರ ಒಡೆಯರ್ ಅವರು, 'ಬಾನು ಮುಷ್ತಾಕ್ ಅವರು ತಾಯಿ ಚಾಮುಂಡೇಶ್ವರಿಗೆ ಗೌರವ ಕೊಟ್ಟರೆ ನಮ್ಮದೇನೂ ತಕರಾರಿಲ್ಲ' ಎಂದಿರುವುದು ಗಮನಾರ್ಹ. ಆದರೂ ಈ ವಿವಾದ ಅಷ್ಟಕ್ಕೇ ನಿಲ್ಲುವಂತೆ ತೋರುತ್ತಿಲ್ಲ. ಹೀಗಾಗಿ, ಬಾನು ಮುಷ್ತಾಕ್ ಅವರ ಕೃತಿಯನ್ನು ಇಂಗ್ಲಿಷ್‌ಗೆ ಅನುವಾದಿಸಿರುವ ದೀಪಾ ಭಸ್ತಿ ಅವರನ್ನೂ ಜತೆಯಾಗಿ ಪರಿಗಣಿಸಿ, ದಸರಾ ಉದ್ಘಾಟನೆಗೆ ಅನುವುಮಾಡಿಕೊಟ್ಟರೆ, ಬಹುಶಃ ಎಲ್ಲಾ ವಿವಾದಗಳೂ ತಗ್ಗುತ್ತವೆ.

-ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

ಯಾಕಿಂಥ ವಿವಾದ?

ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರೆಸ್ಸೆಸ್) ಅಳವಡಿಸಿಕೊಂಡಿರುವ 'ನಮಸ್ತೇ ಸದಾ ವತ್ಸಲೇ ಮಾತೃಭೂಮೇ…' ಗೀತೆಯ ಸಾಲನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸದನದಲ್ಲಿ ಹೇಳಿದ್ದು ಕೆಲವರ ಕಣ್ಣನ್ನು ಕೆಂಪಗಾಗಿಸಿದೆ. ಡಿಕೆಶಿ ಅವರು ಕಾಂಗ್ರೆಸ್ಸಿಗರಾಗಿರುವ ಕಾರಣ ಅದು ವಿವಾದವಾಗಿ ಮಾರ್ಪಟ್ಟು, ಅವರು ಕ್ಷಮೆ ಕೇಳುವುದರೊಂದಿಗೆ ಈ ಪ್ರಹಸನ ಅಂತ್ಯಗೊಂಡಿದೆ. 'ರಾಜಕಾರಣ'ವನ್ನು ಹೊರತುಪಡಿಸಿದರೆ ಈ ಸಾಲಿನಲ್ಲಿ ವಿವಾದಾಸ್ಪದವಾದದ್ದು ಏನಿದೆ ಎಂಬುದು ತಿಳಿಯದು. ಈ ಸಾಲು, ಜತೆಗೆ 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಶ್ಲೋಕ ಮತ್ತು 'ಭರತಭೂಮಿ ನನ್ನ ತಾಯಿ, ನನ್ನ ಪೊರೆವ ತೊಟ್ಟಿಲು… ಸ್ವಾತಂತ್ರ್ಯದ ಸ್ವರ್ಗಕೇರೆ ಪುಣ್ಯದೇಣಿ ಮೆಟ್ಟಿಲು' ಎಂಬ ಕವಿವಾಣಿ ಎಲ್ಲವೂ ಭಾರತೀಯರಾದ ಎಲ್ಲರೂ ಪಠಿಸಬೇಕಾದಂಥವೇ, ಅದರಲ್ಲಿರುವ ತತ್ತ್ವಗಳು ಪಾಲಿಸಬೇಕಾದಂಥವೇ. ಯಾವುದೇ ನಿರ್ದಿಷ್ಟ ರಾಜಕೀಯ ಪಕ್ಷ ಅಥವಾ ಸಂಘಟನೆ ಅವುಗಳ 'ಪೇಟೆಂಟ್' ಪಡೆದುಕೊಂಡಿಲ್ಲವಷ್ಟೇ!

ತಾವು ಈ ಅವಧಿಯಲ್ಲೇ ಮುಖ್ಯಮಂತ್ರಿಯಾಗಲು ಎದುರಾಗಿರಬಹುದಾದ ಅಡೆತಡೆಗಳನ್ನು ಒಂದೊಂದಾಗಿ ಚಾಕಚಕ್ಯತೆಯಿಂದ, ದೃಢಮನಸ್ಕರಾಗಿ ನಿವಾರಿಸಿಕೊಂಡು, ಮುಖ್ಯಮಂತ್ರಿ ಗಾದಿಯ ಸಮೀಪಕ್ಕೆ ಸಾಗುತ್ತಿರುವ ಡಿ.ಕೆ. ಶಿವಕುಮಾರ್ ಅವರಿಗೆ ಅವಶ್ಯಕತೆಯಿಲ್ಲದಿದ್ದರೂ ರಾಜಕೀಯ ಕಾರಣಕ್ಕೆ ಕ್ಷಮೆ ಕೇಳುವ ಅನಿವಾರ್ಯತೆ ಸೃಷ್ಟಿಯಾಗಿದೆಯೇ ಹೊರತು, ಭಾರತೀಯರೇ ಆದ ಅವರಿಂದ ಪ್ರಮಾದವೇನೂ ಆಗಿಲ್ಲ! ಅಲ್ಲದೆ, ಮೇಲಿನ ಯಾವ ಉಕ್ತಿಯಲ್ಲಿಯೂ ವಿವಾದಾಸ್ಪದವಾದದ್ದೇನೂ ಇಲ್ಲ. ಅಷ್ಟೇ ಅಲ್ಲ, ಆರೆಸ್ಸೆಸ್ ಮತ್ತು ಬಿಜೆಪಿ ಮಾತ್ರವೇ ದೇಶಪ್ರೇಮಿ ಸಂಘಟನೆಗಳಲ್ಲ.

-ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಎಲ್ಲೋಡಿ ಕಾರ್…

'ಶಿಶಿರಕಾಲ' ಅಂಕಣದಲ್ಲಿ (ಆ.29) ಪ್ರಕಟವಾದ ಅಮೆರಿಕದ ಕಾನೂನುಗಳ ಕುರಿತಾದ ನಾಲ್ಕನೆಯ ಕಂತು, ಅಲ್ಲಿನ ಸಾರಿಗೆ ವ್ಯವಸ್ಥೆಯ ಬಗ್ಗೆ ಕೂಲಂಕಷ ಮಾಹಿತಿಯನ್ನು ಒದಗಿಸಿದೆ. ಕಾನೂನಿನ ಪಾಲನೆಯ ವಿಷಯದಲ್ಲಿ ಶಿಸ್ತುಬದ್ಧವಾಗಿದ್ದರೂ, ಕಾರುಗಳ ಯದ್ವಾತದ್ವಾ ಚಲನೆ ಮತ್ತು ಅತಿವೇಗವು ಅಪಘಾತಗಳಿಗೆ ದಾರಿ ಮಾಡಿಕೊಡುತ್ತದೆ, ಅದು ತೀವ್ರನೋವುಗಳಿಗೆ-ಸಾವುಗಳಿಗೆ ಕಾರಣವಾಗುತ್ತದೆ. ನಮ್ಮ ದೇಶದಲ್ಲಾದರೋ ಸಾರಿಗೆ ವ್ಯವಸ್ಥೆಯು ಸುಧಾರಣೆಗಳಿಂದ ಇನ್ನೂ ದೂರವಿದೆ! ಲೇಖನಮಾಲೆ ತುಂಬಾ ಚೆನ್ನಾಗಿ ಮೂಡಿಬರುತ್ತಿದ್ದು, ಮುಂದಿನ ಕಂತುಗಳಿಗೆ ನಿರೀಕ್ಷಿಸುವಂತೆ ಮಾಡಿದೆ. ಅಂಕಣಕಾರರಿಗೆ ಅಭಿನಂದನೆಗಳು.

-ನಾರಾಯಣ ಕಡಿವಾಳ್, ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ನವೀನ ಕೆ., (ಇಮೇಲ್ ಮೂಲಕ)**
ಭಟ್ರೇ, ಅಡುಗೆ ಮಾಡುವವರಿಗೆ ಇರಬೇಕಾದ ಮುಖ್ಯ ಗುಣ ಯಾವುದು?
- **ಅಡುಗೆ ಮತ್ತು ಊಟ ಮಾಡುವವರ ಮೇಲೆ ಪ್ರೀತಿ!**

- **ಬಾಲಚಂದ್ರ ಪೋತೆ, ನಂಜನಗೂಡು**
ಸರ್, ಅಡುಗೆ ಮನೆ ಅಸ್ತವ್ಯಸ್ತವಾಗಿದ್ದರೆ ಅದು ಏನನ್ನು ಸೂಚಿಸುತ್ತದೆ?
- **ಆ ಮನೆಯಲ್ಲಿರುವವರು ಆನಂದದಿಂದ ಇದ್ದಾರೆ ಎಂಬುದನ್ನು ಸೂಚಿಸುತ್ತದೆ!**

- **ಸುರೇಶ ಪಲ್ಯ, ಚಿಕ್ಕಬಳ್ಳಾಪುರ**
ಭಟ್ರೇ, ಕೇಕ್ ಇಲ್ಲದ ಪಾರ್ಟಿಯನ್ನು ಏನೆಂದು ಕರೆಯಬಹುದು?
- **ಮೀಟಿಂಗ್!**

- **ತಿಮ್ಮೇಶ್, (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ರಜಾದಿನ ಹೇಗಿರಬೇಕು?
- **ಏನೇ ತಿಂದರೂ ಕ್ಯಾಲೋರಿ ಏರಬಾರದು ಅಂತಿರಬೇಕು!**

- **ರತ್ನಾ ಪ್ರಭಾಕರ, ಬೈರಮಂಗಲ**
ಭಟ್ರೇ, ಅಡುಗೆ ಮಾಡಲು ಕಲಿತವರು ಏನನ್ನು ಕಲಿಯುವುದಿಲ್ಲ?
- **ಅಡುಗೆಮನೆ ಸ್ವಚ್ಛಗೊಳಿಸುವುದನ್ನು!**

- **ವಾಜರಹಳ್ಳಿ ಸತ್ಯ, ಬೆಂಗಳೂರು**
ಭಟ್ರೇ, ಮನಸ್ಸನ್ನು ಪ್ಯಾರಶೂಟ್‌ಗೆ ಹೋಲಿಸುತ್ತಾರಲ್ಲ?
- **ಕಾರಣ ಅವನ್ನು ಓಪನ್ ಮಾಡಿದಾಗ ಮಾತ್ರ ಕೆಲಸ ಮಾಡುತ್ತದಲ್ಲ?!**

- **ಕೆ.ಎಲ್.ಸಿಂಹ, ಹೊಸಕೆರೆಹಳ್ಳಿ**
ಸರ್, ನಿಮ್ಮ ದೃಷ್ಟಿಯಲ್ಲಿ 4 ಜನರ ಮುಂದೆ ನಮಗೆ ಸಿಗಬಹುದಾದ ಸದವಕಾಶ ಅಂದ್ರೆ, ಯಾವುದು?
- **ಬಾಯಿ ಮುಚ್ಚಿಕೊಂಡಿರುವ ಅವಕಾಶ!**

- **ಭರತ್ ಶೆಟ್ಟಿ, (ಇಮೇಲ್ ಮೂಲಕ)**
ಸರ್, ಸಂತೃಪ್ತ ಮತ್ತು ಸಂತಸ ಜೀವನ ಅನ್ನೋದು ಇಲ್ಲ ಅಂತಾರಲ್ಲ?
- **ಹೂಂ.. ಅದು ಇಲ್ಲ, ಆದರೆ ಅದನ್ನು ನಾವು ಸೃಷ್ಟಿಸಿಕೊಳ್ಳಬಹುದು!**

- **ಸತೀಶ್ ಎಲ್.ವಿ., (ಇಮೇಲ್ ಮೂಲಕ)**
ಸರ್, ನೀವು ಬಹಳ ಆರ್ಗ್ಯುಮೆಂಟ್ ಮಾಡ್ತೀರಿ ಅಂತ ಇಲ್ಲೊಬ್ಬಳು ಹೇಳ್ತಾಳಲ್ಲ?
- **ಅದು ಆರ್ಗ್ಯುಮೆಂಟ್ ಅಲ್ಲ, ನಾನು ಸರಿ ಹೇಗೆ ಎಂಬುದನ್ನು ಸರಳವಾಗಿ ಹೇಳುವ ಪರಿ!**

ಹಬ್ಬದ ನಂತರದ ಸಮತೋಲನಕ್ಕಾಗಿ ಅಜ್ಜಿಯ ಸೂತ್ರಗಳು

ಆಯುರ್ವೇದವು ಹಬ್ಬದ ವಿಶೇಷ ಖಾದ್ಯಗಳಿಂದ ದೂರವಿರಲು ಎಂದಿಗೂ ಹೇಳುವುದಿಲ್ಲ! ನಮ್ಮ ಆಚರಣೆಯು ಸ್ವಾಸ್ಥ್ಯ ಮತ್ತು ಸಂತೋಷಗಳ ಸಮತೋಲನವನ್ನು ಕಾಪಾಡಿಕೊಳ್ಳುವ ಪ್ರಯತ್ನವಾಗಿರಲಿ ಎಂಬುದು ನಮ್ಮ ಹಿರಿಯರ ಆಶಯ. ತಂಬುಳಿಯಂಥ ಪಾಕವಿಧಾನಗಳು ಕೇವಲ ಹಳೆಯ ಸಂಪ್ರದಾಯಗಳಲ್ಲ, ಅವು ಭೋಗದಿಂದ ಯೋಗಕ್ಷೇಮಕ್ಕೆ ಮರಳಲು ನಮಗೆ ಸಹಾಯ ಮಾಡುವ ಜೀವಂತ ಸಾಧನಗಳಾಗಿವೆ.



ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ಗಣೇಶ ಚತುರ್ಥಿಯ ಹಬ್ಬದ ನಂತರ ಮನೆಯಲ್ಲಿ ತುಪ್ಪ ಮತ್ತು ಧೂಪದ ಪರಿಮಳ ಇನ್ನೂ ಆವರಿಸಿತ್ತು. ಮೋದಕಗಳು, ಹೋಳಿಗೆಗಳು, ಹುರಿದ ತಿಂಡಿಗಳು ಮತ್ತು ಸಿಹಿಖಾದ್ಯಗಳನ್ನು ಕುಟುಂಬ ಮತ್ತು ಸ್ನೇಹಿತರೊಂದಿಗೆ ಹಂಚಿಕೊಂಡಾಗಿತ್ತು. ನಮ್ಮಲ್ಲಿ ಅನೇಕರಂತೆ ಪುಟಾಣಿ ಮೀರಾ ಕೂಡ ಹಬ್ಬದಲ್ಲಿ ಕುಣಿದು ಕುಪ್ಪಳಿಸಿದ್ದಳು. ಹಾಡಿ ನಲಿದಿದ್ದಳು. ಕೋಡುಬಳೆ ಚಕ್ಕುಲಿಗಳನ್ನು ಸವಿದಿದ್ದಳು. ಆದರೆ ಮರುದಿನ ಯಾಕೋ ಮಂಕಾಗಿದ್ದಳು. ಅವಳ ಹೊಟ್ಟೆ ಉಬ್ಬಿತ್ತು, ಮೈಭಾರ ಎನಿಸುತ್ತಿತ್ತು. ಜ್ವರ ಬರುವ ಹಾಗಿತ್ತು. ಅವಳ ನಾಲಿಗೆ ನೋಡಿದಾಗ ಅದರ ಮೇಲೆ ಬೆಳ್ಳಗಿನ ದಪ್ಪನಾದ ಪದರ ಮೂಡಿತ್ತು. ಹಸಿವು ಹೆಚ್ಚಿಲ್ಲದ ಕಾರಣ ಅವಳು ಏನಾದರೂ ಲಘು ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಸೇವಿಸಲು ಇಚ್ಛಿಸಿದಳು.

ಮೀರಾಳ ಸ್ಥಿತಿ ಕಂಡು ಅವಳ ಅಜ್ಜಿ ಎಲ್ಲವನ್ನೂ ತಿಳಿದಂತೆ ಮುಗುಳ್ನಕ್ಕಳು. ''ಹಬ್ಬಗಳು ರುಚಿರುಚಿಯಾದ ಖಾದ್ಯಗಳನ್ನು ಸವಿಯಲೇ ಇರುವುದು, ಮಗು. ಆದರೆ ಹಬ್ಬದ ನಂತರ ನಮ್ಮನ್ನು ಮತ್ತೆ ಸಮತೋಲನದ ಕಡೆ ಕರೆದೊಯ್ಯುವ ಸಮಯ ಬರುತ್ತದೆ. ಆಯುರ್ವೇದವು ಸ್ವಾಸ್ಥ್ಯವೆಂಬ ಸಮತೋಲನವನ್ನು ಹೇಗೆ ಪುನಃ ಅನುಭವಿಸುವುದು ಎಂದು ನಮಗೆ ಕಲಿಸುತ್ತದೆ'' ಎಂದು ಹೇಳುತ್ತಾ ಅವಳು ಅಡುಗೆಮನೆಗೆ ನಡೆದಳು.

- **ತಾಜಾ ತಂಬುಳಿಯ ಮ್ಯಾಜಿಕ್:** ಕರ್ನಾಟಕದಲ್ಲಿ ತಲೆಮಾರುಗಳಿಂದ, ತಂಬುಳಿಯು ಹಬ್ಬದ ಆನಂದ ಮತ್ತು ದೈನಂದಿನ ಸಮತೋಲನದ ನಡುವಿನ ಸೇತುವೆಯಾಗಿದೆ. ಇದು ವಿವಿಧ ರೀತಿಯ ಸೊಪ್ಪು/ಬಗೆ ಬಗೆಯ ತರಕಾರಿ ಮತ್ತು ಜೀರ್ಣಕ್ಕೆ ಸಹಾಯ ಮಾಡುವ ದ್ರವ್ಯಗಳೊಂದಿಗೆ ರುಬ್ಬಿದ ತೆಳುವಾದ ಮಜ್ಜಿಗೆ. ಜೀರ್ಣಕ್ಕೆ ಜಡವಾದ ಮೊಸರಿನ ತಯಾರಿಕೆಗಳಿಗಿಂತ ಭಿನ್ನವಾಗಿರುವ ತಂಬುಳಿಯು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ತ್ರಿದೋಷಗಳಾದ ವಾತ-ಪಿತ್ತ-ಕಫಗಳನ್ನು ಶಮನಗೊಳಿಸಿ, ಹೊಟ್ಟೆಯನ್ನು ತಂಪಾಗಿಸಿ, ದೇಹವನ್ನು ಹಗುರವಾಗಿರಿಸುತ್ತದೆ.

ತನ್ನ ಅಜ್ಜಿಯು ಒಂದು ಚಮಚ ಜೀರಿಗೆಯನ್ನು ಸ್ವಲ್ಪ ಕೊಬ್ಬರಿಎಣ್ಣೆ ಮತ್ತು ತೆಂಗಿನ ತುರಿಯೊಂದಿಗೆ ಹುರಿದು, ಮಜ್ಜಿಗೆಯೊಂದಿಗೆ ರುಬ್ಬುವುದನ್ನು ಮೀರಾ ನೋಡುತ್ತಿದ್ದಳು. ಕೊನೆಯಲ್ಲಿ ಸ್ವಲ್ಪ ಹಿಂಗು ಮತ್ತು ಕರಿಬೇವಿನ ಒಗ್ಗರಣೆಯನ್ನೂ ಹಾಕಲಾಯಿತು. ''ತೊಗೋಳೇ ಮೀರಾ, ಇದು ಜೀರಾ ತಂಬುಳಿ. ಸ್ವಲ್ಪ ಮೆತ್ತಗಿನ ಅನ್ನದ ಜತೆ ಇದನ್ನು ಕಲಸಿಕೊಂಡು ತಿಂದರೆ ಯಾವುದೇ ಮಾತ್ರೆಗಿಂತಲೂ ವೇಗವಾಗಿ ನಿನ್ನ ಹೊಟ್ಟೆಯನ್ನು ಇದು ಸರಿಪಡಿಸುತ್ತದೆ'' ಎಂದಳು ಅಜ್ಜಿ. ಮೀರಾ, ಅಜ್ಜಿಯ ಸಲಹೆಯಂತೆ ಮಾಡಿದಳು. ತಂಬುಳಿಯು ಬಹಳ ರುಚಿಯಾಗಿತ್ತು. ಸ್ವಲ್ಪ ಸಮಯದಲ್ಲೇ ಅವಳ ಹೊಟ್ಟೆಯಲ್ಲಿನ ಕಿರಿಕಿರಿ ಶಮನವಾದ ಅನುಭವ.

ದಿನ ಕಳೆದಂತೆ, ಮೀರಾ ತನ್ನ ಅಜ್ಜಿಯು ಹಬ್ಬಗಳ ನಂತರ ಯಾವಾಗಲೂ ಬಳಸುವ ಕೆಲವು ಪಾಕವಿಧಾನಗಳನ್ನು ಕಲಿತಳು. ಆಯುರ್ವೇದದ ಶಾಸ್ತ್ರ ಸಮ್ಮತವಾಗಿರುವ ಪ್ರತಿಯೊಂದು ಖಾದ್ಯವು ಸಹ ದೇಹಕ್ಕೆ ಅಮೃತವಿದ್ದಂತೆ.

- **ಜೀರಾ ತಂಬುಳಿ (ಜೀರಿಗೆ ಮಜ್ಜಿಗೆ):** ಜೀರಿಗೆಯು ಹೊಟ್ಟೆನೋವು ಮತ್ತು ಉಬ್ಬರವನ್ನು ಕಡಿಮೆ ಮಾಡುತ್ತದೆ. ಕರಿಬೇವು ಜೀರ್ಣಕ್ರಿಯೆಯನ್ನು ಬೆಂಬಲಿಸುತ್ತದೆ ಮತ್ತು ಮಜ್ಜಿಗೆಯು ತ್ರಿದೋಷಗಳನ್ನು ಶಮನಮಾಡುತ್ತದೆ. ಜೀರಿಗೆಯನ್ನು ತೆಂಗಿನ ತುರಿ, ಒಂದು ಚಿಟಿಕೆ ಮೆಣಸಿನಲ್ಲಿ ಹುರಿದು, ಚೆನ್ನಾಗಿ ಕಡೆದ ಮಜ್ಜಿಗೆಯೊಂದಿಗೆ ರುಬ್ಬುವುದು. ನಂತರ ಮೇಲೆ ಒಗ್ಗರಣೆ ನೀಡಿ ಕಲ್ಲುಪ್ಪನ್ನು ಬೆರೆಸಿದರೆ ಜೀರಿಗೆ ತಂಬುಳಿ ಸಿದ್ಧ. ''ತಂಬುಳಿಯನ್ನು ರಾತ್ರಿಯಿಡೀ ಫ್ರಿಜ್‌ನಲ್ಲಿ ಎಂದಿಗೂ ಇಡಬೇಡಿ'' ಎಂದು ಅಜ್ಜಿ ಎಚ್ಚರಿಸಿ, ''ಇದನ್ನು ಯಾವಾಗಲೂ ಸೇವಿಸುವುದಕ್ಕೆ ಕೆಲ ಸಮಯ ಮುನ್ನವೇ ತಯಾರಿಸಬೇಕು ಮತ್ತು ಆಗಲೇ ಸೇವಿಸಬೇಕು'' ಎಂದು ಸಲಹೆಯಿತ್ತಳು.
- **ಶುಂಠಿ ತಂಬುಳಿ:** ಸಿಹಿಯಾದ ಮೋದಕ, ಲಡ್ಡು ಮತ್ತು ಹುರಿದ ತಿಂಡಿಗಳ ನಂತರದ ಆಲಸ್ಯ ಹೋಗಿಸಿ ದೇಹೇಂದ್ರಿಯಗಳನ್ನು ಚುರುಕುಗೊಳಿಸಲು ಶುಂಠಿ ತಂಬುಳಿ ಅತ್ಯಂತ ಸಹಾಯಕಾರಿ. ತಾಜಾ ಶುಂಠಿಯನ್ನು ತೆಂಗಿನ ತುರಿಯೊಂದಿಗೆ ಸ್ವಲ್ಪ ತುಪ್ಪದಲ್ಲಿ ಹುರಿದು, ಹುಳಿಯಿಲ್ಲದ ಮಜ್ಜಿಗೆಯೊಂದಿಗೆ ಸ್ವಲ್ಪ ಉಪ್ಪಿನ ಜತೆ ರುಬ್ಬಿ, ಮೇಲೊಗ್ಗರಣೆ ನೀಡಿದರೆ ಅದುವೇ ಶುಂಠಿ ತಂಬುಳಿ. ಈ ತಂಬುಳಿಯು ಜಠರಾಗ್ನಿಯನ್ನು ಉತ್ತೇಜಿಸಿ ಮಲಪ್ರವೃತ್ತಿಯನ್ನು ಸರಿಪಡಿಸುತ್ತದೆ. ಅದರೆ ಬೇಸಗೆಯಲ್ಲಿ, ಉಷ್ಣಪ್ರಕೃತಿಯವರು ಜೋಪಾನವಾಗಿ ಬಳಸಬೇಕು.
- **ದೊಡ್ಡಪತ್ರೆ ತಂಬುಳಿ:** ತುಂಬಾ ಸಿಹಿತಿಂಡಿಗಳ ಸೇವನೆಯಿಂದಾಗಿ ಗಂಟಲು ತುರಿಕೆ, ನೆಗಡಿ, ತಲೆಭಾರ ಅನುಭವಿಸುವಾಗ, ಅಜ್ಜಿಯು ಹಿತ್ತಲಿನಿಂದ ದೊಡ್ಡಪತ್ರೆ ಸಸ್ಯದ ಎಲೆಗಳನ್ನು ಆರಿಸುತ್ತಾಳೆ. ಅವಳು ಎಲೆಗಳನ್ನು ಕಾಳುಮೆಣಸಿನೊಂದಿಗೆ ತುಪ್ಪದಲ್ಲಿ ಲಘುವಾಗಿ ಹುರಿದು, ಮಜ್ಜಿಗೆಯಲ್ಲಿ ರುಬ್ಬಿ, ಒಗ್ಗರಿಸಿ ಅಕ್ಕಿ ಗಂಜಿಯೊಂದಿಗೆ ಸೇವಿಸಲು ನೀಡುತ್ತಾಳೆ.

ರುಚಿಕರವಾದ ಈ ತಂಬುಳಿ ಮೀರಾಳಿಗೆ ಬಹಳ ಪ್ರಿಯ. ಸೇವಿಸಿದೊಡನೆಯೇ ಆರಾಮ. ಇದು ಅವಳ 'ಅಜ್ಜಿಯ ಆಹಾರ'ವೆಂಬ ಔಷಧಿಯ ಚಮತ್ಕಾರ.

ಹಬ್ಬದ ಅಸ್ವಾಸ್ಥ್ಯವನ್ನು ನೀಗುವ ಕೆಲವು ಪಾನೀಯಗಳೂ ಇವೆ. ತಂಬುಳಿ ರೂಪದಲ್ಲೂ ಮಜ್ಜಿಗೆಯನ್ನು ಸೇವಿಸಲು ಕೆಲವರಿಗೆ ಸಾಧ್ಯವಾಗದೆ ಇರಬಹುದು. ಅಂಥ ಸಮಯದಲ್ಲಿ ಸಂಸ್ಕರಿಸಿದ ನೀರನ್ನು ಸೇವಿಸಬಹುದು. ಅಂಥ ಕೆಲವು ಇಲ್ಲಿವೆ:

- **ಹಿಂಗು ಜೀರಿಗೆ ನೀರು:** ನೀರಲ್ಲಿ ಹುರಿದ ಜೀರಿಗೆ ಪುಡಿಯೊಂದಿಗೆ ಒಂದು ಚಿಟಿಕೆ ಹಿಂಗನ್ನು ಹಾಕಿ ಕುದಿಸಿ. ಈ ನೀರನ್ನು ಬಿಸಿಯಾಗಿ ಹೀರಿದಾಗ, ಹೊಟ್ಟೆಯುಬ್ಬರ, ನೋವು, ವಾಯುವಿನ ಬಿಗಿತವನ್ನು ಶಮನ ಗೊಳಿಸಿ, ಹಸಿವೆಯನ್ನು ಚುರುಕುಗೊಳಿಸುತ್ತದೆ.
- **ಅಜ್ವೈನ್ ಟೀ:** ಆಲೂಗಡ್ಡೆ, ಕಾಳುಗಳು, ಬಟಾಣಿಗಳು ಮೀರಾಳಿಗೆ ಹೊಟ್ಟೆ ನೋವು ನೀಡಿದಾಗ, ಅಜ್ಜಿ ಓಮದ ಕಾಳುಗಳನ್ನು ನೀರಿನಲ್ಲಿ ಕುದಿಸಿ, ಅದನ್ನು ಸೋಸಿ ಟೀ ರೀತಿಯಾಗಿ ಬಿಸಿಬಿಸಿಯಾಗಿ ಹೀರಲು ನೀಡುತ್ತಾಳೆ. ''ಇದು ಹೊಟ್ಟೆಯಲ್ಲಿ ಗುಡುಗುಡು ಮಾಡುವ ಗಾಳಿಯನ್ನು ಓಡಿಸುತ್ತದೆ , ಕುಡಿ'' ಎಂದು ಹಾಸ್ಯ ಮಾಡುತ್ತಾಳೆ. ಅದರಂತೆಯೇ, ಈ ಅಜ್ವೈನ್ ಟೀ ಕುಡಿದ ಸ್ವಲ್ಪ ಸಮಯದಲ್ಲೇ ವಾಯುವು ಕೆಳಮುಖವಾಗಿ ಸಶಬ್ದವಾಗಿ ಹೊರಗೆ ಹೋದಾಗ ಮೀರಾಳಿಗೆ ಎಲ್ಲಿಲ್ಲದ ಸಮಾಧಾನ!

- **ಪೊಂಗಲ್ ಇಲ್ಲವೇ ಗಂಜಿ:** ಅಂದು ಸಂಜೆಯ ಹೊತ್ತಿಗೆ ಮೀರಾಳಿಗೆ ಚೆನ್ನಾಗಿ ಹಸಿವಾದಾಗ ಅಜ್ಜಿಯು ಹಬೆಯಾಡುವ ಬಟ್ಟಲಿನಲ್ಲಿ ಹೆಸರು ಬೇಳೆಯಿಂದ ತಯಾರಿಸಿದ ತೆಳುವಾದ ಪೊಂಗಲ್ ಅನ್ನು ಬಡಿಸಿದರು. ಅಕ್ಕಿ ಮತ್ತು ಹೆಸರುಬೇಳೆಯನ್ನು ಸ್ವಲ್ಪ ಹುರಿದು ಅರಿಶಿನದೊಂದಿಗೆ ಸ್ವಲ್ಪ ಎಣ್ಣೆ ಹಾಕಿ ಬೇಯಿಸಿ ನಂತರ ತುಪ್ಪದಲ್ಲಿ ಹಿಂಗು ಜೀರಿಗೆ ಒಗ್ಗರಣೆ ಮಾಡುವುದು ಇದರ ತಯಾರಿಕಾ ಕ್ರಮ. ಇದು ಹಗುರವಾದರೂ ಪೌಷ್ಟಿಕವಾದ ಆಹಾರ. ಇದು ಎಲ್ಲರಿಗೂ ಹಿತವನ್ನು ನೀಡುವ ಆಹಾರ.

ಇತರ ದಿನಗಳಲ್ಲಿ, ಜೀರ್ಣಾಂಗವ್ಯೂಹವು ಪೊಂಗಲ್ ಅನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೆ ತುಂಬಾ ದುರ್ಬಲವಾಗಿದ್ದಾಗ, ಅಜ್ಜಿ ತೆಳುವಾದ ಅಕ್ಕಿ ಗಂಜಿಯನ್ನು ಮಾಡುತ್ತಾಳೆ. ಸ್ವಲ್ಪ ಉಪ್ಪು ಸೇರಿಸಿ ಹೆಚ್ಚುವರಿ ನೀರಿನಲ್ಲಿ (ಸುಮಾರು 14 ಪಟ್ಟು) ಹುರಿದಕ್ಕಿಯನ್ನು ತೆರೆದ ಪಾತ್ರೆಯಲ್ಲಿ ಬೇಯಿಸುವುದು. ಮೇಲೆ ಸ್ವಲ್ಪ ತುಪ್ಪವನ್ನು ಸೇರಿಸಿ ಸವಿದರೆ ಬಹಳ ಆರಾಮದಾಯಕ. ''ಈ ಹುರಿದಕ್ಕಿಯ ಗಂಜಿಯು ಹಬ್ಬದ ನಂತರ ನಿಮ್ಮ ಹೊಟ್ಟೆಗೆ ವಿಶ್ರಾಂತಿ ನೀಡುವಂಥದ್ದು'' ಎಂದು ವಿವರಿಸುವ ಅಜ್ಜಿ, ''ಇದು ಜೀರ್ಣಿಸಿಕೊಳ್ಳಲು ಸುಲಭ, ಹೀರಿಕೊಳ್ಳಲು ಸುಲಭ'' ಎನ್ನುವುದನ್ನು ಮರೆಯುವುದಿಲ್ಲ.

- **ಕೋಕಮ್-ಕೊತ್ತಂಬರಿ ಸೂಪ್:** ನೀರಿನಲ್ಲಿ ಕೋಕಮ್ ಸಿಪ್ಪೆಯನ್ನು ಮತ್ತು ಸ್ವಲ್ಪ ಕೊತ್ತಂಬರಿ ಸೊಪ್ಪನ್ನು ಸ್ವಲ್ಪ ಬೆಲ್ಲದೊಟ್ಟಿಗೆ ಹಾಕಿ ಕುದಿಸಿ ರುಚಿಗೆ ತಕ್ಕಷ್ಟು ಉಪ್ಪು ಮತ್ತೆ ಮೇಲೊಗ್ಗರಣೆಯನ್ನು ನೀಡಿದರೆ ಕೋಕಮ್-ಕೊತ್ತಂಬರಿ ಸೂಪ್ ಸಿದ್ಧ. ಈ ಸೂಪ್ ಬಹಳ ಹಿತಕಾರಿ, ರಿಫ್ರೆಶಿಂಗ್ ಮತ್ತು ಹೈಡ್ರೇಟಿಂಗ್.
- **ಆಮ್ಲಾ-ಶುಂಠಿ-ಜೇನುತುಪ್ಪದ ಮಿಶ್ರಣ:** ಬೆಳಗ್ಗೆ ಸ್ವಲ್ಪ ಜೇನುತುಪ್ಪದೊಂದಿಗೆ ತಲಾ ಒಂದು ಟೀ ಚಮಚ ಆಮ್ಲಾ ರಸ ಮತ್ತು ಶುಂಠಿ ರಸವನ್ನು ಸೇವಿಸುವುದು ಜೀರ್ಣಕಾರಿ. ''ನಿದ್ದೆಯಿಲ್ಲದ ಹಬ್ಬದ ರಾತ್ರಿಗಳ ನಂತರ ಇದು ನಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಮಿಶ್ರಣ'' ಎಂದು ಅಜ್ಜಿ ಮೀರಾಳಿಗೆ ಹೇಳುತ್ತಾರೆ. ಆದರೆ ದಿನನಿತ್ಯವೂ ಬಳಸುವ ಮುನ್ನ ವೈದ್ಯರ ಸಲಹೆ ಪಡೆಯುವುದು ಉತ್ತಮ.

ಹಬ್ಬದ ನಂತರ ಪುನಃ ಸ್ವಾಸ್ಥ್ಯದತ್ತ ಹೆಜ್ಜೆಯಿಡಲು ಅಜ್ಜಿ ಮೀರಾಳಿಗೆ ನೀಡಿದ ಇನ್ನೊಂದಿಷ್ಟು ಸಲಹೆಗಳು:

- ದೇಹದಲ್ಲಿ ಜೀರ್ಣಕ್ರಿಯೆಯನ್ನು ಚುರುಕುಗೊಳಿಸಿ ಅಜೀರ್ಣವಾದ ಅಂಶಗಳನ್ನು ಹೊರಹಾಕಲು ದಿನವಿಡೀ ಕಾದಾರಿದ ಬೆಚ್ಚಗಿನ ನೀರನ್ನು ಕುಡಿಯುವುದು ಅಥವಾ ಜೀರಿಗೆ/ಧನಿಯಾ/ಸೋಂಪು/ಶುಂಠಿ/ಭದ್ರಮುಷ್ಟಿ/ಓಮದಿಂದ ಸಂಸ್ಕರಿಸಿದ ನೀರನ್ನು ಸೇವಿಸಬೇಕು.
- ಜೀರ್ಣಕ್ರಿಯೆ ಮೊದಲಿನಂತೆ ಆಗುವವರೆಗೆ ತಂಪು ಪಾನೀಯಗಳು, ಸಿಹಿತಿಂಡಿಗಳು ಮತ್ತು ಕರಿದ ತಿಂಡಿಗಳನ್ನು ತಪ್ಪಿಸಬೇಕು, ಮೊಸರನ್ನು ಬಿಡಬೇಕು.
- ಸಕ್ಕರೆ ಭರಿತವಾದ ಫ್ರೂಟ್ ಜ್ಯೂಸ್, ಇಡ್ಲಿ, ಬ್ರೆಡ್‌ನಂಥ ಬೇಕರಿ ಪದಾರ್ಥಗಳು ಬೇಡ.
- ಹಸಿವಿಲ್ಲದಿದ್ದರೆ ಆಹಾರವನ್ನು ತ್ಯಜಿಸುವುದೇ ಕ್ಷೇಮ.
- ಒಂದು ಅಥವಾ ಎರಡು ದಿನಗಳವರೆಗೆ ಗಂಜಿ/ತೆಳು ಪೊಂಗಲ್‌ನಂಥ ಆಹಾರಕ್ಕೆ ಆದ್ಯತೆ ನೀಡಬೇಕು.
- ಜೀರ್ಣಕ್ರಿಯೆಗೆ ಸಹಾಯ ಮಾಡಲು ಊಟದ ನಂತರ 100-200 ಹೆಜ್ಜೆ ಹಾಕಬೇಕು ಅಥವಾ ವಜ್ರಾಸನದಲ್ಲಿ ಕುಳಿತುಕೊಳ್ಳಬೇಕು.
- ಹಗಲು ನಿದ್ದೆ ಸುತರಾಂ ವರ್ಜ್ಯ.
- ದಿನಚರಿಯನ್ನು ಪುನಃಸ್ಥಾಪಿಸಲು ಬೇಗನೆ ಮಲಗಬೇಕು ಮತ್ತು ಸೂರ್ಯೋದಯದ ಮುನ್ನ ಎದ್ದೇಳಬೇಕು..

ಈ ಎಲ್ಲಾ ಸಲಹೆಗಿಂತ ಮಿಗಿಲಾದ ಸಲಹೆಯೂ ಅಜ್ಜಿಯಿಂದ ಹೊಮ್ಮಿತು. ''ನೀನು ನಿನ್ನ ದೇಹದ ಮಾತನ್ನು ಕೇಳಬೇಕು. ಅದೇ ನಿನಗೆ ಎಲ್ಲವನ್ನೂ ತಿಳಿಸುತ್ತದೆ'' ಎಂದು ಅಜ್ಜಿ ಮೀರಾಳಿಗೆ ನೆನಪಿಸಿದರು. ''ಆಯುರ್ವೇದವು ಕೇವಲ ಆಹಾರದ ಬಗ್ಗೆ ಮಾತ್ರವಲ್ಲದೆ ಸ್ವಾಸ್ಥ್ಯವೆಂಬ ಸಾಮರಸ್ಯದ ಬಗ್ಗೆಯೂ ಸಲಹೆ ನೀಡುತ್ತದೆ. ಮೀರಾ, ಆಯುರ್ವೇದವು ಹಬ್ಬದ ವಿಶೇಷ ಖಾದ್ಯಗಳಿಂದ ದೂರವಿರಲು ಎಂದಿಗೂ ಹೇಳುವುದಿಲ್ಲ! ನಮ್ಮ ಆಚರಣೆಯು ಸ್ವಾಸ್ಥ್ಯ ಮತ್ತು ಸಂತೋಷಗಳ ಸಮತೋಲನವನ್ನು ಕಾಪಾಡಿಕೊಳ್ಳುವ ಪ್ರಯತ್ನವಾಗಿರಲಿ ಎಂಬುದು ನಮ್ಮ ಹಿರಿಯರ ಆಶಯ. ತಂಬುಳಿಯಂಥ ಪಾಕವಿಧಾನಗಳು ಕೇವಲ ಹಳೆಯ ಸಂಪ್ರದಾಯಗಳಲ್ಲ, ಅವು ಭೋಗದಿಂದ ಯೋಗಕ್ಷೇಮಕ್ಕೆ ಮರಳಲು ನಮಗೆ ಸಹಾಯ ಮಾಡುವ ಜೀವಂತ ಸಾಧನಗಳಾಗಿವೆ'' ಎಂದಿತು ಅಜ್ಜಿಯ ಅನುಭವ.

ಮರುದಿನ ಬೆಳಗ್ಗೆ, ಮೀರಾಳಿಗೆ ಸುಲಭವಾಗಿ ಎಚ್ಚರವಾಯಿತು, ಅವಳ ದೇಹದ ಭಾರವು ಮಾಯವಾಗಿತ್ತು. ಶರೀರ-ಇಂದ್ರಿಯ-ಮನಸ್ಸುಗಳು ಲವಲವಿಕೆಯಿಂದ ಕೂಡಿದ್ದವು. ಆಗ ಅವಳಿಗೆ ಹೀಗೆ ಭಾಸವಾಯಿತು- ''ನನ್ನ ಅಜ್ಜಿಯ ಜ್ಞಾನವು ಕೇವಲ ಪಾಕವಿಧಾನಗಳಿಗಿಂತಲೂ ಮಿಗಿಲು. ಅದು ದೇಹವನ್ನು ಗೌರವಿಸಿ, ಅದು ನೀಡುವ ಸೂಚನೆಗಳನ್ನು ಆಲಿಸಿ, ಅದರಂತೆ ನಡೆದು ಅದನ್ನು ಪುನಃ ಸ್ವಾಸ್ಥ್ಯಕ್ಕೆ ತರುವ ಬಹಳ ಉತ್ತಮವಾದ ಮಾರ್ಗ''.

ಹಬ್ಬಗಳು ಬರುತ್ತಲೇ ಇರುತ್ತವೆ, ಸಿಹಿತಿಂಡಿಗಳು ಮತ್ತು ಖಾದ್ಯಗಳು ಅವಳನ್ನು ಯಾವಾಗಲೂ ಆಕರ್ಷಿಸುತ್ತಿರುತ್ತವೆ; ಆದರೆ ಇನ್ನು ಮುಂದೆ ಹುಷಾರು ತಪ್ಪುವ ಅಗತ್ಯವಿಲ್ಲ. ಕಾರಣ, ಈಗ ಮೀರಾಳ ಬಳಿ ಅವಳನ್ನು ನೈಸರ್ಗಿಕವಾಗಿ ಗುಣಪಡಿಸುವ ಆಯುರ್ವೇದದ ಪಾಕವಿಧಾನಗಳ ಶಸ್ತ್ರಾಸ್ತ್ರವಿದೆ. ಅವೆಂದರೆ- ತಂಬುಳಿಗಳ ಹಿತ, ಜೀರಿಗೆ ನೀರಿನ ಜಾದೂ, ಪೊಂಗಲ್‌ನ ಸುಖ, ಹುರಿದಕ್ಕಿ ಗಂಜಿಯ ಪ್ರೀತಿ ಮತ್ತು ಕೊಕಮ್ ಸೂಪಿನ ಸಾಂತ್ವನ!

ಇದನ್ನು ನೆನಪಿಸಿಕೊಂಡು ಅವಳು, ''ಮುಂದಿನ ಬಾರಿ ನಾನು ಅತಿಯಾಗಿ ತಿಂದರೂ ಗಾಬರಿಯಾಗುವುದಿಲ್ಲ. ನಾನು ಅಡುಗೆಮನೆಗೆ ಓಡಿ ಹೋಗಿ ತಂಬುಳಿ ಮಾಡಿಕೊಳ್ಳುತ್ತೇನೆ'' ಎಂದು ಹೇಳಿ ಮುಗುಳ್ನಕ್ಕಳು.

ಈ ಮಾತಿಗೆ ಅಜ್ಜಿ ನಕ್ಕು, ''ಆ! ಅದು ನೋಡು ಮಾತು! ಮಗು, ಹಬ್ಬವನ್ನು ಸಂತೋಷದಿಂದ ಆಚರಿಸೋಣ, ನಂತರ ಜಾಣ್ಮೆಯಿಂದ ಸ್ವಸ್ಥರಾಗೋಣ!'' ಎಂದು ಹೇಳಿದರು. ಹಾಗಂತ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಅಜ್ಜಿ ಎಂದಮೇಲೆ ಬುದ್ಧಿಮಾತು ಹೇಳಲೇಬೇಕಲ್ಲವಾ? ''ಹಬ್ಬದ ಆಚರಣೆಯಲ್ಲಿಯೂ ನಮ್ಮ ಹಸಿವನ್ನು ಗಮನಿಸಿ, ಜೀರ್ಣಶಕ್ತಿಯನ್ನು ಅನುಸರಿಸಿ ಆಹಾರವನ್ನು ಸೇವಿಸಿದರೆ ಈ ಫಜೀತಿ ಬರುವುದೇ ಇಲ್ಲವಲ್ಲಾ ಪುಟ್ಟಾ.... ಹಾಗೆ ನಡೆಯುವುದು ನಿಜವಾದ ಆಯುರ್ವೇದ ಕಣೋ!'' ಎಂದಳು ಮೀರಾಳ ಅಜ್ಜಿ!

ಸಾಟಿ ಇಲ್ಲದ ವ್ಯಕ್ತಿತ್ವದ ಟಿ.ಆರ್. ಶಾಮಣ್ಣ

ಇಂದಿನ ಕೆಲ ನಾಯಕರ ಜತೆ ಶಾಮಣ್ಣನವರನ್ನು ಹೋಲಿಸಿದಾಗ, ಇಂಥ ವ್ಯಕ್ತಿಯೊಬ್ಬರು ಇದ್ದರೆ? ಎಂಬ ಅನುಮಾನ ಹುಟ್ಟುತ್ತದೆ. ಹಣ, ಹೆಂಡ, ತೋಳ್ಬಲದ ಮೇಲೆ ಚುನಾವಣೆ ಗೆಲ್ಲುವ ಹಂತಕ್ಕೆ ಇಂದಿನ ರಾಜಕೀಯ ವ್ಯವಸ್ಥೆ ಮುಟ್ಟಿದೆ. ಆದರೆ ಇಂಥ ಅಪಸವ್ಯಗಳಿಂದ ದೂರವಿದ್ದೂ ಚುನಾವಣೆ ಗೆಲ್ಲಬಹುದು ಎಂಬುದನ್ನು ತೋರಿಸಿಕೊಟ್ಟವರು ಶಾಮಣ್ಣ.

ಪುಣ್ಯಸ್ಮರಣೆ
ಕೆ.ಎಸ್. ನಾಗರಾಜ್
vveditoped@gmail.com

ಅದು 1980ರ ಲೋಕಸಭಾ ಚುನಾವಣೆಯ ಕಾಲಘಟ್ಟ. ರಾಷ್ಟ್ರದ ಮಹಾನ್ ನಾಯಕರುಗಳು ಜನತಾಪಕ್ಷದಿಂದ ಸ್ಪರ್ಧಿಸಿ ಸೋತು ಮನೆ ಸೇರಿದ್ದರೆ, ದಕ್ಷಿಣ ಭಾರತದಿಂದ ಒಬ್ಬರೇ ಒಬ್ಬ ವ್ಯಕ್ತಿ ಲೋಕಸಭೆಯನ್ನು ಪ್ರವೇಶಿಸಿದರು. ಯಾರಪ್ಪಾ ಇವರು? ಎಂಬ ಕುತೂಹಲ ಎಲ್ಲರಲ್ಲೂ ಮನೆ ಮಾಡಿತ್ತು. ಆದರೆ ಸದನವನ್ನು ಪ್ರವೇಶಿಸಿದ ಈ ವ್ಯಕ್ತಿಯ ದೇಹದ ಆಕಾರ ಮತ್ತು ಸರಳ ಉಡುಪನ್ನು ಕಂಡು ಎಲ್ಲರೂ ಹುಬ್ಬೇರಿಸಿದರು. ದಕ್ಷಿಣ ಭಾರತದಿಂದ, ಅದರಲ್ಲೂ ನಿರ್ದಿಷ್ಟವಾಗಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ, ಡಿ.ಪಿ.ಶರ್ಮ ಎಂಬ ದುಡ್ಡಿನ ಕುಳದ ಎದುರು, ಅಲೆ ಇಲ್ಲದ ಪಕ್ಷದ ವತಿಯಿಂದ ಹೀಗೆ ಸ್ಪರ್ಧಿಸಿ ಗೆದ್ದವರು ಟಿ.ಆರ್.ಶಾಮಣ್ಣ. ಹೀಗಾಗಿ ಅವರು ಅಂದು ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದರು. ಶಾಮಣ್ಣನವರ 35ನೇ ಪುಣ್ಯಸ್ಮರಣೆಯ ದಿನವಾದ ಇಂದು (ಆ.30) ಅವರ ಒಂದಿಷ್ಟು ಸಾಧನೆಗಳನ್ನು ಮೆಲುಕುಹಾಕೋಣ.

ಇಂದು ರಾಜಕಾರಣದಲ್ಲಿ ನಾವು ನೋಡುವ ನಾಯಕರುಗಳ ಅಥವಾ ನಮ್ಮೆದುರು ಕಾಣುವ ಚುನಾಯಿತ ಪ್ರತಿನಿಧಿಗಳ ಜತೆಯಲ್ಲಿ ಶಾಮಣ್ಣನವರ ಬದುಕು ಹಾಗೂ ನಡವಳಿಕೆಯನ್ನು ತುಲನೆ ಮಾಡಿ ನೋಡಿದಾಗ, ಇಂಥ ಒಬ್ಬರು ವ್ಯಕ್ತಿ ಇದ್ದರೆ? ಅವರ ಅಂಥ ಜೀವನಶೈಲಿ ನಿಜವೇ? ಎಂಬ ಅನುಮಾನ ಹುಟ್ಟುತ್ತದೆ. ಹಣ, ಹೆಂಡ, ತೋಳ್ಬಲದ ಆಧಾರದ ಮೇಲೆ ಚುನಾವಣೆಯನ್ನು ಗೆಲ್ಲಬಹುದು ಎನ್ನುವಂಥ ಹಂತಕ್ಕೆ ಇಂದಿನ ರಾಜಕೀಯ ವ್ಯವಸ್ಥೆ ಬಂದು ಮುಟ್ಟಿರುವ ಸಂದರ್ಭದಲ್ಲಿ, ಹಣ-ಹೆಂಡದಂಥ ಅಪಸವ್ಯಗಳಿಂದ ದೂರವಿದ್ದು ಚುನಾವಣೆಯನ್ನು ಗೆಲ್ಲಬಹುದು ಎಂಬುದನ್ನು ತೋರಿಸಿಕೊಟ್ಟವರು ಟಿ.ಆರ್. ಶಾಮಣ್ಣನವರು.

ಬೆಂಗಳೂರು ನಗರದ ಅಭಿವೃದ್ಧಿಯ ಹರಿಕಾರರಲ್ಲಿ ಮೊದಲ ಪಂಕ್ತಿಯಲ್ಲಿ ನಿಲ್ಲುವವರು ಟಿ.ಆರ್. ಶಾಮಣ್ಣ, ಬೆಂಗಳೂರು ನಗರವನ್ನು ಮತ್ತು ತಾವು ಪ್ರತಿನಿಧಿಸುವ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಿರುವುದರ ಬಗ್ಗೆ ಅನೇಕರು ಕೊಚ್ಚಿಕೊಳ್ಳಬಹುದು. ಆದರೆ ನಗರದ ಜನರು ಇಂದಿಗೂ ನೆನಪಿಸಿಕೊಳ್ಳುವುದು ಶಾಮಣ್ಣನವರನ್ನು. ಏಕೆಂದರೆ, ಜನರಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು ಮತ್ತು ಇತರ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟವರಲ್ಲಿ ಮೊದಲಿಗರು ಶಾಮಣ್ಣನವರು. ಚುನಾಯಿತ ಪ್ರತಿನಿಧಿಯೊಬ್ಬ ಹೇಗೆ ಕೆಲಸ ಮಾಡಬೇಕು ಎಂಬುದಕ್ಕೆ ಅವರ ದಿನಚರಿಯೇ ಒಂದು ನಿದರ್ಶನ. ಬೆಳಗ್ಗೆ 2 ಗಂಟೆಗಳ ಕಾಲ ಜನರನ್ನು ಭೇಟಿಮಾಡುವುದು, ನಂತರ ಸರಕಾರಿ ಕಚೇರಿಗಳಿಗೆ ಭೇಟಿಯಿತ್ತು ಜನರ ಸಮಸ್ಯೆಗಳ ಕಡೆಗೆ ಗಮನ ನೀಡುವುದು ಇವರ ಕಾರ್ಯಚಟುವಟಿಕೆಯ ಮೊದಲ ಭಾಗವಾಗಿತ್ತು. ಮಧ್ಯಾಹ್ನದ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಜಲಮಂಡಳಿ, ಮಹಾನಗರಪಾಲಿಕೆ, ಬಹುಮಹಡಿ ಕಟ್ಟಡ, ವಿಧಾನಸೌಧ ಇಲ್ಲೆಲ್ಲಾ ಶಾಮಣ್ಣನವರ ಆಗಮನಕ್ಕಾಗಿ ಜನರು ಪ್ರತಿದಿನ ಕಾಯುತ್ತಿದ್ದರು. ಆ ವೇಳೆಯಲ್ಲಿ, ಅಧಿಕಾರಿಗಳಿಗೆ ಹೇಳಿ ಜನಸಾಮಾನ್ಯರ ಕೆಲಸವನ್ನು ಮಾಡಿಸಿಕೊಡುವ ಸಲುವಾಗಿ ಈ ಕಚೇರಿಗಳ ಮುಂದೆ ಶಾಮಣ್ಣ ತಮ್ಮ ಆಟೋದಲ್ಲಿ ಬರುತ್ತಿದ್ದರು. ಕಾದಿರುತ್ತಿದ್ದ ಅಧಿಕಾರಿಗಳು ಶಾಮಣ್ಣನವರ ಆಟೋ ಬಂದು ನಿಲ್ಲುತ್ತಿದ್ದಂತೆಯೇ ಅದರೆಡೆಗೆ ಧಾವಿಸಿ, ಶಾಮಣ್ಣನವರಿಂದ ಕಾರ್ಯಸಂಬಂಧಿ ಆದೇಶವನ್ನು ಸ್ವೀಕರಿಸುತ್ತಿದ್ದರು. ಇದು ಚುನಾಯಿತ ಪ್ರತಿನಿಧಿಯೊಬ್ಬರು ಅನುಸರಿಸಬೇಕಾದಂಥ ಅಧಿಕಾರ ಚಲಾವಣೆಯ ರೀತಿ ಎಂಬುದನ್ನು ಶಾಮಣ್ಣನವರು ಪ್ರತ್ಯಕ್ಷವಾಗಿ ತೋರಿಸುತ್ತಿದ್ದರು. ಜನಸಾಮಾನ್ಯರು ಎಂಥದೇ ಸಮಸ್ಯೆಯನ್ನು ಹೊತ್ತುತಂದರೂ, ಅದನ್ನು ಅಷ್ಟೇ ತಾಳ್ಮೆಯಿಂದ ಕೇಳಿ ಪರಿಹರಿಸಿಕೊಡುತ್ತಿದ್ದ ಶಾಮಣ್ಣ ಅವರ ಬದುಕಿನಲ್ಲಿ ಜಾತಿ-ಮತ ಭೇದಗಳು, ಬಡವ-ಬಲ್ಲಿದ ಎಂಬ ಭಾವಗಳು ಎಂದೂ ಸುಳಿಯಲಿಲ್ಲ. ಭ್ರಷ್ಟಾಚಾರವನ್ನು ನೇರವಾಗಿ ನಿಷ್ಠುರವಾಗಿ ಎದುರಿಸುತ್ತಿದ್ದವರು ಅವರೊಬ್ಬರೇ. ಸತ್ಯವನ್ನು ಹೇಳಲು ಎಂದೂ ಹಿಂದು-ಮುಂದು ನೋಡದ ಶಾಮಣ್ಣ, ಜನಸಾಮಾನ್ಯರಿಗೆ ತೊಂದರೆಯಾದಾಗ 'ತಮ್ಮ ಪಕ್ಷ, ತಮ್ಮ ನಾಯಕ' ಎಂಬ ಯಾವ ಅಂಶವನ್ನೂ ಪರಿಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ.

ಬಡ ಕುಟುಂಬವೊಂದರಲ್ಲಿ ಹುಟ್ಟಿ, ಹೇಳದೆ ಕೇಳದೆ ಮನೆ ಬಿಟ್ಟು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ, ಸೆರೆಮನೆಯಿಂದ ಸೆರೆಮನೆಗೆ ಅನೇಕ ವರ್ಷಗಳವರೆಗೆ ಓಡಾಡುತ್ತಾ ಶಿಕ್ಷೆಯನ್ನು ಅನುಭವಿಸಿದವರು ಶಾಮಣ್ಣ. ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಕಾರಣಕ್ಕೆ ಅವರು ಕಠಿಣ ಶಿಕ್ಷೆಗೆ ಒಳಗಾಗಬೇಕಾಗಿ ಬಂತು; ಆದರೆ ನ್ಯಾಯಾಲಯದಲ್ಲಿ ಈ 'ತಪ್ಪನ್ನು' ಒಪ್ಪಿಕೊಳ್ಳದೆ ಸೆರೆಮನೆ ವಾಸಕ್ಕೆ ಒಡ್ಡಿಕೊಂಡ ಧೈರ್ಯಶಾಲಿ ಶಾಮಣ್ಣನವರು. ಹೀಗೆ ತಮ್ಮ ಮನೆಯನ್ನು ಮರೆತು, ಸ್ವಾತಂತ್ರ್ಯ ಚಳವಳಿಯ ವಿವಿಧ ಆಯಾಮಗಳಲ್ಲಿ ತೊಡಗಿದ್ದ ಶಾಮಣ್ಣನವರು ತಮ್ಮ ತಂದೆಯು ಅನಾರೋಗ್ಯಕ್ಕೆ ಒಳಗಾದ ಕಾರಣದಿಂದ ಮನೆಗೆ ಮರಳಿದರು. ಮನೆಯಲ್ಲಿ ತಾಂಡವವಾಡುತ್ತಿದ್ದ ದುರ್ಭರ ಪರಿಸ್ಥಿತಿಯನ್ನು ಮನಗಂಡ ಶಾಮಣ್ಣ, ಸ್ವಾವಲಂಬನೆಯ ಬದುಕಿಗಾಗಿ ಸ್ವಂತ ಉದ್ಯೋಗವನ್ನು ಆರಂಭಿಸಿದರು.

ಯರವಾಡ ಜೈಲಿನಲ್ಲಿದ್ದಾಗ ಅನೇಕ ಮಹತ್ತರ ಘಟನೆಗಳನ್ನು ಹತ್ತಿರದಿಂದ ಕಂಡವರಾಗಿದ್ದ ಶಾಮಣ್ಣ, 'ಬದುಕಿನಲ್ಲಿ ಮದ್ಯಪಾನ ಸೇರಿದಂತೆ ಯಾವುದೇ ದುಶ್ಚಟಗಳ ದಾಸನಾಗಬಾರದು. ಯಾವಾಗಲೂ ಸತ್ಯವನ್ನೇ ಹೇಳಬೇಕು, ಸರಳವಾಗಿ ಬದುಕಬೇಕು. ಮಹಾತ್ಮ ಗಾಂಧಿಯವರ ಆಶಯದಂತೆ ಸದಾಕಾಲ ಖಾದಿಯನ್ನು ಧರಿಸಬೇಕು' ಎಂಬ ನಿಲುವುಗಳಿಗೆ ಬದ್ಧರಾದರು, ಬದುಕಿನ ಕೊನೆಯ ಕ್ಷಣದ ತನಕ ಅವಕ್ಕೆ ಅಂಟಿಕೊಂಡಿದ್ದರು.

1957ರಲ್ಲಿ ಬೆಂಗಳೂರು ನಗರಪಾಲಿಕೆಯ ಸದಸ್ಯರಾಗಿ, ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ ಶಾಮಣ್ಣನವರು ಮೂರು ಬಾರಿ ಬಸವನಗುಡಿ ಕ್ಷೇತ್ರದ ಶಾಸಕರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ ದುಡಿದರು. ಭಿಕ್ಷುಕರ ಪರಿಹಾರ ನಿಧಿ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಬಸವನಗುಡಿ ಕ್ಷೇತ್ರದಲ್ಲಿ ಶಾಮಣ್ಣನವರ ಹೆಸರು ಮತಗಳನ್ನು ತಂದುಕೊಡುವ ಶಕ್ತಿಯಾಗಿತ್ತು. ಶಾಮಣ್ಣ ಹೇಳಿದರೆಂದರೆ ಮತದಾರರು ಅದರ ವಿರುದ್ಧವಾಗಿ ತೀರ್ಪು ನೀಡುತ್ತಿರಲಿಲ್ಲ. ಶಾಮಣ್ಣನವರು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಇಲ್ಲಿ ಗೆಲ್ಲಿಸಿಕೊಳ್ಳುತ್ತಾರೆ ಎಂಬುದು ಆ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿದ್ದ ಮಾತಾಗಿತ್ತು. ಕಾರಣ ಇಲ್ಲಿನ ಜನರ ಬದುಕಿನ ಒಂದು ಭಾಗವಾಗಿದ್ದ ನಾಯಕ ಅವರು.

ಶಾಮಣ್ಣನವರು 1980ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಗೆದ್ದ ನಂತರ ಬಸವನಗುಡಿ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಹುಣಸೂರಿನ ಎಚ್.ಎಲ್.ತಿಮ್ಮೇಗೌಡರು ಜನತಾ ಪಕ್ಷದ ಅಭ್ಯರ್ಥಿಯಾಗಿದ್ದರೆ, ಲಕ್ಷ್ಮಣರಾಯರು ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪರ್ಧಿಸಿದ್ದರು. ಅಂದಿನ ಮುಖ್ಯಮಂತ್ರಿ ಗುಂಡೂರಾಯರು ಈ ಚುನಾವಣೆ ಯನ್ನು ಪ್ರತಿಷ್ಠೆಯ ಹೋರಾಟವಾಗಿ ಸ್ವೀಕರಿಸಿದ್ದರು. ಆಡಳಿತಾರೂಢ ಪಕ್ಷವು ಏನೆಲ್ಲಾ ಒತ್ತಡ, ತಂತ್ರಗಳನ್ನು ಹೂಡಿದರೂ ತಿಮ್ಮೇಗೌಡರ ಪರವಾಗಿಯೇ ಚುನಾವಣಾ ಫಲಿತಾಂಶ ಹೊರಬಿತ್ತು. ಆಗ ಇಲ್ಲಿನ ಜನ ಹೇಳಿದ್ದು, ''ಈ ಕ್ಷೇತ್ರದಲ್ಲಿ ಶಾಮಣ್ಣನವರ ಮಾತೇ ಅಂತಿಮ, ಹೀಗಾಗಿಯೇ ತಿಮ್ಮೇ ಗೌಡರ ಗೆಲುವಾಯಿತು'' ಅಂತ. 1985ರಲ್ಲಿ, ಜನ ಪ್ರಿಯತೆಯ ಉತ್ತುಂಗದಲ್ಲಿದ್ದ ರಾಮಕೃಷ್ಣ ಹೆಗಡೆಯವರು ಈ ಕ್ಷೇತ್ರದ ಶಾಸಕ ರಾದರು, ಆದರೆ 1989ರ ವೇಳೆಗೆ ಅವರ ಜನ ಪ್ರಿಯತೆ ಕುಸಿದಿತ್ತು. ಕ್ಷೇತ್ರದಲ್ಲಿ ಅವರ ವಿರುದ್ಧ ಅನೇಕ ರೀತಿಯ ಅಭಿಪ್ರಾಯಗಳು ಹರಿದಾಡುತ್ತಿದ್ದವು. ಈ ಸಲದ ಚುನಾವಣೆಯಲ್ಲಿ ಹೆಗಡೆಯವರು ಸೋಲುತ್ತಾರೆ ಅಂತ ಪತ್ರಿಕೆಗಳೂ ಅಭಿಪ್ರಾಯಪಟ್ಟದ್ದುಂಟು. ಆದರೆ ಚುನಾವಣೆಯಲ್ಲಿ ಜಯಶೀಲರಾದದ್ದು ಹೆಗಡೆ ಯವರೇ. ಇದಕ್ಕೆ ಕಾರಣೀ ಭೂತರಾಗಿದ್ದು ಮತ್ತದೇ ಟಿ.ಆರ್. ಶಾಮಣ್ಣನವರು.



ರಾತ್ರಿಯ ವೇಳೆಯಲ್ಲಿ ಕೊಳಚೆ ಪ್ರದೇಶಗಳಿಗೆ ಹೋಗಿ, ಅಲ್ಲಿನ ಮತದಾರರನ್ನು ಹೆಸರುಹಿಡಿದು ಕರೆದು, 'ಈ ಪಕ್ಷಕ್ಕೆ ಮತಹಾಕಿ' ಎಂದು ಶಾಮಣ್ಣ ಹೇಳುತ್ತಿದ್ದರು. ಇಂಥ ಕಡೆಗಳಿಗೆ ರಾತ್ರಿ ವೇಳೆಯಲ್ಲಿ ಹೋಗಲು ಅನೇಕರು ಹೆದರುತ್ತಿದ್ದರು, ಆದರೆ ಶಾಮಣ್ಣನವರಿಗೆ ಯಾವ ಭಯವೂ ಇರಲಿಲ್ಲ, ಕಾರಣ, ಅವರ ಬಗ್ಗೆ ಜನರಲ್ಲಿ ಇದ್ದಂಥ ವಿಶೇಷವಾದ ಗೌರವ! ಒಬ್ಬ ಸಮಾಜಸೇವಕರಾಗಿ, ಸಮರ್ಥ ಜನಪ್ರತಿನಿಧಿಯಾಗಿ ಕಾಣುವುದಷ್ಟೇ ಅಲ್ಲದೆ, ಒಬ್ಬ ಜನಪರ ಹೋರಾಟ ಗಾರರು ಕೂಡ ಆಗಿದ್ದುದು ಶಾಮಣ್ಣನವರ ಹೆಗ್ಗಳಿಕೆ. ಕುಡಿಯುವ ನೀರು, ವಿದ್ಯುತ್ ಬಿಲ್ಲು, ಬಸ್ ಪ್ರಯಾಣ ದರ, ಮನೆ ಕಂದಾಯ ಹೀಗೆ ಯಾವುದೇ ವಿಚಾರದಲ್ಲಿ ರಾಜ್ಯ ಸರಕಾರವು ಜನವಿರೋಧಿ ನಿಲುವನ್ನು ತಳೆದರೆ, ಶಾಮಣ್ಣನವರ ಪ್ರತಿಭಟನೆಯನ್ನು ಕೂಡಲೇ ಎದುರಿಸಬೇಕಾಗಿ ಬರುತ್ತಿತ್ತು. ಅಂದಿನ ಬೆಂಗಳೂರು ನಗರಪಾಲಿಕೆಯು ಜನರಿಗೆ ಆಸ್ತಿ ತೆರಿಗೆಯನ್ನು ಹೆಚ್ಚಿಸಿದ ಸಂದರ್ಭದಲ್ಲಿ ವಿಧಾನಸೌಧದ ಮುಂದೆ ಶಾಮಣ್ಣನವರು ಏಕಾಂಗಿಯಾಗಿ ಧರಣಿ ನಡೆಸಿದ್ದಿದೆ. ಶಾಮಣ್ಣ ಎಂದರೆ ಒಂದು ಶಕ್ತಿ ಎಂಬುದು ಎಲ್ಲರಿಗೂ ತಿಳಿದಿತ್ತು, ಹೀಗಾಗಿ ಅವರ ನಿಷ್ಠುರವನ್ನು ಕಟ್ಟಿಕೊಳ್ಳಲು ಎಲ್ಲರೂ ಹೆದರುತ್ತಿದ್ದರು. ಅವರನ್ನು 'ಸೈಕಲ್ ಶಾಮಣ್ಣ' ಎಂದೂ ಜನರು ಕರೆಯುತ್ತಿದ್ದುದುಂಟು. ದಶಕಗಳ ಹಿಂದೆ 'ಸೈಕಲ್' ಜನಸಾಮಾನ್ಯರ ಪ್ರಮುಖ ವಾಹನವಾಗಿತ್ತು. ಅದರ ಮೇಲೆ ತೆರಿಗೆಯನ್ನು ವಿಧಿಸಿದ್ದಕ್ಕೆ ದೊಡ್ಡ ಹೋರಾಟವನ್ನೇ ಶಾಮಣ್ಣ ಶುರುವಿಟ್ಟುಕೊಂಡರು. ಪರಿಣಾಮ ತೆರಿಗೆಯನ್ನು ರದ್ದುಗೊಳಿಸಬೇಕಾಗಿ ಬಂತು. ಹೀಗೆ ಟಿ.ಆರ್.ಶಾಮಣ್ಣನವರ ಬದುಕು ಹಲವು ಹೋರಾಟದ ಪ್ರಸಂಗಗಳನ್ನು ಒಳಗೊಂಡ ಒಂದು ದಂತಕತೆಯಾಗಿದೆ.

ಚುನಾವಣೆಯ ವೇಳೆ ಶಾಮಣ್ಣನವರು ಎಂದೂ ಹಣದ ಥೈಲಿಯನ್ನು ಹಿಡಿದು ಆ ಚಟುವಟಿಕೆಯಲ್ಲಿ ತೊಡಗಿದವರಲ್ಲ, ಹೆಂಡವನ್ನು ಹಂಚಿದವರಲ್ಲ. ಅವರ ಇಂಥ ಚುನಾವಣಾ ಪ್ರಚಾರ ವೈಖರಿಯು ಇವತ್ತಿನ ಚುನಾವಣಾ ರಾಜಕಾರಣಕ್ಕೆ ಒಂದು ದಿಕ್ಸೂಚಿಯಾಗಬೇಕು. ಚುನಾವಣಾ ಸುಧಾರಣೆ ಮಾಡಲು ಬಯಸುವವರು ಶಾಮಣ್ಣನವರ ಈ ವೈಖರಿಯನ್ನು ಒಮ್ಮೆ ಕೂಲಂಕಷ ಅವಲೋಕಿಸಿದರೆ ಸಾಕು, ಎಷ್ಟೋ ವಿಚಾರ ಗಳು ಅರಿವಿಗೆ ಬರುತ್ತವೆ. ಶಾಮಣ್ಣನವರನ್ನು ಬೆಂಗಳೂರಿನ ಜನರು ಥಟ್ಟನೆ ಗುರುತಿಸುತ್ತಿದ್ದುದು ಅವರು ಓಡಾಡುತ್ತಿದ್ದ ಕರಿಬಣ್ಣದ ಆಟೋರಿಕ್ಷಾದ ಮೂಲಕ. ಅದು ಆಗಾಗ ಓಡಾಡಿದರೆ 'ನಮ್ಮ ಬಡಾವಣೆಗೆ ಶಾಮಣ್ಣ ಬಂದಿದ್ದಾರೆ' ಎಂದು ಜನರು ಸುಲಭವಾಗಿ ಗ್ರಹಿಸುತ್ತಿದ್ದರು.

ತಮ್ಮ ಸೇವಾ ಮನೋಭಾವ, ಪ್ರಾಮಾಣಿಕತೆ, ನೇರವಾದ ನಡವಳಿಕೆಯ ಮೂಲಕ ದಶಕಗಳವರೆಗೆ ಬೆಂಗಳೂರು ನಗರದ, ಅದರಲ್ಲೂ ವಿಶೇಷವಾಗಿ ಬಸವನಗುಡಿ ಭಾಗದ ದೊಡ್ಡ ರಾಜಕೀಯ ಶಕ್ತಿಯಾಗಿದ್ದವರು ಟಿ.ಆರ್.ಶಾಮಣ್ಣ. ಅವರ ನಿಧನದ ನಂತರ ಬೆಂಗಳೂರು ಮಹಾನಗರಿ ಯಲ್ಲಿ ಜನಪರ ಹೋರಾಟ ಗಳು, ಅದರಲ್ಲೂ ಪ್ರಮುಖವಾಗಿ ಜನರಿಗೆ ದೊರೆಯ ಬೇಕಾದ ಮೂಲಸೌಕರ್ಯ ಸಂಬಂಧಿತ ಹೋರಾಟ ಗಳು ನಿಂತುಹೋಗಿವೆ. ಶಾಮಣ್ಣನವರು ಇಂದು ನಮ್ಮ ನಡುವೆ ಇಲ್ಲ, ಆದರೂ ಅವರು ತೊಡಗಿಸಿಕೊಂಡಿದ್ದ ಅನೇಕ ಹೋರಾಟಗಳು, ಬಡಾವಣೆಗಳಲ್ಲಿನ ಅಭಿವೃದ್ಧಿ ಕಾರ್ಯಗಳು ಅವರ ಇರುವಿಕೆಯನ್ನು ಸಾರಿ ಹೇಳುತ್ತವೆ. ಇದೇ ಅಲ್ಲವೇ ಜನಪ್ರತಿಯೊಬ್ಬನ ಸಾರ್ಥಕ ಜೀವನ?

(ಲೇಖಕರು ಹವ್ಯಾಸಿ ಬರಹಗಾರರು)

ಇದು ಅಧಿಕಾರದ ಅಮಲಷ್ಟೇ!

'ಮಿತಿ ತಪ್ಪಿದರೆ ಗತಿಗೇಡು' ಎಂಬ ಮಾತು ಟ್ರಂಪ್‌ರಿಗೆ ಹೊಂದುತ್ತದೆ. ಅಧಿಕಾರ ಬಂದಾಗ ಕುರುಡರಾದರೆ ಏನಾದೀತು ಎಂಬುದಕ್ಕೂ ಅವರೇ ಉದಾಹರಣೆ.

'ಇದು ನಿಜನಾಯಕನ ತಾಕತ್ತು' ಶೀರ್ಷಿಕೆಯ ಸಂಪಾದಕೀಯವು (ಆ.29) ಬದುಕಿನ ಸಾರಾಂಶವನ್ನು ಸಂಕ್ಷಿಪ್ತವಾಗಿ ವಿವರಿಸಿದಂತಿದೆ. ''ಏರುವನು ರವಿ ಏರುವನು, ಬಾನೊಳು ಸಣ್ಣಗೆ ತೋರುವನು; ಏರಿದವನು ಚಿಕ್ಕವನಿರಬೇಕಲೆ ಎಂಬ ಮಾತನು ಸಾರುವನು'' ಎಂಬ ಕವಿವಾಣಿಯು ನಮ್ಮ ಬದುಕಿಗೆ ಮೇಲ್ಪಂಕ್ತಿಯಾಗಬೇಕು. ಯಾರೇ ಆಗಲಿ, ಉನ್ನತ ಸ್ಥಾನದಲ್ಲಿದ್ದಾಗಲೂ 'ನನಗಿಂತ ಕಿರಿಯರಿಲ್ಲ' ಎಂಬ ಭಾವನೆಯನ್ನು ಹೊಂದಿದ್ದರೆ ಅದಕ್ಕಿಂತ ಶ್ರೇಯ ಮತ್ತೊಂದಿಲ್ಲ. ಅಷ್ಟೇ ಅಲ್ಲ, ಬೆಳಕಿನ ಮೂಲವನ್ನು ಹೊಂದಿದಾತನು ಕತ್ತಲೆಯನ್ನು ಹೋಗಲಾಡಿಸಲು ಯತ್ನಿಸಬೇಕೇ ಹೊರತು, ಇನ್ನೂ ಕತ್ತಲೆಯಾಗಿಸುವುದಲ್ಲ. 'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ' ಎಂಬ ಮಾತೂ ಇಲ್ಲಿ ನೆನಪಿಗೆ ಬರುತ್ತಿದೆ.

ಇವೆಲ್ಲವೂ 'ದೊಡ್ಡಣ್ಣ' ಎಂಬ ಹಣೆಪಟ್ಟಿ ಹೊತ್ತಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅನ್ವಯ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಮಹತ್ವಾಕಾಂಕ್ಷೆ ತಪ್ಪಲ್ಲ, ಆದರೆ ಅತಿ ಮಹತ್ವಾಕಾಂಕ್ಷೆಯು ಒಳಿತಿಗಿಂತ ಕೆಡುಕನ್ನೇ ಹೆಚ್ಚು ಮಾಡುತ್ತದೆ. 'ಮಿತಿ ತಪ್ಪಿದರೆ ಗತಿಗೇಡು' ಎಂಬ ಮಾತೂ ಟ್ರಂಪ್ ಅವರಿಗೆ ಹೊಂದುವಂಥದ್ದೇ. ಅಧಿಕಾರ ಬಂದಾಗ ಯಾರಾದರೂ ಕುರುಡರಾದರೆ ಏನಾದೀತು ಎಂಬುದಕ್ಕೂ ಟ್ರಂಪ್ ಅವರೇ ಉದಾಹರಣೆ. ಎರಡನೇ ಅವಧಿಗೆ ಅಧ್ಯಕ್ಷರಾದಾಗಿನಿಂದ ಅವರ ನಡವಳಿಕೆ ವಿಲಕ್ಷಣವಾಗತೊಡಗಿದೆ. ಅತ್ಯುತ್ತಮ ಬಾಂಧವ್ಯ ಹೊಂದಿದ್ದ ಭಾರತದ ಮೇಲೂ ಅವರು ಉರಿಗಣ್ಣು ಬೀರುತ್ತಿದ್ದಾರೆಂದರೆ, ಅಧಿಕಾರದ ಪಿತ್ತ ನೆತ್ತಿಗೇರಿದೆ ಅಂತಲೇ ಅರ್ಥ, ಅಲ್ಲವೇ? ತಾವು ಏನು ಮಾಡಿದರೂ ನಡೆಯುತ್ತದೆ ಮತ್ತು ನಡೆಯಬೇಕು ಎಂಬ ಅವರ ದರ್ಪವು ವಿಶ್ವದ ಅನೇಕ ರಾಷ್ಟ್ರಗಳಿಗೆ ಅಪಥ್ಯವಾಗಿರುವುದಂತೂ ಖರೆ.

ಭಾರತ ಮತ್ತು ಚೀನಾದಿಂದ ಅಮೆರಿಕಕ್ಕೆ ಆಮದಾಗುವ ವಸ್ತುಗಳ ಮೇಲೆ ವಿಪರೀತ ಸುಂಕ ವಿಧಿಸಿ, ಅವು ಅತಿ ದುಬಾರಿಯಾಗುವಂತೆ ಮಾಡಿ, ಉಭಯ ದೇಶಗಳ ಆರ್ಥಿಕತೆಯನ್ನೇ ಕುಗ್ಗಿಸುವ ಹುನ್ನಾರವಿಟ್ಟುಕೊಂಡಿದ್ದರು ಟ್ರಂಪ್. ಇದಕ್ಕೆ ಪ್ರತಿಯಾಗಿ 'ಶತ್ರುವಿನ ಶತ್ರು, ಮಿತ್ರ' ಎಂಬ ಮಾತಿನಂತೆ ಭಾರತ ಮತ್ತು ಚೀನಾ ಒಂದಾಗುತ್ತಿರುವುದು ಅಮೆರಿಕಕ್ಕೆ ಕಸಿವಿಸಿ ಉಂಟುಮಾಡಿದೆ. ಈ ಹಿಂದೆ, ಹೆಸರಿಗಷ್ಟೇ 'ಹಿಂದಿ-ಚೀನಿ ಭಾಯಿ ಭಾಯಿ' ಎಂದಿದ್ದು ಇಂದು ವಾಸ್ತವವಾಗುತ್ತಿದೆ. ಭಾರತವಿಂದು ಅಮೆರಿಕದ ಜತೆಗಿನ ತನ್ನ ಬಾಂಧವ್ಯವನ್ನೇ ಸಡಿಲಿಸುವ ಅಥವಾ ಕಡಿತಗೊಳಿಸುವ ಯತ್ನದಲ್ಲಿದೆ ಎಂಬುದು ಸ್ಪಷ್ಟವಾಗುತ್ತಿದೆ. ಇಲ್ಲವೆಂದರೆ, ಹಿಂದೊಮ್ಮೆ ಮೋದಿಯವರಿಗೆ ಅಮೆರಿಕದ ವೀಸಾವನ್ನು ತಿರಸ್ಕರಿಸಿದವರು, ಇಂದು 'ಮಾತುಕತೆ'ಯ ಹೆಸರಲ್ಲಿ ನಾಲ್ಕು ಬಾರಿ ದೂರವಾಣಿ ಸಂಪರ್ಕಕ್ಕೆ ಯತ್ನಿಸಿದಾಗಲೂ ಮೋದಿ 'ನಾಟ್ ರೀಚಬಲ್' ಆಗಿರುತ್ತಿದ್ದರೇ? ಇದರ ಹಿಂದಿನ ಉದ್ದೇಶವನ್ನು ವಿವರಿಸಬೇಕಿಲ್ಲ, ಇದು 'ನಿಮ್ಮ ಕಾಲ ಮುಗಿದಿದೆ, ಈಗೇನಿದ್ದರೂ ನಮ್ಮ ಕಾಲ' ಎಂಬುದನ್ನು ಟ್ರಂಪ್ ಅವರಿಗೆ ಮನದಟ್ಟು ಮಾಡಿಕೊಡುವ ಒಂದು ವಿಧ ಎಂದರೆ ತಪ್ಪೇ?

ಹೇಗಾದರೂ ಮಾಡಿ ಭಾರತವನ್ನು ತಮ್ಮ ಬಿಗಿಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಬೇಕೆಂಬ ಟ್ರಂಪ್ ಅವರ ಯತ್ನಗಳೆಲ್ಲವೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತಿವೆ. ಅವರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತನ್ನೂ ಕೊಡದೆ, ನಮ್ಮ ವಿದೇಶಾಂಗ ನೀತಿಯನ್ನು ಕಡ್ಡಿ ಮುರಿದ ಹಾಗೆ ಒಂದೇ ವಾಕ್ಯದಲ್ಲಿ ಹೇಳುತ್ತಿದ್ದಾರೆ ನಮ್ಮ ವಿದೇಶಾಂಗ ಸಚಿವ ಎಸ್. ಜೈಶಂಕರ್; ತಮ್ಮ ನೆಲದಲ್ಲೇ ನಿಂತು, ತಮ್ಮನ್ನೇ ಟೀಕಿಸುವ ಮಟ್ಟಕ್ಕೆ ಪರಿಸ್ಥಿತಿ ಒದಗಿರುವುದನ್ನು ಕಂಡು ಟ್ರಂಪ್ ತತ್ತರಿಸುತ್ತಿದ್ದಾರೆ!

ಪ್ರತಿಸ್ಪಂದನ
ಶಂಕರನಾರಾಯಣ ಭಟ್
vveditoped@gmail.com

ಹೀಗೆ ಒಂದೆಡೆ, 'ನಾಯಕ ಎನಿಸಿಕೊಂಡಾತ ಹೇಗಿರಬಾರದು' ಎಂಬುದಕ್ಕೆ ಟ್ರಂಪ್ ಸಾಕ್ಷಿಯಾಗಿದ್ದರೆ, 'ನಾಯಕನೊಬ್ಬ ಹೇಗಿರಬೇಕು' ಎಂಬುದಕ್ಕೆ ಮೋದಿ ಉದಾಹರಣೆಯಾಗಿ ನಿಲ್ಲುತ್ತಿದ್ದಾರೆ. ಒಬ್ಬ ನಿಜನಾಯಕನ ತಾಕತ್ತು ಅರ್ಥವಾಗುವುದು ದೇಶವು ಸಂಕಷ್ಟದಲ್ಲಿದ್ದಾಗಲೇ. ಒಂದೆಡೆ ನೆರೆರಾಷ್ಟ್ರಗಳ ಕಿರಿಕಿರಿ, ಇನ್ನೊಂದೆಡೆ ಪ್ರಬಲ ರಾಷ್ಟ್ರಗಳ ಮೇಲಾಟ, ಇವುಗಳ ನಡುವೆ ತನ್ನತನವನ್ನು ಕಾಪಾಡಿಕೊಂಡು, ಉಳಿದವರನ್ನೂ ವಿಶ್ವಾಸಕ್ಕೆ

ತೆಗೆದುಕೊಂಡು ಮುನ್ನಡೆಯಬೇಕಾಗಿ ಬರುವುದು ನಿಜನಾಯಕನಿಗೆ ಒದಗುವ ಸತ್ವಪರೀಕ್ಷೆಯೇ ಸರಿ. ಪ್ರಸ್ತುತ, ಮೋದಿ ಮತ್ತು ಅವರ ತಂಡಕ್ಕೆ ಇದೇ ಒದಗಿರುವಂಥದ್ದು. ಜತೆಗೆ, ಹೊರಗಿನ ವೈರಿಗಳು ಸಾಲದೆಂಬಂತೆ, ದೇಶದೊಳಗಿನ ವೈರಿಗಳ ಉಪಟಳವೂ ಅವರಿಗೆ ಹೆಚ್ಚಾಗುತ್ತಿದೆ.

ಇಷ್ಟಾಗಿಯೂ, ಇಲ್ಲಿಯ ತನಕ ಎಲ್ಲವೂ ಸುಸೂತ್ರವಾಗಿಯೇ ಸಾಗುತ್ತಿದೆ. ಯಾರು ಎಷ್ಟೇ ಕಸರತ್ತು ಮಾಡಿದರೂ, ಮೋದಿಯವರ ನಾಯಕತ್ವಕ್ಕೆ ಮಸಿ ಬಳಿಯುವ ಅವರ ತಂತ್ರ ಸಫಲವಾಗಿಲ್ಲ, ಆಗುವುದೂ ಇಲ್ಲ! ಸ್ವಹಿತಾಸಕ್ತಿಯೇ ಇಲ್ಲದೆ ದೇಶಕ್ಕಾಗಿ, ದೇಶದ ಜನರಿಗಾಗಿ ಹಗಲಿರುಳೂ ಶ್ರಮಿಸುತ್ತಿರುವವರಿಗೆ ಎಲ್ಲಿಂದ ಬಂದೀತು ಕುತ್ತು?! ಇಂಥ ನಾಯಕನನ್ನು ಪಡೆದ ಭಾರತೀಯರು ನಿಜಕ್ಕೂ ಧನ್ಯರು...

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 227

ಸಮಾಚಾರ ಸಣ್ಣದಲ್ಲ

ಊರ್ಜಿತ್ ಪಟೇಲ್ ಐಎಂಎಫ್ 'ಇ.ಡಿ'

ದೆಹಲಿ: ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಕಾರ್ಯನಿರ್ವಾಹಕ ನಿರ್ದೇಶಕರಾಗಿ (ಇ.ಡಿ) ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಮಾಜಿ ಗವರ್ನರ್ ಊರ್ಜಿತ್ ಪಟೇಲ್ ನೇಮಕಗೊಂಡಿದ್ದಾರೆ. ಈ ಸಂಬಂಧ ಕೇಂದ್ರ ಸರಕಾರದ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ ಮತ್ತು ಪಿಂಚಣಿ ಸಚಿವಾಲಯದ ಅಧಿಸೂಚನೆ ಶುಕ್ರವಾರ ಪ್ರಕಟವಾಗಿದ್ದು, ಊರ್ಜಿತ್ 3 ವರ್ಷ ಅವಧಿಗೆ ಐಎಂಎಫ್ ಕಾರ್ಯನಿರ್ವಾಹಕ ನಿರ್ದೇಶಕರಾಗಿ ರಲಿದ್ದಾರೆ. 1992ರಿಂದ ಆರ್‌ಬಿಐ ಗವರ್ನರ್ ಆಗಿದ್ದ ಊರ್ಜಿತ್ ಪಟೇಲ್, ನೋಟು ಅಮಾನ್ಯೀಕರಣ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಉದ್ಯಮ ಆರಂಭಿಸಲು ಬಿಹಾರ ವನಿತೆಗೆ ನೆರವು

ಪಟನಾ: ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ಬಿಹಾರದ ರಾಜಕೀಯ ಪಕ್ಷಗಳು ಮತದಾರರ ಗಮನ ಸೆಳೆಯಲು ಹೊಸ ಹೊಸ ಕೊಡುಗೆ, ಉಡುಗೊರೆ, ಯೋಜನೆಗಳನ್ನು ಪ್ರಕಟಿಸುತ್ತಿವೆ. ಎನ್‌ಡಿಎ ಮೈತ್ರಿಕೂಟದ ಸಂಯುಕ್ತ ಜನತಾದಳ(ಜೆಡಿಯು) ನಾಯಕ, ಹಾಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, ಹೊಸದಾಗಿ ಉದ್ಯಮ ಆರಂಭಿಸಲು ಬಯಸುವ ಮಹಿಳೆಗೆ ಆರ್ಥಿಕ ನೆರವು ನೀಡಲು ಸರಕಾರ ನಿರ್ಧರಿಸಿದೆ. ಮೊದಲ ಕಂತಿನಲ್ಲಿ 10 ಸಾವಿರ ರು. ನೀಡಲಿದೆ ಎಂದು ಶುಕ್ರವಾರ ಪ್ರಕಟಿಸಿದ್ದಾರೆ. 6 ತಿಂಗಳ ಬಳಿಕ ಉದ್ಯಮದ ಪಗತಿಗತಿ ಪರಿಶೀಲಿಸಿ ಸಮರ್ಪಕ ಎನಿಸಿದರೆ ಮತ್ತೆ 2 ಲಕ್ಷ ರು.ವರೆಗೂ ಆರ್ಥಿಕ ನೆರವು ನೀಡಲಾಗುವುದು. 'ಉದ್ಯಮ ಆರಂಭಕ್ಕೆ ಮಹಿಳೆಗೆ ನೆರವು' ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ನಿರ್ವಹಿಸಲಿದೆ. ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯಗಳೂ ಯೋಜನೆಗೆ ಕೈಜೋಡಿಸಲಿವೆ ಎಂದು ನಿತೀಶ್ ಕುಮಾರ್ ಹೇಳಿದ್ದಾರೆ.

ಮರಾಠ ಮೀಸಲು ಹೋರಾಟ ಆರಂಭ

ಮುಂಬೈ: ಮಹಾರಾಷ್ಟ್ರದಲ್ಲಿ ಮತ್ತೆ 'ಮರಾಠ ಮೀಸಲು' ಹೋರಾಟ ಶುಕ್ರವಾರ ಆರಂಭಗೊಂಡಿದೆ. ಹೋರಾಟಗಾರ ಮನೋಜ್ ಜರಾಂಗೆ ಅವರು ಸಾವಿರಾರು ಬೆಂಬಲಿಗರ ಜತೆಗೂಡಿ ಮೆರವಣಿಗೆ ಯಲ್ಲಿ ಆಜಾದ್ ಮೈದಾನಕ್ಕೆ ತೆರಳಿ ಮತ್ತೊಂದು ಸುತ್ತಿನ 'ಮರಾಠ ಮೀಸಲು' ಹೋರಾಟಕ್ಕಾಗಿ ಅನಿರ್ದಿಷ್ಟಾವಧಿ ನಿರಶನ ಆರಂಭಿಸಿದರು. ಜರಾಂಗೆ ಹೋರಾಟಕ್ಕೆ ಬೆಂಬಲ ಸೂಚಿಸಲೆಂದು ಸಾವಿರಾರು ಜನರು ರಾಜ್ಯದ ವಿವಿಧೆಡೆಯಿಂದ ಮುಂಬೈಗೆ ಧಾವಿಸುತ್ತಿದ್ದಾರೆ ಎಂದು ಹೋರಾಟದ ಆಯೋಜಕರು ಸುದ್ದಿಸಂಸ್ಥೆಗೆ ಶುಕ್ರವಾರ ತಿಳಿಸಿದ್ದಾರೆ. ಗಣೇಶೋತ್ಸವವೂ ಇದೇ ವೇಳೆ ಜರುಗುತ್ತಿರುವುದರಿಂದ, ಮರಾಠಿ ಹೋರಾಟದ ಪರಿಸ್ಥಿತಿ ನಿರ್ವಹಿಸುವುದು ಮುಂಬೈ ಪೊಲೀಸರಿಗೆ ಹೆಚ್ಚುವರಿ ಹೊರೆಯಾಗಿ ಪರಿಣಮಿಸಿದೆ ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಗಡಿ ಸ್ಥಿತಿ ಸುಧಾರಣೆ: ಚೀನಾ-ಭಾರತ ಬದ್ಧ

ಬೀಜಿಂಗ್: ಗಡಿ ಭಾಗದಲ್ಲಿ ಸಂಘರ್ಷ ತಪ್ಪಿಸಿ, ಶಾಂತಿ ಕಾಯ್ದುಕೊಳ್ಳಲು ಭಾರತ ಮತ್ತು ಚೀನಾದ ಸೇನಾಪಡೆಗಳು ಜಂಟಿ ಪ್ರಯತ್ನ ನಡೆಸಬೇಕಿದೆ ಎಂದು ಚೀನಾ ಸೇನಾಪಡೆ ಹೇಳಿದೆ. ಗಡಿಯಲ್ಲಿನ ಪರಿಸ್ಥಿತಿ ಸುಧಾರಣೆ ಸಂಬಂಧ ಎರಡೂ ದೇಶಗಳ ಸೇನಾಧಿಕಾರಿಗಳ ಸಭೆ ಇತ್ತೀಚೆಗೆ ನಡೆದಿದ್ದು, ನಂತರದಲ್ಲಿ ಚೀನಾ ಸೇನೆಯಿಂದ ಈ ಹೇಳಿಕೆ ಹೊರಬಿದ್ದಿದೆ. ಆ.19 ರಂದು ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರು ಭಾರತಕ್ಕೆ 2 ದಿನಗಳ ಭೇಟಿಗೆ ಆಗಮಿಸಿದ್ದಾಗ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ವಾಂಗ್ ಅವರ ಜತೆ ಗಡಿ ಪರಿಸ್ಥಿತಿ ವಿಚಾರವಾಗಿ ಮಾತುಕತೆ ನಡೆಸಿದ್ದರು. ಗಡಿ ಪರಿಸ್ಥಿತಿಗೆ ಸಂಬಂಧಿಸಿದ 24ನೇ ಸುತ್ತಿನ ಈ ಮಾತುಕತೆಯಲ್ಲಿ 10 ಪ್ರಮುಖ ಅಂಶಗಳಿಗೆ ಎರಡೂ ದೇಶಗಳು ಸಮ್ಮತಿ ಸೂಚಿಸಿದ್ದವು.

{ **ಬಾಬಾ ರಾಮದೇವ್** } ಯೋಗ ಗುರು

ರಷ್ಯಾದಿಂದ ಕಚ್ಚಾತೈಲ ಖರೀದಿಸಿದ ಕಾರಣಕ್ಕೆ ಭಾರತದ ಸರಕುಗಳ ಮೇಲೆ ಶೇ.50 ಪ್ರತಿಸುಂಕ ವಿಧಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಮ ರಾಜಕೀಯ ಬೆದರಿಕೆ, ಗೂಂಡಾಗಿರಿ, ಸರ್ವಾಧಿಕಾರತ್ವ. ಇದನ್ನು ಭಾರತೀಯರು ಖಂಡಿಸಬೇಕು. ಅದಕ್ಕಾಗಿ ಪೆಪ್ಸಿ, ಕೋಕಾಕೋಲಾ, ಬರ್ಗರ್, ಪಿಜ್ಜಾ ಸೇರಿದಂತೆ ಅಮೆರಿಕ ಮೂಲದ ಉತ್ಪನ್ನಗಳನ್ನು ಬಹಿಷ್ಕರಿಸಬೇಕು.



ಪ್ರಧಾನಿ ನರೇಂದ್ರ ಮೋದಿಗೆ ಜಪಾನ್ ಆತ್ಮೀಯ ಸ್ವಾಗತ

ಟೋಕಿಯೊ ವಿ.ನಿಲ್ದಾಣದಲ್ಲಿ 'ಗಾಯತ್ರಿ ಮಂತ್ರ', ಭರತನಾಟ್ಯ, ಜಾನಪದ ಗೀತೆ
ಭಾರತೀಯ ಸಮುದಾಯದ ಜೈಕಾರ, 'ಐ ಲವ್ ಯು ಮೋದಿ ಜಿ' ಘೋಷಣೆ
7 ವರ್ಷ ಬಳಿಕ ಜಪಾನ್‌ಗೆ, 'ಎಐ, ಬುಲೆಟ್ ಟ್ರೇನ್, ರಕ್ಷಣಾ ಸಹಕಾರ' ಚರ್ಚೆ

ಟೋಕಿಯೊ: ಏಳು ವರ್ಷಗಳ ಬಳಿಕ ಜಪಾನ್ ದೇಶಕ್ಕೆ ಭೇಟಿ ನೀಡಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗಾಯತ್ರಿ ಮಂತ್ರ ಸಹಿತ ಆತ್ಮೀಯ ಸ್ವಾಗತ ಕೋರಲಾಗಿದೆ. ವಿಮಾನ ನಿಲ್ದಾಣದಲ್ಲಿ ಸಾಂಪ್ರದಾಯಿಕ ಧಿರಿಸು ಧರಿಸಿ ಹಾಜರಾಗಿದ್ದ ಜಪಾನ್ ಪ್ರಜೆಗಳು ಗಾಯತ್ರಿ ಮಂತ್ರ ಹೇಳುವ ಮೂಲಕ ಪ್ರಧಾನಿ ಮೋದಿ ಅವರಿಗೆ ವಿಶೇಷ ರೀತಿಯಲ್ಲಿ ಸ್ವಾಗತ ಕೋರಿದರು. ಭಾರತೀಯ ಸಮುದಾಯದವರೂ ನೂರಾರು ಸಂಖ್ಯೆಯಲ್ಲಿ ಹಾಜರಿದ್ದರು. ಮೋದಿ, ಭಾರತ ಮಾತೆಗೆ ಜೈಕಾರದ ಜತೆಗೆ 'ಐ ಲವ್ ಯು ಮೋದಿ ಜಿ' ಎಂಬ ಘೋಷಣೆಗಳೂ ಕೇಳಿಬಂದವು.

ಗುಜರಾತ್ ಮೂಲದ ಮಹಿಳೆಯರು ಜಾನಪದ ಗೀತೆ ಹಾಡಿ ಸಾಂಪ್ರದಾಯಿಕ ಸ್ವಾಗತ ಕೋರಿದರು. ಭಾರತೀಯ ಮಹಿಳೆಯರ ತಂಡ ಭರತನಾಟ್ಯ ಪ್ರದರ್ಶನ ನೀಡಿ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿತು.

ಜತೆಗೆ ಭಾರತ ಮೂಲದ ಬೋಧಿಧರ್ಮ ಅವರ ಸ್ಮರಣೆಯ 'ದರುಮಾ' ಗೊಂಬೆಯನ್ನೂ ಗೌರವಪೂರ್ವಕ ಉಡುಗೊರೆಯಾಗಿ ಜಪಾನ್ ಝೆನ್ ದೇಗುಲ ಮುಖ್ಯ ಅರ್ಚಕರು ಪ್ರಧಾನಿ ಮೋದಿ ಅವರಿಗೆ ನೀಡಿ ಸತ್ಕರಿಸಿದರು.

ಎರಡು ದಿನಗಳ ಭೇಟಿಗಾಗಿ ಜಪಾನ್‌ನ ರಾಜಧಾನಿ ಟೋಕಿಯೊದಲ್ಲಿ ಶುಕ್ರವಾರ ನಸುಕಿನಲ್ಲಿ ಬಂದಿಳಿದ ಪ್ರಧಾನಿ ಮೋದಿ ಅವರಿಗೆ ಜಪಾನ್ ಸರಕಾರ ಅದ್ದೂರಿ ಸ್ವಾಗತ ಕೋರಿದೆ. ಈ ಕುರಿತು ದೆಹಲಿಯ ವಿದೇಶಾಂಗ ಸಚಿವಾಲಯ 'ಎಕ್ಸ್'ನಲ್ಲಿ ಚಿತ್ರಸಮೇತ ಮಾಹಿತಿ ಹಂಚಿಕೊಂಡಿದೆ.

ಈ ಬಾರಿಯ ಪ್ರಧಾನಿ ಮೋದಿ ಅವರ ಜಪಾನ್ ಭೇಟಿಯಲ್ಲಿ ಮುಖ್ಯವಾಗಿ ಬುಲೆಟ್ ಟ್ರೇನ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ಉದ್ಯಮ ಕ್ಷೇತ್ರ, ಹಾಗೂ ರಕ್ಷಣಾ ಸಹಕಾರ, ತಂತ್ರಜ್ಞಾನಗಳ ವಿನಿಮಯ, ಬಂಡವಾಳ ಹೂಡಿಕೆ ಮತ್ತಿತರ ವಿಚಾರಗಳ ಕುರಿತು ದೀರ್ಘ ಮಾತುಕತೆ ನಡೆಯಲಿದೆ. 'ಕ್ವಾಡ್' ಸಂಘಟನೆಯಲ್ಲಿನ ಸಹಕಾರ ಕುರಿತೂ ಚರ್ಚೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ.

'ಈಗಿನ ಜಪಾನ್ ಭೇಟಿಯು ಉಭಯ ದೇಶಗಳ ನಾಗರೀಕ ನಂಟು ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸಲು ಉತ್ತಮ ಅವಕಾಶವಾಗಿದೆ' ಎಂದು ಪ್ರಧಾನಿ ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಭಾರತ-ಜಪಾನ್ ಪಾಲುದಾರಿಕೆ ಮುಂದುವರಿಸುವ ಸಂಬಂಧ ಪ್ರಧಾನಿ ಮೋದಿ ಮತ್ತು ಜಪಾನ್ ಪ್ರಧಾನಿ ಶಿಗೇರು ಇಶಿಬಾ ಶುಕ್ರವಾರ ಸಂಜೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಇದಕ್ಕೂ ಮುನ್ನ ಶುಕ್ರವಾರ ಬೆಳಗ್ಗೆ ಜಪಾನ್ ಮಾಜಿ ಪ್ರಧಾನಿಗಳಾದ ಯೊಶಿಹಿದೆ ಸುಗಾ ಮತ್ತು ಫ್ಯುಮಿಯೊ ಕಿಶಿದಾ ಅವರನ್ನು ಟೊಕಿಯೊದಲ್ಲಿ ಪ್ರಧಾನಿ ಮೋದಿ ಭೇಟಿಯಾಗಿ ಕುಶಲ ವಿಚಾರಿಸಿ, ಭಾರತ-ಜಪಾನ್ ಸಂಬಂಧ ಬೆಳೆದು ಬಂದ ದಾರಿಯನ್ನು ನೆನಪಿಸಿಕೊಂಡರು.

ಮೋದಿ 2 ದಿನ ಜಪಾನ್‌ನಲ್ಲಿ ತಂಗಲಿದ್ದು, ಬಳಿಕ 31ರಂದು ಜಪಾನ್‌ನಿಂದಲೇ ನೇರವಾಗಿ ಚೀನಾಗೆ ತೆರಳಿ 'ಎಸ್‌ಸಿಒ' ಶೃಂಗದಲ್ಲಿ ಭಾಗವಹಿಸಲಿದ್ದಾರೆ.

> **ಟೋಕಿಯೊದಲ್ಲಿ ಈಗಷ್ಟೇ ಬಂದಿಳಿದಿದ್ದೇನೆ. ಅಭಿವೃದ್ಧಿ ಪಥದಲ್ಲಿ ಜತೆಯಾಗಿ ಸಾಗಲು, ಪರಸ್ಪರ ಸಹಕಾರ ನೀಡಲು ಭಾರತ-ಜಪಾನ್ ಪಣತೊಟ್ಟಿದ್ದು, ಆ ಸಂಬಂಧವನ್ನು ಈ ಬಾರಿಯ ಭೇಟಿ ಮತ್ತಷ್ಟು ದೃಢಪಡಿಸಲಿದೆ. ಈ ಸಂಬಂಧ ಜಪಾನ್ ಪ್ರಧಾನಿ ಇಶಿಬಾ ಅವರ ಜತೆ ಮಹತ್ವದ ಮಾತುಕತೆ ನಡೆಸಲಿದ್ದೇನೆ. ಜಾಗತಿಕ ವಿದ್ಯಾಮಾನಗಳನ್ನೂ ಇಬ್ಬರೂ ಚರ್ಚಿಸಲಿದ್ದೇವೆ.**
>
> -ನರೇಂದ್ರ ಮೋದಿ ಪ್ರಧಾನಿ

ಮೋದಿಗೆ ದರುಮಾ ಗೊಂಬೆ ಉಡುಗೊರೆ

ಪ್ರಧಾನಿ ಮೋದಿಗೆ ದರುಮಾ ಗೊಂಬೆ ಉಡುಗೊರೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು 7 ವರ್ಷಗಳ ಬಳಿಕ ಜಪಾನ್‌ಗೆ ಭೇಟಿ ನೀಡಿದ್ದಾರೆ. ಶುಕ್ರವಾರ ನಸುಕಿನಲ್ಲಿ ರಾಜಧಾನಿ ಟೋಕಿಯೊದಲ್ಲಿ ಬಂದಿಳಿದ ಮೋದಿ ಅವರಿಗೆ 'ದರುಮಾ' ಗೊಂಬೆಯನ್ನು ಉಡುಗೊರೆಯಾಗಿ ನೀಡಲಾಗಿದೆ.

ಶೋರಿಂಝುನ್ ದರುಮಾ ಜಿ ದೇಗುಲದ ಮುಖ್ಯ ಅರ್ಚಕರಾದ ರೇವ್ ಸೈಶಿ ಹಿರೊಸೆ ಅವರು ಕೆಂಪು-ಹಳದಿ ವರ್ಣದಲ್ಲಿರುವ 'ದರುಮಾ' ಗೊಂಬೆಯನ್ನು ಉಡುಗೊರೆಯಾಗಿ ನೀಡಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಗೌರವಿಸಿದರು. 'ದರುಮಾ' ಗೊಂಬೆ ನೋಡುವುದಕ್ಕೆ ಪುರಿಯ ಜಗನ್ನಾಥ ದೇವರ ಮುಖದಂತೆಯೇ ಕಾಣುವುದು ವಿಶೇಷ.

'ದರುಮಾ' ಜಪಾನ್‌ನಲ್ಲಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯದ ಪ್ರತೀಕವಾಗಿದೆ. ಜಪಾನ್ ಜನತೆ ಪಾಲಿಗೆ ಪವಿತ್ರವಾದುದಾಗಿದೆ. ಅದರ ಬೇರುಗಳು ಭಾರತ ಮೂಲದ್ದಾಗಿದೆ ಎನ್ನುವುದು ವಿಶೇಷ. ದುರಮಾ ಗೊಂಬೆಯನ್ನು ಝೆನ್ ಧರ್ಮದ ಸ್ಥಾಪಕ 'ಬೋಧಿಧರ್ಮ' ಅವರನ್ನು ಆಧರಿಸಿ ಸಿದ್ಧಪಡಿಸಲಾಗಿದೆ. ಬೋಧಿಧರ್ಮ ಭಾರತದ ತಮಿಳುನಾಡಿನ ಕಾಂಚಿಪುರಂ ಮೂಲದ ಮಾಂಕ್(ಬೌದ್ಧಧರ್ಮಗುರು) ಎಂಬುದು ಐತಿಹಾಸಿಕ ಅಂಶವಾಗಿದೆ. ಅವರು ಜಪಾನ್‌ನಲ್ಲಿ ಧರ್ಮಪ್ರಚಾರ ಕೈಗೊಂಡ ಬಳಿಕ ಅವರನ್ನು ಅಲ್ಲಿನ ಜನತೆ 'ದರುಮಾ ದೈಶಿ' ಎಂದು ಕರೆದಿದ್ದರು. ಬೋಧಿಧರ್ಮ ತಮ್ಮ ಕೈಕಾಲುಗಳನ್ನೆಲ್ಲಾ ಸುತ್ತುಹಾಕಿ ಮಡಿಚಿಟ್ಟಂತೆ ಸತತ 9 ವರ್ಷಗಳ ಕಾಲ ತಪಸ್ಸು ಮಾಡಿದ್ದರು. ಹಾಗಾಗಿಯೇ ದರುಮಾ ಗೊಂಬೆಯನ್ನು ದುಂಡು ಆಕೃತಿಯಲ್ಲೇ ರಚಿಸಲಾಗುತ್ತದೆ ಎನ್ನಲಾಗಿದೆ. ದರುಮಾ ಗೊಂಬೆ ಶುಭ ಸಂಕೇತವಾಗಿದೆ. ಗುರಿ ಮತ್ತು ಸಾಧನೆಯನ್ನು ದೃಢೀಕರಿಸುತ್ತದೆ. ಹೊಸ ವರ್ಷ, ಶುಭ ಸಂದರ್ಭಗಳಲ್ಲಿ ಬಳಸಲಾಗುತ್ತದೆ.

2007ರಲ್ಲಿ ಸಿಎಂ ಮೋದಿ ಜಪಾನ್‌ಗೆ ಮೊದಲ ಭೇಟಿ

ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2007ರ ಏಪ್ರಿಲ್‌ನಲ್ಲಿ ಜಪಾನ್‌ಗೆ ಮೊದಲ ಬಾರಿಗೆ ಭೇಟಿ ನೀಡಿದ್ದನ್ನು ಮೋದಿ ಶುಕ್ರವಾರ ನೆನಪಿಸಿಕೊಂಡರು. ಆಗ 6 ದಿನ ಜಪಾನ್ ಪ್ರವಾಸ ಕೈಗೊಂಡಿದ್ದ ಸಿಎಂ ಮೋದಿ, ಜಪಾನ್ ಪ್ರಧಾನಿ ಶಿಂಜೊ ಅಬೆ ಅವರನ್ನು ಭೇಟಿ ಮಾಡಿ ವಾಣಿಜ್ಯ ಸಂಬಂಧ ವೃದ್ಧಿ ಕುರಿತು ಮಾತುಕತೆ ನಡೆಸಿದ್ದರು. ಮೋದಿ ಅವರ ಜತೆ ಸಚಿವರು, ಉನ್ನತ ಅಧಿಕಾರಿಗಳು, ಗುಜರಾತ್ ಉದ್ಯಮಿಗಳನ್ನು ಒಳಗೊಂಡ 40 ಜನರ ನಿಯೋಗವಿತ್ತು. ಆಗ ನಿಯೋಗ ಟೊಕಿಯೊ, ಒಸಾಕಾ, ಹಿರೊಷಿಮಾ, ಕೊಬೆ ನಗರಗಳನ್ನು ಸಂದರ್ಶಿಸಿತ್ತು. ಮಿತ್ಸುಬಿಷಿ, ಮಿತ್ಸುಯ್, ಸುಮಿಟೊಮೊ, ಸುಜುಕಿ, ತೊಷಿಬಾ, ನಿಪ್ಪೊ ಸ್ಟೀಲ್, ಸುನೇಶಿ ಷಿಪ್‌ಬಿಲ್ಡಿಂಗ್ ಕಂಪನಿಗಳ ಜತೆ ವಾಣಿಜ್ಯ ಮಾತುಕತೆ ನಡೆಸಿದ್ದ ನಿಯೋಗ, ಕಂಪನಿಗಳನ್ನು ಗುಜರಾತ್‌ಗೆ ಆಹ್ವಾನಿಸಿತ್ತು. ಆಗಲೇ 'ಬುಲೆಟ್ ಟ್ರೇನ್' ಮೋದಿ ಅವರನ್ನು ಬಹಳವಾಗಿ ಆಕರ್ಷಿಸಿತು. ಮುಂಬೈ-ಅಹಮದಾಬಾದ್ ನಡುವಿನ ಬುಲೆಟ್ ಟ್ರೇನ್ ಯೋಜನೆಗೆ ಆಗಲೇ ಮೋದಿ ಕನಸು ಕಂಡಿದ್ದರು. ಆ ನಂತರದಲ್ಲಿ ಮೋದಿ 11 ವರ್ಷಗಳಲ್ಲಿ ಒಟ್ಟು 7 ಬಾರಿ ಜಪಾನ್‌ಗೆ ಭೇಟಿ ನೀಡಿದ್ದಾರೆ. ಆದರೆ, ಕಳೆದ 7 ವರ್ಷಗಳಲ್ಲಿ ಈಗಿನದೇ ಮೊದಲ ಜಪಾನ್ ಭೇಟಿಯಾಗಿದೆ.

ಈಗ ಶುಕ್ರವಾರದ ಭೇಟಿಯ ವೇಳೆ ಮೋದಿ 18 ವರ್ಷಗಳ ಹಿಂದಿನ ದಿನಗಳನ್ನು 'ಎಕ್ಸ್' ಸಂದೇಶದಲ್ಲಿ ನೆನಪು ಮಾಡಿಕೊಂಡಿದ್ದಾರೆ.

2007ರ ಪ್ರವಾಸದಲ್ಲಿ ಜಪಾನ್‌ನ ಬುಲೆಟ್ ಟ್ರೇನ್ ನೋಡುತ್ತಾ ಕನಸು ಕಂಡ ಗುಜರಾತ್ ಸಿಎಂ ಮೋದಿ.

ಉತ್ತರಾಖಂಡ: ಭೂಕುಸಿತಕ್ಕೆ 5 ಬಲಿ

ಉತ್ತರಾಖಂಡದ ಚಮೇಲಿ ಜಿಲ್ಲೆಯಲ್ಲಿ ಭೂಕುಸಿತವಾಗಿ ಮಣ್ಣಿನಡಿ ಹಲವು ಮನೆಗಳು ಮುಚ್ಚಿಹೋಗಿವೆ.

ಚಮೋಲಿ: ಉತ್ತರಾಖಂಡದಲ್ಲಿ ಗುರುವಾರ ರಾತ್ರಿ ಮತ್ತು ಶುಕ್ರವಾರ ನಸುಕಿನಲ್ಲಿ ಮೇಘಸ್ಫೋಟವಾಗಿದ್ದು, ಧಾರಾಕಾರ ಮಳೆ ಸುರಿದು ಪ್ರವಾಹ, ಭೂಕುಸಿತವಾಗಿದೆ. ಪರಿಣಾಮ ಐವರು ಸಾವಿಗೀಡಾಗಿದ್ದಾರೆ. ಹಠಾತ್ ಪ್ರವಾಹದಲ್ಲಿ ದಂಪತಿ ಸೇರಿದಂತೆ ಮೂವರು ಕೊಚ್ಚಿಕೊಂಡು ಹೋಗಿದ್ದಾರೆ. ಹಲವರು ಕಾಣೆಯಾಗಿದ್ದಾರೆ.

ದೇವಲ್ ತೆಹ್ಸಿಲ್ನ ಮೊಪಾಟಾ ಗ್ರಾಮದ ನಿವಾಸಿಗಳಾದ ತಾರಾ ಸಿಂಗ್ ಮತ್ತು ಪತ್ನಿ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ವಿಕ್ರಮ್ ಸಿಂಗ್ ಮತ್ತು ಪತ್ನಿ ಗಾಯಗೊಂಡಿದ್ದಾರೆ. ಇಬ್ಬರ ಮನೆ ಮತ್ತು ಗೋಶಾಲೆ ಭೂಕುಸಿತದಲ್ಲಿ ಮಣ್ಣಿನಡಿ ಮುಚ್ಚಿಹೋಗಿವೆ.

ಚಮೋಲಿ ಜಿಲ್ಲೆಯ ದೇವಲ್ ಬ್ಲಾಕ್ ಭೂಕುಸಿತವಾಗಿದ್ದು, ಮತ್ತಿಬ್ಬರು ಗಾಯಗೊಂಡಿದ್ದಾರೆ. ಚಮೋಲಿಯ ವಿವಿಧೆಡೆ 40 ಮನೆಗಳು ನೆಲಸಮವಾಗಿವೆ. ಈ ಮನೆಗಳ ಕೊಟ್ಟಿಗೆಯಲ್ಲಿದ್ದ 30ಕ್ಕೂ ಅಧಿಕ ಜಾನುವಾರುಗಳು ಅವಶೇಷಗಳಡಿ ಹೂತು ಹೋಗಿವೆ. 'ರಾಜ್ಯ ಪ್ರಾಕೃತಿಕ ವಿಕೋಪ ಪರಿಹಾರ ಪಡೆ'(ಎಸ್‌ಡಿಆರ್‌ಎಫ್) ರಕ್ಷಣಾ ಕಾರ್ಯದಲ್ಲಿ ತೊಡಗಿದೆ ಎಂದು ಚಮೋಲಿ ಜಿಲ್ಲಾಧಿಕಾರಿ ಸಂದೀಪ್ ತಿವಾರಿ ತಿಳಿಸಿದ್ದಾರೆ. ತೆಹ್ರಿ ಜಿಲ್ಲೆಯ ಭಿಲಂಗ್ನಾ ಬ್ಲಾಕ್‌ನಲ್ಲಿ ಗೆನ್ವಾಲಿ ಗ್ರಾಮದಲ್ಲಿಯೂ ಮೇಘಸ್ಫೋಟವಾಗಿದೆ. ಯಾವುದೇ ಸಾವುನೋವು ವರದಿಯಾಗಿಲ್ಲ. ಥರಾಲಿ, ಆದಿಬಾದ್ರಿ, ಮತ್ತು ಕರ್ಣಪ್ರಯಾಗ ದಲ್ಲಿಯೂ ಭಾರೀ ಮಳೆಯಾಗುತ್ತಿದೆ. ಅಲಕನಂದಾ ಮತ್ತು ಪಿಂಡಾರ್ ನದಿ ಅಪಾಯ ಮಟ್ಟ ಮೀರಿ ಹರಿಯುತ್ತಿದೆ. ಗಂಗೋತ್ರಿ ರಾಷ್ಟ್ರೀಯ ಹೆದ್ದಾರಿ ನೆತಾಲ, ನಲುನಾ, ಬಿಸಾನ್‌ಪುರ ಮತ್ತು ಪಾಪರ್‌ಗಡ್‌ಗಳಲ್ಲಿ ಭೂಕುಸಿತವಾಗಿ ಸಂಚಾರ ಸ್ಥಗಿತಗೊಂಡಿದೆ.

ಗುಜರಾತ್ ಬಿಟ್ ಕಾಯಿನ್: 14 ಜನರಿಗೆ ಜೀವಾವಧಿ ಶಿಕ್ಷೆ

ಅಹಮದಾಬಾದ್: ಬಿಟ್ ಕಾಯಿನ್ ಸುಲಿಗೆಯ 2018ರ ಪ್ರಕರಣದಲ್ಲಿ ಗುಜರಾತ್‌ನ ಬಿಜೆಪಿ ಮಾಜಿ ಶಾಸಕ ನಳಿನ್ ಕೊಟಾಡಿಯಾ ಮತ್ತು ಹಿರಿಯ ಪೊಲೀಸ್ ಅಧಿಕಾರಿ ಸೇರಿದಂತೆ 14 ಆರೋಪಿಗಳನ್ನು ದೋಷಿ ಎಂದು ಘೋಷಿಸಿದ ಅಹಮದಾಬಾದ್ ನಗರ ಸೆಷನ್ಸ್ ನ್ಯಾಯಾಲಯ ಶುಕ್ರವಾರ ಎಲ್ಲರಿಗೂ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.



ನಳಿನ್ ಕೊಟಾಡಿಯ

ಸೂರತ್ ನಗರದ ಬಿಲ್ಡರ್ ಮತ್ತು ಕ್ರಿಪ್ಟೊ ಕರೆನ್ಸಿ ವ್ಯಾಪಾರಿ ಶೈಲೇಶ್ ಭಟ್ ಅಪಹರಣದೊಂದಿಗೆ ತೆರೆದುಕೊಂಡ ಈ ಪ್ರಕರಣ ಗುಜರಾತ್‌ನಲ್ಲಿನ ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ದೊಡ್ಡ ಮಟ್ಟದ ಅಕ್ರಮ ವಹಿವಾಟುಗಳನ್ನು 2018ರಲ್ಲಿ ಬಹಿರಂಗಪಡಿಸಿತ್ತು. ಆರೋಪಿಗಳ ವಿರುದ್ಧ 172 ಸಾಕ್ಷಿಗಳನ್ನು ಪ್ರಾಸಿಕ್ಯೂಷನ್ ಹಾಜರು ಪಡಿಸಿತ್ತು. ಆ ಬಳಿಕ 92 ಸಾಕ್ಷಿಗಳು ಉಲ್ಟಾ ಹೊಡೆದರೂ, ಆರೋಪಿಗಳ ವಿರುದ್ಧ ಬಲವಾದ ಸಾಕ್ಷ್ಯಗಳಿರುವುದು ಮತ್ತು ಪ್ರಾಸಿಕ್ಯೂಷನ್‌ನ ಪ್ರಬಲ ವಾದವನ್ನು ಪರಿಗಣಿಸಿ ಶಿಕ್ಷೆ ನೀಡಿದೆ. ಬಹುಕೋಟಿ ಬಿಟ್ ಕಾಯಿನ್ ಹಗರಣದಲ್ಲಿ ಭಾಗಿಯಾಗಿ ಅಪಹರಣ ಮತ್ತು ಸುಲಿಗೆ ಆರೋಪ ಎದುರಿಸುತ್ತಿದ್ದ ಬಿಜೆಪಿ ಮಾಜಿ ಶಾಸಕ ನಳಿನ್ ಕೊಟಾಡಿಯ, 2018ರಲ್ಲಿ ಅಮ್ರೇಲಿಯಲ್ಲಿ ಎಸ್‌ಪಿ ಆಗಿದ್ದ ಜಗದೀಶ್ ಪಟೇಲ್ ಮತ್ತು ಪೊಲೀಸ್ ಇನ್‌ಸ್ಪೆಕ್ಟರ್ ಅನಂತ್ ಪಟೇಲ್ ಸೇರಿದಂತೆ 14 ಜನರು ಜೀವಾವಧಿ ಶಿಕ್ಷೆಗೊಳಗಾಗಿದ್ದಾರೆ.

ವಾಯು ಮಾಲಿನ್ಯ: ಆಯುಷ್ಯ ಕಡಿಮೆ

ದೆಹಲಿ: ವಾಯು ಮಾಲಿನ್ಯದಿಂದಾಗಿ ಭಾರತದಲ್ಲಿ ಮನುಷ್ಯರ ಜೀವಿತಾವಧಿಯಲ್ಲಿ ಮೂರೂವರೆ ವರ್ಷಗಳಷ್ಟು ಕಡಿಮೆ ಆಗುತ್ತಿದೆ. ಇದು ಅಪೌಷ್ಟಿಕತೆಯ ಪರಿಣಾಮಕ್ಕಿಂತ 2 ಪಟ್ಟು ಅಧಿಕ. ಕಲುಷಿತ ನೀರು ಸೇವನೆ, ನೈರ್ಮಲ್ಯ ಸಮಸ್ಯೆಯಿಂದಾಗುವ ದುಷ್ಪರಿಣಾಮಕ್ಕೆ ಹೋಲಿಸಿದರೆ ವಾಯು ಮಾಲಿನ್ಯದ ಆಯುಷ್ಯ ನಷ್ಟ 5 ಪಟ್ಟು ಅಧಿಕ ಎಂದು ಚಿಕಾಗೋ ವಿವಿಯ ಅಧ್ಯಯನದಿಂದ ತಿಳಿದುಬಂದಿದೆ.

ಭಾರತದಲ್ಲಿ ಈಗ ಹೂಡಿದ ಬಂಡವಾಳ ದುಪ್ಪಟ್ಟಾಗುತ್ತೆ

ಭಾರತ ಶೀಘ್ರ ವಿಶ್ವದ 3ನೇ ದೊಡ್ಡ ಆರ್ಥಿಕ ಶಕ್ತಿಯಾಗಲಿದೆ
ಭಾರತ-ಜಪಾನ್ ಆರ್ಥಿಕ ವೇದಿಕೆಯಲ್ಲಿ ಪ್ರಧಾನಿ ಮೋದಿ

ಟೋಕಿಯೊ: ಭಾರತದ ಉದ್ಯಮ ವಲಯದಲ್ಲಿ ವಿವಿಧ ದೇಶಗಳ ಕಂಪನಿಗಳ ಹೂಡಿಕೆ ಹೆಚ್ಚುತ್ತಿದೆ. ಅದಕ್ಕೆ ಕಾರಣವೇನೆಂದರೆ, ಭಾರತದಲ್ಲಿ ಈಗ ಹೂಡಿಕೆ ಮಾಡಿದ ಬಂಡವಾಳ ಬೆಳೆಯುವುದಷ್ಟೇ ಅಲ್ಲ, ವೇಗವಾಗಿ ದುಪ್ಪಟ್ಟಾಗುತ್ತದೆ ಎಂಬುದಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಟೋಕಿಯೊದಲ್ಲಿ ಭಾರತ-ಜಪಾನ್ ಆರ್ಥಿಕ ವೇದಿಕೆಯಲ್ಲಿ ಶುಕ್ರವಾರ ಮಾತನಾಡಿದ ಮೋದಿ, ಭಾರತ ದೇಶ ಶೀಘ್ರದಲ್ಲೇ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ವಿಶ್ವಾಶ ವ್ಯಕ್ತಪಡಿಸಿದರು.

ಭಾರತ ದೇಶವೀಗ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಆರ್ಥಿಕ ದೇಶವಾಗಿದೆ. ಅದಕ್ಕೆ ತಮ್ಮ ನೇತೃತ್ವದ ಎನ್‌ಡಿಎ ಸರಕಾರ ಮಾಡಿರುವ ಆರ್ಥಿಕ ಸುಧಾರಣಾ ಕ್ರಮಗಳೇ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿವೆ ಎಂದು ಗಮ ಸೆಳೆದರು.

'ಜಪಾನ್ ಬಾಹ್ಯ ವ್ಯಾಪಾರ ಸಂಸ್ಥೆ' (ಜೆಟ್ರೊ) ಭಾರತದ ಕುರಿತು ಉಲ್ಲೇಖಿಸಿರುವಂತೆ ಶೇ.80ರಷ್ಟು ವಿದೇಶಿ ಕಂಪನಿಗಳು ಭಾರತದಲ್ಲಿ ತಮ್ಮ ನೆಲೆ ವಿಸ್ತರಿಸಿಕೊಳ್ಳಲು ಬಯಸುತ್ತವೆ. ಶೇ.75ರಷ್ಟು ಕಂಪನಿಗಳು ಅದಾಗಲೇ ಲಾಭ ಗಳಿಸುತ್ತಿವೆ. ಭಾರತದ ರಾಜಕೀಯ ಮತ್ತು ಆರ್ಥಿಕ ಸ್ಥಿರತೆಯೇ ಅದಕ್ಕೆ ಕಾರಣವಾಗಿದೆ ಎಂದರು.

ಕಳೆದ 11 ವರ್ಷಗಳಲ್ಲಿ ಭಾರತದ ಪರಿವರ್ತನೆ ಬಗೆಗೆ ಎಲ್ಲರಿಗೂ ತಿಳಿದಿದೆ. ಭಾರತದ ಬಲಿಷ್ಠ ಬ್ಯಾಂಕಿಂಗ್ ವಲಯ, ಕಡಿಮೆ ಹಣದುಬ್ಬರ ಮತ್ತು ಕಡಿಮೆ ಬಡ್ಡಿದರ ಕಾಯ್ದುಕೊಂಡಿದೆ. 70,000 ಕೋಟಿ ಡಾಲರ್ ಮೊತ್ತದ ವಿದೇಶಿ ವಿನಿಮಯದ ಸಂಗ್ರಹ ಭಾರತದಲ್ಲಿ ಈಗ ಇದೆ ಎಂದು ಹೆಮ್ಮೆಯಿಂದ ಹೇಳಿಕೊಂಡರು.

'ಸುಧಾರಣೆ, ಕಾರ್ಯಕ್ಷಮತೆ, ರೂಪಾಂತರ' ಎಂಬ ಅಂಶಗಳೇ ಭಾರತದ ಅಭಿವೃದ್ಧಿ ಹಿಂದೆ ಇವೆ ಎಂದ ಪ್ರಧಾನಿ, 'ಜಿಎಸ್‌ಟಿ' ಮತ್ತು ಸರಾಗ ವ್ಯವಹಾರ ವಿಧಾನಗಳ ಸುಧಾರಣೆ ಮೊದಲಾದ ಅಂಶಗಳನ್ನು ಸಭೆಗೆ ವಿವರಿಸಿದರು. 2017ರಲ್ಲಿ 'ಒಂದು ರಾಷ್ಟ್ರ ಒಂದು ತೆರಿಗೆ' ಪದ್ಧತಿ ಆರಂಭಿಸಿದೆವು. ಈಗ ಅದಕ್ಕೆ ಮತ್ತಷ್ಟು ಸುಧಾರಣೆ ತರಲಿದ್ದೇವೆ. ಸರಾಗ ವ್ಯಾಪಾರ ವಹಿವಾಟಿಗೆ ಪ್ರಾಮುಖ್ಯ ನೀಡಿದ್ದೇವೆ. ವಾಣಿಜ್ಯ ಚಟುವಟಿಕೆಗಳಿಗೆ ಏಕ-ಗವಾಕ್ಷಿ ಅನುಮೋದನೆ ವ್ಯವಸ್ಥೆ ಒದಗಿಸಿದ್ದೇವೆ ಎಂದರು.

ಭಾರತ-ಜಪಾನ್ ಆರ್ಥಿಕ ವೇದಿಕೆಯಲ್ಲಿ ಮೋದಿ ಮಾತು.

ಭಾರತ-ಜಪಾನ್ ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ಮಾತನಾಡಿದ ಪ್ರಧಾನಿ ನಮೋ

ಜಪಾನ್ ದೇಶ ಸದಾ ಭಾರತದ ಅಭಿವೃದ್ಧಿ ಪಯಣದಲ್ಲಿ ಜತೆಯಾದೆ. ಭಾರತದಲ್ಲಿ ಜಪಾನ್ ಉದ್ಯಮಿಗಳ ಹೂಡಿಕೆ ಹೆಚ್ಚಾಗುತ್ತಿದೆ. ಮೆಟ್ರೊ, ಸೆಮಿಕಂಡಕ್ಟರ್, ಸ್ಟಾರ್ಟ್‌ಅಪ್, ತಯಾರಿಕಾ ಉದ್ಯಮ ಕ್ಷೇತ್ರದಲ್ಲಿ ಜಪಾನ್-ಭಾರತದ ಪಾಲುದಾರಿಕೆ ದೃಢ ನಂಬಿಕೆಗೆ ಸಂಕೇತವಾಗಿದೆ. ಕಳೆದೆರಡು ವರ್ಷಗಳಲ್ಲಿ ಜಪಾನ್ ಉದ್ಯಮಿಗಳು ಭಾರತದಲ್ಲಿ 1300 ಕೋಟಿ ಡಾಲರ್ ಹೂಡಿಕೆ ಮಾಡಿದ್ದಾರೆ ಎಂದು ಪ್ರಧಾನಿ ಮೋದಿ ವಿವರಿಸಿದರು. ಭಾರತ ಕೃತಕ ಬುದ್ಧಿಮತ್ತೆ(ಎಐ), ಸೆಮಿಕಂಡಕ್ಟರ್, ಕ್ವಾಂಟಮ್ ಕಂಪ್ಯೂಟಿಂಗ್, ಬಯೋಟೆಕ್ ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹತ್ವಾಕಾಂಕ್ಷೆಯ ಉಪಕ್ರಮಗಳನ್ನು ಕೈಗೊಂಡಿದೆ. ಜಪಾನ್‌ನ ತಂತ್ರಜ್ಞಾನ ಮತ್ತು ಭಾರತದ ಪ್ರತಿಭೆ ಒಟ್ಟಾದರೆ ಈ ಶತಮಾನದಲ್ಲೇ ತಂತ್ರಜ್ಞಾನ ಕ್ರಾಂತಿ ಮುನ್ನಡೆಸಬಹುದಾಗಿದೆ. ಶುದ್ಧ ಇಂಧನ ಮತ್ತು ಹಸಿರು ಭವಿಷ್ಯ ಕ್ಷೇತ್ರದ ಸಹಕಾರಕ್ಕಾಗಿ ಜಂಟಿ ಸಾಲ ಕಾರ್ಯವಿಧಾನ ಒಪ್ಪಂದಕ್ಕೆ ಭಾರತ-ಜಪಾನ್ ಸಹಿ ಹಾಕಿವೆ ಎಂದರು.

ಟ್ರಂಪ್ ಕಪ್ಪಾದ ಬಲಗೈ ಅನಾರೋಗ್ಯ ಸುಳಿವೇ?

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನಾರೋಗ್ಯ ಕುರಿತು ಊಹಾಪೋಹ ಕೇಳಿಬರುತ್ತಿವೆ. ಟ್ರಂಪ್ ಅವರ ಬಲ ಮುಂಗೈನಲ್ಲಿ ಚರ್ಮ ಗಾಢ ಹಸಿರು ಬಣ್ಣಕ್ಕೆ ತಿರುಗಿದೆ. ಇದು ಅನಾರೋಗ್ಯದ ಸುಳಿವು ಎಂದೇ ವ್ಯಾಖ್ಯಾನಿಸಲಾಗುತ್ತಿದ್ದು, ಮಾಧ್ಯಮಗಳು ಮತ್ತು ಜಾಲತಾಣದಲ್ಲಿ ಭಾರೀ ಚರ್ಚೆ ನಡೆಯಲಾರಂಭಿಸಿದೆ.

ದಕ್ಷಿಣ ಕೊರಿಯ ಅಧ್ಯಕ್ಷ ಲೀ ಜೇ ಮ್ಯುಂಗ್ ಭೇಟಿ ವೇಳೆ ಟ್ರಂಪ್ ಕೈಯಲ್ಲಿ ಗಾಯದ ಗುರುತು ಕಾಣಿಸಿತ್ತು. ಅದರ ಬೆನ್ನಲ್ಲೇ ಟ್ರಂಪ್ ಆರೋಗ್ಯ ಕುರಿತು ಊಹಾಪೋಹ ಕೇಳಿಬರಲಾರಂಭಿಸಿತ್ತು. ಆ ಬಳಿಕ ಶ್ವೇತಭವನ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್, 'ಟ್ರಂಪ್ ಪದೇ ಪದೇ ಹಸ್ತಲಾಘವ ಮಾಡಬೇಕಾಗಿ ಬರುವುದರಿಂದ ಮುಂಗೈನಲ್ಲಿ ಹೀಗೆ ಗುರುತು ಮೂಡಿದೆ' ಎಂದು ಸ್ಪಷ್ಟನೆ ನೀಡಿದ್ದಾರೆ.

ಆದರೆ 'ಟ್ರಂಪ್ ದೀರ್ಘಕಾಲದ ಸಿರೆ ಆರೋಗ್ಯ ಸಮಸ್ಯೆ(ಸಿವಿಐ)ಯಿಂದ ಬಳಲುತ್ತಿದ್ದಾರೆ. ಸೌಮ್ಯ ಲಕ್ಷಣವಾಗಿದೆ. 70 ವರ್ಷ ದಾಟಿದ ವ್ಯಕ್ತಿಗಳಲ್ಲಿ ಇದು ಸಾಮಾನ್ಯ ಸಮಸ್ಯೆ' ಎಂದು ಟ್ರಂಪ್ ಅವರ ಚಿಕಿತ್ಸಕ ಡಾ.ಸೀನ್ ಬಾರ್ಬೆಲ್ಲಾ ಹೇಳಿದ್ದಾರೆ.

'ಯುಎಸ್‌ಎ ಟುಡೆ' ಮಾಧ್ಯಮಕ್ಕೆ ಸಂದರ್ಶನ ನೀಡಿರುವ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್, ಟ್ರಂಪ್ ಆರೋಗ್ಯ ಕುರಿತ ಸುದ್ದಿಗಳನ್ನು ನಿರಾಕರಿಸಿ, ಅವೆಲ್ಲಾ ವದಂತಿಯಷ್ಟೇ ಎಂದು ಸ್ಪಷ್ಟನೆ ನೀಡಿದ್ದಾರೆ.

ಟ್ರಂಪ್ ಆರೋಗ್ಯವಾಗಿದ್ದಾರೆ, ದೃಢವಾಗಿದ್ದಾರೆ. ಅವರ ಜತೆ ಕೆಲಸ ಮಾಡುವವರಲ್ಲಿ ಹೆಚ್ಚಿನವರು ಚಿಕ್ಕ ಪ್ರಾಯದವರು. ಹಾಗಿದ್ದೂ ಎಲ್ಲರಿಗಿಂತಲೂ ಕೊನೆಯಲ್ಲಿ ಟ್ರಂಪ್ ವಿರಮಿಸುತ್ತಾರೆ, ಅಲ್ಲದೇ ಮುಂಜಾನೆ ಎಲ್ಲರಿಗಿಂತಲೂ ಮೊದಲೇ ಎಚ್ಚರಗೊಳ್ಳುತ್ತಾರೆ. ಎಲ್ಲರಿಗೂ ಅವರು ಮಾದರಿಯಾಗಿದ್ದಾರೆ ಎಂದು ವ್ಯಾನ್ಸ್ ವಿವರಿಸಿದ್ದಾರೆ.

ಹಾಗೊಮ್ಮೆ ಟ್ರಂಪ್ ಅನಾರೋಗ್ಯದ ಕಾರಣ ರಾಷ್ಟ್ರೀಯ ತುರ್ತು ಪರಿಸ್ಥಿತಿ ಏನಾದರೂ ಎದುರಾದರೆ ಅಧ್ಯಕ್ಷ ಹುದ್ದೆ ಹೊಣೆ ಹೊರಲು ಸಿದ್ಧ ಎಂದು ಡಿವ್ಯಾನ್ಸ್ ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

- **ವದಂತಿ ಎಂದ ಶ್ವೇತಭವನ, 70ರ ವ್ಯಕ್ತಿಗೆ ಸಹಜ: ವೈದ್ಯ**
- **ತುರ್ತುಸ್ಥಿತಿ ಅಧ್ಯಕ್ಷನಾಗಲು ಸಿದ್ಧ ಎಂದ ಜೆ.ಡಿ.ವ್ಯಾನ್ಸ್**

ಸದ್ಯ ಚುನಾವಣೆ ನಡೆಸಿದರೆ ಎನ್‌ಡಿಎಗೆ 31 ಹೆಚ್ಚು ಸ್ಥಾನ

2024ಕ್ಕೆ ಹೋಲಿಸಿದರೆ 'ಇಂಡಿ' ಒಕ್ಕೂಟಕ್ಕೆ 36 ಸ್ಥಾನ ನಷ್ಟ

ದೆಹಲಿ: ಈಗೇನಾದರೂ ಲೋಕಸಭೆ ಚುನಾವಣೆ ನಡೆದರೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ(ಎನ್‌ಡಿಎ) 324 ಸ್ಥಾನಗಳನ್ನು ಗೆಲ್ಲುತ್ತದೆ. ಕಾಂಗ್ರೆಸ್ ನೇತೃತ್ವದ 'ಇಂಡಿ' ಒಕ್ಕೂಟ 208 ಸ್ಥಾನಗಳಿಗೆ ಕುಸಿಯುತ್ತದೆ ಎಂಬುದು 'ಇಂಡಿಯ ಟುಡೇ-ಸಿ ಓಟರ್' ಇತ್ತೀಚೆಗೆ ನಡೆಸಿದ 'ಮೂಡ್ ಆಫ್ ದಿ ನೇಷನ್' ಸಮೀಕ್ಷೆಯಿಂದ ತಿಳಿದುಬಂದಿದೆ.

ಒಟ್ಟು 543 ಲೋಕಸಭಾ ಕ್ಷೇತ್ರಗಳ ಪೈಕಿ 240 ಸ್ಥಾನಗಳನ್ನಷ್ಟೇ ಬಿಜೆಪಿಗೆ ಗೆಲ್ಲಲು ಸಾಧ್ಯವಾಗಿತ್ತು. ಸ್ವತಂತ್ರವಾಗಿ ಸರಕಾರ ರಚನೆಗೆ ಬಿಜೆಪಿಗೆ ಸರಳ ಬಹುಮತಕ್ಕೆ(272 ಸ್ಥಾನ) 32 ಸದಸ್ಯರ ಕೊರತೆ ಎದುರಾಗಿತ್ತು. ತೆಲುಗು ದೇಶಂ ಪಕ್ಷ ಹಾಗೂ ಜೆಡಿಯು ಮತ್ತಿತರ ಪಕ್ಷಗಳ ಬೆಂಬಲ ಪಡೆದು 293 ಸಂಸದರ ಶಕ್ತಿ ಒಗ್ಗೂಡಿಸಿ ಪ್ರಧಾನಿ ನರೇಂದ್ರ ಮೋದಿ ಅವರು 3ನೇ ಅವಧಿಗೆ ಎನ್‌ಡಿಎ ಸರಕಾರ ರಚಿಸಿದರು.

ಆದರೆ, ಕಳೆದ ಒಂದೂಕಾಲು ವರ್ಷದಲ್ಲಿ ಪರಿಸ್ಥಿತಿಯಲ್ಲಿ ಬಹಳಷ್ಟು ಬದಲಾವಣೆ ಆಗಿದೆ. ಇತ್ತೀಚಿನ 3 ಪ್ರಮುಖ ವಿಧಾನಸಭಾ ಚುನಾವಣೆಗಳಲ್ಲಿ ಸತತ ಗೆಲುವು ಕಂಡಿರುವ 'ಎನ್‌ಡಿಎ' 2024ರ ಸ್ಥಿತಿಗಿಂತ ಬಹಳಷ್ಟು ಸುಧಾರಣೆ ಕಂಡಿದೆ. ಇಂದೇ ಲೋಕಸಭಾ ಚುನಾವಣೆ ನಡೆಸಿದರೆ ಎನ್‌ಡಿಎ ಮೈತ್ರಿಕೂಟದ ಸದಸ್ಯ ಬಲ 293ರಿಂದ 324ಕ್ಕೆ ಹೆಚ್ಚಲಿದೆ. ಅಂದರೆ, ಎನ್‌ಡಿಎ ಕಳೆದ ಚುನಾವಣೆಗಿಂತ ಹೆಚ್ಚುವರಿಯಾಗಿ 31 ಕ್ಷೇತ್ರಗಳಲ್ಲಿ ಗೆಲ್ಲಬಲ್ಲದಾಗಿದೆ.

ಇನ್ನೊಂದೆಡೆ, 2024ರ ಲೋಕಸಭಾ ಚುನಾವಣೆಯಲ್ಲಿ 234 ಸ್ಥಾನಗಳನ್ನು ಗೆದ್ದಿರುವ 'ಇಂಡಿ' ಒಕ್ಕೂಟ ಈಗ ಮೊದಲಿನಷ್ಟು ಜನಪ್ರಿಯತೆ ಉಳಿಸಿಕೊಂಡಿಲ್ಲ. ಅದರ ಸದಸ್ಯ ಬಲ 36 ಕ್ಷೇತ್ರ ಕಳೆದುಕೊಳ್ಳಲಿದೆ ಎಂಬುದು ಸಮೀಕ್ಷೆಯಿಂದ ತಿಳಿದುಬಂದಿದೆ.

ಇದೇ ವರ್ಷದ ಜು.1-ಆ.14ರ ಅವಧಿಯಲ್ಲಿ ಸಮೀಕ್ಷೆ ನಡೆಸಲಾಗಿದೆ. ಎಲ್ಲಾ ಲೋಕಸಭಾ ಕ್ಷೇತ್ರಗಳಲ್ಲಿ ಸುತ್ತಾಡಿ 54,788 ವ್ಯಕ್ತಿಗಳನ್ನು ಮಾತನಾಡಿಸಿ, ಅಭಿಪ್ರಾಯ ಸಂಗ್ರಹಿಸಿ ಸಮೀಕ್ಷೆ ವರದಿ ಸಿದ್ಧಪಡಿಸಲಾಗಿದೆ. ಜತೆಗೆ 'ಸಿ-ಓಟರ್'ನ ನಿಯಮಿತ ಟ್ರ್ಯಾಕರ್ ದತ್ತಾಂಶದಿಂದಲೂ 1,52,038 ಜನರ ಅಭಿಪ್ರಾಯ ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಅಂದರೆ, ಈ ಸಮೀಕ್ಷೆ ಒಟ್ಟು 2,06,826 ಜನರ ಅಭಿಪ್ರಾಯ ಒಳಗೊಂಡಿದೆ.

ಸಮಾಚಾರ ಸಣ್ಣದಲ್ಲ

ಬಿಎಂಸಿ ನಿರ್ದೇಶಕರಾಗಿ ಡಾ. ಕಾವ್ಯ ನೇಮಕ

ಬೆಂಗಳೂರು: ವೈದ್ಯಕೀಯ ಮಹಾ ಸಂಶೋಧನಾ ಸಂಸ್ಥೆಯಾದ ಬೆಂಗಳೂರು ಮೆಡಿಕಲ್ ಕಾಲೇಜು (ಬಿಎಂಸಿ) ಪ್ರಭಾರಿ ಡೀನ್ ಹಾಗೂ ಡೈರೆಕ್ಟರ್ ಆಗಿ ಡಾ. ಕಾವ್ಯ.ಎಸ್.ಟಿ. ಅವರನ್ನು ಸರಕಾರ ಗುರುವಾರ ನೇಮಕ ಮಾಡಿ ಆದೇಶ ಹೊರಡಿಸಿದೆ. ಈ ಹುದ್ದೆಯಲ್ಲಿ ಕಳೆದ 3 ವರ್ಷ ಗಳಿಗೂ ಹೆಚ್ಚು ಕಾಲ ಪ್ರಭಾರಿಯಲ್ಲೇ ಸಲ್ಲಿಸುತ್ತಿದ್ದ ಡಾ. ರಮೇಶ್ ಕೃಷ್ಣ ಅವರನ್ನು ಸರಕಾರ ಕೊನೆಗೂ ಬದಲಾವಣೆ ಮಾಡಿದೆ. ಅವರ ವಿರುದ್ಧ ವಿವಿಧ ರೀತಿಯ ಅಕ್ರಮ ಆರೋಪ ಹೇಳಿ ಬಂದಿದ್ದ ಹಿನ್ನೆಲೆಯಲ್ಲಿ ಸರಕಾರ ಈ ಕ್ರಮ ಕೈಗೊಂಡಿದೆ. 5ಕ್ಕೂ ಹೆಚ್ಚು ಪ್ರಮುಖ ಹಾಗೂ ಪ್ರತ್ಯೇಕ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳನ್ನು ಹೊಂದಿರುವ ಬೆಂಗಳೂರು ಮೆಡಿಕಲ್ ಕಾಲೇಜ್‌ನಲ್ಲಿ ಔಷಧಗಳ ಪೂರೈಕೆ, ಚಿಕಿತ್ಸೆ ಹಾಗೂ ನೇಮಕಾತಿ ಸೇರಿದಂತೆ ಅನೇಕ ವಿಷಯಗಳಲ್ಲಿ ಅಕ್ರಮಗಳು ಹೆಚ್ಚಾಗಿದ್ದ ಆರೋಪಗಳಿದ್ದವು. ಆ ವಿಷಯವನ್ನು ಮುಂದಿಟ್ಟುಕೊಂಡು ಕೆಲವು ವೈದ್ಯಾಧಿಕಾರಿಗಳು ಹೈಕೋರ್ಟ್‌ನಲ್ಲಿ ಹೋರಾಟ ಆರಂಭಿಸಿದ್ದರು. ಇದರಿಂದ ಸಂಸ್ಥೆಯಲ್ಲಿ ಒಂದು ರೀತಿಯ ಅರಾಜಕತೆ ವಾತಾವರಣವಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಹಾಗೂ ಹಿರಿಯ ಅಧಿಕಾರಿಗಳು ಇತ್ತೀಚೆಗೆ ವಿಕ್ಟೋರಿಯಾ ಆಸ್ಪತ್ರೆಯೂ ಸೇರಿದಂತೆ ಕಾಲೇಜಿನ ಕೆಲವು ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಅಲ್ಲಿನ ವೈದ್ಯಕೀಯ ಸೇವೆಗಳನ್ನು ಪರಿಶೀಲಿಸಿದಾಗ ಅನೇಕ ರೀತಿಯ ಅಕ್ರಮಗಳು ಗಮನಕ್ಕೆ ಬಂದಿದ್ದವು. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಬಿಎಂಸಿಯ ವೈದ್ಯಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ಕಾವ್ಯ ಅವರನ್ನು ನೇಮಕ ಮಾಡಿದೆ ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಮದ್ಯ ಮಾರಾಟ ನಿಷೇಧ

ಬೆಂಗಳೂರು: ನಗರದಲ್ಲಿ ಸಾಮೂಹಿಕ ಗಣೇಶ ವಿಸರ್ಜನೆ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಆಗಸ್ಟ್ 31 ಹಾಗೂ ಸೆಪ್ಟೆಂಬರ್ 14ರಂದು ನಗರದ ಹಲವು ಪ್ರದೇಶಗಳಲ್ಲಿ ಮದ್ಯ ಮಾರಾಟ ನಿಷೇಧಿಸಿ ಆದೇಶ ಹೊರಡಿ ಸಲಾಗಿದೆ. ಬೆಂಗಳೂರು ನಗರ ಪೊಲೀಸ್ ಕಮಿಷನ ರೇಟ್ ವ್ಯಾಪ್ತಿಯಲ್ಲಿ ಸಾಮೂಹಿಕ ಗಣೇಶ ಮೂರ್ತಿ ಗಳು ವಿಸರ್ಜನೆ ನಡೆಯುವುದರಿಂದ ಕಿಡಿಗೇಡಿಗಳು ಮದ್ಯ ಸೇವಿಸಿ ಗಲಾಟೆ ಮಾಡುವ ಸಾಧ್ಯತೆ ಇರುವು ದರಿಂದ ಬೆಂಗಳೂರಿನ ಹಲವು ಪ್ರದೇಶಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ. ಗಣೇಶ ಮೂರ್ತಿಗಳ ವಿಸರ್ಜನೆ ಹಿನ್ನೆಲೆಯಲ್ಲಿ ನಗರದ ಕೆಲವು ಠಾಣೆಗಳ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಿ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರು ಆದೇಶ ಹೊರಡಿಸಿದ್ದಾರೆ.

ಬುಲೆಟ್‌ರೈಲು ಕಾಮಗಾರಿ ಕಟ್ಟಡಗಳಲ್ಲಿ ಬಿರುಕು

ಪಾಲ್ಘರ್: ಕಾಮಗಾರಿ ಹಂತದಲ್ಲಿರುವ ಮುಂಬೈ – ಅಹಮದಾ ಬಾದ್ ಬುಲೆಟ್ ರೈಲು ಯೋಜನೆಯ ಮಾರ್ಗದ ಸಮೀಪ ಇರುವ ಕೆಲವು ಕಟ್ಟಡಗಳಲ್ಲಿ ಬಿರುಕು ಕಂಡುಬಂದಿದೆ. ಪಾಲ್ಘರ್ ಜಿಲ್ಲೆಯ ಹಲವು ಕಟ್ಟಡಗಳಲ್ಲಿ ಬಿರುಕು ಕಂಡು ಬಂದಿದ್ದು, ಈ ಬಗ್ಗೆ ಯೋಜನೆ ಕಾರ್ಯಗತ ಗೊಳಿಸುತ್ತಿರುವ ನ್ಯಾಷನಲ್ ಹೈ ಸ್ಪೀಡ್ ರೈಲು ಕಾರ್ಪೊರೇಷನ್ ನಿಯಮಿತ (ಎನ್‌ಎಚ್‌ಆರ್‌ಸಿಎಲ್) ಸಮೀಕ್ಷೆ ಆರಂಭಿಸಿದೆ. ಪಾರದರ್ಶಕತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಮತ್ತು ಸ್ಥಳೀಯ ಗ್ರಾಮಸ್ಥರ ಸಮ್ಮುಖದಲ್ಲಿ ಈ ಪ್ರದೇಶದಲ್ಲಿ ನಿಯಂತ್ರಿತ ಸ್ಫೋಟ ನಡೆಯುತ್ತಿದೆ ಎಂದು ಎನ್‌ಎಚ್‌ಆರ್‌ಸಿಎಲ್ ತಿಳಿಸಿದೆ. ಪರಿಸ್ಥಿತಿಯನ್ನು ನಿರ್ಣಯಿಸಲು ಮತ್ತು ಹಾನಿಯ ಕಾರಣವನ್ನು ನಿರ್ಧರಿಸಲು ತಾಂತ್ರಿಕ ತಂಡವನ್ನು ಸಜ್ಜುಗೊಳಿಸಲಾಗಿದೆ ಎಂದು ಎನ್‌ಎಚ್‌ಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ವಿಜಯ್ ಮಲ್ಯ ಅರ್ಜಿ ವಿಚಾರಣೆಗೆ ಹೈ ಅಸ್ತು

ಬೆಂಗಳೂರು: ವಿದೇಶದಲ್ಲಿ ತಲೆಮರೆಸಿಕೊಂಡಿರುವ ಉದ್ಯಮಿ ವಿಜಯ್ ಮಲ್ಯ ಅವರು ಪಾವತಿಸಬೇಕಿರುವುದಕ್ಕಿಂತ ಹೆಚ್ಚು ಸಾಲ ವಸೂಲಿ ಪ್ರಶ್ನಿಸಿ ಬ್ಯಾಂಕ್‌ಗಳ ವಿರುದ್ಧವೇ ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಕರ್ನಾಟಕ ಹೈಕೋರ್ಟ್ ಶುಕ್ರವಾರ ಸ್ವೀಕರಿಸಿದ್ದು, ಸೆಪ್ಟೆಂಬರ್‌ಗೆ ಪಟ್ಟಿ ಮಾಡಿದೆ. ಸಾಲದ ಮೊತ್ತ ಹಾಗೂ ವಸೂಲಿ ಮಾಡಿರುವ ಒಟ್ಟು ಮೊತ್ತದ ವಿವರ ನೀಡುವಂತೆ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಉದ್ಯಮಿ ವಿಜಯ್ ಮಲ್ಯ ಮತ್ತು ಈಗ ದಿವಾಳಿಯಾಗಿರುವ ಯುನೈಟೆಡ್ ಬ್ರೂವರೀಸ್ ಹೋಲ್ಡಿಂಗ್ಸ್ ಲಿಮಿಟೆಡ್ (ಯುಬಿಎಚ್‌ಎಲ್)ನ ನಿರ್ದೇಶಕ ದಲ್ಜಿತ್ ಮಹಲ್ ಅವರು ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ.

ವಯನಾಡ್ ಬಳಿ ಘಾಟ್ ಕುಸಿತ: ಬದಲಿ ಮಾರ್ಗ

ಮಡಿಕೇರಿ: ಕೊಡಗು ಜಿಲ್ಲೆಗೆ ಹೊಂದಿಕೊಂಡಿರುವ ನೆರೆಯ ಕೇರಳದ ವಯನಾಡು ಜಿಲ್ಲೆಗೆ ಸಂಪರ್ಕಿಸುವ ತಮರಶೆರಿ ಘಾಟ್ ಬಳಿ ಭೂಕುಸಿತ ಸಂಭವಿಸಿದೆ. ಈ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗಿದ್ದು, ವಯನಾಡ್‌ಗೆ ಬದಲಿ ಮಾರ್ಗ ಸೂಚಿಸಿದೆ. ಅದರಂತೆ ಗಡಿಭಾಗವಾದ ಕುಟ್ಟ ಮೂಲಕ ಗುಡಲೂರು ಮಾರ್ಗವಾಗಿ ಸಂಚರಿಸುವ ವಾಹನಗಳನ್ನು ಬದಲೀ ಮಾರ್ಗವಾದ ಗೋಣಿಕೊಪ್ಪ ಕೂಟುಪುಳ ಇರಿಟ್ಟಿ (ಕಣ್ಣೂರು ಜಿಲ್ಲೆ) ಮಾರ್ಗದ ಮೂಲಕ ಸಂಚರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸುತ್ತೋಲೆ ಹೊರಡಿಸಿದ್ದಾರೆ.

ಒಸಾಕಾ ಮತ್ತು ನಗೋಯಾ ನಗರಗಳಿಗೆ ನೇರ ವಿಮಾನಸೇವೆ ಆರಂಭಿಸುವ ಚಿಂತನೆ: ಸಚಿವ ಎಂ.ಬಿ ಪಾಟೀಲ್

ಬೆಂಗಳೂರಿನಿಂದ ಜಪಾನಿನ ಇನ್ನೆರಡು ಸಿಟಿಗೆ ನೇರ ವಿಮಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿನ ಕೆಐಎ ವಿಮಾನ ನಿಲ್ದಾಣದಿಂದ ಜಪಾನ್‌ನ ಎರಡು ಪ್ರಮುಖ ನಗರಗಳಿಗೆ ಶೀಘ್ರವೇ ವಿಮಾನ ಸೇವೆಯನ್ನು ಆರಂಭಿಸುವ ನಿರೀಕ್ಷೆಯಿದ್ದು, ಈ ಕುರಿತು ಚರ್ಚೆಗಳು ನಡೆಯುತ್ತಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ತಿಳಿಸಿದ್ದಾರೆ.

ಬೆಂಗಳೂರಿನಿಂದ ಜಪಾನ್ ದೇಶದ ಪ್ರಮುಖ ಕೈಗಾರಿಕಾ ನಗರಗಳಾಗಿರುವ ಒಸಾಕಾ ಮತ್ತು ನಗೋಯಾ ನಗರಗಳಿಗೆ ನೇರ ವಿಮಾನಸೇವೆ ಆರಂಭಿಸುವ ಚಿಂತನೆಯಿದ್ದು, ಈ ಕುರಿತು ಬೆಂಗಳೂರಿನಲ್ಲಿ ಇರುವ ಆ ದೇಶದ ಕಾನ್ಸುಲ್ ಜನರಲ್ ನಕಾನೆ ಸುಟೋಮು ಅವರೊಂದಿಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಚರ್ಚೆ ನಡೆಸಿದ್ದು, ಸಭೆ ಬಳಿಕ ಮಾತನಾಡಿದ ಅವರು, ಜಪಾನ್ ಜತೆ ಬಂಡವಾಳ ಹೂಡಿಕೆ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸಂಬಂಧ, ಹಾಗೂ ಭಾಷಾ ಕಲಿಕೆಯಂತಹ ಕೌಶಲ್ಯ ಬಲವರ್ಧನೆಗೆ ರಾಜ್ಯ ಸರಕಾರದ ಮೂಲಕ ಅಗತ್ಯ ಉಪಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಸಂಬಂಧ ಸೆಪ್ಟೆಂಬರ್ 6ರಿಂದ ಹತ್ತು ದಿನಗಳ ಜಪಾನ್ ಪ್ರವಾಸ ಕೈಗೊಳ್ಳಲಾಗುತ್ತಿದೆ ಎಂದರು.

ಜಪಾನ್ ಕಾನ್ಸುಲ್ ಜನರಲ್ ಅವರನ್ನು ಸಚಿವ ಎಂ.ಬಿ. ಪಾಟೀಲ ಭೇಟಿ ಮಾಡಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

7,500 ಕೋಟಿ ಬಂಡವಾಳ ಹೂಡಿಕೆ: ಬೆಂಗಳೂರಿನಿಂದ ಜಪಾನ್‌ನ ರಾಜಧಾನಿ ಟೋಕಿಯೋಗೆ ಮಾತ್ರ ನೇರ ವಿಮಾನ ಸೌಲಭ್ಯವಿದ್ದು,ಈ ವರ್ಷದ ಫೆಬ್ರವರಿಯಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಜಪಾನಿನ ಹಲವು ಕಂಪನಿಗಳು ಡೇಟಾ ಸೆಂಟರ್, ಮ್ಯಾನ್ಯುಫ್ಯಾಕ್ಚರಿಂಗ್, ಲಾಜಿಸ್ಟಿಕ್ಸ್ ಮುಂತಾದ ವಲಯಗಳಲ್ಲಿ ರಾಜ್ಯದಲ್ಲಿ 7,500 ಕೋಟಿ ರು. ಬಂಡವಾಳ ಹೂಡಿಕೆಗೆ ಒಡಂಬಡಿಕೆ ಮಾಡಿಕೊಂಡಿವೆ. ಹೀಗಾಗಿ ಅಲ್ಲಿನ ಕೈಗಾರಿಕಾ ನಗರಗಳಾದ ಒಸಾಕಾ ಮತ್ತು ನಗೋಯಾಗೆ ನಮ್ಮಲ್ಲಿಂದ ನೇರ ವಿಮಾನ ಸೇವೆ ಆರಂಭಿಸಬೇಕಾದ ಅಗತ್ಯವಿದೆ ಎಂದು ಅವರು ವಿವರಿಸಿದರು. ನಮ್ಮಲ್ಲಿ ಹಲವರಿಗೆ ಜಪಾನಿನ ಕಂಪನಿಗಳು ಕೆಲಸ ಕೊಡುತ್ತಿವೆ. ಇದಕ್ಕೆ ಪೂರಕವಾಗಿ ನಮ್ಮಲ್ಲಿರುವ ವಿ.ಟಿ.ಯು ತರಹದ ವಿ.ವಿಗಳಲ್ಲಿ ಜಪಾನಿ ಭಾಷೆ ಕಲಿಕೆಗೆ ಒಡಂಬಡಿಕೆ ಮಾಡಿಕೊಳ್ಳುವುದು ಪರಿಣಾಮಕಾರಿ ಯಾಗಲಿದೆ. ಆದ್ದರಿಂದ ಜಪಾನ್ ಭೇಟಿಯ ಸಮಯದಲ್ಲಿ ಅಲ್ಲಿನ ಒಂದು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಈ ಬಗ್ಗೆ ಮಾತುಕತೆ ನಡೆಸಲಾಗುವುದು. ಜಪಾನಿನ 1,400 ಕಂಪನಿಗಳು ಭಾರತದಲ್ಲಿವೆ. ಇದ ರಲ್ಲಿ ಅರ್ಧದಷ್ಟು ಕಂಪನಿಗಳು ತಯಾರಿಕೆ ವಲಯ ವೊಂದರಲ್ಲೇ ಸಕ್ರಿಯವಾಗಿವೆ. ಭಾರತದಲ್ಲಿನ ಎಫ್.ಡಿ.ಐ ಹೂಡಿಕೆಯಲ್ಲಿ ಜಪಾನ್ ಐದನೆಯ ಸ್ಥಾನ ದಲ್ಲಿದೆ. ಕಳೆದ ಎರಡು ವರ್ಷಗಳಲ್ಲಿ ಎರಡೂ ದೇಶಗಳ ನಡುವೆ 13 ಬಿಲಿಯನ್ ಡಾಲರ್ ಮೊತ್ತದ 170 ಒಡಂಬಡಿಕೆಗಳು ಜರುಗಿವೆ. ಜಪಾನ್ ಮತ್ತು ರಾಜ್ಯದ ನಡುವಿನ ವ್ಯವಹಾರ ಪ್ರಕ್ರಿಯೆಗಳ ನಿರ್ವಹಣೆಗೆ ಟೋಕಿಯೋದಲ್ಲಿ ಪ್ರಥಮ ಬಿಸಿಐಸಿ ಕಚೇರಿ ಆರಂಭವಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಯಾತ್ರೆ: ಮೋದಿ, ತಾಯಿ ನಿಂದಿಸಿದ್ದ ವ್ಯಕ್ತಿ ಸೆರೆ

ದರ್ಭಾಂಗ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಬಿಹಾರದಲ್ಲಿ ನಡೆಯುತ್ತಿರುವ 'ಮತದಾರರ ಅಧಿಕಾರ ಯಾತ್ರೆ'ಯಲ್ಲಿ ಒಂದೆಡೆ ಸಾರ್ವಜನಿಕ ವೇದಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ತಾಯಿಯ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿ ನಿಂದಿಸಿದ ವ್ಯಕ್ತಿಯನ್ನು ಬಿಹಾರ ಪೊಲೀಸರು ಶುಕ್ರವಾರ ದರ್ಭಾಂಗ್ ಪಟ್ಟಣದ ಸಿಂಗ್ವಾರ ಪ್ರದೇಶದಲ್ಲಿ ಬಂಧಿಸಿದ್ದಾರೆ. ಬಂಧಿತನನ್ನು ಮೊಹಮ್ಮದ್ ರಿಜ್ವಿ(20) ಎಂದು ಗುರುತಿಸಲಾಗಿದೆ. ಬಿಜೆಪಿ ದರ್ಭಾಂಗ್ ಜಿಲ್ಲಾ ಘಟಕದ ಅಧ್ಯಕ್ಷ ಆದಿತ್ಯ ನಾರಾಯಣ್ ಚೌಧರಿ ಸಲ್ಲಿಸಿದ ದೂರಿನ ಮೇರೆಗೆ ಆರೋಪಿ ರಿಜ್ವಿ ಮತ್ತಿತರರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲಾಗಿದೆ.

ಪ್ರಧಾನಿ ಮೋದಿ ಮತ್ತು ತಾಯಿ ಕುರಿತು ಅಶ್ಲೀಲ ಭಾಷೆ ಬಳಸಿದ ಕಾಂಗ್ರೆಸ್ ಕಾರ್ಯಕರ್ತರ ನಡೆ ಖಂಡಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಹುಲ್ ನಾಯಕತ್ವದಲ್ಲಿ ಕಾಂಗ್ರೆಸ್ ಬಹಳ ಕೆಳಮಟ್ಟಕ್ಕೆ ಇಳಿದಿದೆ. ಬಡ ತಾಯಿಯ ಮಗ ಮೋದಿ 11 ವರ್ಷಗಳಿಂದ ಪ್ರಧಾನಿ ಕುರ್ಚಿಯಲ್ಲಿರುವುದು, ಅವರ ನಾಯಕತ್ವದಲ್ಲಿ ದೇಶ ಅಭಿವೃದ್ಧಿ ಕಾಣುತ್ತಿರುವುದನ್ನು ರಾಹುಲ್‌ಗೆ ಸಹಿಸಲಾಗುತ್ತಿಲ್ಲ. ಹಾಗಾಗಿ ಅವರ ಪಕ್ಷದವರ ಮೂಲಕ ಹೀಗೆ ನಿಂದನೆ ಮಾಡಿಸುತ್ತಿದ್ದಾರೆ. ಈ ತಪ್ಪಿಗೆ ರಾಹುಲ್ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಹಳೆ ರೀತಿನೀತಿ, ಸ್ವಭಾವ ಮರುಕಳಿಸಿರುವುದಕ್ಕೆ ಇದೇ ಸಾಕ್ಷಿ. ದೇಶದ ರಾಜಕೀಯ ವಿಷಪೂರಿತವಾಗುತ್ತಿದೆ ಎಂದು ಶಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರೂ ಕಾಂಗ್ರೆಸ್ ಪಕ್ಷದ್ದು 'ಸಭ್ಯತೆಯ ಎಲ್ಲೆ ಮೀರಿದ ವರ್ತನೆ' ಎಂದು ಕಿಡಿಕಾರಿದ್ದು, ರಾಹುಲ್ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪಟನಾದಲ್ಲಿ ಬಡಿದಾಟ

ದರ್ಭಾಂಗ್ ಪಟ್ಟಣದಲ್ಲಿ ಕಾಂಗ್ರೆಸ್ ಯಾತ್ರೆ ವೇಳೆ ವೇದಿಕೆಯಲ್ಲಿ ನಿಂತು ರಿಜ್ವಿ, ಪ್ರಧಾನಿ ಮೋದಿ ಮತ್ತು ಅವರ ತಾಯಿಯನ್ನು ಉಲ್ಲೇಖಿಸಿ ಅಶ್ಲೀಲ ಪದ ಬಳಸಿದ ವಿಡಿಯೊ ವೈರಲ್ ಆಗಿದೆ. ಈ ವಿಚಾರವಾಗಿ ಪಟನಾದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘರ್ಷಣೆಯಾಗಿದೆ. ಎರಡೂ ಪಕ್ಷದ ಕಾರ್ಯಕರ್ತರು ದೊಣ್ಣೆ, ಬಡಿಗೆಗಳಿಂದ ಬಡಿದಾಡಿಕೊಂಡಿದ್ದು, ಎರಡೂ ಪಕ್ಷಗಳಲ್ಲಿ ಕೆಲವರು ಗಾಯಗೊಂಡಿದ್ದಾರೆ.

ಕಾಂಗ್ರೆಸ್‌ನ ಮೋಸ ಬಯಲಾಗಿದೆ

ಬೆಂಗಳೂರು: ಮತಗಳ್ಳತನ ಆರೋಪ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಿಜೆಪಿ ವಿರುದ್ಧ ಹೋರಾಟ ನಡೆಸುತ್ತಿರುವ ವೇಳೆಯಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹೋರಾಟಕ್ಕೆ ಬೆಂಬಲಿಸಿ ಗೋಪಾಲ್ ಗಂಜ್ ತಲುಪಿಸಿದ್ದಾರೆ. ಇದೇ ವೇಳೆ 1991ರ ಲೋಕಸಭಾ ಚುನಾವಣೆಯಲ್ಲಿ ವಂಚನೆಯಿಂದ ಸೋತಿದ್ದಾಗಿ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಬಿಜೆಪಿ ಟೀಕಿಸಿದ್ದು, ನಿಜವಾದ ಮತಕಳ್ಳರು ಯಾರು ಎಂದು ಪ್ರಶ್ನಿಸಿದೆ.

ವಕೀಲರ ಸಂಘದಿಂದ ಗುರುವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಮಾಜಿ ಅಡ್ವೊಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್ ಅಭಿನಂದನಾ ಸಮಾರಂಭದಲ್ಲಿ ಭಾಷಣ ಮಾಡಿದ್ದ ವೇಳೆ ಸಿಎಂ ಸಿದ್ದರಾಮಯ್ಯ,ಮಾತನಾಡಿ, 1991ರಲ್ಲಿ ನಾನು ಲೋಕಸಭೆಯಲ್ಲಿ ಚುನಾವಣೆಗೆ ನಿಂತು ಮೋಸದಿಂದ ಸೋತಿದ್ದೆ. ಆಗ ಇವರ ಕೈಯಲ್ಲಿ ಕೇಸ್ ಹಾಕಿಸಿದ್ದೆ. ಉಚಿತವಾಗಿ ಆಗಿ ಕೇಸ್ ನಡೆಸಿಕೊಟ್ಟರು. ಆಗ ಅದರ ವಿರುದ್ಧ ನ್ಯಾಯಾಲಯ ದಲ್ಲಿ ಹೋರಾಡಲು ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ನೆರವು ನೀಡಿದ್ದರು' ಎಂದು ಸ್ಮರಿಸಿದ್ದರು. ಈ ಸಂಬಂಧ ಎಕ್ಸ್ ಪೋಸ್ಟ್ ಮಾಡಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ಕಾಂಗ್ರೆಸ್ ಪಕ್ಷದ ಮೋಸ ಬಯಲು ಮಾಡಿರುವ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ, ಕಾಂಗ್ರೆಸ್ ಪಕ್ಷದಿಂದ ವಜಾ ಮಾಡುವ ಧೈರ್ಯ ಇದೆಯಾ? ಕಾಂಗ್ರೆಸ್ ಪಕ್ಷದ ಮತಗಳ್ಳತನ ಬಯಲು ಮಾಡಿದ ಸಿದ್ದರಾಮಯ್ಯ 1991ರಲ್ಲಿ ಲೋಕಸಭೆಗೆ ಸ್ಪರ್ಧಿಸಿದ್ದು ಎಲ್ಲಿಂದ? ಕೊಪ್ಪಳ ಲೋಕಸಭಾ ಕ್ಷೇತ್ರದಿಂದ, ಯಾವ ಪಕ್ಷದಿಂದ? ಜನತಾದಳ ಪಕ್ಷದಿಂದ, ಸಿದ್ದರಾಮಯ್ಯವರವನ್ನು ಮೋಸದಿಂದ ಸೋಲಿಸಿದ್ದು ಯಾರು? ಕಾಂಗ್ರೆಸ್ ಪಕ್ಷ. ಮತಗಳ್ಳತನ ಎಂಬ ಕಪೋಲಕಲ್ಪಿತ ನಾಟಕದ ಬಗ್ಗೆ ಸತ್ಯ ನುಡಿದಿದ್ದ ಮಾಜಿ ಸಚಿವ ಕೆ. ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾ ಮಾಡಿದ್ದ ರಾಹುಲ್ ಗಾಂಧಿ ಅವರಿಗೆ, ಈಗ ಕಾಂಗ್ರೆಸ್ ಪಕ್ಷದ ಮೋಸ ಬಯಲು ಮಾಡಿರುವ ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ವಜಾ ಮಾಡುವ ಧೈರ್ಯ ಇದೆಯಾ? ಎಂದು ಪ್ರಶ್ನಿಸಿದ್ದಾರೆ.

ಡಿ.ಹರ್ಷೇಂದ್ರ ಕುಮಾರ್ ಅವರ ದಾವೆ
ಸಿಟಿ ಸಿವಿಲ್ ಕೋರ್ಟ್‌ನಿಂದ ತಡೆಯಾಜ್ಞೆ

ಅವಹೇಳನಕಾರಿ, ಆಧಾರ ರಹಿತ ವಿಡಿಯೋ ಅಳಿಸಿ

ಬೆಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ , ಡಾ.ಡಿ. ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲಾಗಿದ್ದ ಅವಹೇಳನಕಾರಿ, ಆಧಾರರಹಿತ ವಿಡಿಯೋ ಪೋಸ್ಟ್‌ಗಳಿಗೆ ಸಿಟಿ ಸಿವಿಲ್ ಕೋರ್ಟ್ ತಡೆಯಾಜ್ಞೆ ನೀಡಿದ್ದು, ತಕ್ಷಣವೇ ಅವುಗಳನ್ನು ಡಿಲೀಟ್ ಮಾಡಲು ಆದೇಶಿಸಿದೆ.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಪ್ರಕಟವಾದ ಮಾನಹಾನಿಕರ ವಿಡಿಯೋಗಳ ಕುರಿತು ಡಿ. ಹರ್ಷೇಂದ್ರ ಕುಮಾರ್ ಅವರು ಸಿಟಿ ಸಿವಿಲ್ ಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಹೀಗಾಗಿ ನ್ಯಾಯಾಲಯವು ತಡೆಯಾಜ್ಞೆ ನೀಡಿತ್ತು. ಆದರೆ, 'ಥರ್ಡ್ ಐ' ಯೂಟ್ಯೂಬ್ ಚಾನೆಲ್ ಇದನ್ನು 'ಗ್ಯಾಗ್ ಆರ್ಡರ್' ಎಂದು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ರಿಟ್ ಅರ್ಜಿ ಸಲ್ಲಿಸಿತ್ತು. ಸುಪ್ರೀಂಕೋರ್ಟ್ ಈ ವಿಷಯವನ್ನು ಹೈಕೋರ್ಟ್‌ನಲ್ಲಿ ಇತ್ಯರ್ಥಗೊಳಿಸಲು ಸೂಚಿಸಿತ್ತು.

'ಕುಡ್ಲ ರ್‍ಯಾಂಪೇಜ್' ಹೈಕೋರ್ಟ್‌ಗೆ ರಿಟ್ ಸಲ್ಲಿಸಿತ್ತು. ಅದನ್ನು ಪುರಸ್ಕರಿಸಿದ್ದ ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್‌ನ ಏಕಪಕ್ಷೀಯ ಆದೇಶವನ್ನು ರದ್ದುಗೊಳಿಸಿ, ಮರುತನಿಖೆಗೆ ಆದೇಶಿಸಿತ್ತು. ಅದರ ವಿರುದ್ಧ ಡಿ. ಹರ್ಷೇಂದ್ರ ಕುಮಾರ್ ಅವರು ಸುಪ್ರೀಂಕೋರ್ಟ್‌ನಲ್ಲಿ ದಾವೆ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್, ಹೈಕೋರ್ಟ್ ಆದೇಶವನ್ನು ಪರಿಗಣನೆಗೆ ತೆಗೆದುಕೊಳ್ಳದೆ ದಾಖಲೆಗಳು ಮತ್ತು ಪ್ರಕರಣವನ್ನು ಪರಿಗಣಿಸಿ ಎರಡು ವಾರಗಳಲ್ಲಿ ತೀರ್ಪು ನೀಡುವಂತೆ ಆದೇಶಿಸಿತ್ತು.

ಸಿಟಿ ಸಿವಿಲ್ ಕೋರ್ಟ್ ಐದು ದಿನಗಳ ಕಾಲ ವಾದ-ವಿವಾದ ಆಲಿಸಿ, ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ, ಜಯಂತ್ ಟಿ. ಸೇರಿದಂತೆ ಇತರರಿಂದ ಪ್ರಕಟವಾದ ಮಾನಹಾನಿಕರ ವಿಡಿಯೊಗಳನ್ನು ವೀಕ್ಷಿಸಿ ತಡೆಯಾಜ್ಞೆ ನೀಡಿದ್ದು, ವಿಡಿಯೋಗಳನ್ನು ಡಿಲೀಟ್ ಮಾಡುವಂತೆ ಸೂಚಿಸಿದೆ. ಈ ಪ್ರಕರಣದಲ್ಲಿ ಪ್ರತಿವಾದಿಗಳು ಮಾತ್ರವಲ್ಲದೆ ಇತರರಿಗೂ ಕೂಡ ಈ ಆದೇಶವು ಒಂದು ಸಂದೇಶ ಕೊಟ್ಟಿದ್ದು ಯಾವುದೇ ರೀತಿಯ ಸಕಾರಣಗಳಿಲ್ಲದೆ, ದಾಖಲೆಗಳಿಲ್ಲದೆ ಶ್ರೀಕ್ಷೇತ್ರ ಧರ್ಮಸ್ಥಳ, ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಹರ್ಷೇಂದ್ರಕುಮಾರ್ ಹಾಗೂ ಕುಟುಂಬಸ್ಥರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುವವರಿಗೆ ಆದೇಶದ ಮೂಲಕ ಖಡಕ್ ಎಚ್ಚರಿಕೆ ನೀಡಿದೆ ಎಂದು ಡಿ. ಹರ್ಷೇಂದ್ರ ಕುಮಾರ್ ಪರವಾಗಿ ವಾದಿಸಿದ ಹೈಕೋರ್ಟ್ ವಕೀಲ ರಾಜಶೇಖರ್ ಹಿಲ್ಯಾರ್ ತಿಳಿಸಿದ್ದಾರೆ.

ಬೆಂಗಳೂರು–ಚೆನ್ನೈ–ಹೈದರಾಬಾದ್–
ಅಮರಾವತಿ ಮಧ್ಯೆ ಸಂಚಾರ

ದ.ಭಾರತಕ್ಕೊಂದು ಬುಲೆಟ್ ರೈಲು: ನಾಯ್ಡು ಪ್ರಸ್ತಾವನೆ



ವಿಶಾಖಪಟ್ಟಣ: ಪ್ರಸ್ತುತ ಜಪಾನ್ ಸಹಕಾರದೊಂದಿಗೆ ಮುಂಬೈ ಮತ್ತು ಅಹಮದಾಬಾದ್ ಮಧ್ಯೆ ಬುಲೆಟ್ ಟ್ರೇನ್ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ. ಅದು ಗುಜರಾತ್-ಮಹಾರಾಷ್ಟ್ರ ಒಳಗೊಂಡಂತೆ ವಾಯುವ್ಯ ಭಾರತಕ್ಕೆ ಸೀಮಿತವಾಗಿದೆ. ದಕ್ಷಿಣ ಭಾರತಕ್ಕೂ ಬುಲೆಟ್ ಟ್ರೇನ್ ಬೇಕಿದೆ. ಈ ಕನಸನ್ನು ಹಂಚಿಕೊಂಡಿರುವ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು, ದಕ್ಷಿಣ ಭಾರತದ ನಾಲ್ಕು ಪ್ರಮುಖ ರಾಜ್ಯಗಳ ರಾಜಧಾನಿ ನಗರ ಗಳಾದ ಬೆಂಗಳೂರು-ಚೆನ್ನೈ-ಹೈದರಾಬಾದ್-ಅಮರಾವತಿಯನ್ನು ಪರಸ್ಪರ ಜೋಡಿಸುವ ಬುಲೆಟ್ ಟ್ರೇನ್ ಯೋಜನೆ ಕುರಿತು ಮಾತನಾಡಿದ್ದಾರೆ. ವಿಶಾಖಪಟ್ಟಣದಲ್ಲಿ ಶುಕ್ರವಾರ ಭಾರತ ಆಹಾರ ಉತ್ಪಾದನಾ ಸಮಾವೇಶದಲ್ಲಿ ಮಾತನಾಡಿದ ನಾಯ್ಡು, ದಕ್ಷಿಣ ಭಾರತದ 4 ಮಹಾ ನಗರಗಳ 5 ಕೋಟಿ ಜನರಿಗೆ ಬುಲೆಟ್ ಟ್ರೇನ್ ಯೋಜನೆ ಸಾಕಾರಗೊಂಡರೆ ದೊಡ್ಡ ಮಟ್ಟದ ಪ್ರಯೋಜನವಾಗಲಿದೆ. ಸಂಚಾರ ವ್ಯವಸ್ಥೆ ವೇಗಗೊಳ್ಳಲಿದೆ. ಈ ಯೋಜನೆ ಅತಿಶೀಘ್ರದಲ್ಲೇ ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಸಾಕಾರಗೊಳ್ಳಲಿದೆ. ಸದ್ಯ ಭೂ ಸಮೀಕ್ಷೆಗೆ ಆದೇಶ ಹೊರಡಿಸಲಾಗಿದೆ ಎಂದಿದ್ದಾರೆ.

ಡಿ.ದೇವರಾಜ ಅರಸು ಪ್ರಶಸ್ತಿ ಪುರಸ್ಕೃತ, ಹಿರಿಯ ಪತ್ರಕರ್ತ ಕಲ್ಲೆ ಶಿವೋತ್ತಮ ರಾವ್ ಅವರ 96ನೇ ಹುಟ್ಟುಹಬ್ಬದಂದು ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ಹಿರಿಯ ಪತ್ರಕರ್ತರಾದ ಸಂಪಿಗೆ ಶಿವಪ್ರಕಾಶ್, ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಗಾಯಕಿ ಗಾಯತ್ರಿ ರಾಮಣ್ಣ ಹಾಗೂ ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ. ಎಸ್. ನಾಗರಾಜಸ್ವಾಮಿ ಅವರು ಮನೆಗೆ ತೆರಳಿ ಶುಭಕೋರಿ, ಗೌರವಿಸಿದರು.

ಜನಸಾಮಾನ್ಯರಿಗೆ ತೊಂದರೆ ಎದುರಾಗದಿರಲಿ | ಜೋಶಿ ಸೂಚನೆ

ಕೈಗೆಟಕುವ ಬೆಲೆಯಲ್ಲಿ ಈರುಳ್ಳಿ ಲಭ್ಯವಾಗಲಿ

ದೆಹಲಿ: ದೇಶದಲ್ಲಿ ಪ್ರಸ್ತುತ ಹಬ್ಬಗಳು ಬರಲಿರುವ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಈರುಳ್ಳಿ ಸಂಗ್ರಹಣೆ ಮತ್ತು ಕ್ರಯ ವಿಕ್ರಯದ ಮೇಲೆ ಕಣ್ಣಿಟ್ಟಿದೆ. ಜನಸಾಮಾನ್ಯರಿಗೆ ತೊಂದರೆ ತೊಡಕುಗಳು ಎದುರಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಮುಂದಾಗಿದೆ. ಈ ಸಂಬಂಧ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ದೆಹಲಿಯಲ್ಲಿ ಹಿರಿಯ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ್ದಾರೆ.

ಸೆಪ್ಟೆಂಬರ್, ಅಕ್ಟೋಬರ್ ತಿಂಗಳಿನಲ್ಲಿ ಹಾಗೂ ಮುಂದಿನ ದಿನಗಳಲ್ಲಿ ಸಾಲು ಸಾಲು ಹಬ್ಬ ಹರಿದಿನಗಳು ಇರುವುದರಿಂದ ಜನಸಾಮಾನ್ಯರಿಗೆ ಈರುಳ್ಳಿ ಕೈಗೆಟುಕುವ ಬೆಲೆಯಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಬೇಕಿದೆ ಎಂದು ಸಚಿವ ಜೋಶಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಈರುಳ್ಳಿ ಕ್ರಯ ವಿಕ್ರಯ ಸುಗಮಕ್ಕೆ ಮಾರ್ಗಸೂಚಿ: ದೇಶದೆಲ್ಲೆಡೆ ಈರುಳ್ಳಿ ಸುಗಮ ಕ್ರಯ ವಿಕ್ರಯಕ್ಕೆ ಮಾರ್ಗಸೂಚಿ ಹೊರಡಿಸುವಂತೆ ಸೂಚಿಸಿದ ಸಚಿವರು, ಉತ್ತಮ ಗುಣಮಟ್ಟದ ಈರುಳ್ಳಿ ಖರೀದಿ, ಸಂಗ್ರಹಣೆ ಖಚಿತಪಡಿಸಿಕೊಳ್ಳಲು ಅಧಿಕಾರಿಗಳ ತಂಡ ಅಗತ್ಯ ಇರುವ ಕಡೆ ಭೇಟಿ ನೀಡಿ ಪರಿಶೀಲಿಸಬೇಕೆಂದು ಆದೇಶಿಸಿದರು. ಈರುಳ್ಳಿ ಖರೀದಿಯಲ್ಲಿ ಪಾರದರ್ಶಕ ಮತ್ತು ಪರಿಣಾಮಕಾರಿ ಸಂಗ್ರಹಣೆ ಕುರಿತಂತೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರಲ್ಲದೆ, ಈರುಳ್ಳಿ ಖರೀದಿ ಪ್ರಕ್ರಿಯೆ ಸುಗಮಗೊಳಿಸಲು ಮತ್ತು ವೈಜ್ಞಾನಿಕವಾಗಿ ಸಂಗ್ರಹಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಪ್ರಾಥಮಿಕ ವರದಿ ಸಲ್ಲಿಕೆ: ಪ್ರಸ್ತುತದಲ್ಲಿ ಈರುಳ್ಳಿ ಖರೀದಿ ಸ್ಥಿತಿಗತಿ ಪರಿಶೀಲನೆ, ಖರೀದಿ ಕೇಂದ್ರಗಳು ಮತ್ತು ಸಂಗ್ರಹಣಾ ಕೇಂದ್ರಗಳಿಗೆ ಪರಿಶೀಲನಾ ತಂಡಗಳು ಭೇಟಿ ನೀಡಿ ಪ್ರಾಥಮಿಕ ವರದಿ ಸಲ್ಲಿಸಿದ್ದಾರೆ ಎಂದಿರುವ ಸಚಿವರು, ಎಲ್ಲೆಡೆಯೂ ಗ್ರಾಹಕರಿಗೆ ಈರುಳ್ಳಿ ಸುಗಮವಾಗಿ ಲಭ್ಯವಾಗುವಂತೆ ಕಟ್ಟೆಚ್ಚರ ವಹಿಸಲಾಗುತ್ತದೆ ಎಂದು ಹೇಳಿದ್ದಾರೆ.

ಮುನ್ನೆಚ್ಚರಿಕೆ ವಹಿಸಲು ಸಲಹೆ

ಹಬ್ಬಗಳು ಇರುವುದರಿಂದ ಹಾಗೂ ಎಲ್ಲೆಡೆ ವ್ಯಾಪಕ ಮಳೆ ಸುರಿಯುತ್ತಿರುವುದರಿಂದ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಏರಿಳಿತ ಆಗುತ್ತಿರುತ್ತದೆ. ಅಲ್ಲದೇ, ಕೆಲ ವರ್ತಕರು ಅಗತ್ಯಕ್ಕಿಂತ ಹೆಚ್ಚು ದಾಸ್ತಾನು ಇರಿಸಿಕೊಳ್ಳುತ್ತಾರೆ. ಇದರಿಂದ ಸಹಜವಾಗಿ ಕೃತಕ ಅಭಾವ ಎದುರಾಗುತ್ತದೆ. ಹಾಗಾಗಿ ಅಧಿಕಾರಿಗಳ ತಂಡ ಇದೆಲ್ಲದರ ಮೇಲೆ ನಿಗಾ ವಹಿಸಬೇಕು, ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಚಿವ ಪ್ರಲ್ಹಾದ್ ಜೋಶಿ ಸಲಹೆ ನೀಡಿದರು.

ದೇಶದೆಲ್ಲೆಡೆ ಸಮರ್ಪಕವಾಗಿ ಈರುಳ್ಳಿ ಲಭ್ಯತೆ ಮತ್ತು ಪೂರೈಕೆಯನ್ನು ಖಚಿತಪಡಿಸಲು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅಧಿಕಾರಿಗಳ ಜತೆ ಸಭೆ ನಡೆಸಿದರು.

---

50 ಕೋಟಿ ಗ್ರಾಹಕರ ಮೈಲಿಗಲ್ಲು ದಾಟಿದ ಜಿಯೋ | ಮುಂಬೈನಲ್ಲಿ ನಡೆದ 48ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಘೋಷಣೆ

2026ರಲ್ಲಿ ಜಿಯೋ ಐಪಿಒ: ಮುಕೇಶ್ ಅಂಬಾನಿ

ಮುಂಬೈ: 2026ರ ಮೊದಲಾರ್ಧದಲ್ಲಿ ಜಿಯೋ ಐಪಿಒ ಬಿಡುಗಡೆ ಆಗಲಿದೆ ಎಂದು ರಿಲಯನ್ಸ್ ಕಂಪನಿಯ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

ಶುಕ್ರವಾರ ನಡೆದ ಸಂಸ್ಥೆಯ 48ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈ ವಿಷಯವನ್ನು ಘೋಷಿಸಿದ್ದಾರೆ. ರಿಲಯನ್ಸ್ ಜಿಯೋ 50 ಕೋಟಿ ಗ್ರಾಹಕರ ಮೈಲಿಗಲ್ಲನ್ನು ದಾಟಿದೆ. ಕಳೆದ 3 ವರ್ಷಗಳಲ್ಲಿ ರಿಲಯನ್ಸ್ ರು. 5.6 ಲಕ್ಷ ಕೋಟಿ ಹೂಡಿಕೆ ಮಾಡಿದ್ದು, ನಮ್ಮ ದೇಶದ ವಾರ್ಷಿಕ ಆದಾಯದಲ್ಲಿ 125 ಶತಕೋಟಿ ದಾಟಿದ ಮೊದಲ ಕಂಪನಿಯಾಗಿದೆ ಎಂದೂ ಹೇಳಿದರು.

'ಜಿಯೋ ಐಪಿಒಗೆ ಅರ್ಜಿ ಸಲ್ಲಿಸಲು ಎಲ್ಲಾ ವ್ಯವಸ್ಥೆಗಳು ನಡೆಯುತ್ತಿವೆ, ಅದನ್ನು ಘೋಷಿಸಲು ನನಗೆ ಹೆಮ್ಮೆಯಿದೆ. 2026ರ ಮೊದಲಾರ್ಧದ ವೇಳೆಗೆ ಜಿಯೋವನ್ನು ಷೇರು ಮಾರುಕಟ್ಟೆಯಲ್ಲಿ ಪಟ್ಟಿ ಮಾಡುವ ಗುರಿ ಹೊಂದಿದ್ದೇವೆ. ಜಿಯೋ ಜಾಗತಿಕ ಸ್ಪರ್ಧಿಗಳನ್ನು ಮೀರಿ ಮೌಲ್ಯವನ್ನು ಸೃಷ್ಟಿಸಲಿದೆ ಎಂಬ ಭರವಸೆ ನೀಡುತ್ತೇನೆ' ಎಂದು ಮುಕೇಶ್ ಅಂಬಾನಿ ಹೇಳಿದ್ದಾರೆ.

ಜಿಯೋಗೆ 500 ಮಿಲಿಯನ್ ಗ್ರಾಹಕರು: ಮುಂದಿನ ವಾರ ರಿಲಯನ್ಸ್ ಜಿಯೋ ತನ್ನ 10ನೇ ವರ್ಷಕ್ಕೆ ಕಾಲಿಡಲಿದೆ. ಆಧಾರ್ ಮತ್ತು ಜಿಯೋದಂತಹ ಉಪಕ್ರಮಗಳೊಂದಿಗೆ ಜಿಯೋ ಭಾರತದಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಕ್ಕೆ ಅಡಿಪಾಯ ಹಾಕಿದೆ ಎಂದು ಅಂಬಾನಿ ಹೇಳಿದರು.

ಆಧಾರ್ ಮತ್ತು ಯುಪಿಐ ಸೇರಿದಂತೆ ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಕ್ಕೆ ಜಿಯೋ ಅಡಿಪಾಯ ಹಾಕಿದೆ ಮಾತ್ರವಲ್ಲ, ಭಾರತದ ಡಿಜಿಟಲ್ ಪರಿಸರ ವ್ಯವಸ್ಥೆಯ ಸೃಷ್ಟಿಗೆ ಅನುವು ಮಾಡಿಕೊಡುತ್ತಿದೆ.

100ಕ್ಕೂ ಹೆಚ್ಚು ಯುನಿಕಾರ್ನ್‌ಗಳನ್ನು ಬೆಂಬಲಿಸುವ ಮೂಲಕ ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಜಿಯೋ ಸಹಾಯ ಮಾಡಿದೆ ಎಂದು ಮುಕೇಶ್ ಅಂಬಾನಿ ಇದೇ ವೇಳೆ ಹೇಳಿದರು.

ಜಿಯೋದ ಭವಿಷ್ಯದ ಐದು ಯೋಜನೆಗಳು

- **ಮೊಬೈಲ್ ಮತ್ತು ಹೋಮ್ ಬ್ರಾಡ್‌ಬ್ಯಾಂಡ್‌ನೊಂದಿಗೆ ಪ್ರತಿಯೊಬ್ಬ ಭಾರತೀಯನ ಸಂಪರ್ಕ.**
- **ಪ್ರತೀ ಭಾರತೀಯ ಮನೆಯನ್ನು ಜಿಯೋ ಸ್ಮಾರ್ಟ್ ಹೋಮ್, ಜಿಯೋ ಟಿವಿ ಪ್ಲಸ್, ಜಿಯೋ ಟಿವಿ ಓಎಸ್ ಮತ್ತು ತಡೆರಹಿತ ಆಟೋಮೇಷನ್‌ನಂತಹ ಡಿಜಿಟಲ್ ಸೇವೆಗಳೊಂದಿಗೆ ಸಬಲೀಕರಣ.**
- **ಭಾರತೀಯ ವ್ಯವಹಾರಗಳನ್ನು ಸರಳ, ಸುರಕ್ಷಿತ ಮತ್ತು ಪ್ಲಾಟ್‌ಫಾರ್ಮ್‌ಗಳೊಂದಿಗೆ ಸಂಪರ್ಕಿಸಲು ಜಿಯೋ ಮೂಲಕ ಡಿಜಿಟಲೀಕರಣ**

ಗೂಗಲ್, ಮೆಟಾದ ಸಹಭಾಗಿತ್ವ ರಿಲಯನ್ಸ್ ಎಐ ಘಟಕ ಅನಾವರಣ

ಭಾರತದಲ್ಲಿ ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೆ ಚಾಲನೆಯನ್ನು ನೀಡುವುದಕ್ಕೆ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸಂಪೂರ್ಣ ಸ್ವಾಮ್ಯದ ಹೊಸ ಘಟಕವಾದ ರಿಲಯನ್ಸ್ ಇಂಟೆಲಿಜೆನ್ಸ್ ಅನ್ನು ಶುಕ್ರವಾರ ಅನಾವರಣಗೊಳಿಸಿದೆ.

ಇದು ಟೆಲಿಕಾಂ, ರೀಟೇಲ್ ವ್ಯಾಪಾರ ಮತ್ತು ಇಂಧನ ವ್ಯವಹಾರಗಳ ಜೊತೆಗೆ ಉದ್ಯಮ ಸಮೂಹವನ್ನು ಡೀಪ್ ಟೆಕ್ ಉದ್ಯಮವನ್ನಾಗಿ ಮಾಡುವ ಮುಕೇಶ್ ಅಂಬಾನಿ ಅವರ ಮಹತ್ವಾಕಾಂಕ್ಷೆಗೆ ಪುಷ್ಟಿಯನ್ನು ನೀಡುತ್ತದೆ. ಜಾಮ್‌ನಗರದಲ್ಲಿ ಗಿಗಾವ್ಯಾಟ್ ಪ್ರಮಾಣದ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಸಿದ್ಧ ಡೇಟಾ ಕೇಂದ್ರಗಳ ಸ್ಥಾಪನೆ, ಪ್ರಮುಖ ತಂತ್ರಜ್ಞಾನ ಸಂಸ್ಥೆಗಳು ಮತ್ತು ಮುಕ್ತ ಮೂಲ (ಓಪನ್ ಸೋರ್ಸ್) ಸಮುದಾಯಗಳೊಂದಿಗೆ ಸಹಯೋಗ ಮಾಡಿಕೊಳ್ಳುವುದು, ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಸಣ್ಣ ವ್ಯಾಪಾರ ಕ್ಷೇತ್ರಗಳಲ್ಲಿ ಎ.ಐ ಸೇವೆಗಳನ್ನು ತರುವುದು ಮತ್ತು ವಿಶ್ವ ದರ್ಜೆಯ ಎ.ಐ ಪ್ರತಿಭೆಗಳನ್ನು ಭಾರತಕ್ಕೆ ಆಕರ್ಷಿಸುವುದು ಮುಂತಾದ ಉದ್ದೇಶ ಹೊಂದಿದೆ. ಸುಂದರ್ ಪಿಚೈ ನೇತೃತ್ವದ ಗೂಗಲ್‌ನೊಂದಿಗೆ ಸಮಗ್ರ ಪಾಲುದಾರಿಕೆಯನ್ನು ಅಂಬಾನಿ ಘೋಷಿಸಿದರು. ಇಂಧನ ಮತ್ತು ರೀಟೇಲ್ ವ್ಯಾಪಾರದಿಂದ ಟೆಲಿಕಾಂ ಮತ್ತು ಹಣಕಾಸು ಸೇವೆಗಳವರೆಗೆ ಎ.ಐ ಬಳಸಿಕೊಂಡು ರಿಲಯನ್ಸ್‌ನ ಎಲ್ಲ ವ್ಯವಹಾರಗಳು ರೂಪಾಂತರಗೊಳ್ಳಲು ಸಹಾಯ ಮಾಡಲು ಗೂಗಲ್ ಮತ್ತು ರಿಲಯನ್ಸ್ ಪಾಲುದಾರಿಕೆ ಹೊಂದಿವೆ.

ಟೆಸ್ಲಾದ ಗಿಗಾ ಫ್ಯಾಕ್ಟರಿಗಿಂತ 4 ಪಟ್ಟು ದೊಡ್ಡದು

ಗುಜರಾತ್‌ನ ಜಾಮ್‌ನಗರದಲ್ಲಿ ನಿರ್ಮಿಸಲಾಗುತ್ತಿರುವ ಧೀರೂಭಾಯಿ ಅಂಬಾನಿ ಗಿಗಾ ಎನರ್ಜಿ ಕಾಂಪ್ಲೆಕ್ಸ್, ಟೆಸ್ಲಾ ಗಿಗಾ ಫ್ಯಾಕ್ಟರಿಗಿಂತ ನಾಲ್ಕು ಪಟ್ಟು ದೊಡ್ಡದಾಗಿದೆ. 4.4 ಮಿಲಿಯನ್ ಚದರ ಅಡಿ ವಿಸ್ತೀರ್ಣದಲ್ಲಿ ವ್ಯಾಪಿಸಿರುವ ಈ ಗಿಗಾ ಎನರ್ಜಿ ಕಾಂಪ್ಲೆಕ್ಸ್‌ನ ಕಾಮಗಾರಿ ದಾಖಲೆಯ ವೇಗದಲ್ಲಿ ನಡೆಯುತ್ತಿದೆ. ಇಲ್ಲಿಯವರೆಗೆ, ಅದರ ನಿರ್ಮಾಣದಲ್ಲಿ 34 ಲಕ್ಷ ಘನ ಮೀಟರ್ ಕಾಂಕ್ರೀಟ್ ಅನ್ನು ಬಳಸಲಾಗಿದೆ. ಸುಮಾರು 100 ಐಫೆಲ್ ಟವರ್‌ಗಳನ್ನು ನಿರ್ಮಿಸಲು ಸುಮಾರು 7 ಲಕ್ಷ ಟನ್ ಉಕ್ಕನ್ನು ಬಳಸಲಾಗಿದೆ. ಒಂದು ಲಕ್ಷ ಕಿ.ಮೀ. ಕೇಬಲ್‌ಗಳನ್ನು ಹಾಕಲಾಗಿದೆ ಎಂದು ಕಾರ್ಯ ನಿರ್ವಾಹಕ ನಿರ್ದೇಶಕ ಅನಂತ್ ಅಂಬಾನಿ ಮಾಹಿತಿ ನೀಡಿದರು.

ಕಾಲಭೈರವ ಡ್ರೋನ್ ಸಮರ ವಿಮಾನ

ಬೆಂಗಳೂರಿನ ಎಐ ಸಮರಾಸ್ತ್ರಗಳ ಕಂಪನಿ ಎನಿಸಿದ ಫ್ಲೈಯಿಂಗ್ ವೆಡ್ಜ್ ಡಿಫೆನ್ಸ್ ಅಂಡ್ ಏರೋಸ್ಪೇಸ್ ಇದೀಗ ಭಾರತದ ಮೊದಲ ಸ್ವಂತ ನಿರ್ಮಾಣದ ಮಧ್ಯಮ ಎತ್ತರದ ದೀರ್ಘ ಬಾಳಿಕೆಯ ಯುದ್ಧ ವಿಮಾನವನ್ನು ತಯಾರಿಸಿದೆ. MALE ಕಾಂಬ್ಯಾಟ್ ಏರ್‌ಕ್ರಾಫ್ಟ್ ವರ್ಗಕ್ಕೆ ಸೇರಿದ ಕಾಲಭೈರವ ಯುದ್ಧವಿಮಾನವು ಪೂರ್ಣವಾಗಿ ತಯಾರಾಗಿದ್ದು ರಫ್ತಿಗೂ ಸಿದ್ಧವಾಗಿದೆ ಎಂದು ಎಫ್‌ಡಬ್ಲ್ಯುಡಿಎ ಸಂಸ್ಥೆ ಹೇಳಿದೆ. ಕಾಲಭೈರವ ಸ್ಫೂರ್ತಿಯಲ್ಲಿ ಈ ಸ್ವಯಂಚಾಲಿತ ಕಾಂಬ್ಯಾಟ್ ಏರ್‌ಕ್ರಾಫ್ಟ್‌ನ ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆ ಮಾಡಲಾಗಿದೆ. ಕಂಪನಿಯ ಸಂಸ್ಥಾಪಕ ಹಾಗೂ ಸಿಇಒ ಸುಹಾಸ್ ತೇಜಸ್‌ಕಂಡ ಅವರ ಪ್ರಕಾರ ಫ್ಲೈಯಿಂಗ್ ವೆಡ್ಜ್ ನಿರ್ಮಿಸಿರುವ ಈ ಪುಟ್ಟ ಕಾಲಭೈರವ ಡ್ರೋನ್ ಯುದ್ಧವಿಮಾನವು ನಿರಂತರ 30 ಗಂಟೆಗಳ ಕಾಲ ಕಾರ್ಯಾಚರಣೆ ಸಾಮರ್ಥ್ಯ ಹೊಂದಿದ್ದು ಹಾಗೂ 3,000 ಕಿಮೀ ದೂರ ಒಂದೇ ಸಮನೆ ಹಾರಬಲ್ಲುದು. ಅಮೆರಿಕದ ಜನರಲ್ ಅಟಾಮಿಕ್ಸ್ ಸಂಸ್ಥೆಯ ಎಂಕ್ಯೂ-1 ಪ್ರಿಡೇಟರ್ ಮತ್ತು ಇಸ್ರೇಲ್‌ನ ಸರ್ಚರ್ ಡ್ರೋನ್ ವಿಮಾನಗಳಿಗೆ ಹೋಲಿಸಿದರೆ ಕಾಲಭೈರವ ಡ್ರೋನ್ ವಿಮಾನಗಳು ಬಹಳ ಅಗ್ಗದ ಬೆಲೆ ಹೊಂದಿವೆ. ಈಗಾಗಲೇ ಈ ಸಮರ ಡ್ರೋನ್‌ಗೆ ದಕ್ಷಿಣ ಏಷ್ಯಾದ ರಾಷ್ಟ್ರವೊಂದರಿಂದ ಬೇಡಿಕೆ ಬಂದಿದೆ.

ಕಾಲಭೈರವ ಡ್ರೋನ್

ಬರಲಿದೆ ಸೌರಶಕ್ತಿ ಚಾಲಿತ ಡ್ರೋನ್

ಇದು ಡ್ರೋನ್‌ಗಳ ಯುಗ. ಟನ್‌ಗಟ್ಟಲೆ ತೂಕದ ಟ್ಯಾಂಕರ್‌ಗಳು, ಫಿರಂಗಿಗಳು, ನೂರಾರು ಕೋಟಿ ರು. ಮೊತ್ತದ ಸಮರ ವಿಮಾನಗಳಿಗಿಂತಲೂ ಆಧುನಿಕ ಸಮರಾಂಗಣದಲ್ಲಿ ಕೆಲವೇ ಕೋಟಿ.ರು ವೆಚ್ಚದ ಡ್ರೋನ್‌ಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಇತ್ತೀಚೆಗೆ ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಭಾರತ ಡ್ರೋನ್‌ಗಳನ್ನು ಬಳಸಿ, ಪಾಕಿಸ್ತಾನದ ನೆಲೆಗಳ ಮೇಲೆ ಕರಾರುವಕ್ಕಾಗಿ ದಾಳಿ ನಡೆಸಿತ್ತು. ಇಸ್ರೇಲ್ ಕೂಡ ಹಮಾಸ್ ಹುಟ್ಟಡಗಿಸುವಲ್ಲಿ ಡ್ರೋನ್ ಪ್ರಮುಖ ಪಾತ್ರ ವಹಿಸಿದೆ. ರಷ್ಯಾ ಇದೀಗ ಡ್ರೋನ್ ಮೂಲಕವೇ ಉಕ್ರೇನ್‌ನ ಅತಿದೊಡ್ಡ ನೌಕಾ ಹಡಗನ್ನು ಧ್ವಂಸಗೊಳಿಸಿದೆ. ಈ ಪೀಠಿಕೆ ಏಕೆ ಅಂದರೆ ದೆಹಲಿ ಮೂಲದ ಖಾಸಗಿ ಕಂಪನಿ ಇತ್ತೀಚೆಗೆ ಸೌರಶಕ್ತಿ ಚಾಲಿತ ಡ್ರೋನ್ ಅಭಿವೃದ್ಧಿಪಡಿಸಿದೆ.

ಕರಿಯಪ್ಪ, ಹೆಗ್ಗಡದಿನ್ನಿ

ಸ್ಟಾರ್ಟ್‌ಅಪ್ ಕಂಪನಿಯೊಂದು ದೇಶದ ಮೊದಲ 'ಸೌರಶಕ್ತಿ ಚಾಲಿತ ಡ್ರೋನ್' ಅಭಿವೃದ್ಧಿಪಡಿಸಿದೆ. ನವೋದ್ಯಮಿ ವಿಜಯ್ ಶಂಕರ್ ದ್ವಿವೇದಿ ಎಂಬವರು ಇಂಥದ್ದೊಂದು ಡ್ರೋನ್‌ಅನ್ನು ಅಭಿವೃದ್ಧಿಪಡಿಸಿದ್ದಾರೆ.

ಐಐಟಿ ಕಾನ್ಪುರದ ಹಳೆಯ ವಿದ್ಯಾರ್ಥಿಯಾಗಿರುವ ವಿಜಯ್ ಶಂಕರ್ ದ್ವಿವೇದಿ ಸ್ಟಾರ್ಟ್‌ಅಪ್ ಕಂಪನಿ ಹೊಂದಿದ್ದು, ಸಹಸಂಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಕಂಪನಿಯಿಂದ ಅಭಿವೃದ್ಧಿಪಡಿಸಿರುವ 'ಸೌರಶಕ್ತಿ ಚಾಲಿತ ಡ್ರೋನ್' ಅನ್ನು ಇತ್ತೀಚೆಗೆ ದೆಹಲಿಯ ವಸಂತ್ ಕುಂಜ್‌ನಲ್ಲಿ ನಡೆದ ಸ್ಟಾರ್ಟ್‌ಅಪ್ ಮೇಳದಲ್ಲಿ ಪ್ರಾಯೋಗಿಕವಾಗಿ ಪ್ರದರ್ಶಿಸಲಾಯಿತು. ಈ ಡ್ರೋನ್‌ಗೆ 'ತೇಜಸ್ವಾನ್' ಎಂದು ಹೆಸರಿಸಲಾಗಿದೆ.

'ತೇಜಸ್ವಾನ್' ವೈಶಿಷ್ಟ್ಯತೆ

150 ಕಿ.ಮೀ ದೂರ ಪ್ರಯಾಣ: ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿದ್ದರಿಂದ ಡ್ರೋನ್ ಒಂದೇ ಬಾರಿಗೆ 150 ಕಿ.ಮೀ ದೂರ ಕ್ರಮಿಸುವುದರ ಜತೆಗೆ 12 ಗಂಟೆ ನಿರಂತರವಾಗಿ ಹಾರಬಲ್ಲದು. 3 ಕೆ.ಜಿವರೆಗೆ ಭಾರ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ. ಬ್ಯಾಟರಿ ಅಳವಡಿಸಲಾಗಿದ್ದು, ಸೌರಶಕ್ತಿಯಿಂದ ಚಾರ್ಜ್ ಆಗಲು ಸಮಸ್ಯೆಯಾದಲ್ಲಿ ಈ ಬ್ಯಾಟರಿಯೊಂದಿಗೆ 50 ಕಿ.ಮೀ ಕ್ರಮಿಸಬಲ್ಲದು.

ಕಾರ್ಯ ವಿಧಾನ ಹೇಗೆ?

ಇದನ್ನು ಒಮ್ಮೆ ಸೌರಶಕ್ತಿಯಿಂದ ಚಾರ್ಜ್ ಮಾಡಿದ್ದಲ್ಲಿ 150 ಕಿಲೋಮೀಟರ್ ದೂರ ಕ್ರಮಿಸಬಲ್ಲದು. ಸಮುದ್ರ ಮಟ್ಟದಿಂದ 5 ಕಿಲೋಮೀಟರ್ ಎತ್ತರಕ್ಕೆ ಹಾರುವ ಶಕ್ತಿ ಹೊಂದಿದೆ. ಸೌರ ಫಲಕಗಳನ್ನು ರೆಕ್ಕೆಗಳನ್ನಾಗಿ ಮಾರ್ಪಡಿಸಲಾಗಿದೆ. ಅದು ಸೂರ್ಯನ ಬೆಳಕಿನಿಂದ ಚಾರ್ಜ್ ಆಗುತ್ತದೆ. ಸೌರಶಕ್ತಿಯಿಂದ ಚಾರ್ಜ್ ಆಗಲು ಸಮಸ್ಯೆಯಾದಲ್ಲಿ ಅಥವಾ ಮೋಡ ಕವಿದ ವಾತಾವರಣದಲ್ಲಿ ಇಲ್ಲವೇ, ಸೂರ್ಯನ ಬೆಳಕು ಇಲ್ಲದಿದ್ದಾಗಲೂ ಈ ಡ್ರೋನ್ ಬ್ಯಾಟರಿಯಲ್ಲಿ 50 ಕಿ.ಮೀ ದೂರ ಕ್ರಮಿಸಬಲ್ಲದು. ಸದ್ಯ ಈ ಡ್ರೋನ್‌ನ ಪ್ರಾಯೋಗಿಕ ಪರೀಕ್ಷೆ ಪೂರ್ಣಗೊಂಡಿದೆ. ಈಗ ಮುಂದಿನ ಸಿದ್ಧತೆಗಳು ನಡೆಯುತ್ತಿವೆ.

ಇದರ ಉಪಯೋಗವೇನು?

ಭಾರತದ ಭದ್ರತಾ ತಂತ್ರಜ್ಞಾನದ ಒಂದು ಹೊಸ ಆಯಾಮವಾಗಿ 'ಸೌರಶಕ್ತಿ ಚಾಲಿತ ಡ್ರೋನ್' ಕಾರ್ಯನಿರ್ವಹಿಸಬಲ್ಲದು. ಸೇನಾಪಡೆ, ವಾಯುಪಡೆ ಮತ್ತು ನೌಕಾಪಡೆ ಈ ಡ್ರೋನ್ ಅನ್ನು ಬಳಸುವಲ್ಲಿ ಹೆಚ್ಚಿನ ಆಸಕ್ತಿ ತೋರಿಸಿವೆ. ಡ್ರೋನ್ ಎರಡು ರೀತಿಯ ಕ್ಯಾಮೆರಾಗಳನ್ನು ಹೊಂದಿದ್ದು, ಅವುಗಳ ಮೂಲಕ ತಲುಪಬೇಕಾದ ಗುರಿ ತಲುಪಿ ಸೂಕ್ಷ್ಮವಾಗಿ ವೀಕ್ಷಿಸುವ ಕೆಲಸ ಮಾಡುತ್ತದೆ.

'ಸೌರಶಕ್ತಿ ಚಾಲಿತ ಡ್ರೋನ್' ಭವಿಷ್ಯದ ತಂತ್ರಜ್ಞಾನಕ್ಕೆ ಹೊಸ ಸೇರ್ಪಡೆ ಎಂಬುದನ್ನು ಮನಗೊಂಡಿರುವ ಮೂರು ಸೇನೆಗಳ ಅಧಿಕಾರಿಗಳು ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಮುಂದಿನ ಮಾತುಕತೆಗಳು ನಡೆಸಿದ್ದಾರೆ. ಸೇನಾ ಮುಖ್ಯಸ್ಥ ಜನರಲ್ ಅನಿಲ್ ಚೌಹಾನ್ ನಮ್ಮ ಉತ್ಪಾದನಾ ತಂತ್ರಜ್ಞಾನ ಮತ್ತು ಪ್ರಯೋಗಾಲಯವನ್ನು ಪರಿಶೀಲನೆ ಕೂಡ ಮಾಡಿದ್ದಾರೆ ಎನ್ನಲಾಗಿದೆ.

12 ಗಂಟೆಗಳ ಕಾಲ ಕಾರ್ಯಾಚರಣೆ

ಪ್ರಸ್ತುತ ದೇಶದಲ್ಲಿ ಬಳಸುತ್ತಿರುವ ಡ್ರೋನ್‌ಗಳು 10 ರಿಂದ 20 ಕಿಲೋಮೀಟರ್ ವ್ಯಾಪ್ತಿಯನ್ನು ಮಾತ್ರ ಹೊಂದಿವೆ. ಅಲ್ಲದೇ ಅವುಗಳು ಎರಡರಿಂದ ಮೂರು ಗಂಟೆಗಳ ಕಾಲ ಮಾತ್ರ ಹಾರುತ್ತವೆ. ಆದರೆ, ತೇಜಸ್ವಾನ್ ಡ್ರೋನ್ 12 ಗಂಟೆಗಳ ಕಾಲ ಹಾರುವ ಮತ್ತು 150 ಕಿಲೋಮೀಟರ್ ದೂರವನ್ನು ಕ್ರಮಿಸುವ ಸಾಮರ್ಥ್ಯ ಹೊಂದಿದೆ. ಪ್ರಯೋಗಾತ್ಮಕವಾಗಿ ಸದಕ್ಕೆ ನಮ್ಮ ಸ್ಟಾರ್ಟ್‌ಅಪ್ ಕಂಪನಿಯಿಂದ ಕೆಲವು 'ಸೌರಶಕ್ತಿ ಚಾಲಿತ ಡ್ರೋನ್' ಮಾತ್ರ ಅಭಿವೃದ್ಧಿಪಡಿಸಲಾಗಿದೆ. ಪ್ರಯೋಗ ಯಶಸ್ವಿ ಆಗಿದೆ. ಭಾರತೀಯ ಸೇನೆಯಿಂದ ಬಂದ ಆದೇಶದ ಪ್ರಕಾರ ನಾವು ಅವುಗಳನ್ನು ಸಿದ್ಧಪಡಿಸಿದ್ದೇವೆ. ಗಡಿಯಲ್ಲಿ ಕಣ್ಗಾವಲು, ಕಾಡಿನಲ್ಲಿ ಹೊತ್ತಿಕೊಂಡ ಬೆಂಕಿಯ ಮೇಲ್ವಿಚಾರಣೆ ಮಾಡುವುದು, ವಿಪತ್ತು ಹಾಗೂ ನೈಸರ್ಗಿಕ ವಿಕೋಪದ ಸಮಯದಲ್ಲಿ ಸಂತ್ರಸ್ತರನ್ನು ಪತ್ತೆ ಹಚ್ಚುವುದು ಮತ್ತು ಅವರ ಸುಲಭ ರಕ್ಷಣೆಗೆ ಸಹಾಯ ಮಾಡಲು ಈ ಡ್ರೋನ್ ಪರಿಣಾಮಕಾರಿ. ಅಲ್ಲದೇ ಡ್ರೋನ್ ಮೂಲಕ ಗಡಿ ಪ್ರದೇಶಗಳಲ್ಲಿ ಭದ್ರತಾ ಗುಪ್ತಚರ ಮತ್ತು ಶತ್ರು ಚಟುವಟಿಕೆಗಳನ್ನು ಸಹ ಮೇಲ್ವಿಚಾರಣೆ ಮಾಡಬಹುದು. ಆಪರೇಷನ್ ಸಿಂಧೂರ್ ಸಮಯದಲ್ಲಿ ಪಾಕಿಸ್ತಾನವು ಟರ್ಕಿ ಒದಗಿಸಿದ ಡ್ರೋನ್‌ಗಳನ್ನು ವ್ಯಾಪಕವಾಗಿ ಬಳಸಿಕೊಂಡಂತೆಯೇ, ನಮ್ಮ ಡ್ರೋನ್‌ಗಳನ್ನು ಭಾರತೀಯ ಸೈನ್ಯವು ಯಾವುದೇ ಕಾರ್ಯಾಚರಣೆ ಮತ್ತು ಶೋಧ ಕಾರ್ಯಾಚರಣೆಗೆ ಬಳಸಬಹುದು. ಬೇಡಿಕೆಗನುಗುಣವಾಗಿ ಮತ್ತಷ್ಟು ಉತ್ಪಾದನೆ ಮಾಡಲಾಗುವುದು. ಸದ್ಯಕ್ಕೆ ಇದರ ಬೆಲೆ ಇನ್ನು ನಿಗದಿ ಪಡಿಸಿಲ್ಲ.

ಗೂಗಲ್ ಪಿಕ್ಸೆಲ್ 10: ನೆಟ್‌ವರ್ಕ್ ಬೇಕಿಲ್ಲ

ಫೋನ್‌ನಲ್ಲಿ ನೆಟ್‌ವರ್ಕ್ ಇಲ್ಲ ಎಂದರೆ ಯಾವುದೇ ಸಂಪರ್ಕ ಸಾಧಿಸಲು ಆಗುವುದಿಲ್ಲ. ಇಂಟರ್ನೆಟ್ ಇಲ್ಲದೆ ಅಂತರ್ಜಾಲ ಪ್ರವೇಶಿಸಲು ಆಗುವುದಿಲ್ಲ. ಸದ್ಯ ನೂತನ ಮೊಬೈಲ್ ಮಾರುಕಟ್ಟೆಗೆ ಬಂದಿದ್ದು, ಸಿಗ್ನಲ್‌ಗಳಿಲ್ಲದೆಯೂ ಕರೆಗಳನ್ನು ಮಾಡಬಹುದು. ಇಂತಹ ಒಂದು ಫಿಚರ್ ಅನ್ನು ಗೂಗಲ್ ಇತ್ತೀಚೆಗೆ ಗೂಗಲ್ ಪಿಕ್ಸೆಲ್ 10 ಸರಣಿಯನ್ನು ಹೊಸ ತಂತ್ರಜ್ಞಾನದೊಂದಿಗೆ ಮಾರುಕಟ್ಟೆಗೆ ತಂದಿದೆ.

ಹೌದು, ಸಿಗ್ನಲ್ ಇಲ್ಲದ ಪ್ರದೇಶಗಳಲ್ಲಿಯೂ ಸಹ ವಾಟ್ಸ್‌ಪ್ ಮೂಲಕ ಧ್ವನಿ ಮತ್ತು ವಿಡಿಯೋ ಕರೆಗಳನ್ನು ಮಾಡಲು ಪಿಕ್ಸೆಲ್ 10 ಈ ವೈಶಿಷ್ಟ್ಯದೊಂದಿಗೆ ಬರುವ ಮೊದಲ ಫೋನ್ ಆಗಿರುತ್ತದೆ ಎಂದು ಗೂಗಲ್ ಹೇಳಿದೆ. ಈ ತಿಂಗಳ 20 ರಂದು ನಡೆದ ಮೇಡ್ ಬೈ ಗೂಗಲ್ ಕಾರ್ಯಕ್ರಮದಲ್ಲಿ ಪಿಕ್ಸೆಲ್ 10 ಸರಣಿಯನ್ನು ಅನಾವರಣಗೊಳಿಸಿದ ಗೂಗಲ್, ಇತ್ತೀಚೆಗೆ ಈ ಫೋನ್‌ಗೆ ಈ ಹೊಸ ವೈಶಿಷ್ಟ್ಯವನ್ನು ಸೇರಿಸುತ್ತಿರುವುದಾಗಿ ಘೋಷಿಸಿದೆ.

ಗೂಗಲ್ ಪಿಕ್ಸೆಲ್ 10 ಆರಂಭಿಕ ಬೆಲೆ ರು 79,999. ಈ ಫೋನ್ ಕೇವಲ ಒಂದು ಸ್ಟೋರೇಜ್ ರೂಪಾಂತರದಲ್ಲಿ ಮಾತ್ರ ಪ್ರಿ-ಆರ್ಡರ್‌ಗೆ ಲಭ್ಯವಿದೆ. ಗೂಗಲ್ ಪಿಕ್ಸೆಲ್ 10 ಪ್ರೊ ಮತ್ತು ಪಿಕ್ಸೆಲ್ 10 ಪ್ರೊ ಎಕ್ಸ್‌ಎಲ್ ಅನ್ನು ಕೂಡ ಒಂದೇ ಸ್ಟೋರೇಜ್ ಆಯ್ಕೆಯಲ್ಲಿ ಬಿಡುಗಡೆ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ 6 ತಿಂಗಳು ಎಐ ತರಗತಿ

ಸಾಮ್ ಆಲ್ಟ್‌ಮನ್ ನೇತೃತ್ವದ ಓಪನ್‌ಎಐ, ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಎಐ ಬಳಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟುಕೊಂಡಿದ್ದು, ಸರಕಾರಿ ಶಾಲಾ ವಿದ್ಯಾರ್ಥಿಗಳು, ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಸಂಸ್ಥೆಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ 6 ತಿಂಗಳ ಕಾಲ ಉಚಿತವಾಗಿ 5 ಲಕ್ಷ ಚಾಟ್‌ಜಿಪಿಟಿ ಪರವಾನಗಿಗಳನ್ನು ನೀಡುವುದಾಗಿ ಹೇಳಿದೆ. ಎಐ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಲ್ಲದು. ಇದು ವಿದ್ಯಾರ್ಥಿಗಳಿಗೆ ಆಜೀವಿಕ ಗುರು ಹಾಗೂ ಅಧ್ಯಯನ ಸಹಾಯಕರಾಗಿ ಮಾರ್ಪಡಬಹುದು. ಶಿಕ್ಷಕರಿಗೆ ಇದು ಪಾಠ ಯೋಜನೆಗಳಲ್ಲಿ ಹೆಚ್ಚು ಸಮಯ ಉಳಿಸಿ, ಬೋಧನೆಯ ತತ್ವಬದ್ಧ ಭಾಗಕ್ಕೆ ಗಮನಹರಿಸಲು ಅವಕಾಶ ನೀಡುತ್ತದೆ. ಈ ಯೋಜನೆ ಓಪನ್‌ಎಐ ಲರ್ನಿಂಗ್ ಅಕ್ಸಿಲರೇಟರ್ ಎಂಬ ಹೆಸರಿನಲ್ಲಿ ಭಾರತದಲ್ಲಿ ಪ್ರಥಮ ಕಾರ್ಯಕ್ರಮವಾಗಿ ನಡೆಯಲಿದೆ. ಸರಕಾರಿ ಶಾಲೆಗಳಲ್ಲಿ ಎಐ ಚಾಟ್‌ಜಿಪಿಟಿ ಪಾಠ ಯೋಜನೆ, ವಿದ್ಯಾರ್ಥಿಗಳ ತೊಡಗಿಸಿಕೊಂಡು ಓದುವಿಕೆ ಮತ್ತು ಫಲಿತಾಂಶಗಳನ್ನು ಉತ್ತಮಗೊಳಿಸಲು ನೆರವಾಗಲಿದೆ. ಎಐ ಸಂಸ್ಥೆಗಳು ಸ್ಟಡಿ ಮೋಡ್‌ನಂತಹ ಸಾಧನಗಳನ್ನು ಶಾಲಾ ಮಟ್ಟಕ್ಕೆ ತಲುಪಿಸಲು ಸಹಕರಿಸಲಿವೆ.

ಹೈದರಾಬಾದ್‌ನಲ್ಲಿ ಚಾಲಕ ರಹಿತ ಬಸ್!

ಹೈದರಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತನ್ನ ಕ್ಯಾಂಪಸ್‌ನಲ್ಲಿ ಚಾಲಕ ರಹಿತ ಬಸ್‌ಗಳನ್ನು ನಿರ್ವಹಿಸಲು ಹೊಸ ಎಐ-ಆಧಾರಿತ ಸಂಚರಣೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದೆ. ಈ ಯೋಜನೆಯನ್ನು ಸಂಸ್ಥೆಯ ಟೆಕ್ನಾಲಜಿ ಇನ್ನೋವೇಶನ್ ಹಬ್ ಆನ್ ಅಟಾನಮಸ್ ನ್ಯಾವಿಗೇಷನ್ ಟಿಹಾನ್ ನಿರ್ವಹಿಸುತ್ತಿದೆ. ಚಾಲಕ ರಹಿತ ಬಸ್ ಸೇವೆಯು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಕ್ಯಾಂಪಸ್‌ನ ವಿವಿಧ ಸ್ಥಳಗಳನ್ನು ತಲುಪಲು ಸಹಾಯ ಮಾಡುತ್ತಿದೆ. ಪ್ರಸ್ತುತ ಈ ಚಾಲಕ ರಹಿತ ವಾಹನವನ್ನು ಐಐಟಿ ಹೈದರಾಬಾದ್ ಕ್ಯಾಂಪಸ್‌ನಲ್ಲಿ ಮಾತ್ರ ನಿರ್ವಹಿಸಲಾಗುತ್ತಿದೆ. ಸಾರ್ವಜನಿಕ ರಸ್ತೆಗಳಲ್ಲಿ ಬಳಸಲಾಗುತ್ತಿಲ್ಲ. ಬಸ್ ಇಲ್ಲಿಯವರೆಗೆ 10,000 ಕ್ಕೂ ಹೆಚ್ಚು ಪ್ರಯಾಣಿಕರನ್ನು ಯಶಸ್ವಿಯಾಗಿ ಸಾಗಿಸಿದೆ. ಅವರಲ್ಲಿ ಶೇ.90ರಷ್ಟು ಜನರು ಅದರ ಕಾರ್ಯವನ್ನು ಮೆಚ್ಚಿದ್ದಾರೆ. ಐಐಟಿ ಹೈದರಾಬಾದ್‌ನ ಕ್ಯಾಂಪಸ್‌ನಲ್ಲಿ ಈ ವಾಹನಗಳ ಯಶಸ್ವಿ ಕಾರ್ಯಾಚರಣೆಯು ಸ್ವಯಂಚಾಲಿತ ಸಾರ್ವಜನಿಕ ಸಾರಿಗೆಯತ್ತ ಭಾರತದ ಪ್ರಯಾಣಕ್ಕೆ ಒಂದು ಮೈಲಿಗಲ್ಲು. ಯೋಜನೆಯು ಉತ್ತಮವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸಿದರೆ, ಭವಿಷ್ಯದಲ್ಲಿ ಇತರ ಭಾರತೀಯ ನಗರಗಳಲ್ಲಿ ಚಾಲಕ ರಹಿತ ಸಾರಿಗೆ ಸೇವೆ ಆರಂಭಿಸಲು ಚಿಂತನೆ ನಡೆಸಲಾಗಿದೆ.

ಮಾಗಡಿ ಕ್ಷೇತ್ರದ ಅಭಿವೃದ್ಧಿಗೆ ₹100 ಕೋಟಿ ಅನುದಾನ: ಡಿಸಿಎಂ ಡಿಕೆಶಿ


ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿಯಲ್ಲಿ ಶುಕ್ರವಾರ ನಡೆದ ವಿವಿಧ ಇಲಾಖೆಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಸಮಾರಂಭದಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು.

ರಾಮನಗರ: ಮಾಗಡಿಗೆ ಶ್ರೀರಂಗ ಕುಡಿಯುವ ನೀರಿನ ಯೋಜನೆ ನೀಡಿದ್ದು ಕಾಂಗ್ರೆಸ್ ಸರಕಾರ. ಈಗ ಸತ್ತೇಗಾಲದಿಂದ ಕ್ಷೇತ್ರದ 44 ಕೆರೆಗಳಿಗೆ ಕಾವೇರಿ ನೀರು ತುಂಬಿಸುವ ಯೋಜನೆ, 159 ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ, ಮಂಚನಬೆಲೆ ಅಣೆಕಟ್ಟು ಕೆಳಭಾಗದ ಅಭಿವೃದ್ಧಿಗೆ ರೂ.13 ಕೋಟಿ, ರೂ.35 ಕೋಟಿ ವೆಚ್ಚದಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಸೇರಿದಂತೆ ನೀರಾವರಿ ಇಲಾಖೆಯಿಂದ ಕ್ಷೇತ್ರದ ಅಭಿವೃದ್ಧಿಗೆ ರೂ.100 ಕೋಟಿಗೂ ಅಧಿಕ ಅನುದಾನ ನೀಡಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಬೆಂಗಳೂರು ದಕ್ಷಿಣ ಜಿಲ್ಲೆ ಮಾಗಡಿಯಲ್ಲಿ ಶುಕ್ರವಾರ ನಡೆದ ವಿವಿಧ ಇಲಾಖೆಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಸಮಾರಂಭದಲ್ಲಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಮಾತನಾಡಿದರು.

ಮಾಗಡಿ ಯೋಜನಾ ಪ್ರಾಧಿಕಾರದಿಂದ ಗೌರಮ್ಮ ಕೆರೆ ಅಭಿವೃದ್ಧಿಗೆ ರೂ.20 ಕೋಟಿ ನೀಡಲಾಗಿದೆ. ಇ ಸ್ವತ್ತನ್ನು 1200 ಜನರಿಗೆ ವಿತರಣೆ ಮಾಡಲಾಗಿದ್ದು ಮಿಕ್ಕವರಿಗೂ ಶೀಘ್ರದಲ್ಲೇ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ನಾವು ಭಾವನೆ ಮೇಲೆ ರಾಜಕಾರಣ ಮಾಡುವುದಿಲ್ಲ. ಬದುಕಿನ ಮೇಲೆ ರಾಜಕಾರಣ ಮಾಡುತ್ತೇವೆ ಎನ್ನುವುದಕ್ಕೆ ಕ್ಷೇತ್ರದಲ್ಲಿ ಕೈಗೆತ್ತಿಕೊಂಡಿರುವ ಕೆಲಸಗಳೇ ಸಾಕ್ಷಿ. ನನ್ನನ್ನು ಬಂಡೆ ಎಂದು ಕರೆಯುತ್ತಾರೆ. ಆದರೆ ಕೆಂಪು ಬಂಡೆ ನಿಮ್ಮ ಬಾಲಕೃಷ್ಣ. ಇವರು ಗಟ್ಟಿಯಾಗಿ ಬಂಡೆಯಂತೆ ಕುಳಿತುಕೊಂಡು ಕ್ಷೇತ್ರದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಮಾಗಡಿ ಕ್ಷೇತ್ರ, ಬಾಲಕೃಷ್ಣ ಅವರದ್ದಲ್ಲ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಅವರ ಸ್ವಂತ ಕ್ಷೇತ್ರವಿದ್ದಂತೆ. ಕನಕಪುರದ ರೀತಿ ಇಲ್ಲಿಯೂ ಕೆಲಸ ಮಾಡುತ್ತೇವೆ ಎಂದರು.

ಶಾಸಕ ಬಾಲಕೃಷ್ಣ ಅವರು ಜನರ ಋಣ ತೀರಿಸುವ ಕೆಲಸ ಮಾಡುತ್ತಿದ್ದಾರೆ. ಈ ಬಾರಿ ನೀಡಿದ ಮತಕ್ಕಿಂತ ಹೆಚ್ಚಿನ ಮತ ನೀಡಿ 2028 ರಲ್ಲಿ ಗೆಲ್ಲಿಸಬೇಕು. ಇದೇ ನೀವು ನನಗೆ ನೀಡುವ ಸನ್ಮಾನ, ಗದೆ ಎಂದರು.

ಕೆಂಪೇಗೌಡರ ಸಮಾಧಿ ಸ್ಥಳ ಅಭಿವೃದ್ಧಿ: 'ಕೆಂಪೇಗೌಡರು ಕಟ್ಟಿದ ಕೋಟೆ ಹಾಗೂ ಕೆಂಪಾಪುರದಲ್ಲಿ ಅವರ ಸಮಾಧಿ ಸ್ಥಳವನ್ನು ಅಭಿವೃದ್ಧಿ ಮಾಡುವ ಕೆಲಸವನ್ನು100 ಕೋಟಿ ವೆಚ್ಚದಲ್ಲಿ ಸರಕಾರ ಕೈಗೆತ್ತಿಕೊಂಡಿದೆ. ಸುಮ್ಮನಹಳ್ಳಿಯಲ್ಲಿ ರೂ.100 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಭವನ ನಿರ್ಮಾಣ ಮಾಡಲಾಗುತ್ತಿದೆ. ಶಿವಕುಮಾರ ಸ್ವಾಮೀಜಿಯವರು, ಬಾಲಗಂಗಾಧರನಾಥ ಸ್ವಾಮೀಜಿ ಅವರು ಜನಿಸಿದ ಪುಣ್ಯಕ್ಷೇತ್ರಗಳು ಮಾಗಡಿ ಕ್ಷೇತ್ರದಲ್ಲಿವೆ. ಒಂದು ಕಾಲದಲ್ಲಿ ಈ ಕ್ಷೇತ್ರದ ತಿಪ್ಪಗೊಂಡನಹಳ್ಳಿ ಕೆರೆಯಿಂದ ಇಡೀ ಬೆಂಗಳೂರಿಗೆ ಕುಡಿಯುವ ನೀರು ನೀಡಲಾಗುತ್ತಿತ್ತು ಎಂದರು.

ಜಿಲ್ಲೆ ಹೆಸರು ಬದಲಾವಣೆಗೆ ಆಸ್ತಿ ಮೌಲ್ಯ ಹೆಚ್ಚಳ

ಜನ ಸಾಮಾನ್ಯರ ಬದುಕು ಏಳಿಗೆಯಾಗಬೇಕು, ಎಲ್ಲರ ಆಸ್ತಿ ಮೌಲ್ಯ ಹೆಚ್ಚಳವಾಗಬೇಕು ಎನ್ನುವ ಕಾರಣಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರು ನಾಮಕರಣ ಮಾಡಿದ್ದೇವೆ. ಜನತಾದಳದ ನಾಯಕರು ದೆಹಲಿಗೆ ಹೋಗಿ ಜಿಲ್ಲೆಯ ಹೆಸರು ಬದಲಾವಣೆ ಸಾಧ್ಯವಿಲ್ಲ ಎಂದು ಬರೆಸಿದ್ದರು ಎಂದು ತಿಳಿಸಿದರು. ಇದೇ ಕುಮಾರಣ್ಣ ಹಾಸನದಿಂದ ಬೆಂಗಳೂರಿಗೆ ಬಂದು ಆಸ್ತಿ ತೆಗೆದುಕೊಂಡಿಲ್ಲವೇ? ರಾಮನಗರದಲ್ಲಿ ನೀವು, ನಿಮ್ಮ ತಂದೆಯವರು ರಾಜಕಾರಣ ಮಾಡಿದರೂ ನಾವು ಬೇಸರಿಸಿಕೊಳ್ಳಲಿಲ್ಲ. ನೀವು ನಿಮ್ಮ ಊರಿನಲ್ಲಿ ಆಸ್ತಿ ತೆಗೆದುಕೊಳ್ಳದೇ ಇಲ್ಲೇಕೆ ಆಸ್ತಿ ತೆಗೆದುಕೊಂಡಿರಿ? ಎಂದು ಪ್ರಶ್ನಿಸಿದರು. ಕೆಲವರು ರಾಮನಗರ ಜಿಲ್ಲೆ ಎಂದು ಹೇಳುತ್ತಿದ್ದರು. ಇದು ಬೆಂಗಳೂರು ದಕ್ಷಿಣ ಜಿಲ್ಲೆ. ಶಾಸಕರಾದ ಹುಲಿಕಟ್ಟೆ ಬಾಲಕೃಷ್ಣ, ದೊಡ್ಡ ಆಲಹಳ್ಳಿ ಕೆಂಪೇಗೌಡ ಶಿವಕುಮಾರ್, ಎಚ್.ಡಿ ಕುಮಾರಸ್ವಾಮಿ ಹೀಗೆ ನಮ್ಮ ಗುರುತನ್ನು ಅಳಿಸಲು ಸಾಧ್ಯವಿಲ್ಲ. ಅದೇ ರೀತಿ ನಾವು ಬೆಂಗಳೂರು ಜಿಲ್ಲೆಯವರಾದ ನಮ್ಮ ಅಸ್ಮಿತೆಯನ್ನು ಬಿಟ್ಟು ಕೊಡಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಬೆಂಗಳೂರನ್ನು ಅಂತರರಾಷ್ಟ್ರೀಯ ನಗರವನ್ನಾಗಿ ಮಾಡಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡಿದ್ದೇವೆ, ಮೆಟ್ರೋ ಸುರಂಗ ಮಾರ್ಗ, ಡಬಲ್ ಡೆಕ್ಕರ್ ಹೀಗೆ ಹಲವಾರು ಯೋಜನೆ ರೂಪಿಸಿದ್ದೇವೆ ಎಂದರು.

ಹಿಂದೂ ಮಹಾಸಭಾ ಗಣೇಶ ಶಕ್ತಿ ಅಪಾರ!

ಪೊಲೀಸ್ ಇಲಾಖೆಯಿಂದ ಕಟ್ಟೆಚ್ಚರ | ಈ ಬಾರಿ ಹನ್ನೊಂದು ದಿನಗಳ ಕಾಲ ಉತ್ಸವ ನಗರದ 600 ಕಡೆ ಸಿಸಿ ಕ್ಯಾಮೆರಾಗಳು | ಗಣಪತಿ ವಿಸರ್ಜನೆಗೆ ಈಗಾಗಲೇ 25 ಸ್ಥಳ

ಜಿಲ್ಲಾ ನೋಟ

ರೇಣುಕಾರಾಧ್ಯ, ಶಿವಮೊಗ್ಗ

ಇಡೀ ರಾಜ್ಯದಲ್ಲಿಯೇ ಶಿವಮೊಗ್ಗ ಮಹಾನಗರದ ಗಾಂಧಿ ಬಜಾರ್‌ನಲ್ಲಿ ಪ್ರತಿಷ್ಠಾಪಿಸುವ 'ಹಿಂದೂ ಮಹಾಸಭಾ ಗಣಪತಿ' ಎಂದರೆ ಒಂದು ಕಾಲಕ್ಕೆ ರೋಮಾಂಚನದ ಸುದ್ದಿ. ಹಾಗೇ ಸಂಭ್ರಮದ ಜತೆ ಒಂದು ರೀತಿ ಆತಂಕದ ಕಾರ್ಮೋಡ ಕವಿಯುತ್ತಿತ್ತು ಕೂಡ. ಹೀಗಾಗಿಯೇ ಇಲ್ಲಿ ಪ್ರತಿ ವರ್ಷ ಗಣೇಶೋತ್ಸವಕ್ಕೆ ಜಿಲ್ಲಾ ಪೊಲೀಸ್ ಇಲಾಖೆಯಿಂದ ಭಾರೀ ಕಟ್ಟೆಚ್ಚರ ವಹಿಸಲಾಗುತ್ತದೆ. ಇಡೀ ಪೊಲೀಸ್ ಇಲಾಖೆ ಒಂದು ತಿಂಗಳು ಪೂರ್ತಿ ಹೈ ಅಲರ್ಟ್ ಆಗಿ ಕಣ್ಗಾವಲು ನಗರದ ಮೂಲೆ ಮೂಲೆಗಳ ಮೇಲೆ ನೆಟ್ಟಿರುತ್ತದೆ..!

ಇವತ್ತಿಗೂ ಈ ಗಣೇಶ ಉತ್ಸವದ ವೈಭವ ಮತ್ತು ಸಂಭ್ರಮ ಒಂದಿಷ್ಟೂ ಖದರ್ ಕಳೆದುಕೊಂಡಿಲ್ಲ. ಇಡೀ ನಗರದಲ್ಲಿ ನೂರಾರು ಕಡೆ ಮಿನಿ ಗಣೇಶನನ್ನು ಸಾರ್ವಜನಿಕವಾಗಿ ಪ್ರತಿಷ್ಠಾಪಿಸಲಾಗುತ್ತದೆ. ಆದರೆ ಹಿಂದೂ ಮಹಾಸಭಾ ಗಣಪತಿಯ ಶಕ್ತಿಯದ್ದೇ ಒಂದು ತೂಕವಾದರೆ, ಇತರೆ ಗಣಪತಿಗಳೆಲ್ಲವೂ ಸೇರಿ ಒಂದು ತೂಕ. ಅಷ್ಟರಮಟ್ಟಿಗೆ ಇದು ಅದ್ದೂರಿ ಮತ್ತು ಜನಾಕರ್ಷಕ ಉತ್ಸವ.

ಪೊಲೀಸರಿಗೆ ತಲೆ ಬಿಸಿ

ರಾಜ್ಯದ ಎಲ್ಲೆಡೆ ಸಂಭ್ರಮದಿಂದ ಗಣೇಶ ಹಬ್ಬಗಳನ್ನು ಮಾಡಿದರೆ ಶಿವಮೊಗ್ಗ ನಗರದ ಹಾಗೂ ಕೆಲವು ತಾಲೂಕುಗಳಲ್ಲಿ ಭಯಭಕ್ತಿಯಿಂದ ಆಚರಣೆ ಮಾಡಬೇಕಾದ ಪರಿಸ್ಥಿತಿಯೂ ಇದೆ. ಪೊಲೀಸರಿಗಂತೂ ಶಿವಮೊಗ್ಗದಲ್ಲಿ ಗಣಪತಿ ಹಬ್ಬ ಆರಂಭವಾದರೆ ಮೈಯೆಲ್ಲಾ ಕಣ್ಣಾಗಿರಬೇಕಾದ ಪರಿಸ್ಥಿತಿ. ಗಣಪನ ಆಗಮನದ ಭಾದ್ರಪದ ಮಾಸದ 30 ದಿನಗಳ ಕಾಲ ಇಡೀ ಪರಿಸ್ಥಿತಿಯನ್ನು ಕಟ್ಟೆಚ್ಚರದಿಂದ ಕಾಯಬೇಕಾದ ಅನಿವಾರ್ಯತೆ ಪೊಲೀಸರದು.

ಹಲವು ನಿಷೇಧಗಳ ಆದೇಶ

ಈ ಕಾರಣದಿಂದ ಎಲ್ಲೆಂದರಲ್ಲಿ ಬ್ಯಾನರ್ ಅಳವಡಿಸಿ ನಗರದ ಸೌಂದರ್ಯ ಹಾಳು ಮಾಡದಂತೆ ಹಾಗೂ ಪಾಲಿಕೆಯ ಅನುಮತಿ ಪಡೆಯದೇ ಫ್ಲೆಕ್ಸ್ ಅಳವಡಿಸಬಾರದು ಎಂಬ ನಿಯಮ ಜಾರಿಗೆ ತರಲಾಗಿದೆ. ವಿಸರ್ಜನಾ ಮೆರವಣಿಗೆಯಲ್ಲಿ ಬೈಕ್ ರ‍್ಯಾಲಿ ನಡೆಸದಂತೆ, ಡಿ.ಜೆ.ಧ್ವನಿವರ್ಧಕಗಳನ್ನು ಬಳಸಿ ಮೆರವಣಿಗೆ ಮಾಡದಂತೆ, ಹಸಿರು ಪಟಾಕಿಗಳನ್ನೇ ಬಳಸುವಂತೆ ಈಗಾಗಲೇ ಆದೇಶ ಹೊರಡಿಸಲಾಗಿದೆ. ಗಣಪತಿ ವಿಸರ್ಜನೆಗೆ ನೀರಿಗಿಳಿಯುವವರು ಈಜು ಬಲ್ಲವರಾಗಿದ್ದು, ಮೂರ್ನಾಲ್ಕು ಜನಕ್ಕಿಂತ ಹೆಚ್ಚಿನ ಸಂಖ್ಯೆಯ ಜನ ನೀರಿಗೆ ಇಳಿಯಬಾರದು. ಅಲ್ಲದೇ ಲೈವ್ ಜಾಕೆಟ್ ಕಡ್ಡಾಯವಾಗಿ ಧರಿಸಿರಬೇಕು ಎಂದು ಪೊಲೀಸರು ನಿಯಮಗಳನ್ನು ರೂಪಿಸಿದ್ದಾರೆ.

ಜಾಲತಾಣಗಳತ್ತ ಕಣ್ಣು

ಜಲಮೂಲಗಳು ಮತ್ತು ಪರಿಸರ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಥರ್ಮೋಕೋಲ್, ಪ್ಲಾಸ್ಟರ್ ಆಫ್ ಪ್ಯಾರಿಸ್ನಿಂದ ತಯಾರಿಸಲ್ಪಟ್ಟ ಗಣೇಶನ ಮೂರ್ತಿಗಳನ್ನು ಪೂಜೆಗೆ ಬಳಸದಂತೆ ಸಾರ್ವಜನಿಕರಿಗೆ ಸೂಚಿಸಲಾಗಿದೆ. ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುವ ವದಂತಿಗಳಿಗೆ ಕಿವಿಗೊಡದಂತೆ ಹಾಗೂ ಶಾಂತಿ ಸಂಯಮದಿಂದ ವರ್ತಿಸುವಂತೆ ಈಗಾಗಲೇ ಜಿಲ್ಲಾಡಳಿತ ಸಲಹೆ ನೀಡಿದೆ.

ಗಡಿ ಭಾಗಕ್ಕೆ ಚೆಕ್ ಪೋಸ್ಟ್

ಗಣೇಶನ ವಿಸರ್ಜನಾ ಮೆರವಣಿಗೆ ಸಂದರ್ಭದಲ್ಲಿ ಅಸಹ್ಯಕರವಾಗಿ ಕುಣಿದು ವರ್ತಿಸುವವರ ವಿರುದ್ಧ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಜರುಗಿಸಲಾಗುವುದು. ನೆರೆಯ ಜಿಲ್ಲೆಗಳಿಂದ ಆಗಮಿಸುವ ಸಾರ್ವಜನಿಕರ ಮೇಲೆ ವಿಶೇಷ ಗಮನ ಹರಿಸಲಾಗುವುದು. ಅದಕ್ಕಾಗಿ ನಗರದ ಹೊರವಲಯದಲ್ಲಿಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಚೆಕ್ ಪೋಸ್ಟ್‌ಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ಅಧಿಕಾರಿಗಳು ಈಗಾಗಲೇ ಎಚ್ಚರಿಕೆ ಸಂದೇಶ ಪಾಸ್ ಮಾಡಿದ್ದಾರೆ.

ಸಾರ್ವಜನಿಕರು ಮೆರವಣಿಗೆಯಲ್ಲಿ ತಾಳ್ಮೆ ಕಳೆದುಕೊಳ್ಳದೇ ಸೌಹಾರ್ದಯುತವಾಗಿ ವರ್ತಿಸಬೇಕು. ತಪ್ಪು ಹೆಜ್ಜೆ ಇಟ್ಟಲ್ಲಿ ಕ್ರಮ ಅನಿವಾರ್ಯವಾಗಲಿದೆ. ಮುಖಂಡರು ವಾತಾವರಣ ತಿಳಿಗೊಳಿಸಲು ಯತ್ನಿಸಬೇಕು. ಅಗತ್ಯವಿದ್ದಲ್ಲಿ ಪೊಲೀಸ್ ನೆರವು ಪಡೆಯುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

600 ಸಿಸಿ ಕ್ಯಾಮೆರಾಗಳು

ಗಣಪತಿ ವಿಸರ್ಜನೆಗೆ ಈಗಾಗಲೇ 25 ಸ್ಥಳಗಳನ್ನು ಗುರುತಿಸಲಾಗಿದೆ. ಅಲ್ಲದೆ ಇನ್ನಷ್ಟು ಸ್ಥಳಗಳನ್ನು ಸಜ್ಜುಗೊಳಿಸಲಾಗುತ್ತಿದೆ. ಅಗತ್ಯ ಇದ್ದ ಕಡೆ ಕ್ರೇನ್ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ನಗರದೆಲ್ಲೆಡೆ 20ಕಿ.ಮೀ. ವ್ಯಾಪ್ತಿಯಲ್ಲಿ ಬ್ಯಾರಿಕೆಡ್ ನಿರ್ಮಾಣ, 600 ಸಿಸಿ ಕ್ಯಾಮರಾ ಕಣ್ಗಾವಲು ಇಡಲಾಗಿದೆ. ಅಲ್ಲದೇ ಡ್ರೋಣ್ ಬಳಸಿಕೊಳ್ಳಲಾಗುತ್ತಿದೆ.

ಮುಳುಗು ತಜ್ಞರ ತಂಡ

ಗಣಪತಿ ವಿಸರ್ಜನೆ ವೇಳೆ ಮುಳುಗು ತಜ್ಞರ ಸಹಕಾರ ಪಡೆಯಲಾಗಿದೆ. ಗಣಪತಿ ವಿಸರ್ಜನೆ ಸ್ಥಳಗಳಲ್ಲಿ ವಿದ್ಯುದ್ದೀಪ, ತೆಪ್ಪದ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ. ನಗರದೆಲ್ಲೆಡೆ ಮೂಲಭೂತ ಸೌಕರ್ಯ ಒದಗಿಸಲು ವಿಶೇಷ ಗಮನಹರಿಸಲಾಗಿದೆ. ಅದಕ್ಕಾಗಿ ವಾರ್ಡ್ವಾರು ಸಂಪರ್ಕಿಸಬೇಕಾದ ವ್ಯಕ್ತಿಗಳ ಮೊಬೈಲ್ ನಂಬರ್ ಪ್ರಚುರಪಡಿಸಲಾಗುವುದು.

ಅತಿ ದೊಡ್ಡ ಗಣಪತಿ ಉತ್ಸವ

ಶಿವಮೊಗ್ಗದ ಅತಿ ದೊಡ್ಡ ಗಣಪತಿ ಉತ್ಸವ ಇದಾಗಿದ್ದು, ಈ ಬಾರಿ 11 ದಿನಗಳ ಕಾಲ ಗಣಪತಿಯನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಇದೀಗ ಸಮಿತಿ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ 11 ದಿನಗಳ ಕಾಲ ನಡೆಯುವ ಕಾರ್ಯಕ್ರಮದ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ಗಣಪತಿಯ ಪ್ರತಿಷ್ಠಾಪನೆಯು ಆಗಸ್ಟ್ 27ರಂದು ಕೋಟೆ ಶ್ರೀ ಭೀಮೇಶ್ವರ ದೇವಸ್ಥಾನದಲ್ಲಿ ನೆರವೇರಿದೆ.

ಗಣೇಶೋತ್ಸವದ ಪ್ರಯುಕ್ತ ಪ್ರತಿದಿನ ಸಂಜೆ 7 ಗಂಟೆಗೆ ಸಂಗೀತ , ನೃತ್ಯ, ನಾಟಕ, ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಅಂತಿಮವಾಗಿ ಸೆಪ್ಟೆಂಬರ್ 6ರ ಶನಿವಾರ ಬೆಳಗ್ಗೆ 9.30ಕ್ಕೆ ಶ್ರೀವರಸಿದ್ಧಿ ವಿನಾಯಕ ಸ್ವಾಮಿಯ ರಾಜಬೀದಿ ಉತ್ಸವ ಮತ್ತು ಅದ್ದೂರಿ ವಿಸರ್ಜನಾ ಮೆರವಣಿಗೆ ನಡೆಯಲಿದೆ.

ವಿಶ್ವವಾಣಿ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 30-08-2025 ಶನಿವಾರ

"ಎಲೆಮರೆ ಕಾಯಿಯಂತಿದ್ದ ನನ್ನನ್ನು ವಿಶ್ವವಾಣಿ ಪತ್ರಿಕೆ ಗುರುತಿಸಿ, ಗೌರವಿಸಿ ಭೂತಾನ್ ದೇಶದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ನನ್ನ ಜವಾಬ್ದಾರಿ ಹೆಚ್ಚಿಸಿದೆ. ವಿವಿಧ ಸಾಧಕರ ಜತೆ ಪರಿಚಯಿಸಿದ ವಿಶ್ವವಾಣಿ ಬಳಗಕ್ಕೆ ನನ್ನ ಅನಂತ ಅನಂತ ಧನ್ಯವಾದಗಳು."

-ಅಮರಾವತಿ ಪರಮೇಶ್ವರಪ್ಪ, ಪ್ರಶಸ್ತಿ ಪುರಸ್ಕೃತರು.

ಪ್ರತಿಷ್ಠಿತ ಕಾರ್ಖಾನೆಯೊಂದರಲ್ಲಿ ಕ್ವಾಲಿಟಿ ಕಂಟ್ರೋಲರ್ ಆಗಿದ್ದ ಅಮರಾವತಿ ಪರಮೇಶ್ವರಪ್ಪ ಅವರಿಗೆ ಕೆಲಸಗಳಲ್ಲಿ ಸಂತೃಪ್ತಿ, ಸ್ವಾರಸ್ಯ ಇಲ್ಲದ್ದನ್ನು ಕಂಡು ಕೆಲಸಕ್ಕೆ ರಾಜೀನಾಮೆ ನೀಡಿ ಸಮಾಜಮುಖಿ ಕಾರ್ಯಗಳತ್ತ ಹೊರಳಿದರು. ಮೂರುವರೆ ದಶಕಗಳ ಹಿಂದೇಯೇ ಮಂಡಲ ಪ್ರಧಾನರಾಗಿ ಸಮಾಜ ಸೇವೆಗೈಯುತ್ತಾ, ಸ್ವಂತ ಜಾಗದಲ್ಲಿ ಉಚಿತವಾಗಿ ದೇವಮಂದಿರ ಕಟ್ಟಿ ಭಕ್ತರ ಆದರ್ಶಪ್ರಾಯರಾಗಿದ್ದಾರೆ. ಬೇಡಿ ಬಂದವರಿಗೆ ಇಲ್ಲವೆನ್ನದೆ ಕೈಲಾದಷ್ಟು ಸಹಾಯಹಸ್ತ ಚಾಚಿದ್ದಾರೆ. ಇತ್ತೀಚೆಗೆ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿಗೆ ಭಾಜನರಾಗಿ ಭೂತಾನ್ ದೇಶದಲ್ಲಿ ಪ್ರಶಸ್ತಿ ಸ್ವೀಕರಿಸಿದರು.

ಸಮಾಜ ಸೇವೆಯಲ್ಲಿ ಸಾರ್ಥಕ ಜೀವನ ಅಮರಾವತಿ ಪರಮೇಶ್ವರಪ್ಪ

ನೀನು ಶಾಶ್ವತವಲ್ಲ, ನೀ ಮಾಡಿದ ಸೇವೆ ಮಾತ್ರ ಶಾಶ್ವತ ಎಂಬ ಗುರುಹಿರಿಯರ ನಾಣ್ಣುಡಿಯಂತೆ ಸಮಾಜ ಸೇವೆಯಲ್ಲಿ ಜೀವನ ಸಾರ್ಥಕತೆ ಕಂಡವರು ಸಮಾಜ ಸೇವಕರೆಂದೇ ಚಿರಪರಿಚಿತರಾದ ಅಮರಾವತಿಯ ಪರಮೇಶ್ವರಪ್ಪ.

ಬೇಡಿ ಬಂದವರಿಗೆ ಇಲ್ಲವೆನ್ನದೆ ಕೈಲಾದಷ್ಟು ನೀಡಿ ಸಂಕಷ್ಟ, ಸಮಸ್ಯೆಗೆ ದನಿಯಾದವರು. ಪ್ರಸ್ತುತ ಉಪ ವಿಭಾಗಾಧಿಕಾರಿಗೆ ಇರುವಷ್ಟೇ ಅಧಿಕಾರವಿದ್ದ 1989ರ ಸಮಯದಲ್ಲಿ ಮೊದಲ ಬಾರಿಗೆ ಹನಗವಾಡಿ ಮಂಡಲ ಪ್ರಧಾನರಾಗಿ ಚುನಾಯಿತಗೊಂಡು 5 ವರ್ಷ ಅಭಿವೃದ್ಧಿಯ ಪರ್ವವನ್ನೆ ಸೃಷ್ಟಿಸಿದ್ದರು. ತಮ್ಮ ಅಧಿಕಾರವಧಿಯಲ್ಲಿ ಭೂಮಿ, ಮನೆ ಇಲ್ಲದ ಬರೋಬ್ಬರಿ 800ಕ್ಕೂ ಅಧಿಕ ಜನ ಬಡವರು, ನಿರ್ಗತಿಕರಿಗೆ ಸರ್ಕಾರದ ಭೂಮಿ ಗುರುತಿಸಿ ಮನೆ ನಿರ್ಮಿಸಿಕೊಟ್ಟು ನಿಜವಾದ ಜನಪ್ರತಿನಿಧಿ ಹೇಗಿರಬೇಕೆಂದು ತೋರಿಸಿಕೊಟ್ಟಿದ್ದರು.

ಅಭಿವೃದ್ಧಿಯ ಹರಿಕಾರ

ಮಂಡಲ ಪ್ರಧಾನರಾದ ಸಂದರ್ಭ ಹರಿಹರ ತಾಲೂಕಿನ ಅಮರಾವತಿ, ನೆಗೆನಳ್ಳಿ, ಹರಗನಹಳ್ಳಿ, ರಾಜನಹಳ್ಳಿ, ತಿಮ್ಲಾಪುರ, ಹಲಸಬಾಳು, ಹನಗವಾಡಿ ಸೇರಿದಂತೆ ತಮ್ಮ ವ್ಯಾಪ್ತಿಯ ಎಲ್ಲ ಹಳ್ಳಿಗಳಿಗೆ ದ್ವಾರಬಾಗಿಲು, ತೇರುಬೀದಿಗಳಿಗೆ ಮೊಟ್ಟಮೊದಲ ಬಾರಿಗೆ ಡಾಂಬರೀಕರಣ ಮಾಡಿಸಿದ್ದರು. ನೂರಾರು ರೈತರ ಜಮೀನುಗಳ ಪೀಡೆಯಾಗಿದ್ದ ಸವಳು ಮಣ್ಣು ನಿವಾರಣೆ ಮಾಡುವ ನಿಟ್ಟಿನಲ್ಲಿ ವರ್ಷಗಟ್ಟಲೇ ರೈತರೊಂದಿಗೆ ಶ್ರಮಿಸಿ ಸವಳು ಮುಕ್ತ ಭೂಮಿಗೆ ಅಡಿಪಾಯ ಸೃಷ್ಟಿಸಿದ್ದರು.

ಸ್ವಸಹಾಯ ಸಂಘದ ಮಹಿಳೆಯರಿಗೆ ರಾಟಿ, ಸ್ವಾವಲಂಬಿಯಾಗಲು ಸ್ವ ಉದ್ಯೋಗಕ್ಕೆ ಆರ್ಥಿಕ ನೆರವು, ಅಂಗವಿಕಲರಿಗೆ ಮಾಸಾಶನ ಸೇರಿದಂತೆ ಎಲ್ಲ ವರ್ಗದ ಜನರ ನೆಚ್ಚಿನ ಪ್ರಧಾನರಾಗಿದ್ದರು.

ರೈತ ಕುಟುಂಬದ ಹಿನ್ನೆಲೆ

ಹರಿಹರಕ್ಕೆ ಹೊಂದಿಕೊಂಡಂತೆ ಇರುವ ಅಮರಾವತಿ ಗ್ರಾಮದ ರೈತಾಪಿ ಕುಟುಂಬದ ನಾಗಪ್ಪ ಕರೂರು, ಕೆಂಚಮ್ಮ ದಂಪತಿಯ ಕೊನೆಯ ಪುತ್ರರಾಗಿ 1954ರ ಮಾರ್ಚ್ 08ರಂದು ಜನಿಸಿದ ಪರಮೇಶ್ವರಪ್ಪ ಅವರು ಅಮರಾವತಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಹಿರೇಮ್ಯಾಗಳಗೇರಿ ಜನತಾ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣ ಮುಗಿಸಿ, ಹರಿಹರದಲ್ಲಿ ಬಿಕಾಂ ಪೂರೈಸಿದರು. ಹೆಚ್ಚಿನ ಪದವೀಧರರಂತೆ ಸರ್ಕಾರಿ ಹುದ್ದೆಗೆ ಜೋತು ಬೀಳದೇ, ಸನಿಹದ ಬಿರ್ಲಾ ಕಾರ್ಖಾನೆಯಲ್ಲಿ 10 ವರ್ಷ ಲ್ಯಾಬ್‌ನ ಕ್ವಾಲಿಟಿ ಕಂಟ್ರೋಲರ್ ಆಗಿ ಕೆಲಸ ಮಾಡಿದರು. ಅಲ್ಲಿ ಸಮಾಜಸೇವೆಗೆ ಅವಕಾಶವಿರಲಿಲ್ಲದುದನ್ನು ಕಂಡು, ಸಮಾಜದಲ್ಲಿ ಬೆರೆಯುವ ಅವಕಾಶಕ್ಕಾಗಿ ಕಾಯತೊಡಗಿದರು.

ತದನಂತರ ರಾಜಕೀಯದತ್ತ ಆಕರ್ಷಣೆಗೊಂಡು ಮೊದಲ ಬಾರಿಗೆ ಹನಗವಾಡಿ ಮಂಡಲದ ಪ್ರಧಾನರಾಗಿ ಹತ್ತೂರಿನ ಒಡೆಯರಾದರು.



ಸ್ವಂತ ಖರ್ಚಿನಲ್ಲಿ ದೇವಸ್ಥಾನ ನಿರ್ಮಾಣ

ಧಾರ್ಮಿಕ ಕಾರ್ಯಗಳಿಗೆ ದಾನ ಬೇಡಿ ಬಂದವರನ್ನು ಮುಂದಕ್ಕೋಗಿ ಎಂದು ಸಾಗಹಾಕುವವರ ಮಧ್ಯೆ ಪರಮೇಶ್ವರಪ್ಪ ಭಿನ್ನ. ಸಾಯಿ ಮಂದಿರ ನಿರ್ಮಾಣಕ್ಕೆ ನಿಮ್ಮ ಭೂಮಿ ಮಾರಾಟಕ್ಕೆ ಕೊಡಿ ಎಂದು ಬಂದವರಿಗೆ ಹಣಕ್ಕೆ ಭೂಮಿ ಮಾರಲ್ಲ. ಆದರೆ, ನಾನೇ ಉಚಿತವಾಗಿ ಭೂಮಿಯ ಜತೆ ಮಂದಿರ ನಿರ್ಮಿಸಿಕೊಡುತ್ತೇನೆಂದು ಭರವಸೆಯನ್ನಿತ್ತು ಕೊಟ್ಟ ಮಾತಿನಂತೆ ನಡೆದವರು. ಅಮರಾವತಿಯ ತಮ್ಮ 10 ಗುಂಟೆ ಭೂಮಿಯಲ್ಲಿ 2022ರಲ್ಲಿ ತಮ್ಮ ಸಹೋದರರ ನೆರವಿನೊಂದಿಗೆ ಬರೋಬ್ಬರಿ ಒಂದು ಕೋಟಿ ರೂ. ವೆಚ್ಚದಲ್ಲಿ ಶ್ರೀ ಸಾಯಿ ಹಾಗೂ ಶ್ರೀ ಬಸವ ಮಂದಿರವನ್ನು ನಿರ್ಮಿಸಿದ್ದಾರೆ. ಜತೆಗೆ ದೇವಸ್ಥಾನ ಟ್ರಸ್ಟ್ ರಚಿಸಿ ಅಧ್ಯಕ್ಷರಾಗಿದ್ದಾರೆ. ಜಗಜ್ಯೋತಿ ಬಸವಣ್ಣ 12ನೇ ಶತಮಾನದಲ್ಲಿ ಆಚರಣೆ ತಂದ ನಿಯಮಗಳನ್ನೇ ಸಾಯಿಬಾಬರು 20ನೇ ಶತಮಾನದಲ್ಲಿ ಮಾಡಿದ್ದರು. ಹಾಗಾಗಿ, ಇಬ್ಬರು ಭಕ್ತರ ಆರಾಧ್ಯ ದೈವ. ಆದ್ದರಿಂದ ಒಂದೇ ದೇವಸ್ಥಾನದಲ್ಲಿ ಇಬ್ಬರನ್ನು ಸ್ಥಾಪಿಸಿದ್ದೇನೆ ಎನ್ನುತ್ತಾರೆ ನಿಮ್ರಾತೃ, ಕಾಯಕಯೋಗಿ ಪರಮೇಶ್ವರಪ್ಪ.

ಲಾಟಿ ಹಿಡಿದು ಕಳ್ಳರ ಸದ್ದಡಗಿಸಿದರು

ಹರಿಹರ ಇನ್ನೂ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿದ್ದ ಸಂದರ್ಭ (1988). ಆಗ ಪೊಲೀಸರ ಸಂಖ್ಯೆ ಕಡಿಮೆ ಇದ್ದ ಕಾರಣ ಪೊಲೀಸ್ ಇಲಾಖೆ ನೇಮಿಸುತ್ತಿದ್ದ ಗ್ರಾಮ ರಕ್ಷಕ ದಳದ ದಳಪತಿಯಾಗಿದ್ದ ಪರಮೇಶ್ವರಪ್ಪ ಅವರು, ಅದಕ್ಕಾಗಿ ತರಬೇತಿ ಹಾಗೂ ಲೈಸೆನ್ಸ್ ಪಡೆದು ರೈಫಲ್ ಬಳಸುತ್ತಿದ್ದರು. ಪಿಸ್ತೂಲ್, ಲಾಟಿ ಹಿಡಿದು ರಾತ್ರಿಯಿಡಿ ಗಸ್ತು ತಿರುಗುತ್ತಿದ್ದರಿಂದ ಜನರ ನೆಮ್ಮದಿಯ ನಿದ್ರೆಗೆ ಕಾರಣರಾಗಿದ್ದರು. ಅನೇಕ ಬಾರಿ ಕಳ್ಳಕಾಕರರಿಗೆ ಲಾಟಿ ರುಚಿ ತೋರಿಸಿದ್ದೂ ಉಂಟು. ಒಮ್ಮೆ ಕಳ್ಳರು ಇವರ ಮೇಲೆ ಮರುದಾಳಿ ಮಾಡಿದಾಗ ಗಾಯಗೊಂಡು ಚಿಕಿತ್ಸೆ ಪಡೆದು ಮತ್ತೆ ಸೀಟಿ ಊದೂತ್ತಾ ಲಾಟಿ ಹಿಡಿದಿದ್ದರು. ಅತೀ ಹೆಚ್ಚು ಮನಪೂರ್ವಕ ಕಾರ್ಯಗಳಲ್ಲಿ ದಳಪತಿಯಾಗಿ ಸೇವೆ ಮಾಡಿದ್ದು ಪ್ರಮುಖವಾದದ್ದು ಎಂದು ಸ್ಮರಿಸುತ್ತಾರೆ 70ರ ಹರೆಯದ ಪರಮೇಶ್ವರಪ್ಪ.

ವಿಭೂತಿಧಾರಿ

ಅಮರಾವತಿ ಪರಮೇಶ್ವರಪ್ಪ ಎಂದರೆ ಅನೇಕರಿಗೆ ಮೊದಲಿಗೆ ನೆನಪಿಗೆ ಬರುವುದು ಅವರ ಹಣೆಯ ಮೇಲೆ ಸ್ಪಷ್ಟವಾಗಿ ಕಾಣುವ ವಿಭೂತಿ. ಸದಾ ಶ್ವೇತ ವಸ್ತ್ರಧಾರಿಯಾಗಿರುವ ಅವರು ವಿಭೂತಿ ಧರಿಸಿ ಲಿಂಗಪೂಜೆ, ಶಿವಪೂಜೆ ಮಾಡದಿರುವ ದಿನಗಳೇ ಇಲ್ಲ. ಮನೆದೇವರಾದ ಹೊನ್ನಮ್ಮದೇವಿ, ಹುಣಿಸೆಕಟ್ಟಿ ಬಸವಣ್ಣನ ಆರಾಧಕರು. ಸೌಮ್ಯ ಸ್ವಭಾವ, ಎಲ್ಲರೊಂದಿಗೆ ನಗುಮೊಗದ ಒಡನಾಟದಿಂದ ಬಹುಬೇಗ ಆತ್ಮೀಯರೆನ್ನಿಸಿಬಿಡುತ್ತಾರೆ ಎನ್ನುತ್ತಾರೆ ಆತ್ಮೀಯ ಸ್ನೇಹಿತ, ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಪಾಲಾಕ್ಷಪ್ಪ.

ಯೋಜನೆಗಳ ಸಕಾರಕ್ಕೆ ಭಗೀರಥ ಯತ್ನ

ಈಗಾಗಲೇ ಶ್ರೀಸಾಯಿ, ಶ್ರೀ ಬಸವ ಮಂದಿರ ನಿರ್ಮಿಸಿದ್ದು, ಪ್ರತಿ ಗುರುವಾರ ಹಾಗೂ ಹುಣ್ಣಿಮೆಯಂದು ಭಕ್ತರಿಗೆ ಅಲ್ಲಿ ಪ್ರಸಾದ ವ್ಯವಸ್ಥೆ ಕಲ್ಪಿಸಿದ್ದಾರೆ. ಜತೆಗೆ, ವೃದ್ಧಾಶ್ರಮ, ಯಾತ್ರಿ ನಿವಾಸ, ನಿತ್ಯ ದಾಸೋಹ ಕಲ್ಪಿಸುವ ನಿಟ್ಟಿನಲ್ಲಿ ಯತ್ನ ನಡೆಸಿದ್ದಾರೆ.

ಮನೆಯವರ ಸಹಕಾರವೇ ಶ್ರೀರಕ್ಷೆ:

ಕಾಯಕಯೋಗಿ ಪರಮೇಶ್ವರಪ್ಪ ಅವರ ಎಲ್ಲ ಸಾಮಾಜಿಕ ಕಾರ್ಯಗಳಿಗೆ ಮನೆಯವರದ್ದೇ ಸಂಪೂರ್ಣ ಬೆಂಬಲ. ಪತ್ನಿ ಪ್ರೇಮಾ ಪಿ., ಶ್ರೀಸಾಯಿ, ಶರ್ರೀಬಸವ ಜನಕಲ್ಯಾಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿಯಾದ ಪುತ್ರ ಪ್ರಸನ್ನಕುಮಾರ್ ಎ.ಪಿ., ಪುತ್ರಿ ಶ್ವೇತಾ ಎ.ಪಿ., ಸೊಸೆ ಪ್ರತಿಮಾ ಹಾಗೂ ಮೊಮ್ಮಕ್ಕಳಾದ ಪ್ರಕುಲ್, ಪ್ರಶಿಕಾ ಸಹಕಾರ, ಪ್ರೇರಣೆ, ಬೆಂಬಲವಿದೆ.

ಸಂದ ಸನ್ಮಾನಗಳು

- ಪಾಂಡೋಮಟ್ಟಿ ಮಠದಿಂದ ಕಾಯಕಯೋಗಿ ಪ್ರಶಸ್ತಿ
- ಬೆಂಗಳೂರು ವಚನ ಸಾಹಿತ್ಯ ಪರಿಷತ್‌ನಿಂದ ಕಾಯಕ ರತ್ನ ಪ್ರಶಸ್ತಿ
- ಕೊಟಕ್ ಮಹೇಂದ್ರ ಸಂಸ್ಥೆಯಿಂದ ನಾನೊಬ್ಬ ಭಾರತೀಯ ಸೇವಾ ಪ್ರಶಸ್ತಿ
- ಶ್ರೀ ಜಯಬಸವ ತಪೋವನ ವಿಶ್ವಧರ್ಮ ಪೀಠದಿಂದ ಕಾಯಕಯೋಗಿ ಪ್ರಶಸ್ತಿ
- ಧ.ಗ್ರಾ.ಸಂಸ್ಥೆ, ಸ್ಫೂರ್ತಿ ಸೇವಾ ಸಂಸ್ಥೆ ಸೇರಿದಂತೆ ಅನೇಕ ಸಂಘ ಸಂಸ್ಥೆಗಳು ಗೌರವಿಸಿ ಸನ್ಮಾನಿಸಿವೆ.

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ತೆರೆಮರೆಯಲ್ಲಿ ದುಡಿಯುತ್ತಾ, ಸಮಾಜಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ' ಹರಿಹರದ ಸಮಾಜಸೇವಕ ಅಮರಾವತಿ ಪರಮೇಶ್ವರಪ್ಪ ಅವರಿಗೆ ಭೂತಾನ್ ದೇಶದ ಥಿಂಪುವಿನಲ್ಲಿ ನಡೆದ ಸಮಾರಂಭದಲ್ಲಿ ವಿಶ್ವವಾಣಿ ಪತ್ರಿಕೆ ವತಿಯಿಂದ ಗ್ಲೋಬಲ್ ಅಚೀವರ್ಸ್ ಅವಾರ್ಡ್ ನೀಡಿ ಸತ್ಕರಿಸಿ, ಗೌರವಿಸಲಾಯಿತು.

ಮಣ್ಣಿನ ಜಗತ್ತಿನ ಕಾಯಕ ಯೋಗಿ

• ಹೊಸ್ಮನೆ ಮುತ್ತು

ಜಗತ್ತಿನಲ್ಲಿ ಅಸಂಖ್ಯಾತ ಜೀವಿ ಪ್ರಭೇದಗಳಿವೆ. ಅವುಗಳಲ್ಲಿ ಕೆಲವು ಮನುಷ್ಯನ ಅರಿವಿಗೆ ಬಂದು, ನಮ್ಮ ಸುತ್ತಮುತ್ತಲೇ ಇವೆ. ಅಂಥಹ ಒಂದು ವಿಶಿಷ್ಟ ಕೀಟವೆಂದರೆ ಶತಪದಿ. ಈ ಜೀವಿಯ ದೇಹವು ಅನೇಕ ವಿಭಾಗಗಳಿಂದ ಕೂಡಿದ್ದು, ಪ್ರತಿಯೊಂದು ವಿಭಾಗಕ್ಕೂ ಒಂದೆರಡು ಜೋಡಿ ಕಾಲುಗಳಿರುತ್ತವೆ.

ಶತಪದಿ ತನ್ನ ವಿಚಿತ್ರ ರೂಪ ಮತ್ತು ನಿರುಪದ್ರವ ಸ್ವಭಾವದಿಂದ ಪ್ರಕೃತಿಯ ಒಂದು ಭಾಗವಾಗಿ ಬೆರೆತು ಹೋಗಿದೆ. ಇದು

ಅಪಾಯವನ್ನು ಕಂಡಾಗ ತನ್ನನ್ನು ರಕ್ಷಿಸಿಕೊಳ್ಳಲು ಸುರುಳಿಯಾಗಿ ಸುತ್ತಿಕೊಂಡು ಕೆಲ ಕಾಲ ತಟಸ್ಥವಾಗಿರುತ್ತದೆ. ನಂತರ ತಮ್ಮ ಚಟುವಟಿಕೆ ಶುರುಮಾಡುತ್ತವೆ. ಹೀಗೆ ಸುತ್ತಿಕೊಂಡಾಗ, ಅದರ ದೇಹದ ಮೇಲ್ಭಾಗದ ಗಟ್ಟಿಯಾದ ಕವಚವು ಹೊರಗೆ ಕಾಣುತ್ತದೆ ಮತ್ತು ಇದು ಪರಭಕ್ಷಕಗಳಿಂದ ರಕ್ಷಣೆ ನೀಡುತ್ತದೆ. ಇವು ಸಾಮಾನ್ಯವಾಗಿ ಸಸ್ಯಹಾರಿಗಳಾಗಿವೆ. ಮಣ್ಣಿನಲ್ಲಿರುವ ಕೊಳೆತ ಸಸ್ಯಗಳ ಭಾಗಗಳು, ಎಲೆಗಳು ಮತ್ತು ಇತರ ಸಾವಯವ ಪದಾರ್ಥಗಳನ್ನು ತಿಂದು ತಮ್ಮ ಹಿಕ್ಕೆಗಳಿಂದ ಮಣ್ಣನ್ನು ಸಾರಯುಕ್ತವಾಗಿಸುತ್ತವೆ. ಈ ಕಾರಣಕ್ಕಾಗಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಇವು ಪ್ರಮುಖ ಪಾತ್ರ ವಹಿಸುತ್ತವೆ.

ಇವು ತೇವಾಂಶವಿರುವ ಪ್ರದೇಶಗಳಲ್ಲಿ, ಮರಗಳ ಕೆಳಗೆ, ಎಲೆಗಳ ರಾಶಿಯ ಒಳಗೆ

ಮತ್ತು ತೋಟಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ವಯಸ್ಕ ಹುಳುಗಳು ನೆಲದ ಮೇಲ್ಭಾಗದಲ್ಲಿ ಕಂಡುಬಂದರೆ, ಮೊದಲಿನ ಹಂತಗಳಲ್ಲಿ ನೆಲದೊಳಗೆ ಹುದುಗಿದ್ದು, ಅಗೋಚರವಾಗಿರುತ್ತವೆ. ಮಳೆಗಾಲದಲ್ಲಿ ಭೂಮಿಯ ಮೇಲೆ ಕಾಣಿಸಿಕೊಳ್ಳುವ ಇವು ನಂತರ ಮಣ್ಣಿನಡಿ ಸೇರಿ ದೀರ್ಘ ನಿದ್ರೆಗೆ ಜಾರಿಬಿಡುತ್ತವೆ.

ವಯಸ್ಕ ಹೆಣ್ಣು ಹಾಗೂ ಗಂಡು ಹುಳುಗಳು ಸಂತಾನಭಿವೃದ್ಧಿಯ ಸಂದರ್ಭದಲ್ಲಿ ಫೆರೋಮೋನ್‌ಗಳೆಂಬ ರಾಸಾಯನಿಕದ ಪರಿಣಾಮ ಒಂದನ್ನೊಂದು ಸಂಧಿಸಿ ಪ್ರಣಯದಾಟ ನಡೆಸುತ್ತವೆ. ಸಾಮಾನ್ಯವಾಗಿ ಇವುಗಳ ಆಯಸ್ಸು ಮೂರರಿಂದ ನಾಲ್ಕು ತಿಂಗಳು. ಸಾಮಾನ್ಯವಾಗಿ ಇವು ಮಾನವರಿಗೆ ಅಪಾಯಕಾರಿಯಲ್ಲ, ಆದರೆ ಕೆಲವು ಜಾತಿಯ ಶತಪದಿ ಹುಳುಗಳು ತಮ್ಮನ್ನು ರಕ್ಷಿಸಿಕೊಳ್ಳಲು ಅಹಿತಕರ ವಾಸನೆಯ ದ್ರವವನ್ನು ಬಿಡುಗಡೆ ಮಾಡಲೂಬಹುದು. ಹಲವಾರು ವಿಸ್ಮಯಗಳ ತಾಣವಾದ ಪ್ರಕೃತಿಯಲ್ಲಿ ಹಲವು ತರದ ಜೀವಿಗಳು ಸೂಕ್ತ ಕಾಲದಲ್ಲಿ ಪ್ರಕಟಗೊಳ್ಳುತ್ತವೆ. ಹೀಗೆ ಕಾಣಿಸಿಕೊಳ್ಳುವ ಜೀವಿಗಳಲ್ಲಿ ಶತಪದಿಯೂ ಒಂದು. ಸೂಕ್ಷ್ಮವಾಗಿ ಚಲಿಸುವ ಈ ಪುಟ್ಟ ಜೀವಿಗಳನ್ನು ವರ್ಷ ಋತುವಿನ ಈ ಸಮಯದಲ್ಲಿ ನೀವು ಹೊರಾಂಗಣದಲ್ಲಿದ್ದರೆ ಗಮನಿಸಬಹುದು.

ಪರಸ್ಪರರಿಗೆ ಕೇಡು ಬಗೆದು, ನಗೆಪಾಟಲಾದ ನಾರದ, ತುಂಬೂರರು

ಒಮ್ಮೆ ಸ್ವರ್ಗದಲ್ಲಿ ದೇವತೆಗಳು, ಋಷಿಗಳು, ಗಂಧರ್ವರು ಎಲ್ಲರೂ ಅಪೂರ್ವ ಸೌಂದರ್ಯವತಿ ದಿವ್ಯಕನ್ಯೆಯಾದ ಶ್ರೀಮತಿಯ ಸ್ವಯಂವರಕ್ಕೆ ಹೊರಟಿದ್ದರು. ಆಕೆ ಅತ್ಯಂತ ಸುಂದರಳಾಗಿದ್ದು ಲಾವಣ್ಯ ವಿನಯ, ಗುಣ, ರೂಪಕಃ ಎಲ್ಲದರಲ್ಲಿಯೂ ಶ್ರೇಷ್ಠಳಾಗಿದ್ದಳು. ಅವಳಿಗೆ ವರನಾಗಿ ಯೋಗ್ಯನಾದವರು ಯಾರು ಎಂಬುದನ್ನು ನಿರ್ಧರಿಸಲು ಸ್ವಯಂವರವನ್ನು ಏರ್ಪಡಿಸಲಾಗಿತ್ತು.

ನಾರದ ಹಾಗೂ ತುಂಬೂರರು ಇಬ್ಬರೂ ಶ್ರೀಮತಿಯ ಸೌಂದರ್ಯವನ್ನು ಕಂಡು ಆಕೆಯನ್ನು ವರಿಸಲು ಉತ್ಸುಕರಾದರು. ಆದರೆ ತಮ್ಮ ಸ್ವರೂಪವು ಅಷ್ಟೊಂದು ಆಕರ್ಷಕವಿಲ್ಲವೆಂದು ಅವರಿಬ್ಬರೂ ಬೇರೆಬೇರೆಯಾಗಿ ವಿಷ್ಣುವಿನ ಬಳಿಗೆ ಹೋಗಿ ತಮ್ಮ ಪ್ರಾರ್ಥನೆಯನ್ನು ಮುಂದಿಟ್ಟರು. ಮೊದಲಿಗೆ ಹೋದ ನಾರದರು, ''ಮಹಾಪ್ರಭು, ನಾನು ಮತ್ತು ತುಂಬೂರರಿಬ್ಬರೂ ಶ್ರೀಮತಿಯ ವರನಾಗಲು ಬಯಸುತ್ತೇವೆ. ಆದರೆ ನಮಗೆ ದೈವೀ ಸೌಂದರ್ಯವಿಲ್ಲ. ನಿಮ್ಮ ಕೃಪೆಯಿಂದ ನನ್ನ ಮುಖವನ್ನು ಸುಂದರಗೊಳಿಸಿ, ತುಂಬೂರನ ಮುಖ ಕೋತಿಯಂತೆ ಕಾಣಲು ಮಾಡಿ ಶ್ರೀಮತಿ ನನ್ನನ್ನು ವರಿಸುವಂತೆ ಮಾಡಬೇಕು'' ಎಂದು ಪ್ರಾರ್ಥಿಸಿದನು.

ಮಹಾವಿಷ್ಣುವು ಅವನ ಮಾತುಗಳನ್ನು ಕೇಳಿ ನಸುನಗುತ್ತಾ, ''ನೀನು ಹೇಳಿದಂತೆಯೇ ಆಗಲಿ ಅವಳಿಗೆ ತುಂಬೂರರ ಮುಖವು ಕೋತಿಯಂತೆ ಕಾಣಲಿ'' ಎಂದನು. ಇದಾದ ಸ್ವಲ್ಪ ಸಮಯದ ನಂತರ ತಂಬೂರ ವಿಷ್ಣುವಿನ ಬಳಿಗೆ ಹೋಗಿ ''ಮಹಾಪ್ರಭು, ನಾನು ಮತ್ತು ನಾರದರಿಬ್ಬರೂ ಶ್ರೀಮತಿಯ ವರನಾಗಲು ಬಯಸುತ್ತೇವೆ. ಆದರೆ ನಮಗೆ ದೈವೀ ಸೌಂದರ್ಯವಿಲ್ಲ. ನಿಮ್ಮ ಕೃಪೆಯಿಂದ ನನ್ನ ಮುಖವನ್ನು ಸುಂದರಗೊಳಿಸಿ, ನಾರದನ ಮುಖ ಕರಡಿಯಂತೆ ಮಾಡಿ ಶ್ರೀಮತಿ ನನ್ನನ್ನು ವರಿಸುವಂತೆ ಮಾಡಬೇಕು'' ಎಂದು ಪ್ರಾರ್ಥಿಸಿದನು.

ಮಹಾವಿಷ್ಣುವು ತುಂಬೂರರ ಮಾತುಗಳನ್ನು ಕೇಳಿ ನಸುನಗುತ್ತಾ, ''ನೀನು ಹೇಳಿದಂತೆಯೇ ಆಗಲಿ ಅವಳಿಗೆ ನಾರದರ ಮುಖವು ಕರಡಿಯಂತೆ ಕಾಣಲಿ'' ಎಂದನು. ವಿಷ್ಣುವಿನ ಆಶೀರ್ವಾದಿಸಿದ ಮೇಲೆ ಕೇಳಬೇಕೇ? ನಾರದರಿಗೆ ತುಂಬೂರರ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಮುಖವು ಕೋತಿಯ ಮುಖದಂತೆ ಹಾಗೂ ತುಂಬೂರರಿಗೆ ನಾರದರ ರೂಪವು ಕರಡಿಯ ಮುಖದಂತೆ ಕಾಣಿಸತೊಡಗಿತು. ಇಬ್ಬರೂ ಅದನ್ನು ಅರಿಯದೆ, ತಮ್ಮನ್ನು ಅತ್ಯಂತ ಸುಂದರರೆಂದು ಭಾವಿಸಿದರು. ಅವರು ಹಿಗ್ಗಿ ತಾವು ಶ್ರೀಮತಿಯ ಸ್ವಯಂವರದಲ್ಲಿ ಜಯ ಸಾಧಿಸುವ ವಿಶ್ವಾಸದಿಂದ ಅಲ್ಲಿಗೆ ಹೋದರು.

ಸ್ವಯಂವರ ಸಭೆಯಲ್ಲಿ ಅನೇಕ ದೇವತೆಗಳು, ಗಂಧರ್ವರು, ಯಕ್ಷರು, ರಾಕ್ಷಸರ ರಾಜರು, ಮಹರ್ಷಿಗಳುಎಲ್ಲರೂ ಹಾಜರಿದ್ದರು. ಶ್ರೀಮತಿ ತನ್ನ ಹಾರವನ್ನು ಕೈಯಲ್ಲಿ ಹಿಡಿದು, ತನ್ನ ವರನನ್ನು ಆಯ್ಕೆಮಾಡಲು ತಯಾರಾಗಿದ್ದಳು. ಎಲ್ಲರಿಗೂ ಅವಳು ಗೌರವದಿಂದ ನೋಟ ಹರಿಸಿದಳು. ನಾರದ ಮತ್ತು ತುಂಬೂರರೂ ತಾವು ಅತ್ಯಂತ ಸುಂದರರು ಎಂದು ಭಾವಿಸಿ ಗರ್ವದಿಂದ ಕುಳಿತಿದ್ದರು. ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿ ನಗುತ್ತಿದ್ದರು. ಹಾರ ಹಿಡಿದು ಬಂದ ಶ್ರೀಮತಿ, ಎಲ್ಲರನ್ನೂ ವೀಕ್ಷಿಸಿದಳು. ನಾರದನ ಕರಡಿಮುಖವನ್ನು ಹಾಗೂ ತುಂಬೂರನ ಕೋತಿ ಮುಖವನ್ನು ನೋಡಿ ನಗತೊಡಗಿದಳು. ಅವರಿಬ್ಬರ ಮಧ್ಯದಲ್ಲಿ ಸುರಸುಂದರಾಂಗನಾದ ಮಹಾವಿಷ್ಣು ಮದುಮಗದನಂತೆ ಮಿಂಚುತ್ತಿದ್ದನು. ಅವನು ಸದಾ ಯುಗಾಂತರಗಳಲ್ಲಿಯೂ ಸುಂದರ, ಶಾಂತ, ಕರುಣಾಮಯ. ಅವಳ ಹೃದಯವು ಅವನಲ್ಲೇ ಹುದುಗಿತು. ಅವಳು ತನ್ನ ವರಮಾಲೆಯನ್ನು ತೆಗೆದುಕೊಂಡು, ಶ್ರೀಮಹಾವಿಷ್ಣುವಿನ ಕಂಠಕ್ಕೆ ಹಾಕಿದಳು.

ಅಲ್ಲಿ ಹಾಜರಿದ್ದ ದೇವತೆಗಳು, ಋಷಿಗಳು, ಗಂಧರ್ವರು ಎಲ್ಲರೂ ''ಜಯ! ಜಯ!'' ಎಂದು ಘೋಷಿಸಿದರು. ಅವರು ನವ ದಂಪತಿಗಳಿಗೆ ಪ್ರೀತಿ ಮತ್ತು ಭಕ್ತಿಯಿಂದ ನಮಿಸಿದರು.ನಾರದ ಮತ್ತು ತುಂಬೂರರು ತಮ್ಮ ಮುಖದ ನಿಜಸ್ವರೂಪವನ್ನು ಕನ್ನಡಿಯಲ್ಲಿ ನೋಡಿ ಬೆಚ್ಚಿಬಿದ್ದರು. ಅವರು ವಿಷ್ಣುವಿನ ಲೀಲೆಯನ್ನು ಅರಿತುಕೊಂಡರು. ''ನಾವು ಸ್ವಾರ್ಥದಿಂದ ದೇವರನ್ನೇ ಮೋಸಗೊಳಿಸಲು ಯತ್ನಿಸಿದ್ದೇವೆ. ಆದರೆ ಈ ಲೀಲೆಯಿಂದ ನಾವು ಅಹಂಕಾರದಿಂದ ಮುಕ್ತಿ ಹೊಂದಿದ್ದೇವೆ, ಅಂತರಾತ್ಮದ ಭಕ್ತಿಯಲ್ಲಿ ಸೌಂದರ್ಯ ಅಡಗಿರುತ್ತದೆ '' ಎಂದು ಮನಸಲ್ಲಿ ಅರಿತು ವಿಷ್ಣುವಿಗೆ ಶರಣಾದರು.

ಜೀವನದಲ್ಲಿ ಇತರರಿಗೆ ಕೇಡು ಬಗೆದು ನಾವು ಎಂದಿಗೂ ಸಂತೋಷದಿಂದ ಬದುಕಲು ಸಾಧ್ಯವಿಲ್ಲ. ಅದು ಒಂದಲ್ಲಾ ಒಂದು ರೀತಿಯಲ್ಲಿ ನಮ್ಮನ್ನು ಸುಟ್ಟೇ ಸುಡುತ್ತದೆ.

ವಿಧಿಗೆ ನಾವು ಒಂದು ತುತ್ತು ಮಾತ್ರ

ಒಟ್ಟಿನಲಿ ತತ್ತ್ವವಿದು: ವಿಕಟರಸಿಕನೋ ಧಾತ ।
ತೊಟ್ಟಿಲನು ತೂಗುವನು, ಮಗುವ ಜಿಗುಟುವನು ॥
ಸಿಟ್ಟನ್ ಒಡವುಟ್ಟುಗಳೊಳಾಗಿಪನು, ಸೋಲಿಪನು ।
ತುತ್ತು ವಿಕಟಿಗೆ ನಾವು- ಮಂಕುತಿಮ್ಮ

ನಮ್ಮ ಜೀವನದ ಒಟ್ಟು ತತ್ವ ಏನೆಂದರೆ, ಆ ಭಗವಂತನು ತನಗನ್ನಿಸಿದ ಹಾಗೆ ನಮ್ಮನ್ನು ಆಡಿಸುತ್ತಾ ಅದರಲ್ಲಿ ಸಂತೋಷಪಡುವ ವಿಕಟರಸಿಕನವನು. ಮಗುವನ್ನೂ ಜಿಗುಟುತ್ತಾನೆ ಆಗ ಅಳುವ ಮಗುವಿನ ತೊಟ್ಟಿಲನ್ನೂ ತೂಗುತ್ತಾನೆ. ಸಿಟ್ಟು, ದ್ವೇಷ, ಅಹಂ, ಸೇಡು, ಈರ್ಷ್ಯ, ಕೋಭೆಗಳನ್ನು ನಮ್ಮ ಒಡಹುಟ್ಟುಗಳೊಂದಿಗೇ ಸೇರಿಸಿ, ನಮ್ಮನ್ನು ಈ ಜೀವನ ಎಂಬ ಆಟದಲ್ಲಿ ಆಟವನ್ನೂ ಆಡಿಸುತ್ತಾನೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಕೆಲವು ಬಾರಿ ಸೋಲನ್ನು ಕರುಣಿಸಿ ನಮ್ಮನ್ನು ಅಧೀರರನ್ನಾಗಿ ಮಾಡಿ ನಮ್ಮ ಜೀವನ ಇಷ್ಟೇ ಎಂಬುದನ್ನೂ ತೋರಿಸುತ್ತಾನೆ. ಒಂದು ರೀತಿಯಲ್ಲಿ ನಾವುಗಳು ಅವನಿಗೆ ಒಂದು ತುತ್ತಾಗಿರುತ್ತೇವೆ ಎಂಬ ಪೂರ್ಣ ಸತ್ಯದ ಮೇಲೆ ಬೆಳಕನ್ನು ಚೆಲ್ಲುತ್ತಾರೆ.

ಮನುಷ್ಯನ ಬದುಕು, ಜೀವನ, ಭವಿಷ್ಯವೆಲ್ಲವೂ ಆ ಕಾಣದ ಕಪಟ ನಾಟಕ ಸೂತ್ರಧಾರಿಯ ಕೈನಲ್ಲಿದ್ದು, ಆತನು ಆಡಿಸುವಂತೆಯೇ ನಾವು ಆಟ ಆಡಬೇಕಿದೆ. ಅವನು ಕಾಣದಂತೆ ಎಲ್ಲಿಯೂ ಕುಳಿತುಕೊಂಡು, ಅವನ ಆಣತಿಯಂತೆಯೇ ನಾವು ನಮ್ಮ ಸಮಯ ಬಂದಾಗ ನಾವು ಪರದೆಯ ಮೇಲೆ ಅವನಾಡಿಸಿದಂತೆಯೇ ನಾವು ನಾಟಕ ಆಡಬೇಕು. ಈ ತತ್ವಕ್ಕೆ ಯಾರೂ ಹೊರತಾಗಿಯೂ ಇರುವುದಿಲ್ಲ. ಇದಕ್ಕೆಲ್ಲಾ ಆ ಭಗವಂತನು

ಒಂದು ರೀತಿಯ ವಿಕಟ ರಸಿಕನಾಗಿದ್ದು, ಆ ಕ್ಷಣಕ್ಕೆ ಆತನಿಗೆ ಏನನ್ನಿಸುತ್ತದೆಯೋ, ಹೇಗನ್ನಿಸುತ್ತದೆಯೋ ಅದೇ ರೀತಿ ಆ ಸಮಯಕ್ಕೆ, ಆ ಅಂಕಣಕ್ಕೆ ತಕ್ಕಂತೆ ನಮ್ಮಾನ್ನು ಆಡಿಸುತ್ತಾ ಆತನು ಸಂತೋಷ ಪಡುತ್ತಲಿರುತ್ತಾನೆ. ಆತನ ಆಟವು ಹೇಗೆಂದರೆ ಮಗುವನ್ನು ಜಿಗುಟುವವನೂ ಅವನೇ ಹಾಗೆಯೇ ಮಗುವಿನ ತೊಟ್ಟಿಲನ್ನೂ ತೂಗುವವನೂ ಅವನೇ ಆಗಿರುತ್ತಾನೆ. ಆತನು ದ್ವಂದ್ವ ನೀತಿಯನ್ನು ಬಳಸಿ ನಮ್ಮನ್ನು ಈ ಜಗದೊಳಗೆ ಆಡಿಸುತ್ತಾ ಇದ್ದು, ಅದರಿಂದ ಅವನು ವಿಕಟನಗೆಯನ್ನು ಪಡೆಯುವ ವಿಕಟರಸಿಕನಾಗಿ ಸಂತೋಷಿಸುತ್ತಾನೆ. ನಮ್ಮ ಒಡ

ಹುಟ್ಟುಗಳಲ್ಲಿಯೇ ಸಿಟ್ಟು, ದ್ವೇಷ, ಅಹಂ, ಈರ್ಷ್ಯ, ಸೇಡು, ಸ್ವಾರ್ಥಗಳನ್ನು ತುಂಬಿ ಈ ಜಗತ್ತನ್ನೇ ಗೆಲ್ಲುವೆನೆಂಬ ಮನಸ್ಥಿತಿಯನ್ನು ಇಟ್ಟು, ಕೆಲವೊಮ್ಮೆ ಆ ಮನಸ್ಥಿತಿಯಿಂದಲೇ ಸೋಲಾಗುವಂತೆ ಮಾಡಿ, ನಮ್ಮಲ್ಲಿರುವ ಅಹಂಕಾರವನ್ನು ಮೆಟ್ಟಿನಿಲ್ಲುವ ಮನಸ್ಥಿತಿಯನ್ನು ಸಹ ಆ ಭಗವಂತ ತೋರಿಸುತ್ತಲೇ ಇರುತ್ತಾನೆ. ಆದರೆ ಅದರ ಅರಿವು ನಮಗಿಲ್ಲದೆ ನಾವುಗಳು ದುಃಖವನ್ನೋ, ವ್ಯಥೆಯನ್ನೋ ಪಡುವಾಗ ಆತನು ಸಂತೋಷ ಪಡುವಂತಹ ವಿಕಟ ರಸಿಕನೇ ಆಗಿರುತ್ತಾನೆ. ಆದುದರಿಂದ ಆ ಭಗವಂತನಾಟಕ್ಕೆ, ಅವನ ವಿಕಟ ಸಂತೋಷಕ್ಕೆ ನಾವುಗಳು ಒಂದು ರೀತಿಯಲ್ಲಿ ಅವನಿಗೊಂದು ತುತ್ತಾಗಿರುತ್ತೇವೆ. ಅಂದರೆ ಮನುಷ್ಯನ ಬದುಕಿನಲ್ಲಿ ಬರುವ ಎಲ್ಲಾ ಆಟಗಳು, ನಾಟಕಗಳಿಗೂ ಆ ಭಗವಂತನೇ ಪ್ರೇರಣೆ, ಆ ಭಗವಂತನ ಆಣತಿಯಂತೆಯೇ ಎಲ್ಲವೂ ಇಲ್ಲಿ ನಡೆಯುವುದು, ಅವನ ಆಣತಿಯಿಲ್ಲದೆ ಇಲ್ಲಿ ಒಂದು ಹುಲ್ಲು ಕಡ್ಡಿಯೂ ಅಲುಗಾಡದು ಎಂಬುದೂ ಸಹ ಸತ್ಯವೇ ಆಗಿದೆ. ನಾವು ನಮ್ಮ ಜೀವನದಲ್ಲಿ ಏನನ್ನೋ ಪಡೆದುಕೊಂಡು ಮತ್ತೇನನ್ನೂ ಕಳೆದುಕೊಂಡು ಸಾಗುವುದೇ ನಮ್ಮ ಈ ಜೀವನದ ನಿರಂತರವಾದ ಪಯಣವಾಗಿದೆ. ಆ ವಿಧಾತನಾಡಿಸಿದಂತೆ ಆಡುವುದು ಬಿಟ್ಟರೆ ನಮಗೆ ಪರ್ಯಾಯವೇ ಇಲ್ಲ. ಆದರೆ ಬದುಕಿನಲ್ಲಿ ಬಂದದ್ದನ್ನು ಬಂದಹಾಗೆ ಅನುಭವಿಸುತ್ತಾ, ಸಾಧನಾ ಮಾರ್ಗ ಕಂಡುಕೊಳ್ಳುವುದೇ ಉತ್ತಮ ಎಂಬ ತತ್ವವನ್ನು ಈ ಪದ್ಯದಲ್ಲಿ ಡಿವಿಜಿಯವರು ಹೇಳಿದ್ದಾರೆ. ಆಸೆಗಳ ದಾಸರಾಗದೆ, ವ್ಯರ್ಥ

ಪ್ರಯತ್ನಗಳಣೆನಿಸದೆ, ಆಕಾಶಕ್ಕೆ ಏಣಿ ಹಾಕುವಂಥ ಕಾರ್ಯ ಬಿಟ್ಟು ಕಾಯಕಯೋಗಿಗ ಳಾದಾಗ ಮಾತ್ರ ನಾವು ಈ ಜಗತ್ತಿನಲ್ಲಿಯ ಸಂತೋಷವನ್ನು ಅನುಭವಿಸಬಹುದು ಎಂಬ ಒಟ್ಟು ತತ್ವವನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ಕಲೆ : ರಜನಿ ಯುಎಸ್
8ನೆಯ ತರಗತಿ
ರಾಜೇಶ್ವರಿ ವಿದ್ಯಾಶಾಲಾ
ಬೆಂಗಳೂರು

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

3. ಮನಸ್ಸಿನಾಳಕ್ಕೆ ತಾಗುವಂತಹ ಮಾತು (3)
6. ಅಧಿಕೃತವಾಗಿ ಮಾತನಾಡುವವನು (3)
7. ಯುದ್ಧಕಾಲದಲ್ಲಿ ಬಳಸಿದ ಉಕ್ಕಿನ ಅಂಗಿ (3)
9. ಜನರು ತಂದೊಪ್ಪಿಸಿದ ಕಾಣಿಕೆ (3)
13. ಹಕ್ಕಿಗಳ ಮಧುರವಾದ ಧ್ವನಿ (4)
14. ಮಧುರವಾದ ನುಡಿ (4)
15. ತಿಳಿವಳಿಕೆ ಇಲ್ಲದವನು ಎನ್ನಬಹುದು (3)
17. ಕೊಲ್ಲುವಿಕೆ (3)
20. ಜೋಡಿ (3)
21. ಅರುವತ್ತು ಸೆಕೆಂಡುಗಳ ಅವಧಿ (3)

ಮೇಲಿಂದ ಕೆಳಕ್ಕೆ

1. ಮರದ ಕೊಂಬೆಯ ಟಿಸಿಲು (3)
2. ಸ್ವರ್ಗದ ವಿರುದ್ಧ ಪದ (3)
3. ಬಂಗಾರದ ಜಿಂಕೆಯಾಗಿ ಸೀತೆಗೆ ಕಾಣಿಸಿಕೊಂಡ ದಾನವ (3)
4. ವನದಲ್ಲಿದ್ದಾಗ ರಚಿಸಿದ ಪದ್ಯ (3)
5. ಭಗವಂತ (3)
8. ಸ್ಥಳಾಂತರ ಮಾಡುವಿಕೆ (4)
10. ನೀರನ್ನು ಕಟ್ಟಿಕೊಡುವವನು (4)
11. ಶ್ರೀಕೃಷ್ಣನ ಸಹೋದರ (4)
12. ಆತನ ನಾವೀನ್ಯ (4)
15. ಶಂಕರನ ಪತ್ನಿ (3)
16. ಇರುಳಿಗೆ ನಿಜವಾದ ಹೆಸರು (3)
17. ಋಷಿ ಬಿಡಿಯಾಗಿ ಬಂದಿದೆ (3)
18. ಎರಡು ಕಡೆಯಿಂದ ನೋಡಿದರೂ ಕಣ್ಣೇ (3)
19. ಕಲಿಯುವಾಗ ನೂಲು ತೆಗೆಯುವ ಸಾಧನ (3)

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಜೆರ್ಸಿ ಪ್ರಾಯೋಜಕತ್ವ ಇಲ್ಲದ ಏಷ್ಯಾ ಕಪ್

ದೆಹಲಿ: ಮುಂದಿನ ತಿಂಗಳ ಆರಂಭದ ವಾರದಲ್ಲಿ ನಡೆಯಲಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ ತಂಡವು ಯಾವುದೇ ಜೆರ್ಸಿ ಪ್ರಾಯೋಜಕತ್ವವಿಲ್ಲದೆ ಆಡುವ ಸಾಧ್ಯತೆಯಿದೆ ಎಂದು ಸುದ್ದಿ ಮೂಲಗಳು ತಿಳಿಸಿವೆ. ಇತ್ತೀಚೆಗಷ್ಟೇ ಬಿಸಿಸಿಐನೊಂದಿಗಿನ ಸುಮಾರು ರು. 358 ಕೋಟಿ ಮೊತ್ತದ ಜೆರ್ಸಿ ಪ್ರಾಯೋಜಕತ್ವ ಒಪ್ಪಂದವನ್ನು ಡ್ರೀಮ್11 ಕೊನೆಗೊಳಿಸಿತ್ತು. ಏಷ್ಯಾ ಕಪ್‌ಗೆ ಕೇವಲ ದಿನಗಳು ಉಳಿದಿರುವುದರಿಂದ, ಹೊಸ ಪ್ರಾಯೋಜಕರನ್ನು ಪಡೆಯಲು ಬಿಸಿಸಿಐಗೆ ಹೆಚ್ಚು ಸಮಯ ಉಳಿದಿಲ್ಲ. ಅಲ್ಲದೆ ಬಿಸಿಸಿಐ ಪ್ರಾಯೋಜಕತ್ವಕ್ಕೆ ಇನ್ನೂ ಟೆಂಡರ್ ಆಹ್ವಾನಿಸಿಲ್ಲ, ಹೀಗಾಗಿ ಜೆರ್ಸಿ ಪ್ರಾಯೋಜಕತ್ವ ವಿಲ್ಲದೆ ಆಡುವ ಸಾಧ್ಯತೆಯಿದೆ. ಬಿಸಿಸಿಐ 2027ರ ಏಕದಿನ ವಿಶ್ವಕಪ್ ವರೆಗೆ ಪ್ರಾಯೋಜಕರನ್ನು ನೇಮಿಸಿಕೊಳ್ಳಲು ಯೋಜಿಸುತ್ತಿದೆ. ಆದರೆ ಏಷ್ಯಾ ಕಪ್ ಸೆಪ್ಟೆಂಬರ್ 9ರಂದು ಪ್ರಾರಂಭವಾಗಲಿದೆ. ಇತ್ತೀಚೆಗೆ ಸಂಸತ್ತಿನಲ್ಲಿ 'ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆ-2025' ಅಂಗೀಕಾರವಾದ ನಂತರ, ಡ್ರೀಮ್11 ಭಾರತೀಯ ಕ್ರಿಕೆಟ್ ತಂಡದ ಶೀರ್ಷಿಕೆ ಪ್ರಾಯೋಜಕರಾಗಿ ಬಿಸಿಸಿಐ ಜತೆಗಿನ ತನ್ನ ಸಂಬಂಧವನ್ನು ಕೊನೆಗೊಳಿಸಿತ್ತು. ಆಗಸ್ಟ್ 28ರಂದು ಗುರುವಾರ ಬಿಸಿಸಿಐನ ಹಂಗಾಮಿ ಅಧ್ಯಕ್ಷ ರಾಜೀವ್ ಶುಕ್ಲಾ ಅವರ ಅಧ್ಯಕ್ಷತೆಯಲ್ಲಿ ಬಿಸಿಸಿಐ ತುರ್ತು ಅಪೆಕ್ಸ್ ಕೌನ್ಸಿಲ್ ಸಭೆ ನಡೆಸಿತ್ತು. ಸಭೆಯಲ್ಲಿ ಹೊಸ ಪ್ರಾಯೋಜಕರನ್ನು ಹುಡುಕುವ ಬಗ್ಗೆ ಚರ್ಚೆಗಳು ನಡೆದವು. ಆದರೆ ಜಾಹೀರಾತು ನೀಡಲು ಮತ್ತು ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸದ್ಯ ಸಾಕಷ್ಟು ಸಮಯವಿಲ್ಲದ ಕಾರಣ, ಏಷ್ಯಾ ಕಪ್‌ಗೆ ಪ್ರಾಯೋಜಕತ್ವವಿಲ್ಲದೆ ಆಡುವ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿದುಬಂದಿದೆ.

4 ಬಾಲ್‌ಗಳಲ್ಲಿ 4 ವಿಕೆಟ್: ಆಖಿಬ್ ನಬಿ ದಾಖಲೆ

ಬೆಂಗಳೂರು: ದುಲೀಪ್ ಟ್ರೋಫಿಯ ಕ್ವಾರ್ಟರ್ ಫೈನಲ್ ಸುತ್ತಿನ ಪಂದ್ಯವು ಪೂರ್ವ ವಲಯ ಹಾಗೂ ಉತ್ತರ ವಲಯ ತಂಡಗಳ ನಡುವೆ ನಡೆಯುತ್ತಿದ್ದು,

ಶುಕ್ರವಾರ ಜಮ್ಮು ಕಾಶ್ಮೀರದ ವೇಗದ ಬೌಲರ್ ಆಕಿಬ್ ನಬಿ 4 ಬಾಲ್‌ಗಳಲ್ಲಿ 4 ವಿಕೆಟ್‌ಗಳನ್ನು ಪಡೆಯುವ ಮೂಲಕ ಪೂರ್ವ ವಲಯ ತಂಡ 230 ರನ್‌ಗಳಿಗೆ ಆಲೌಟ್ ಆಗುವಲ್ಲಿ ಪ್ರಮುಖ ಪಾತ್ರ ವಹಿಸಿದರು. ದುಲೀಪ್ ಟ್ರೋಫಿಯಲ್ಲಿ ಈ ದಾಖಲೆ ಮಾಡಿದ ಮೊದಲ ಆಟಗಾರ ಎಂಬ ದಾಖಲೆಗೆ ಆಖಿಬ್ ನಬಿ ಪಾತ್ರರಾದರು. ಪಂದ್ಯದ 53ನೇ ಓವರ್‌ನ ಕೊನೆಯ 3 ಎಸೆತಗಳಲ್ಲಿ ಮತ್ತು 55ನೇ ಓವರ್‌ನ ಮೊದಲ ಬಾಲ್‌ನಲ್ಲಿ ಅವರು ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು.

ನಾಯಕ ಹರ್ಮನ್‌ಪ್ರೀತ್ ಹ್ಯಾಟ್ರಿಕ್ ಗೋಲು | ಚೀನಾ ವಿರುದ್ಧ 4-3 ಅಂತರದ ಗೆಲುವು

ಏಷ್ಯಾ ಕಪ್ ಹಾಕಿ: ಭಾರತ ಶುಭಾರಂಭ

ರಾಜ್‌ಗಿರ್ (ಬಿಹಾರ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಬಾರಿಸಿದ ಹ್ಯಾಟ್ರಿಕ್ ಗೋಲು ಮತ್ತು ತಂಡದ ಸರ್ವಾಂಗೀಣ ಪ್ರದರ್ಶನದ ನೆರವಿನಿಂದ ಶುಕ್ರವಾರ ಇಲ್ಲಿ ಆರಂಭಗೊಂಡ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಮೂರು ಬಾರಿಯ ಚಾಂಪಿಯನ್ ಭಾರತ ಪುರುಷರ ಹಾಕಿ ತಂಡವು ಗೆಲುವಿನ ಶುಭಾರಂಭ ಮಾಡಿದ್ದು, ಚೀನಾ ತಂಡದ ವಿರುದ್ಧ 4-3 ಗೋಲುಗಳ ಅಂತರದಿಂದ ಗೆದ್ದು ಬೀಗಿತು.

ತೀವ್ರ ಪೈಪೋಟಿಯಿಂದ ಕೂಡಿದ ಪಂದ್ಯದಲ್ಲಿ ಚೀನಾ ಆರಂಭಿಕ ಮುನ್ನಡೆ ಸಾಧಿಸಿತ್ತಾದರೂ, ಆ ಬಳಿಕ ಹರ್ಮನ್‌ಪ್ರೀತ್ ಸಿಂಗ್ ಅವರು ಪೆನಾಲ್ಟಿ ಕಾರ್ನರ್‌ನಲ್ಲಿ ಬಾರಿಸಿದ ಗೋಲಿನ ನೆರವಿನಿಂದ ಭಾರತ ಗೆಲುವಿನ ನಗೆ ಬೀರಿತು.

ಚೀನಾ ಮೊದಲ ಕ್ವಾರ್ಟರ್‌ನ 12ನೇ ನಿಮಿಷದಲ್ಲಿ ಗೋಲಿನ ಖಾತೆಯನ್ನು ತೆರೆಯಿತು. ಪೆನಾಲ್ಟಿ ಕಾರ್ನರ್‌ನಲ್ಲಿ ಡು ಶಿಹಾವೋ ಗೋಲು ಬಾರಿಸುವ ಮೂಲಕ ಚೀನಾಕ್ಕೆ ಆರಂಭಿಕ ಯಶಸ್ಸನ್ನು ತಂದುಕೊಟ್ಟರು. ಆದರೆ ದ್ವಿತೀಯ ಕ್ವಾರ್ಟರ್‌ನಲ್ಲಿ ತಿರುಗಿಬಿದ್ದ ಭಾರತ ಸತತವಾಗಿ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿ ಮುನ್ನಡೆ ಸಾಧಿಸಿತು. ಮೊದಲ ಗೋಲ್ ಹಾರ್ದಿಕ್ ಸಿಂಗ್ ಬಾರಿಸಿದರೆ, ದ್ವಿತೀಯ ಗೋಲನ್ನು ನಾಯಕ ಹರ್ಮನ್‌ಪ್ರೀತ್ ಸಿಂಗ್ ಗಳಿಸಿದರು, ಹಾಗಾಗಿ ಮೊದಲಾರ್ಧ 2-1 ಅಂತರದಿಂದ ಕೊನೆಗೊಂಡಿತು.

ದ್ವಿತೀಯಾರ್ಧದಲ್ಲಿ ತಿರುಗಿಬಿದ್ದ ಚೀನಾ, ಮೂರನೇ ಕ್ವಾರ್ಟರ್‌ನಲ್ಲಿ 2 ಗೋಲು ದಾಖಲಿಸಿತು. ಭಾರತ ಒಂದು ಗೋಲು ಮಾತ್ರ ಗಳಿಸಿತು. ಹಾಗಾಗಿ 3 ಕ್ವಾರ್ಟರ್ 3-3 ಸಮಬಲದೊಂದಿಗೆ ಮುಕ್ತಾಯಗೊಂಡಿತು. ಆದರೆ ಅಂತಿಮ ಹಾಗೂ ನಾಲ್ಕನೇ ಕ್ವಾರ್ಟರ್‌ನಲ್ಲಿ ಉಭಯ ತಂಡಗಳ ರಕ್ಷಣಾ ವಿಭಾಗ ಬಲಿಷ್ಠಗೊಂಡ ಕಾರಣ ಅಷ್ಟು ಸುಲಭವಾಗಿ ಗೋಲು ಗಳಿಸಲು ಸಾಧ್ಯವಾಗಲಿಲ್ಲ. ಇನ್ನೇನು ಪಂದ್ಯ ಮುಕ್ತಾಯಕ್ಕೆ ಕೆಲವೇ ನಿಮಿಷ ಇರುವಾಗ, 47ನೇ ನಿಮಿಷದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿ ಭಾರತಕ್ಕೆ 4-3 ಅಂತರದ ರೋಚಕ ಗೆಲುವನ್ನು ತಂದುಕೊಟ್ಟರು.

ಲೀಗ್ ಹಂತ: ಭಾರತಕ್ಕಿನ್ನು ಎರಡು ಪಂದ್ಯಗಳು

ಈ ಸಲದ ಏಷ್ಯಾ ಕಪ್‌ನಲ್ಲಿ ಆತಿಥೇಯ ಭಾರತವು ಚೀನಾ, ಜಪಾನ್ ಮತ್ತು ಕಜಾಕಸ್ತಾನ ತಂಡಗಳೊಂದಿಗೆ ಎ ಗುಂಪಿನಲ್ಲಿದೆ. ಐದು ಬಾರಿಯ ಚಾಂಪಿಯನ್ ದಕ್ಷಿಣ ಕೊರಿಯಾ, ಮಲೇಷ್ಯಾ, ಬಾಂಗ್ಲಾದೇಶ ಮತ್ತು ಚೀನಾ ತೈಪೆ ತಂಡಗಳು ಬಿ ಗುಂಪಿನಲ್ಲಿವೆ. ಪ್ರತೀ ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ. ಸೆ.7ರಂದು ಫೈನಲ್ ಹಣಾಹಣಿ ನಡೆಯಲಿದೆ. ಭಾರತವು ಲೀಗ್ ಹಂತದಲ್ಲಿ ತನ್ನ ಮುಂದಿನ ಪಂದ್ಯವನ್ನು ಆಗಸ್ಟ್-31ರಂದು ಜಪಾನ್ ವಿರುದ್ಧ ಹಾಗೂ ಮೂರನೇ ಪಂದ್ಯವನ್ನು ಸೆ.1ರಂದು ಕಜಕಸ್ತಾನ ವಿರುದ್ಧ ಆಡಲಿದೆ.

ನೀರಜ್ ಚೋಪ್ರಾಗೆ ಬೆಳ್ಳಿ

ಜೂರಿಚ್: ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಗುರುವಾರ ರಾತ್ರಿ ಇಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಲೀಗ್‌ನಲ್ಲಿ ಇದು ಅವರ ನಾಲ್ಕನೇ ಪದಕ ಮತ್ತು ಹ್ಯಾಟ್ರಿಕ್ ಬೆಳ್ಳಿ ಆಗಿದೆ.

2022ರಲ್ಲಿ ಚಿನ್ನ ಗೆದ್ದರೆ, 2023 ಮತ್ತು 24ರಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಮೇ ತಿಂಗಳಿನಲ್ಲಿ ನಡೆದ ದೋಹಾ ಡೈಮಂಡ್ ಲೀಗ್ ಕೂಟದಲ್ಲಿ ಜಾವೆಲಿನ್ನನ್ನು 90.30 ಮೀಟರ್ ಸಾಧನೆ ಮೆರೆದಿದ್ದ ನೀರಜ್, ಇಲ್ಲಿ 85 ಮೀ. ಗಡಿ ದಾಟಲು ಪ್ರಯಾಸಪಟ್ಟರು. ಹಾಲಿ ವಿಶ್ವ ಚಾಂಪಿಯನ್ ಆಗಿರುವ 27 ವರ್ಷದ ನೀರಜ್, ಮೊದಲೆರಡು ಪ್ರಯತ್ನದಲ್ಲಿ 84.35 ಮೀ., 82 ಮೀ. ದೂರಕ್ಕೆ ಈಟಿ ಎಸೆದರು. ನಂತರದ ಮೂರು ಪ್ರಯತ್ನಗಳು ಫೌಲ್ ಆದವು. ಕೊನೇ ಪ್ರಯತ್ನದಲ್ಲಿ 85.01 ಮೀ. ಸಾಧನೆಯೊಂದಿಗೆ ಬೆಳ್ಳಿ ಖಚಿತ ಪಡಿಸಿಕೊಂಡರು.

ಜರ್ಮನಿ ತಾರೆಗೆ ಚಿನ್ನ: ಜರ್ಮನಿಯ ತಾರೆ ಜೂನಿಯನ್ ವೆಬರ್ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಅವರು ಮೊದಲೆರಡು ಪ್ರಯತ್ನದಲ್ಲಿ ಕ್ರಮವಾಗಿ 91.37 ಮೀ. 91.51 ಮೀ. ಸಾಧನೆ ಮಾಡಿ, ಆರಂಭದಲ್ಲೇ ಅಗ್ರಸ್ಥಾನಿಯಾದರು.

ಬಿಡಬ್ಲ್ಯೂಎಫ್ ವಿಶ್ವ ಚಾಂಪಿಯನ್‌ಶಿಪ್ ಬ್ಯಾಡ್ಮಿಂಟನ್

ಪಿ.ವಿ. ಸಿಂಧುಗೆ ಸೋಲಿನ ಆಘಾತ

ಪ್ಯಾರಿಸ್: ಬಿಡಬ್ಲ್ಯೂಎಫ್ ವಿಶ್ವ ಚಾಂಪಿಯನ್‌ಶಿಪ್ ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಶುಕ್ರವಾರ ನಿರಾಸೆ ಎದುರಾಯಿತು. ಮಹಿಳಾ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವಳಿ ಒಲಿಂಪಿಕ್ ವಿಜೇತೆ ಪಿ.ವಿ ಸಿಂಧು ಸೋಲು ಕಂಡರೆ, ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿ ಸೋಲು ಕಾಣುವ ಮೂಲಕ ಭಾರತವು ಮೊದಲ ಮಿಶ್ರ ಡಬಲ್ಸ್ ಪದಕ ಗೆಲ್ಲುವ ಅವಕಾಶ ಕಳೆದುಕೊಂಡಿತು.

ಪ್ರೀ ಕ್ವಾರ್ಟರ್‌ನಲ್ಲಿ ವಿಶ್ವದ 2ನೇ ಶ್ರೇಯಾಂಕದ ವಾಂಗ್ ಝಿ ಯಿ ಅವರನ್ನು ನೇರ ಸೇಟ್‌ಗಳಿಂದ ಮಣಿಸಿ ಕ್ವಾರ್ಟರ್ ಫೈನಲ್ ಗೇರಿದ್ದ 30ರ ಹರೆಯದ ಸಿಂಧು ಮೇಲೆ ಪದಕದ ಬಗ್ಗೆ ಭರವಸೆ ಇರಿಸಲಾಗಿತ್ತು. ಆದರೆ ಶುಕ್ರವಾರದ ನಡೆದ ಪಂದ್ಯದಲ್ಲಿ ಸಿಂಧು, 9ನೇ ಶ್ರೇಯಾಂಕಿತೆ ಇಂಡೋನೇಷ್ಯಾದ ಪುಟ್ರಿ ಕುಸುಮಾ ವರ್ದಾನಿ ಎದುರು 14-21, 21-13, 16-21 ಅಂತರದಲ್ಲಿ ಸೋಲು ಕಂಡರು.

ಮೊದಲ ಗೇಮ್‌ನಲ್ಲಿ ಸೋಲು ಕಂಡ ಸಿಂಧು, ದ್ವಿತೀಯ ಗೇಮ್‌ನಲ್ಲಿ ಆಕ್ರಮಣಕಾರಿ ಆಟದ ಮೂಲಕ ಪಂದ್ಯವನ್ನು ಸಮಬಲಕ್ಕೆ ತಂದರು. ಮೂರನೇ ಹಾಗೂ ಅಂತಿಮ ಗೇಮ್‌ನ ಆರಂಭಿಕ ಹಂತದಲ್ಲಿಯೂ ಸಿಂಧು ಮುನ್ನಡೆ ಸಾಧಿಸಿದರು. ಈ ವೇಳೆ ಅವರು ಪಂದ್ಯವನ್ನು ಸುಲಭವಾಗಿ ಗೆಲ್ಲಬಹುದು ಎಂದು ಊಹಿಸಲಾಗಿತ್ತು. ಆದರೆ ಹಿನ್ನಡೆ ಬಳಿಕ ಬಿರುಸಿನ ಸರ್ವ್ ಮೂಲಕ ತಿರುಗಿ ಬಿದ್ದ ವರ್ದಾನಿ, ಸತತವಾಗಿ ಅಂಕ ಗಳಿಸುವ ಮೂಲಕ ಪಂದ್ಯವನ್ನು ಗೆದ್ದರು. ವರ್ದಾನಿ ಆರ್ಭಟದ ಮುಂದೆ ಸಿಂಧು ಸಂಪೂರ್ಣವಾಗಿ ಮಂಕಾದರು. 2021ರ ನಂತರ ಸಿಂಧು ಈ ಕೂಟದಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಶುಕ್ಲಾ ಬಿಸಿಸಿಐ ಹಂಗಾಮಿ ಅಧ್ಯಕ್ಷ

ರೋಜರ್ ಬಿನ್ನಿಯಿಂದ ತೆರವಾದ ಹುದ್ದೆ | ಅನುಭವದ ಆಧಾರದಲ್ಲಿ ಆಯ್ಕೆ

ಮುಂಬಯಿ: 2022ರಿಂದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಅಧ್ಯಕ್ಷರಾಗಿರುವ ಕರ್ನಾಟಕದ ರೋಜರ್ ಬಿನ್ನಿ ಅಧಿಕಾರಾವಧಿ ಮುಕ್ತಾಯ ಗೊಂಡಿದ್ದು, ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಮುಂದಿನ ಬಿಸಿಸಿಐ ಚುನಾವಣೆಯವರೆಗೆ ಅವರಿಂದ ತೆರವಾಗಲಿರುವ ಸ್ಥಾನಕ್ಕೆ ರಾಜ್ಯಸಭಾ ಸದಸ್ಯ ರಾಜೀವ್ ಶುಕ್ಲಾ ಹಂಗಾಮಿಯಾಗಿ ನೇಮಕಗೊಂಡಿದ್ದಾರೆ. ಬಿಸಿಸಿಐ ಸಂವಿಧಾನದ ಪ್ರಕಾರ 70 ವರ್ಷದ ಬಳಿಕ ಬಿಸಿಸಿಐ ಅಧ್ಯಕ್ಷರಾಗಿ ಇರುವಂತಿಲ್ಲ. ರೋಜರ್ ಬಿನ್ನಿಗೆ ಇದೇ ಜುಲೈ 19ರಂದು 70 ವರ್ಷ ತುಂಬಿತ್ತು.

ರಾಜೀವ್ ಶುಕ್ಲಾ ಅವರು 2020ರಿಂದ ಬಿಸಿಸಿಐ ಉಪಾಧ್ಯಕ್ಷರಾಗಿದ್ದಾರೆ. ಅವರು 2017ರ ವರೆಗೆ ಉತ್ತರ ಪ್ರದೇಶ ಕ್ರಿಕೆಟ್ ಅಸೋಸಿಯೇಶನ್‌ನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. 2018ರವರೆಗೆ ಐಪಿಎಲ್ ಅಧ್ಯಕ್ಷರಾಗಿಯೂ ಶುಕ್ಲಾ ಕೆಲಸ ಮಾಡಿದ್ದರು. ಆ ಎಲ್ಲಾ ಅನುಭವದ ಆಧಾರದಲ್ಲಿ ಅವರಿಗೆ ಹಂಗಾಮಿ ಅಧ್ಯಕ್ಷ ಸ್ಥಾನ ನೀಡಲಾಗಿದೆ.

ಶುಕ್ಲಾ ಈಗಾಗಲೇ ಅಧಿಕಾರ ಸ್ವೀಕರಿಸಿದ್ದು ಗುರುವಾರ ಅವರ ನೇತೃತ್ವದಲ್ಲಿ ಬಿಸಿಸಿಐನ ಅಪೆಕ್ಸ್ ಕೌನ್ಸಿಲ್ ಸಭೆ ನಡೆದಿದೆ ಎನ್ನಲಾಗಿದೆ. ಸಭೆಯಲ್ಲಿ ಭಾರತ ತಂಡ ನೂತನ ಜರ್ಸಿ ಪ್ರಾಯೋಜಕತ್ವದ ಕುರಿತು ಚರ್ಚೆ ನಡೆಸಲಾಯಿತು ಎಂದು ವರದಿಯಾಗಿದೆ. ನೂತನ ರಾಷ್ಟ್ರೀಯ ಕ್ರೀಡಾ ಮಸೂದೆಯ ಪ್ರಕಾರ, ಮುಂದಿನ ತಿಂಗಳು ನಡೆಯುವ ಚುನಾವಣೆಯಲ್ಲಿ ರೋಜರ್ ಬಿನ್ನಿ ಸ್ಪರ್ಧಿಸಿದರೆ, 75 ವಯಸ್ಸು ಆಗುವವರೆಗೆ ಅವರಿಗೆ ಬಿಸಿಸಿಐ ಅಧ್ಯಕ್ಷರಾಗಿ ಮುಂದುವರಿಯಬಹುದು. ಆದರೆ ಅವರು ಆಯ್ಕೆಯಾಗದಿದ್ದರೆ, ಸೆಪ್ಟೆಂಬರ್ ನಂತರ ಬಿಸಿಸಿಐಗೆ ಹೊಸ ಅಧ್ಯಕ್ಷರು ನೇಮಕಗೊಳ್ಳಲಿದ್ದಾರೆ.

ವಿಟಾಕೀಸ್

ಕನ್ನಡದ ಜನಪ್ರಿಯ ಧಾರಾವಾಹಿಗಳಲ್ಲಿ ಒಂದೆಂಬ ಹೆಗ್ಗಳಿಕೆ ಹೊತ್ತಿದ್ದ ಮಾಂಗಲ್ಯ ಈ ಹಿಂದೆ ಎಂಟು ವರ್ಷ ಕಾಲ ಪ್ರಸಾರವಾಗಿತ್ತು. ಈಗ ಅದೇ ಶೀರ್ಷಿಕೆಯಲ್ಲಿ ಧಾರಾವಾಹಿ ಪ್ರಸಾರವಾಗುತ್ತಿದೆ. ಮಂಗಳವಾರ ಪ್ರಸಾರ ಆರಂಭಿಸುತ್ತಿರುವ ಕನ್ನಡದ ಮೊಟ್ಟಮೊದಲ ಧಾರಾವಾಹಿ ಇದಾಗಿದೆ. ಹಾಗಾಗಿಯೇ ಧಾರಾವಾಹಿ ತಂಡ ಮಂಗಳವಾರ ಮಾಂಗಲ್ಯವಾರ ಎಂಬ ಘೋಷವಾಕ್ಯದೊಂದಿಗೆ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದೆ. ಕೌಟುಂಬಿಕ ಕಥೆಯನ್ನು ಒಳಗೊಂಡಿರುವ ಮಾಂಗಲ್ಯ ಧಾರಾವಾಹಿಯಲ್ಲಿ ಸೆಂಟಿಮೆಂಟ್ ಹೆಚ್ಚಾಗಿ ಬೆರೆತಿದೆ.

ಮತ್ತೆ ಮೂಡಿಬರುತ್ತಿದೆ ಮಾಂಗಲ್ಯ

ದುರ್ಗಾಪುರದ ಮಯೂರಿ, ಮನೆ ಮಗನಂತೆ ಎಲ್ಲ ಜವಾಬ್ದಾರಿಯನ್ನು ನಿಭಾಯಿಸುವಂಥ ಹುಡುಗಿ. ಕೃಷಿ ಕೆಲಸ, ಹೈನುಗಾರಿಕೆ ಕೆಲಸಕ್ಕೂ ಈಕೆಯದ್ದೇ ಉಸ್ತುವಾರಿ. ಆ ನಗರದ ಶ್ರೀಮಂತ ಕುಟುಂಬದ ತೋಟವನ್ನು ಈಕೆಯೇ ನೋಡಿಕೊಳ್ಳುತ್ತಿರುತ್ತಾಳೆ. ಆ ಶ್ರೀಮಂತ ಕುಟುಂಬದ ಮಗ ತಾರಾಕ್ ಕಥೆಯ ನಾಯಕ. ಆತನಿಗೆ ಶ್ರೀಮಂತಿಕೆಯ ಅಹಂಕಾರದಲ್ಲಿ ಮೆರೆಯುತ್ತಿರುವ ಅಮ್ಮನ ವರ್ತನೆಗಳು ಹಿಡಿಸೋದಿಲ್ಲ. ಹಾಗಾಗಿ ಆತ ತನ್ನ ಅಮ್ಮನ ಅಹಂಕಾರವನ್ನು ಮುರಿಯಲು ಬಡ ಕುಟುಂಬದ ಮಯೂರಿಗೆ ಮಾಂಗಲ್ಯ ಕಟ್ಟಿಬಿಡುತ್ತಾನೆ. ಅಲ್ಲಿಂದ ಮಯೂರಿ ಜೀವನದ ಹೊಸ ಪಯಣ ಶುರುವಾಗುತ್ತದೆ.

ಐಶ್ವರ್ಯಾ ಪಿಸ್ಸೆ ಜವಾಬ್ದಾರಿಯುತ ಹುಡುಗಿ ಮಯೂರಿ ಪಾತ್ರದಲ್ಲಿ ನಟಿಸಿದ್ದು, ಜಗನ್ ಶ್ರೀಮಂತ ಕುಟುಂಬದ ಮಗ ತಾರಕ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜಗನ್ ಈ ಧಾರಾವಾಹಿಯನ್ನು ನಿರ್ದೇಶಿಸುವ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ನಿರ್ದೇಶಕನ ಜವಾಬ್ದಾರಿ ವಹಿಸಿಕೊಂಡಿರುವುದು ಖುಷಿಕೊಟ್ಟಿದೆ. ಹಾಗಾಗಿ ತುಂಬಾ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದೇನೆ. ಅಂತೆಯೇ ನಿರ್ಮಾಪಕನಾಗಿ ಇದೊಂದು ಒಳ್ಳೆಯ ಅನುಭವ ಎನ್ನುತ್ತಾರೆ ಜಗನ್. ಜಾನ್ಸಿ, ಇಂಚರಾ, ದಿಶಾ, ಹನುಮಂತು, ಜಯಬಾಲು, ಚಿತ್ರಾ, ರೂಪೇಶ್, ದಾಮಿನಿ ಮುಂತಾದವರು ಈ ಧಾರಾವಾಹಿಯ ತಾರಾಬಳಗದಲ್ಲಿದ್ದಾರೆ. ಮಾಂಗಲ್ಯ, ಸೆಪ್ಟೆಂಬರ್ 2 ರಿಂದ ಉದಯ ಟಿವಿಯಲ್ಲಿ ಪ್ರಸಾರವಾಗಲಿದೆ.

ಗರ್ಲ್ ಫ್ರೆಂಡ್‌ನ ಹೊಸ ಗಾನ

ನಟಿ ರಶ್ಮಿಕಾ ಮಂದಣ್ಣ, ವಿಭಿನ್ನ ಕಥೆಯ ಗರ್ಲ್‌ಫ್ರೆಂಡ್ ಸಿನಿಮಾದಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಟೀಸರ್‌ನಲ್ಲಿಯೇ ಗಮನಸೆಳೆದಿದ್ದ ಗರ್ಲ್ ಫ್ರೆಂಡ ಸಿನಿಮಾದ ಹೊಸ ಹಾಡು ರಿಲೀಸ್ ಆಗಿದೆ. ಯಾವ ಕಡೆ ಕಥೆ.. ಎಂಬ ಮೆಲೋಡಿ ಗೀತೆ ಇದಾಗಿದ್ದು ಸಂಗೀತ ಪ್ರಿಯರ ಮನಗೆದ್ದಿದೆ. ನಾಗಾರ್ಜುನ್ ಶರ್ಮ ಸಾಹಿತ್ಯ ಬರೆದಿರುವ ಈ ಗೀತೆಗೆ ಚಿನ್ಮಯಿ ಶ್ರೀಪಾದ ಹಾಗೂ ಹೇಶಾಮ್ ಅಬ್ದುಲ್ ವಹಾಬ್ ದನಿಯಾಗಿದ್ದಾರೆ. ಹೇಶಾಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜಿಸಿದ್ದಾರೆ. ರಶ್ಮಿಕಾ ಮಂದಣ್ಣ ಮತ್ತು ದೀಕ್ಷಿತ್ ಶೆಟ್ಟಿ ನಡುವಿನ ಆನ್ ಸ್ಕ್ರೀನ್ ಕೆಮಿಸ್ಟ್ರಿ ಈ ಹಾಡಿಗೆ ಮೆರುಗು ನೀಡಿದೆ. ದಿ ಗರ್ಲ್‌ಫ್ರೆಂಡ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಕನ್ನಡ, ತೆಲುಗು, ತಮಿಳು ಸೇರಿದಂತೆ ಪಂಚ ಭಾಷೆಯಲ್ಲಿ ಹಾಡು ಬಿಡುಗಡೆ ಮಾಡಲಾಗಿದೆ. ರಾಹುಲ್ ರವೀಂದ್ರನ್ ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಸಿನಿಮಾವನ್ನು ಧೀರಜ್ ಮೊಗಿಲಿನೇನಿ ಮತ್ತು ವಿದ್ಯಾ ಕೊಪ್ಪಿನೀಡಿ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಶೀರ್ಷಿಕೆಯೇ ಹೇಳವಂತೆ ಇದು ನವಿರಾದ ಪ್ರೇಮಕಥೆಯ ಸಿನಿಮಾವಾಗಿದೆ. ಕೃಷ್ಣನ್ ವಸಂತ್ ಛಾಯಾಗ್ರಹಣ, ಹೇಶಮ್ ಅಬ್ದುಲ್ ವಹಾಬ್ ಸಂಗೀತ ಈ ಚಿತ್ರಕ್ಕಿದೆ. ರಶ್ಮಿಕಾ ಮಂದಣ್ಣ ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ಈ ಚಿತ್ರದಲ್ಲಿ ಸಿಂಪಲ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ.



ಮಾಲಿವುಡ್ ಅಂಗಳದಲ್ಲಿ ಮೊನಾಲಿಸಾ

ಕುಂಬಮೇಳದಲ್ಲಿ ಎಲ್ಲರ ಮನಗೆದ್ದ ಸುಂದರಿ ಮೊನಾಲಿಸಾ ಬೋಸ್ಲೆ ನಟಿಯಾಗಿ ಸಿನಿಮಾರಂಗಕ್ಕೆ ಎಂಟ್ರಿಕೊಟ್ಟಿದ್ದಾರೆ. ಬಾಲಿವುಡ್ ಸಿನಿಮಾಗಳಲ್ಲಿಯೂ ಅಭಿನ ಯಿಸಲು ಅವಕಾಶ ಪಡೆದಿದ್ದ ಸುಂದರ ಕಂಗಳ ಚೆಲುವೆ ಮೊನಾಲಿಸಾ, ಈಗ ಮಾಲಿವುಡ್ ಅಂಗಳಕ್ಕೂ ಕಾಲಿಟ್ಟಿದ್ದಾರೆ. ನಾಗಮ್ಮ ಹೆಸರಿನ ಸಿನಿಮಾದಲ್ಲಿ ಮೋನಾಲಿಸಾ ನಟಿಸುತ್ತಿದ್ದಾರೆ. ಮಲೆಯಾಳಂ ನಿರ್ದೇಶಕ ಪಿ.ಬಿನು, ನಾಗಮ್ಮ ಶೀರ್ಷಿಕೆಯಲ್ಲಿ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಕೈಲಾಶ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರದಲ್ಲಿ ಮೊನಾಲಿಸಾ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ಕೇರಳದ ಕೊಚ್ಚಿಯಲ್ಲಿ ಸಿನಿಮಾದ ಮುಹೂರ್ತ ನೆರವೇರಿದ್ದು, ಈ ಸಿನಿಮಾಗೆ ಸೆಪ್ಟೆಂಬರ್ ಅಂತ್ಯದ ವೇಳೆಗೆ ಶೂಟಿಂಗ್ ಆರಂಭ ಆಗುವ ನಿರೀಕ್ಷೆ ಇದೆ. ನಾಗಮ್ಮ, ಥ್ರಿಲ್ಲಿರ್ ಜಾನರ್‌ನ ಸಿನಿಮಾವಾಗಿದ್ದು, ಈ ಸಿನಿಮಾದಲ್ಲಿ ಮೊನಾಲಿಸಾ ಪಾತ್ರ ಹೇಗಿರಲಿದೆ ಎಂಬುದನ್ನು ನೋಡಲು ಸಿನಿಪ್ರಿಯರು ಕಾತರರಾಗಿದ್ದಾರೆ.

ಕಾಡಂಚಿನಲಿ ರಾಕ್ಷಸನ ಅಟ್ಟಹಾಸ

ಮಲೆನಾಡಿನ ಮಡಿಲಲ್ಲಿ ಸಾಗುವ ಕಥೆಗಳು ಹೊಸತನವನ್ನೇ ಹೊತ್ತು ಬಂದಿರುತ್ತವೆ. ಅಂತೆಯೇ ರಿಪ್ಪನ್ ಸ್ವಾಮಿ ಕೂಡ ಮಲೆನಾಡ ಸೊಬಗಿನಲ್ಲಿ ನಡೆಯುವ ಕ್ರೈಂ ಥ್ರಿಲ್ಲರ್ ಸ್ಟೋರಿಯನ್ನು ಒಳಗೊಂಡಿದೆ. ಅದು ಸಣ್ಣಕೊಪ್ಪ ಮಲೆನಾಡಿನ ಮಡಿಲಿನಲ್ಲಿರುವ ಸುಂದರ ಗ್ರಾಮ. ಸಿನಿಮಾ ಆರಂಭವಾಗುವುದೇ ಸ್ವಾಮಿಯ ಸಾವಿನಿಂದ. ಇಲ್ಲಿ ರಿಪ್ಪನ್ ಸ್ವಾಮಿ ಯಾರು, ಎಲ್ಲರೂ ಯಾಕೆ ಆತನನ್ನು ರಿಪ್ಪನ್ ಸ್ವಾಮಿ ಎಂದು ಕರೆಯುತ್ತಾರೆ. ಮುಂಗೋಪಿಯಾದ ಸ್ವಾಮಿ ಯಾಕೆ ಒಬ್ಬನೇ ಇರುತ್ತಾನೆ. ತನಗೆ ತೋಚಿದಂತೆ ಮಾಡುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಸಿನಿಮಾದ ಮೊದಲಾರ್ಧ ಕುತೂಹಲದಲ್ಲಿ ಸಾಗುತ್ತಾ, ಪ್ರೇಕ್ಷಕರನ್ನು ಸೀಟಿನ ತುದಿಯಲ್ಲಿ ಹಿಡಿದು ಕೂರಿಸುತ್ತವೆ. ಮೊದಲ ಭಾಗದಲ್ಲಿ ಕಾಡುವ ಕುತೂಹಲಕ್ಕೆ ಎರಡನೇ ಭಾಗದಲ್ಲಿ ಉತ್ತರ ಸಿಗುತ್ತದೆ.

ನಿರ್ದೇಶಕ ಕಿಶೋರ್ ಮೂಡುಬಿದ್ರೆ ಒಳ್ಳೆಯ ಕಥೆಯನ್ನು ಆಯ್ದುಕೊಂಡು ಅದಕ್ಕೆ ಥ್ರಿಲ್ಲಿಂಗ್, ಆ್ಯಕ್ಷನ್ ಅಂಶಗಳನ್ನು ಬೆರೆಸಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಒಂದು ಕೆಟ್ಟ ಆಲೋಚನೆ ನಮ್ಮನ್ನು ಹೇಗೆ ದೊಡ್ಡ ಸಂಕಷ್ಟಕ್ಕೆ, ವಿನಾಶಕ್ಕೂ ಸಿಲುಕಿಸಬಹುದು ಎಂಬುದನ್ನು ಸಿನಿಮಾದಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ.

ವಿಜಯ್ ರಾಘವೇಂದ್ರ ಅವರ ನಟನೆ ಸಿನಿಮಾದ ಹೈಲೈಟ್ ಆಗಿದೆ. ಲವ್ವರ್ ಬಾಯ್ ಆಗಿ, ತನಿಖಾಧಿಕಾರಿಯಾಗಿ ನಟಿಸಿ ಮನಗೆದ್ದಿದ್ದ ವಿಜಯ್ ರಾಘವೇಂದ್ರ ಈ ಚಿತ್ರದಲ್ಲಿ ರಗಡ್ ಆಗಿ ನೆಗೆಟಿವ್ ಶೇಡ್‌ನಲ್ಲಿ ಕಂಗೊಳಿಸಿದ್ದಾರೆ. ಆ್ಯಕ್ಷನ್‌ನಲ್ಲಿಯೂ ಅಬ್ಬರಿಸಿದ್ದಾರೆ. ಈ ಚಿತ್ರದ ಮೂಲಕ ಎಂತಹ ಪಾತ್ರಕ್ಕೂ ತಾನು ಸೈ ಎಂಬುದನ್ನು ಚಿನ್ನಾರಿಮುತ್ತ ಈ ಸಿನಿಮಾದಲ್ಲಿ ಸಾಬೀತುಪಡಿಸಿದ್ದಾರೆ.

ಚಿತ್ರ : ರಿಪ್ಪನ್ ಸ್ವಾಮಿ
ನಿರ್ದೇಶನ : ಕಿಶೋರ್ ಮೂಡುಬಿದ್ರೆ
ನಿರ್ಮಾಣ :ಪಂಚಾನನ ಫಿಲಂಸ್
ತಾರಾಗಣ: ವಿಜಯ್ ರಾಘವೇಂದ್ರ, ಅಶ್ವಿನಿ, ಅಂಜುಮಾಲ, ಪ್ರಕಾಶ್ ತುಮಿನಾಡು ಮುಂತಾದವರು.
ರೇಟಿಂಗ್ : ★★★

ಅಶ್ವಿನಿ ಚಂದ್ರಶೇಖರ್ ಮಂಗಳಾ ಪಾತ್ರದಲ್ಲಿ ನಟಿಸಿದ್ದು, ಮುಗ್ಧತೆಯ ಮೂಲಕ ಗಮನಸೆಳೆಯುತ್ತಾರೆ. ಅಶ್ವಿನಿ ಅವರದ್ದು ಎಲ್ಲಾ ಹೆಣ್ಣು ಮಕ್ಕಳು ಮೆಚ್ಚುವ ಪಾತ್ರವಾಗಿದೆ. ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಅಂಜುಮಾಲಾ ಇಷ್ಟವಾಗುತ್ತಾರೆ. ಉಳಿದಂತೆ ಪ್ರಕಾಶ್ ತುಮಿನಾಡು, ಕೃಷ್ಣಮೂರ್ತಿ ಕವತಾರ್ ಎಲ್ಲರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಸಿಂಪಲ್ ಆಗಿರುವ ಹಾಸ್ಯ ಸಂಭಾಷಣೆ ಕಾಮಿಡಿ ಕಚಗುಳಿ ಇಡುತ್ತವೆ. ಚಿತ್ರದ ಹಿನ್ನೆಲೆ ಸಂಗೀತ, ಛಾಯಾಗ್ರಣ ಸಿನಿಮಾಗೆ ಪೂರಕವಾಗಿದೆ. ಒಟ್ಟಾರೆ ರಿಪ್ಪನ್ ಸ್ವಾಮಿಯನ್ನು ಮನೆಮಂದಿಯೆಲ್ಲಾ ಕುಳಿತು ನೋಡಬಹುದಾಗಿದೆ.

ಹಾಡಲ್ಲಿ ಮೋಡಿ ಮಾಡಿದ ಮಾಯಾವಿ

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಮಾಯಾವಿ ಚಿತ್ರ ತೆರೆಗೆ ಬರಲು ಸಿದ್ದವಾಗಿದೆ. ಈಗಾಗಲೇ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರ್ಣಗೊಳಿಸಿರುವ ಚಿತ್ರತಂಡ, ಮಾಯಾವಿಯ ಟ್ರೇಲರ್ ಮತ್ತು ಹಾಡುಗಳನ್ನು ಬಿಡುಗಡೆಗೊಳಿಸಿದೆ. ಮಾಯಾವಿ ಸಸ್ಪೆನ್ಸ್, ಕ್ರೈಂ ಥ್ರಿಲ್ಲರ್ ಕಥೆಯನ್ನು ಒಳಗೊಂಡಿದ್ದು, ಜಿ.ಶಂಕರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಮಾಯಾವಿಯಾಗಿ ರಘುರಾಮ್ ಕಾಣಿಸಿಕೊಂಡಿದ್ದು, ಈ ಚಿತ್ರದ ಮೂಲಕ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ನಿಶ್ಚಿತಾ ಶೆಟ್ಟಿ ನಾಯಕಿಯಾಗಿ ನಟಿಸಿದ್ದಾರೆ. ಉಳಿದಂತೆ ಹಿರಿಯ ನಟ ಎಂ.ಕೆ. ಮಠ, ಸೂರ್ಯ ಪ್ರವೀಣ್, ಸುರೇಶ ಬಾಬು, ಅನುರಾಧಾ, ಶಿಲ್ಪಾ, ಖುಷಿ ಗೌಡ ಮುಂತಾದವರು ತಾರಾಗಣದಲ್ಲಿದ್ದಾರೆ.

ಸಿನಿಮಾದಲ್ಲಿ ಅಭಿನಯಿಸಬೇಕು ಎಂಬುದು ನನ್ನ ಬಹುದಿನಗಳ ಕನಸಾಗಿತ್ತು, ಆ ಕನಸು ಮಾಯಾವಿ ಸಿನಿಮಾದ ಮೂಲಕ ನನಸಾಗುತ್ತಿದೆ. ಎರಡು ಶೇಡ್‌ನಲ್ಲಿ ನನ್ನ ಪಾತ್ರ ಸಾಗುತ್ತದೆ. ಇದೊಂದು ವಾಸ್ತವತೆಗೆ ಹತ್ತಿರವಾಗಿರುವಂಥ ಸಿನಿಮಾಗಿದೆ. ಚಾಲೆಂಜಿಂಗ್ ಆಗಿರುವ ನನ್ನ ಪಾತ್ರ ಎಲ್ಲರಿಗೂ ಇಷ್ಟವಾಗಲಿದೆ ಎಂದು ರಘುರಾಮ್ ಹೇಳಿದರು.



ಮಾಯಾವಿ ಸಸ್ಪೆನ್ಸ್, ಕ್ರೈಂ ಥ್ರಿಲ್ಲರ್ ಕಥಾಹಂದರದ ಸಿನಿಮಾ. ಲವ್, ಆ್ಯಕ್ಷನ್, ಸೆಂಟಿಮೆಂಟ್ ಕೂಡ ಬೆರೆತಿದ್ದು ಚಿತ್ರದಲ್ಲಿ ಒಳ್ಳೆಯ ಸಂದೇಶವೂ ಅಡಕವಾಗಿದೆ. ಚಿತ್ರದುರ್ಗ, ಬೆಂಗಳೂರು, ಹೊಸಪೇಟೆ ಸುತ್ತಮುತ್ತ ಸಿನಿಮಾದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಮಾಯಾವಿ ವೀಕ್ಷಿಸಿದ ಸೆನ್ಸಾರ್ ಮಂಡಳಿ ಯು ಪ್ರಮಾಣ ಪತ್ರ ನೀಡಿದೆ ಎಂದು ನಿರ್ದೇಶಕ ಜಿ.ಶಂಕರ್ ತಿಳಿಸಿದರು. ಡಾ.ಹೆಚ್.ಮಹಂತೇಶ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಮಾಯಾವಿ ಚಿತ್ರದ ಹಾಡುಗಳಿಗೆ ಅಗಸ್ತ್ಯ ಸಂತೋಷ್ ಸಂಗೀತ ಸಂಯೋಜಿಸಿದ್ದು, ವಿಜಯ ಪ್ರಕಾಶ್, ಮೇಘನಾ ದನಿಯಾಗಿದ್ದಾರೆ. ಗುರುದತ್ತ ಮುಸುರಿ ಛಾಯಾಗ್ರಹಣ, ಅನಿಲ್ ಕುಮಾರ್ ಸಂಕಲನ ಈ ಚಿತ್ರಕ್ಕಿದೆ.